


ಮಾನಂದ

ಪಡುಕೋ ರಮಾನಂದರಾಯರ ಸಂಸ್ಮರಣಗ್ರಂಥ

ಪರಮಾನಂದ

ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್
ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್

ಪರಮಾನಂದ

ಪಡುಕೋಣೆ ರಮಾನಂದರಾಯರ ಸಂಸ್ಮರಣ ಗ್ರಂಥ

ಸಂಪಾದಕ :

ಸೂರ್ಯನಾರಾಯಣ ಚಡಗ

ಪ್ರಕಾಶಕರು :
ಚಂದ್ರಭಾಗಾ ದೇವಿ

ಸಲಹೆ ಮತ್ತು ಸಹಕಾರ :
ಮಕ್ಕಳು-ಮೊಮ್ಮಕ್ಕಳು
ಮಹಾ-ಮಾಯಾ
7 2 "ಎ" ಪ್ಯಾಲೆಸ್ ಕ್ರಾಸ್ ರಸ್ತೆ, ಬೆಂಗಳೂರು-೫೬೦ ೦೨೦

PARAMANANDA: A Commemorative Book on P. Ramananda Rao. Edited by: Suryanarayana Chadaga. Published by: Makkalu-Mommakklu, Maha-Maya-7/2 A Palace Cross Road, Bangalore-20. Printed by: Gourang Printers, Ramamohanpura, Bangalore-21.

Price Rs.: 25 Pages: 16+248

1984 ಜನವರಿ

ಹಕ್ಕುಗಳು : ಮಕ್ಕಳು ಮತ್ತು ಮೊಮ್ಮಕ್ಕಳು

ಮುಖಚಿತ್ರ ವಿನ್ಯಾಸ : ಚಡಗ

ಮುದ್ರಣ : ಗೌರಂಗ್ ಪ್ರಿಂಟರ್ಸ್
ರಾಮಮೋಹನಪುರ
ಬೆಂಗಳೂರು-21

ಸಂಪಾದಕರ ನುಡಿ

ಈ ಗ್ರಂಥದ ಸಂಪಾದಕನಾಗಿ ನಾನು ಹೇಳುವಂತಹ ವಿಷಯವೇನೂ ಇಲ್ಲ. ಎಲ್ಲಾ ವಿಚಾರ ಗ್ರಂಥದಲ್ಲಿಯೇ ಇರುವುದರಿಂದ ಈ ಗ್ರಂಥ ಪ್ರಕಟನೆಯಲ್ಲಿ ಉಪಕಾರ ಮಾಡಿದ–ಸಹಕರಿಸಿದರವನ್ನು ಸ್ಮರಿಸಿ ಕೃತಜ್ಞತೆಸಲ್ಲಿಸುವ ಮಹತ್ವದ ಕಾರ್ಯ ಮಾತ್ರ ಮಾಡಬೇಕಾಗಿದೆ.

ಪ್ರಾಧ್ಯಾಪಕ, ಲೇಖಕ, ನಾಟಕಕಾರ ಹಾಗೂ ಉತ್ತಮ ಅನುವಾದಕರಾದ ಸರಳ ಸೌಜನ್ಯ ಮೂರ್ತಿ ಪ. ರಮಾನಂದರಾಯರ ಕುರಿತು ಒಂದು ಸಂಸ್ಮರಣ ಗ್ರಂಥವನ್ನು ಪ್ರಕಟಿಸುವುದು ಉಚಿತ ಎಂದು ಅವರ ಹಿರಿಯ ಮಗಳಾದ ಚಂದ್ರಭಾಗದೇವಿ ಮತ್ತು ಅವರ ಪತಿ ಯು. ಎಸ್. ಕೃಷ್ಣರಾವ್ ಅವರು ಹೇಳಿದಾಗ ತತ್ಕ್ಷಣ ಒಪ್ಪಿಕೊಂಡೆ. ಕಾರಣ ಯು. ಎಸ್. ಕೃಷ್ಣರಾಯ ದಂಪತಿಗಳ ಮೇಲಿನ ಮತ್ತು ಪ. ರಮಾನಂದ ರಾಯರ ಬಗ್ಗೆ ನನಗಿರುವ ಭಕ್ತಿ ಗೌರವದಿಂದ. ಒಳ್ಳೆಯ ಕಾರ್ಯ ಕೂಡ ಅವರು ಅತ್ಯಂತ ಉತ್ಸಾಹದಿಂದ ಶ್ರದ್ಧೆಯಿಂದ ಈ ಕಾರ್ಯಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ಪ್ರೋತ್ಸಾಹಿಸಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಪೂರ್ಣ ಸಹಕಾರ ನೀಡಿದರು. ಅದರಲ್ಲೂ ಸೋದರಿ ಚಂದ್ರಭಾಗಾದೇವಿ ಅವರು ಲೇಖನವನ್ನು ಸಂಗ್ರಹಿಸಿ ಅನೇಕ ಉತ್ತಮ ಸಲಹೆಯನ್ನಿತ್ತು. "ಗ್ರಂಥ ಹೀಗಿರಬೇಕು" ಎಂದು ತಾವೂ ಶ್ರಮ ವಹಿಸಿ ಸಹಕಾರ ನೀಡಿದರು. ಅವರ ಮತ್ತು ಅವರ ಪತಿಯ ಪ್ರೋತ್ಸಾಹ ನನ್ನ ಉತ್ಸಾಹವನ್ನು ಹೆಚ್ಚಿಸಿತು. ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಲೇಖನವನ್ನು ಕೊಟ್ಟ ಖ್ಯಾತ ಸಾಹಿತಿ ಮಿತ್ರರಿಗೆ–ಪ್ರಕಟವಾದ ಲೇಖನವನ್ನು ಸಂಸ್ಮರಣ ಗ್ರಂಥದಲ್ಲಿ ಅಳವಡಿಸಲು ಅನುಮತಿ ನೀಡಿದ ಆಯಾ ಪತ್ರಿಕೆಯ ಸಂಪಾದಕರಿಗೆ ಹಲವು ವಿಧದಲ್ಲಿ ಉಪಕಾರ ಮಾಡಿದ ಮಲ್ಲೇಶ್ವರದ ಕರ್ಣಾಟಕ ಬ್ಯಾಂಕಿನ ಮ್ಯಾನೇಜರ್ ಅವರಿಗೆ–ಗ್ರಂಥ ಬಿಡುಗಡೆ ಮಾಡಲು ಒಪ್ಪಿದ ಕೆನರಾ ಯೂನಿಯನ್‌ನ ಅಧಿಕಾರೀ ವರ್ಗದವರಿಗೆ–ಸಕಾಲದಲ್ಲಿ ಅಂದವಾಗಿ ಮುದ್ರಿಸಿದ ಗೌರಂಗ್ ಪ್ರಿಂಟರ್ಸ್‌ನ ಮಾಲಿಕರಾದ ವಿ. ರವೀಂದ್ರನಾಥ್ ಅವರಿಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ.

11–1–1984 **ಸೂರ್ಯನಾರಾಯಣ ಚಡಗ**

ಬೆಂಗಳೂರು

ಪ್ರಕಾಶಕರ ಮಾತು

ಶ್ರೀ ಸೂರ್ಯನಾರಾಯಣ ಚಡಗ ಕನ್ನಡ ನಾಡಿನ ಪ್ರಸಿದ್ಧ ಸಾಹಿತಿ–ಕನ್ನಡ ಭಾಷೆಯ ದಿಗಂತದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಿರುವ ಇವರ ಪ್ರತಿಭೆಯ ಪ್ರಭಾವದ ಬೆಳಕು ಈ "ಸಂಸ್ಮರಣಗ್ರಂಥ"ದಲ್ಲಿ ಬಿದ್ದಿರುವ ಕಾರಣ ಎಲ್ಲರಿಗೂ ಪರಮಾನಂದವಾಗಿದೆ.

ಅವರ ಪ್ರಯತ್ನದಿಂದಲೇ ಅಪ್ಪನ ಕೊನೆಯ ಕಾದಂಬರಿ "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ" 1982ರಲ್ಲಿ ಮುದ್ರಿತವಾಯಿತು. ಅದರಲ್ಲಿನ ಮುದ್ರಣಾ ದೋಷ ಗಳಿಂದ ಅಪ್ಪನ ಆಯುಸ್ಸೇ ಕಮ್ಮಿ ಆಗಿದ್ದಿರಬೇಕು ಎಂದು ಕೊಂಡದ್ದರಿಂದ ಅವರು ಈ "ಸ್ಮರಣ–ಗ್ರಂಥ"ದ ಕೆಲಸವನ್ನು ಬಹಳ ಆಸಕ್ತಿಯಿಂದ, ಜಾಗರೂಕತೆಯಿಂದ, ಆತ್ಮೀಯತೆಯಿಂದ ಮಾಡಿರುತ್ತಾರೆ.

ಅಪ್ಪನ ಸಾವಿನ ಅನಂತರ ಅನೇಕಾನೇಕ ಸಂತಾಪ ಸೂಚಕ ಪತ್ರಗಳು ಬಂದಿದ್ದುವು. ಅವರ ಬಹುಮುಖದ ವರ್ಣನೀಯ ವ್ಯಕ್ತಿತ್ವವನ್ನು ಬಯಲಿಗೆ ತಂದರು. ಅವನ್ನು ಓದುವಾಗಲೇ ಕೆಲವು ಸ್ವಾರಸ್ಯಕರ ವಿಷಯಗಳು ಮನಸ್ಸಿಗೆ ಬಂದವು. "ಏಕೆ ಅದನ್ನು ಪ್ರಕಟಿಸಬಾರದು ?" ಎಂದು ಮನಸ್ಸಿಗೆ ಹೊಳೆಯಿತು.

ಅಪ್ಪನಿಗೆ ಸಾಹಿತ್ಯ-ಪುಸ್ತಕ-ಪ್ರಕಟಣೆ-ಇತ್ಯಾದಿ ಮೆಚ್ಚಿನ ವಿಷಯಗಳಾಗಿದ್ದವು. ಆದ್ದರಿಂದ ಅವರ ಸಾವಿನ ವರ್ಷಾಂತಿಕದೊಳಗೆ "ಸಂಸ್ಮರಣ" ಗ್ರಂಥವನ್ನು ಪ್ರಕಟಿಸುವ ಯೋಜನೆಯನ್ನು ಶ್ರೀ ಚಡಗ ಅವರ ಮುಂದಿಟ್ಟೆ. ಪತಿಯವರೂ ಈ ನನ್ನ ಯೋಜನೆಯಲ್ಲಿ ಸಮಭಾಗಿಯಾಗಿ ನನ್ನನ್ನು ಹುರಿದುಂಬಿಸಿ ಉತ್ತೇಜನ ಕೊಟ್ಟರು. ಶ್ರೀ ಚಡಗರೂ ಕೂಡಲೇ ಬೆಂಬಲ ಕೊಟ್ಟದ್ದಲ್ಲದೇ ಕಾರ್ಯನಿರ್ವಹಣೆಗೂ ಬೇಕಾದ ಸಲಹೆ–ಸಹಕಾರವನ್ನು ನೀಡಿದುದು ನನ್ನ ಅದೃಷ್ಟವೇ ಎನ್ನಬೇಕು.

ಅವರ ವ್ಯಕ್ತಿತ್ವ ಸಾಮಾನ್ಯವಲ್ಲ-ಮಾತಿನಲ್ಲಿ ಸರಳತೆ, ಕಾರ್ಯದಲ್ಲಿ ತತ್ಪರತೆ, ಕರ್ತವ್ಯ ದಲ್ಲಿ ನಿಷ್ಠೆಯಿದ್ದ ಸ್ನೇಹಜೀವಿ. ತಾನು ಕೈಕೊಂಡ ಕೆಲಸ ಚೆನ್ನಾಗಿ ಮಾಡುವಂತಿದ್ದರೆ ಮಾತ್ರ ಒಪ್ಪಿಗೆ ಕೊಡುವರು. ಇಲ್ಲದಿದ್ದರೆ ಖಂಡಿತ ಇಲ್ಲ.

ಇತ್ತೀಚೆ ತಮ್ಮ ಜೀವನದಲ್ಲಿ ಸಾವಿರಾರು ಪುಸ್ತಕಗಳ ಕರಡು ಪ್ರತಿಗಳನ್ನು ತಿದ್ದಿ ತಿದಿ ಕಣ್ಣು ಕೆಡಿಸಿಕೊಂಡು ಸೋತ ವ್ಯಕ್ತಿ. "ಪ್ರೆಸ್‌ನಲ್ಲಿ ಕೂತು ಪ್ರೂಫ್ ಕರೆಕ್ಷನ್ ಕೆಲಸ ಮಾತ್ರ ನನಗೆ ಬೇಡ" ಎನ್ನುತ್ತಿದ್ದವರು, ಈ ಗ್ರಂಥದ ಕೆಲಸ ಮಾಡುತ್ತಿರು ವಾಗಲೇ "ಇದೇ ನನ್ನ ಕೊನೆಯ ಕೆಲಸ-ಇನ್ನು ಮೇಲೆ ಖಂಡಿತ ನನ್ನಿಂದ ಸಾಧ್ಯವೇ ಇಲ್ಲ" ಎಂದು "ಪರಮಾನಂದ"ದ ಪ್ರಕಾಶನಕ್ಕೆ ತೊಡಗಿದರು–'ನನ್ನ ಇತಿ-ಮಿತಿಗೆ ಸರಿಯಾಗಿ ಮಾಡುವೆ' ಎಂದರು.


ಬೆಳಗ್ಗೆಯಿಂದ ರಾತ್ರಿಯವರೆಗೆ ಊಟ-ತಿಂಡಿ-ನಿದ್ರೆ ಇಲ್ಲದೆ ಪ್ರೆಸ್‌ನಲ್ಲಿಯೇ ಕೂತು-ಆ ಗಲಾಟೆಯನ್ನು, ಪರಿಸರದ ಗದ್ದಲವನ್ನೂ ಸಹಿಸಿಕೊಂಡು 2-3 ಪ್ರೂಫ್‌ಗಳನ್ನೂ ತಿದ್ದಿ ಪ್ರಕಾಶನಕ್ಕೆ ಕೊಡುತ್ತಿದ್ದುದು ಅವರಿಗೆ ಅಪ್ಪನ ಮೇಲಿದ್ದ ಗೌರವದ ಕುರುಹು. "ಇಷ್ಟು ಮಾಡಿಯೂ ಮುದ್ರಣ ದೋಷವಿದ್ದರೆ ನನ್ನ ಅನಾರೋಗ್ಯವೇ ಕಾರಣ, ಅಲ್ಲದೆ ಅಚ್ಚಿನ ತಪ್ಪಿಲ್ಲದ ಪುಸ್ತಕವೇ ಇಲ್ಲ" ಎಂದಿದ್ದರು.

ಹೌದು-ನಿಜ-ಅವರ ಆರೋಗ್ಯ ಚೆನ್ನಾಗಿಲ್ಲ. ವಿಶ್ರಾಂತಿ ಪಡೆಯಬೇಕೆಂದು ವೈದ್ಯರು ತಿಳಿಸಿದ್ದರು. ಆದರೂ ನನ್ನ ಕೋರಿಕೆಯನ್ನು ಖಂಡಿತಾ ಈಡೇರಿಸುತ್ತೇನೆಂದು ಆಶ್ವಾಸನೆ ಕೊಟ್ಟರು. ಪುಸ್ತಕದಲ್ಲಿ ಒಂದಿಷ್ಟೂ ಖಾಲಿ ಜಾಗ ಇರಬಾರದು ಎಂದು ಕೊಂಡು ಪ್ರೆಸ್‌ನಲ್ಲಿ, ಕೂತಲ್ಲೇ ಕೆಲವು ವಿಚಾರಗಳನ್ನು ಬರೆದು ಸೇರಿಸಿ ಪುಸ್ತಕದ ಮೌಲ್ಯವನ್ನು ಇಮ್ಮಡಿಪಡಿಸಿ ನಮಗೆ ತೃಪ್ತಿಯಾಗುವಂತೆ ಕೆಲಸ ಮಾಡಿದ್ದಾರೆ. ಬರೀ ಸಂತಾಪ ಸೂಚಕ ಪತ್ರಗಳಲ್ಲದೇ ಇತರ ಕೆಲವು ಸಂಬಂಧಿತ ವಿಷಯಗಳನ್ನೂ ನಾವು ಯೋಚಿಸಿ ಈ ಪುಸ್ತಕದಲ್ಲಿ ಪ್ರಕಟಿಸಿದ್ದು ವಿಶೇಷ. ಇದು ಅಪ್ಪನಿಗೆ ಪ್ರಿಯವಾಗಿರಬೇಕು ; ಅವರ ಆತ್ಮಕ್ಕೆ ಖಂಡಿತ ಶಾಂತಿ ದೊರಕಿದೆ ಎನ್ನುತ್ತಿದೆ ಮನಸ್ಸು.

ಪುಸ್ತಕದ ರಚನೆ ಶ್ರೀ ಚಡಗ ಅವರಿಗೆ ಪ್ರಿಯವಾದದ್ದು. ಸಾಹಿತ್ಯ ಸೃಷ್ಟಿಯ ಆನಂದ ಕೊಡುವ ವಿಷಯ ಎನ್ನಬೇಕು. ಪ್ರತಿಯೊಂದು ಚಿಕ್ಕ ವಿಷಯದಲ್ಲಿಯೂ ಗಾಢವಾದ ಆಲೋಚನೆ ಮಾಡಿ-ಚಂದವಾಗಿ ಪ್ರಕಟಿಸಬೇಕೆಂಬುದು ಅವರ ಹೆಬ್ಬಯಕೆಯಾಯಿತು. ಸಾಹಿತ್ಯ ಕ್ಷೇತ್ರ ಅವರ ನೆಚ್ಚಿನ ಕ್ಷೇತ್ರ. ಬರವಣಿಗೆ–ಪುಸ್ತಕ ಪ್ರಕಾಶನ ಇತ್ಯಾದಿ ಅವರ ಜೀವನದ ಉಸಿರು. ಈ ಕಾರಣದಿಂದ ತಮ್ಮ ಅನಾರೋಗ್ಯವನ್ನೂ ಪರಿಗಣಿಸದೆ ನಮಗೆ ಸಹಕಾರ ನೀಡಿ 'ಪರಮಾನಂದ'ವನ್ನು ಪ್ರಕಟಿಸಿದ ಕೀರ್ತಿ ಅವರ ಪಾಲಿನದು. ಹೆಮ್ಮೆಯ ವಿಷಯವೂ ಅಹುದು. ಅವರಿಗೆ ನಾವು ಸಲ್ಲಿಸುವ ಕೃತಜ್ಞತೆಗಳು ತೀರಾ ಅಲ್ಪ. ಅವರು ಮಾಡಿದ ಉಪಕಾರ ಶಾಶ್ವತವಾಗಿ ನಮ್ಮ ಹೃದಯದಲ್ಲಿ ಈ ಪುಸ್ತಕದ ಮೂಲಕ ಮಿಡಿಯುತ್ತಿರುತ್ತದೆ.


ಅವರು ನಮಗೆ ನೀಡಿದ ಸಹಕಾರ-ನೆರವಿಗಾಗಿ ನಾವು ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಅವರು ನಡೆಸಿಕೊಟ್ಟಂಥಾ ಈ ಕಾರ್ಯಕ್ಕೆ ನಾವು ಚಿರ ಋಣಿಗಳು. ಭಗವಂತನು ಅವರಿಗೆ ಆಯುರಾರೋಗ್ಯ ಸಂಪತ್ತನ್ನು ಕರುಣಿಸಿ ಇನ್ನು ಮುಂದೆಯೂ ಅವರಿಂದ ಸಾಹಿತ್ಯ ಸೇವೆ ಸದಾ ಮಾಡಿಸಲಿ ಎಂದು ಪ್ರಾರ್ಥಿಸುತ್ತೇನೆ.

ಚಂದ್ರಭಾಗಾದೇವಿ




ನಿಮ್ಮ ಭವ್ಯ ಬದುಕು-ದಿವ್ಯ ದರ್ಶನ–ಆಕರ್ಷಕ ಆದರ್ಶ– ರಮ್ಯವಾದ ರಂಜನೀಯ ಮಾತುಗಳು-ಸೌಜನ್ಯ ತುಂಬಿದ ಹೃದಯವಂತಿಕೆ-ನವ್ಯ ಧೋರಣೆಯ ಹಿತವಾದ ಚಿಂತನೆ-ಆಚಾರ ವಿಚಾರಗಳಲ್ಲಿನ ಶುದ್ಧತೆಯೇ ಇಂದು ನಮಗೆ ದಾರಿ ದೀಪವಾಗಿದೆ. ಇಹ ಮುಗಿಸಿ ಪರ ಕಂಡಿರಿ-ನಿಮ್ಮ ದೇಹ ನಮ್ಮ ಕಣ್ಮುಂದೆ ಇಲ್ಲ-ಅಷ್ಟೆ. ಆದರೆ ನೀವು ನಮ್ಮ ಹೃದಯದಲ್ಲಿದ್ದೀರಿ. ನಿತ್ಯ ಸ್ಮರಿಸುತ್ತಿರುವ ನಿಮಗೆ ಭಕ್ತಿಪೂರ್ವಕ ಪ್ರಣಾಮಗಳು.


ಮಕ್ಕಳು ಮತ್ತು ಮೊಮ್ಮಕ್ಕಳು



ಪಡುಕೋಣೆ ರಮಾನಂದರಾಯರು



ಪ. ರಮಾನಂದರಾಯರು ಮತ್ತು ಪತ್ನಿ ಪ. ಸೀತಾದೇವಿ




ನಾಲ್ಕು ಪೀಳಿಗೆಯ ಅಪೂರ್ವ ಚಿತ್ರ :

ಎಡದಿಂದ ಬಲಕ್ಕೆ ಕುಳಿತಿರುವವರು : ಶಾಂಭವಿ, ಪ. ನರಸಿಂಗರಾಯರು, ಪ. ಸೀತಾದೇವಿ, ಪ. ರಮಾನಂದರಾಯರು
ತೊಡೆಯ ಮೇಲೆ ಕುಳಿತಿರುವ ಮಗು ಮೈತ್ರೇಯ.



ಕುಳಿತಿರುವವರು ಎಡದಿಂದ ಬಲಕ್ಕೆ : ಚಂದ್ರಭಾಗಾದೇವಿ, ಯಶೋಧರ, ಪ. ರಮಾನಂದರಾಯರು, ಪ. ಸೀತಾದೇವಿ
ನಿಂತಿರುವವರು : ಶಾಂತಿ, ಪ್ರಭಾಶಂಕರ, ಜಯವಂತಿ.



ಎಡದಿಂದ-ಬಲಕ್ಕೆ ಕುಳಿತಿರುವವರು :

ಯಶೋಃಧರಾಭಟ್, ಚಂದ್ರಭಾಗಾದೇವಿ, ಪ್ರಭಾಶಂಕರ, ಶಾಂತಾ ನಯುಂಪಳ್ಳಿ, ಜಯವಂತಿ.

ಎಡದಿಂದ ಬಲಕ್ಕೆ ನಿಂತಿರುವವರು :

ಆತ್ಮಾನಂದ ಭಟ್, ಯು. ಎಸ್. ಕೃಷ್ಣರಾವ್, ವೃಂದಾ,

ರಮಾನಾಥ ನಯುಂಪಳ್ಳಿ, ದಿನಕರಬಿ. ಭಟ್

ಸಾರ್ಥಕ ಜೀವನದ ಸಾಂಸ್ಕೃತಿಕ ಹಿನ್ನೆಲೆ

ಸಾರಸ್ವತರು-ಚಿತ್ರಾಪುರ ಸಾರಸ್ವತರು

ಚಿತ್ರಾಪುರ ಸಾರಸ್ವತರು ಆರ್ಯರ ವಂಶಜರು ಎನ್ನುತ್ತಾರೆ-ಅಲ್ಲದೆ ಈ ಜನತೆ ಕಾಶ್ಮೀರ ಪ್ರದೇಶದಿಂದ ಬಂದವರು ಎಂಬ ನಂಬಿಕೆ ಇದೆ. ಈ ಜನರು ಕ್ರಮೇಣ ದಕ್ಷಿಣಕ್ಕೆ ಪ್ರಯಾಣ ಬೆಳೆಸಿ ಋಗ್ವೇದದ ಅಧಿದೇವತೆಯಾದ ಸರಸ್ವತೀ ನದಿ ತೀರದಲ್ಲಿ ನೆಲೆಸಿದ ಕಾರಣ ಈ ಜನರಿಗೆ ಸಾರಸ್ವತರು ಎಂಬ ಹೆಸರಾಯಿತು ಎಂಬ ಪ್ರತೀತಿ ಇದೆ. ಸರಸ್ವತೀ ನದಿ ತೀರದಿಂದ ದಕ್ಷಿಣಕ್ಕೆ ಬಂದ ಸಾರಸ್ವತರು, ಕಾಲ ಉರುಳಿದಂತೆ ಗೋವಾಕ್ಕೆ ಬಂದು ನೆಲೆಸಿದರಂತೆ. ಕ್ರಿ. ಶ. 1510 ರಲ್ಲಿ ಪೋರ್ಚುಗೀಸರು ಗೋವೆಯನ್ನು ವಶಪಡಿಸಿಕೊಂಡಾಗ ಸಾರಸ್ವತರಿಗೆ ಜೀವನ ಬಹಳ ಕಷ್ಟಕರವಾದ ಕಾರಣ ಅವರು ಅರಬ್ಬೀ ಸಮುದ್ರದ ಕಡೆಯಲ್ಲಿರುವ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ತಮ್ಮ ವಾಸಸ್ಥಾನವಾಗಿ ಆರಿಸಿಕೊಂಡರು.

ಸಾರಸ್ವತ ಎಂಬ ಹೆಸರು ಭಾರತದ ಇತರ ಕೆಲವು ಪಂಗಡಗಳನ್ನೂ ಸೂಚಿಸುತ್ತದೆ. ಆದರೆ ಚಿತ್ರಾಪುರ ಸಾರಸ್ವತರನ್ನು "ಕೆನರಾ ಸಾರಸ್ವತರು" ಎನ್ನಬಹುದು. ಏಕೆಂದರೆ ಈ ಜಾತಿಗೆ ಸೇರಿದವರು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿರುವ ಜನ. ಚಿತ್ರಾಪುರ ಸಾರಸ್ವತರ ಸಂಖ್ಯೆ ಬಹಳ ಕಮ್ಮಿಯಾಗಿದ್ದರೂ ಭಾರತದಲ್ಲಿ ಈ ಜಾತಿಯವರು ವಿಚಾರಶೀಲರು ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರಜ್ಞಾವಂತ ತಂಡಕ್ಕೆ ಸೇರಿದವರು ಎಂಬ ಖ್ಯಾತಿ ಇದೆ. ಅಲ್ಲದೆ ಚಿತ್ರಾಪುರ ಸಾರಸ್ವತ ಜಾತಿಯ ಜನ ನೋಡಲು ಸುಂದರರು ಲಕ್ಷಣವಂತ ಜನರು ಎಂಬುದಾಗಿಯೂ ಹೇಳಿಕೆ ಇದೆ. ಈಗ ಈ ಜನ ಉದ್ಯೋಗ ಅಥವಾ ವಿದ್ಯಾಭ್ಯಾಸವನ್ನು ಆರಸಿ ಭಾರತ ದೇಶವಲ್ಲದೆ ವಿಶ್ವದ ಮೂಲೆ ಮೂಲೆಗೆ ಹೋಗಿ ಸೇರಿಕೊಂಡಿದ್ದಾರೆ. ಜಗತ್ತಿನ ಎಲ್ಲ ದೇಶಗಳಲ್ಲೂ ಹಬ್ಬಿಕೊಂಡಿದ್ದಾರೆ. ಆದರೆ ಇವರ ಹೆಚ್ಚಾದ ಜನಸಂಖ್ಯೆ ಈಗ ಬೊಂಬಾಯಿ ಮತ್ತು ಅದರ ಬಡಾವಣೆಗಳಲ್ಲಿ ಹಾಗೂ ಬೆಂಗಳೂರು-ಮದರಾಸು ಪ್ರಾಂತ್ಯಗಳಲ್ಲಿ ನೆಲೆಸಿರುವರು.

ಚಿತ್ರಾಪುರ ಸಾರಸ್ವತರು ಋಗ್ವೇದಿ ಸ್ಮಾರ್ತ ಬ್ರಾಹ್ಮಣರು. ಉತ್ತರ ಕರ್ನಾಟಕದ ಶಿರಾಲಿಯಲ್ಲಿ ಶ್ರೀ ಭವಾನಿ-ಶಂಕರ ಅಧಿದೇವತೆಯನ್ನು ಆಶ್ರಯಿಸಿ ಶಿರಾಲಿ ಮಠದ ಪೀಠದ ಮಠಾಧಿಕಾರಿಗಳಿಗೆ ಭಕ್ತಿಯಿಂದ ದೈನ್ಯದಿಂದ ಮಣಿದು ಆಧ್ಯಾತ್ಮ ಪಥದ ಧರ್ಮ ಸಂಸ್ಕಾರಗಳ ಬೆಂಬಲ ಪಡೆದು ಜೀವಿಸುವವರು. ಈ ಚಿತ್ರಾಪುರ ಮಠಕ್ಕೆ ಪಾರಂಪರ್ಯವಾಗಿ ಕೀರ್ತಿವಂತ, ತ್ಯಾಗಮಯಿಗಳಾದ, ದೇದೀಪ್ಯಮಾನವಾದ ಸನ್ಯಾಸಿಗಳು ದೀಕ್ಷೆ ಪಡೆದು ಸಾರಸ್ವತ ಜನರಿಗೆ ಸನಾತನ ಧರ್ಮ ಸಂಬಂಧವಾದ ದಿನನಿತ್ಯದ

ರೂಢಿ-ನಿಯಮಗಳನ್ನು ಸಂಸ್ಕಾರಗಳನ್ನು ಉಪದೇಶಿಸಿ ಅವರನ್ನು ಸನ್ಮಾರ್ಗದಲ್ಲಿ ಸಂಸಾರ ನಿರ್ವಹಣೆ ಮಾಡುವಂತೆ ಸ್ಫೂರ್ತಿಕೊಡುತ್ತಲಿದ್ದಾರೆ. ಸಾರಸ್ವತ ಜನತೆಗೆ ಶಿರಾಲಿಯ ಚಿತ್ರಾಪುರ ಮಠ-ಮಠಾಧಿಪತಿಗಳಿರುವ ಒಂದು ಪವಿತ್ರ ಧರ್ಮಕ್ಷೇತ್ರ. ಇವರ ಭಾಷೆ "ಕೊಂಕಣಿ"–ಕೊಂಕಣ ದೇಶದವರಾದ್ದರಿಂದ "ಕೊಂಕಣಿ" ಭಾಷೆ ರೂಢಿಯಲ್ಲಿ ಬಂದಿರಬಹುದು. ಈ ಭಾಷೆಗೆ ಲಿಪಿ ಇಲ್ಲ. ಇದು ಮಾತನಾಡುವ ಭಾಷೆ ಮಾತ್ರ. ಕೇಳುವುದಕ್ಕೆ ಸುಮಾರಾಗಿ ಮರಾಠಿಯಂತೆ ಇದ್ದರೂ ಮರಾಠಿಗೂ ಕೊಂಕಣಿಗೂ ಯಾವ ಸಂಬಂಧವೂ ಇಲ್ಲ. ಕೊಂಕಣಿ ಭಾಷೆಗೆ ಇತರ ಭಾಷೆಗಳನ್ನು ತನ್ನಲ್ಲಿ ಲೀನ ಮಾಡಿಕೊಳ್ಳುವ ಸಾಧ್ಯತೆ ಇದೆ. ಬೆಂಗಳೂರು ಮತ್ತು ಕನ್ನಡ ಜಿಲ್ಲೆಗಳಲ್ಲಿ ಸಾರಸ್ವತರು ಮಾತನಾಡುವ ಕೊಂಕಣಿಯಲ್ಲಿ ಹೆಚ್ಚಾಗಿ ಕನ್ನಡ ಭಾಷೆಯ ಶಬ್ದಗಳು ಮಿಳಿತವಾಗಿವೆ. ಹಾಗೆಯೇ ಬೊಂಬಾಯಿಯಲ್ಲಿರುವ ಸಾರಸ್ವತರು ಮಾತನಾಡುವಾಗ ಹೆಚ್ಚಾಗಿ ಮರಾಠಿ ಶಬ್ದಗಳನ್ನು ಸೇರಿಸುತ್ತಾರೆ. ಉತ್ತರ ಹಿಂದೂಸ್ತಾನದ ಕೊಂಕಣಿಯಲ್ಲಿ ಹಿಂದೀ ಭಾಷೆಯ ಶಬ್ದಗಳಿವೆ. ಅಂದರೆ ಪರಿಸರದಲ್ಲಿ ರೂಢಿಯಲ್ಲಿರುವ ಭಾಷೆಗಳ ಶಬ್ದಗಳನ್ನು ತಮ್ಮ ಕೊಂಕಣಿಯಲ್ಲಿ ಅಳವಡಿಸಿಕೊಳ್ಳುವುದು ಸ್ವಾರಸ್ಯಕರ ವಿಷಯ. ಇತ್ತೀಚೆ ಕೊಂಕಣಿ ಭಾಷೆಯಲ್ಲಿ ಹೆಚ್ಚಾಗಿ ಇಂಗ್ಲಿಷ್ ಶಬ್ದಗಳೂ-ವಾಕ್ಯಗಳೂ ಬೆರಕೆಯಾಗಿವೆ. ಅಂದರೆ ಇಂದಿನ ಸಾರಸ್ವತರಿಗೆ-ಪರಿಶುದ್ಧ ಕೊಂಕಣಿ ಭಾಷೆ ಮಾತನಾಡಲು ಖಂಡಿತ ಸಾಧ್ಯವೇ ಇಲ್ಲ ಎಂಬುದು ವಿಷಾದಕರ ವಿಷಯವಾಗಿದೆ. ಕೊಂಕಣಿ ಭಾಷೆಯಲ್ಲೂ ವಿವಿಧತೆ ಇದೆ. ಗೌಡ ಸಾರಸ್ವತರ ಕೊಂಕಣಿ ಬೇರೆ. ಗೋವೆಯ ಬ್ರಾಹ್ಮಣರ ಕೊಂಕಣಿ ಬೇರೆ-ಕೊಚ್ಚಿ-ಕೇರಳದ ಕೊಂಕಣಿ ಬೇರೆ-ಕನ್ನಡ ಜಿಲ್ಲೆಗಳಲ್ಲೂ ಉತ್ತರ ಕನ್ನಡ ಜಿಲ್ಲೆಯ ಕೊಂಕಣಿಗೂ ದಕ್ಷಿಣ ಕನ್ನಡ ಜಿಲ್ಲೆಯ ಕೊಂಕಣಿಗೂ ವ್ಯತ್ಯಾಸವಿದೆ. "ಶೆಣ್ವಿ" ಮುಂತಾದ ಇತರ ಸಾರಸ್ವತ ಪಂಗಡಗಳು ಮಾತನಾಡುವ ಭಾಷೆ ಪ್ರತ್ಯೇಕ ಕೊಂಕಣಿ.

ಸಾರಸ್ವತ ಪುರುಷರು ವಿದ್ಯಾಭ್ಯಾಸದಲ್ಲಿ ಚುರುಕು ಬುದ್ಧಿಯನ್ನು ಪಡೆದು ಹೆಚ್ಚಾಗಿ ವಿದ್ಯಾ ಇಲಾಖೆಗೆ ಸೇರುವ ರೂಢಿಯಿತ್ತು. ಹಲವರು ಸರಕಾರೀ ಕೆಲಸಗಳನ್ನೂ ಆಯ್ದುಕೊಳ್ಳುತ್ತಿದ್ದರು. ಇತ್ತೀಚೆ ಚಿತ್ರಾಪುರ ಸಾರಸ್ವತರೂ ಹಿಂದಿನ ಗೌಡ ಸಾರಸ್ವತರಂತೆ ವಾಣಿಜ್ಯ ಹಾಗೂ ವ್ಯಾಪಾರ ಉದ್ಯೋಗಗಳನ್ನು ಪಡೆದಿರುವುದು ಆಧುನಿಕ ವಿಷಯವಾಗಿದೆ. ಸಾರಸ್ವತ ಜನತೆ ವಿವಿಧ ಕ್ಷೇತ್ರಗಳಲ್ಲಿ ಉನ್ನತ, ಶ್ರೇಷ್ಠ ಹುದ್ದೆಗಳನ್ನು ಪಡೆದು ಮೆರೆದ ಅಧಿಕಾರಿಗಳಾಗಿದ್ದರು. ಪ್ರಖ್ಯಾತ ನ್ಯಾಯಾಧೀಶರೂ, ವೈದ್ಯರೂ, ವಿದ್ಯಾವರ್ಧಕರೂ, ಸಮಾಜ ಸುಧಾರಕರೂ, ತತ್ವಜ್ಞಾನಿಗಳೂ, ತಂತ್ರ ವಿಜ್ಞಾನಿಗಳು, ಕವಿಗಳು, ಸಾಹಿತಿಗಳು, ರಾಷ್ಟ್ರ ಸೇವಕರು, ರಾಷ್ಟ್ರ ರಕ್ಷಣೆಗಾಗಿ ಯುದ್ಧದಲ್ಲಿ ಮಡಿದ ವೀರರೂ, ಚಲನ ಚಿತ್ರ ಕಲಾವಿದರೂ, ಲಲಿತ ಕಲೆಗಳಲ್ಲಿ ಅಗ್ರಗಣ್ಯ ಸ್ಥಾನ ಪಡೆದವರೂ, ಕ್ರೀಡಾ ರಂಗದಲ್ಲಿ ಹೆಸರು ಪಡೆದವರು ಅಲ್ಲದೆ ದರಬಾರಿನಲ್ಲಿ

ವಿದೂಷಕರಾಗಿಯೂ ಸಾರಸ್ವತರು ಹೆಸರು ವಾಸಿಯಾಗಿದ್ದಾರೆ. ಇತ್ತೀಚೆ ಈ ಕ್ಷೇತ್ರಗಳಲ್ಲಿ ಸ್ತ್ರೀಯರೂ ಬಂದು ಸೇರಿ ಅನುಪಮ ಅಲಂಕರಿತ ಸ್ಥಾನಗಳನ್ನು ಪಡೆದು ಪ್ರಖ್ಯಾತರಾಗಿರುವುದು ಹೆಮ್ಮೆಪಡುವ ವಿಷಯು. ಸಾರಸ್ವತರು ಸುಸಂಸ್ಕೃತ ಜನರು. ಅಲ್ಲದೆ ಸಮಾಜದಲ್ಲಿ ತೀರಾ ಮುಂದುವರಿದು ಖ್ಯಾತಿ ಪಡೆದವರು. ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸವನ್ನು ತಪ್ಪದೆ ಕೊಡುತ್ತಿರುವುದು ಅವರ ಮನೋಭಾವದ ಹೆಗ್ಗುರುತು. ಕೆಲವು ದಶಕಗಳ ಹಿಂದೆ ಸಾರಸ್ವತ ಹೆಂಗಸರಿಗೆ ವಿದ್ಯಾಭ್ಯಾಸವು ಅಪರೂಪದ ಅವಲಂಬನೆ ಆಗಿತ್ತು : ಆದರೂ ಸಾರಸ್ವತ ಮಹಿಳೆಯರು ಮರಾಠಿ ದಾಸ್ ಸಂಪ್ರದಾಯದವಲ್ಲಿಯೂ ಮರಾಠಿ ಸಂಸ್ಕೃತಿಯ ಅಧ್ಯಯನದಲ್ಲೂ ಆಸಕ್ತಿ ಪಡೆದು ಸುಸಂಸ್ಕೃತ ಬಾಳನ್ನು ಬಾಳುತ್ತಿದ್ದರು. ಹಿಂದೂ ಸಂಸ್ಕಾರಗಳನ್ನು ಹಬ್ಬ-ಹರಿದಿನಗಳನ್ನು ಕಾಯಾ-ವಾಚಾ-ಮನಸಾ ಆಚರಿಸುತ್ತಿದ್ದರು. ಅಡಿಗೆ-ತಿಂಡಿ–ಪದಾರ್ಥಗಳ ವಿಭಾಗದಲ್ಲೂ ಸಾರಸ್ವತರು ಇತರ ಜಾತಿಯವರ ಅಡಿಗೆಗಳನ್ನು ತಿಳಿದು-ಅರಿತು–ತಯಾರಿಸಿ-ತಿಂದು-ಅಭಿಪ್ರಾಯ ಪಡೆದು ಮೆಚ್ಚುವ ಜಾತಿ. ಸಾರಸ್ವತರ ಅಡಿಗೆಯ ಪದ್ಧತಿಯೇ ವಿಶಿಷ್ಟವಾದುದು. ಅವರು ಬಳಸುವ ತರಕಾರಿ-ಪಲ್ಲೆ ಇತ್ಯಾದಿ ಪ್ರತ್ಯೇಕವಾದುದು. ಆದರೂ ಅವರಿಗೆ ಭಾರತದ ಮಾತ್ರವಲ್ಲ ಜಗತ್ತಿನ ಇತರ ಜನರ ಊಟ ತಿಂಡಿ, ಅಡಿಗೆಗಳನ್ನು ತಿಳಿದುಕೊಳ್ಳುವ ಆಸಕ್ತಿ ಇರುತ್ತದೆ. ಈ ಜಾತಿಯ ಮುಖ್ಯ ಸ್ವಭಾವ ಗುಣದ ವೈಶಿಷ್ಟ್ಯ ಏನೆಂದರೆ ಇತರ ಜಾತಿಯವರೊಡನಾಗಲೀ-ಪರಿಸರದಲ್ಲಾಗಲೀ ಹೊಂದಿಕೊಂಡು ಹೋಗುವ ಚಾತುರ್ಯ-ಮನಃಸ್ಥಿತಿ. ಸಮಾಜಿಕ ಸುಧಾರಣೆ ಸಾರಸ್ವತರ ಸೊತ್ತು. ಸಮಾಜದ ಸವಾಲುಗಳನ್ನು ಧೈರ್ಯವಾಗಿ ಎದುರಿಸಿ ಸುಧಾರಣೆ ತರುವ ಯಶಸ್ಸು ಸಾರಸ್ವತರಿಗೆ ಸೇರಿದುದಾಗಿದೆ. ಅಂತರ್ಜಾತಿಯ ಮದುವೆಗಳಲ್ಲಾಗಲೀ–ವಿಧವಾ ವಿವಾಹದಲ್ಲಾಗಲೀ, ಲಲಿತ ಕಲಾ ಪ್ರದರ್ಶನಗಳಲ್ಲಾಗಲೀ ಆಧ್ಯಾತ್ಮದ ವಿಷಯುಗಳಲ್ಲಾಗಲೀ ಸಾಂಸ್ಕೃತಿಕ ಚಟುವಟಿಕೆಗಳಲ್ಲಾಗಲೀ ಹೆಂಗಸರ ಉದ್ಧಾರದಲ್ಲಿಯಾಗಲೀ ಸಾರಸ್ವತರು ಮುಂದುವರಿದ ಜಾತಿ.... ಚಿತ್ರಾಪುರ ಸಾರಸ್ವತರು ಎಂದೂ ಸ್ವಾರ್ಥಪರರಲ್ಲ; ಅಸೂಯೆ ಪಡುವ ಜನರಲ್ಲ; ಇತರರನ್ನು ವಂಚಿಸಿ ತಾವು ಸುಖಪಡುವವರಲ್ಲ. ಸಂಸಾರದ ಹೊಣೆ ಹೊತ್ತು, ಭಾರತದ ಶ್ರೇಯಸ್ಸಿಗಾಗಿ ದುಡಿದು ಸಮಾಜ ಸುಧಾರಣೆ ಕಾರ್ಯದಲ್ಲಿಯೂ ನಿರತರಾಗಿ ಜೀವಿಸುವ ಜನ. ಸಾರಸ್ವತ ಕುಟುಂಬಗಳಲ್ಲಿ ಆಗರ್ಭ ಶ್ರೀಮಂತರ ಸಂಖ್ಯೆ ಬೆರಳಿನಿಂದ ಎಣಿಸಬಹುದಷ್ಟೇ ಎನ್ನಬಹುದು. ವಿದ್ಯಾರ್ಜನೆಮಾಡಿ ಯುಕ್ತಿಯಿಂದ ವಿವೇಕದಿಂದ ಬದುಕಿನಲ್ಲಿ ಬವಣೆ ಪಟ್ಟು ಧನಾರ್ಜನೆ ಮಾಡಿದವರು ಹಲವರು. ಕಷ್ಟಪಟ್ಟು ಶಿಸ್ತಿನಿಂದ ಜೀವನವನ್ನು ಸಾರ್ಥಕ ಪಡಿಸಿ ರಾಜ–ಮಹಾರಾಜರಂತೆ ಶ್ರೀಮಂತ ಬಾಳನ್ನು ಬಾಳಿದವರ ಸಂಖ್ಯೆಯೂ ಇದೆ. ಒಟ್ಟಿನಲ್ಲಿ ಸಾರಸ್ವತರು ಧನಿಕರಲ್ಲ. ಸಮಾಜದಲ್ಲೂ ಮಧ್ಯಮ ವರ್ಗದವರು ಹೆಚ್ಚು. ಬಡ ಕುಟುಂಬಗಳೂ ಅನೇಕ ಇವೆ. ಆದರೆ ಬೇಡುವ ಜನ ಖಂಡಿತ ಅಲ್ಲ.

ಸಾರಸ್ವತರು ನಿರಂತರ ಅಲೆಯುತ್ತಿರುವ ಜನ ಎನ್ನಲೂಬಹುದು. ಉತ್ತರದಿಂದ ದಕ್ಷಿಣಕ್ಕೆ ಬಂದು, ಗೋವಕ್ಕೆ ಬಂದು, ಹಾಗೂ ಕನ್ನಡ ಜಿಲ್ಲೆಗಳಲ್ಲಿ ಸೇರಿಕೊಂಡು ಅನಂತರ ನಗರ ವಾತಾವರಣದ ಆಕರ್ಷಣೆ ಪಡೆದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಡೆದ ಜನ. ಪರಿಸರದ ಅನಿಶ್ಚಿತವಾತಾವರಣದಲ್ಲಿ ಕಲೆತು–ಬೆರತು–ಬದುಕುವ ಜನ.

ಸಾರಸ್ವರು ತಮ್ಮ ಕುಲ ದೇವತೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು ಗೋವೆಗೆ ಬಂದು ಅಲ್ಲಿ "ಮಂಗೇಶಿ" ಮತ್ತು "ಶಾಂತಾದುರ್ಗಾ" ದೇವಾಲಯಗಳನ್ನು ಸ್ಥಾಪಿಸಿದರು. ಈ ಮೂಲ ದೇವಾಲಯಗಳು ಕ್ಷೇತ್ರ ಪ್ರಸಿದ್ಧಿ ಪಡೆದುವು. ಸಾರಸ್ವತ ಜನರು ಗೋವೆಯಲ್ಲಿನ ಈ ದೇವಾಲಯಗಳಿಗೆ ಕುಟುಂಬ ಯಾತ್ರೆಮಾಡಿ ಪುಣ್ಯಕಟ್ಟಿಕೊಳ್ಳುವ ಪದ್ಧತಿಯೂ ಇದೆ.

ಮುಹಮ್ಮದೀಯರಿಗೆ ಮೆಕ್ಕ-ಮದೀನ ಹೇಗೆ ಪವಿತ್ರ ಪುಣ್ಯ ಕ್ಷೇತ್ರವೋ, ಕ್ರೈಸ್ತಜನರಿಗೆ ಜೆರುಸಲೆಮ್ ಹೇಗೆ ಪ್ರವಿತ್ರವಾದುದೋ ಹಾಗೆಯೇ ಸಾರಸ್ವತರಿಗೆ ಗೋವೆಯ "ಮಂಗೇಶಿ" ಮತ್ತು "ಶಾಂತಾದುರ್ಗ" ದೇವಾಲಯಗಳು ಪವಿತ್ರ ಭೂಮಿಯಾಗಿದೆ. ಈ ಪುಣ್ಯಕ್ಷೇತ್ರ ಸಾರಸ್ವತ ಜನರಿಗೆಲ್ಲ ಅಕ್ಕರೆಯ ತವರು ಮನೆಯಂತಿದೆ.

ಇಂತಹ ವರಶಕ್ತಿ ಪಡೆದ ಚಿತ್ರಾಪುರ ಸಾರಸ್ವತರ ಜಾತಿಯಲ್ಲಿ ಪಡುಕೋಣೆ ರಮಾನಂದರಾಯರ ಜನನವಾಯಿತು.

ಹಲವು ಸಾರಸ್ವತ ಗಣ್ಯರಿಗೆ ಈ ಕೆಳಕಂಡ ಬಿರದು ಸಿಕ್ಕಿವೆ.

Kisre-I-Hind Medal (Gold)

Rao Bahadur, Knigthood, C.I.E. O.B.E. M.B.E. British Empire Medal, Rao Sahib, ಧರ್ಮ ಪ್ರಕಾಶ್.

Indian Police Medal, ರಾಜಧರ್ಮ ಪ್ರಶಕ್ತ, ದಿವಾನ್ ಬಹದ್ದೂರ್, Mysore Public Service Medal ಇತ್ಯಾದಿ.

ಅಲ್ಲದೆ ಸಾಹಿತ್ಯ, ಚಲನಚಿತ್ರ, ಪತ್ರಿಕೋದ್ಯಮ, ಸಂಗೀತ, ನಾಟ್ಯ, ರಕ್ಷಣಾ ಇಲಾಖೆ, ವಾಣಿಜ್ಯ, ವಿದ್ಯಾ ಇಲಾಖೆ, ಲಲಿತ ಕಲೆ, ನಾಟಕ ಮುಂತಾದ ಕ್ಷೇತ್ರಗಳಲ್ಲಿಯೂ. ಅಪಾರ ಸೇವೆಸಲ್ಲಿಸಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತಿಗಳಿಸಿದ್ದಾರೆ. ಅವರು ಯಾರು? ಏನು? ಎಂಬುದನ್ನು ಗ್ರಂಥದ ಕೊನೆಯಲ್ಲಿ ವಿವರವಾಗಿ ಕೊಡಲಾಗಿದೆ.

ಪ. ರಮಾನಂದರಾಯರ ಸಾರ್ಥಕ ಬದುಕು

ಪ. ರಾಮಾನಂದರಾಯರ ಸಾರ್ಥಕ ಜೀವನ

ಚಂದಮ್ಮ

ಪರಮೇಶ್ವರ ಮೂಡುಬಿದ್ರೆ ಮತ್ತು ಅವರ ಧರ್ಮಪತ್ನಿ ಅಂಬಾಬಾಯಿ ಇವರ ವಾಸ ಸ್ಥಳ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಬಳಿ ಇರುವ ಊರ್ವ. ಈ ದಂಪತಿ ಗಳಿಗೆ ಎರಡು ಮಕ್ಕಳು (ಅವರ ಮೊದಲ ಹೆಂಡತಿಗೆ ಮಕ್ಕಳಿರಲಿಲ್ಲ)–ಒಂದು ಗಂಡು–ಮೂಡುಬಿದ್ರೆ ಗಣೇಶರಾಯರು. ಮತ್ತು ಒಂದು ಹೆಣ್ಣು–ಚಂದ್ರಭಾಗಿ. ಪರಮೇಶ್ವರ ಮೂಡುಬಿದ್ರೆಯವರು Sub Judge ಆಗಿದ್ದರು. ಮಗಳು ಪ್ರಾಪ್ತ ವಯಸ್ಸಿಗೆ ಬಂದಾಗ ಆಕೆಯನ್ನು ಯೋಗ್ಯ ಕುಟುಂಬದಲ್ಲಿ ಜನಿಸಿದ ಪಡುಕೋಣೆ ನರಸಿಂಗ ರಾಯರಿಗೆ ಕೊಟ್ಟು ವಿವಾಹ ಮಾಡಿದರು. ಚಂದ್ರಭಾಗಿಯ ಪತಿ ಪಡುಕೋಣೆ ನರಸಿಂಗರಾಯರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ತಾಲ್ಲೂಕು ಆಫೀಸ್‌ನಲ್ಲಿ ಕ್ಲಾರ್ಕ್ ಆಗಿ ಕೆಲಸ ಮಾಡುತ್ತಿದ್ದರು. ಇವರ ತಂದೆ ಪಡುಕೋಣೆ ಬಾಲಕೃಷ್ಣ ರಾಯರು ಹೊಸದುರ್ಗದ Sub-register ರವರ ಆಫೀಸಿನಲ್ಲಿ Clerk ಆಗಿ ನಿವೃತ್ತರಾದ ಮೇಲೆ Stamp-vendor ಆಗಿದ್ದರು. ಅವರಿಗೆ 10 ಗಂಡು ಮತ್ತು ಮೂರು ಹೆಣ್ಣು ಮಕ್ಕಳು. ಪಡುಕೋಣೆ ಬಾಲಕೃಷ್ಣರಾಯರ ಸ್ವಭಾವ ಬಹಳ ಹಾಸ್ಯ ಪ್ರವೃತ್ತಿಯಿಂದ ಕೂಡಿದ್ದು ಈ ಸದ್ಗುಣ ಮಕ್ಕಳೆಲ್ಲರಿಗೂ ಬಳುವಳಿ ಯಾಗಿ ಬಂದದ್ದು ವಿಶೇಷ. ಪಡುಕೋಣೆ ಕುಟುಂಬದಲ್ಲಿ ಹಾಸ್ಯ-ವಿಡಂಬನೆ ಇತ್ಯಾದಿ ದಿನ ನಿತ್ಯದ ಬದುಕಿನಲ್ಲಿ ರೂಢಿಯಲ್ಲಿದ್ದು ಹೆಸರು ವಾಸಿ ಕುಟುಂಬವಾಗಿತ್ತು. ಬಾಲಕೃಷ್ಣರಾಯರು ಅವರ ಮಡದಿ ಲಲಿತಾ ಬಾಯಿಯೂ ತಮ್ಮ ಮಕ್ಕಳ ವಿಷಯ ವಾಗಿ ಹೆಮ್ಮೆಯಿಂದ ಎದೆ ತಟ್ಟಿಕೊಂಡು "ನಮಗೆ ಹತ್ತು ಗಂಡು ಮಕ್ಕಳು!" ಎಂದು ಕೊಚ್ಚಿಕೊಳ್ಳುತ್ತಿದ್ದರಂತೆ! ಗಂಡು ಮಕ್ಕಳೆಲ್ಲರೂ ಒಳ್ಳೆಯ ಉದ್ಯೋಗವನ್ನು ಪಡೆದು ಯೋಗ್ಯ ಸಾಮಾಜಿಕ, ಸಾಂಸಾರಿಕ ಜೀವನ ನಡೆಸಿಕೊಂಡು ಬಂದವರು.

ಪಡುಕೋಣೆ ನರಸಿಂಗರಾಯರೇ ಈ ಪುಣ್ಯವಂತ ದಂಪತಿಗಳ ಚೊಚ್ಚಲು ಮಗ. ಅವರ ಕೊನೆಯ ಮಗ ಶಿವ ಶಂಕರರಾಯರು ಖ್ಯಾತ ಚಲನ ಚಿತ್ರ ನಿರ್ದೇಶಕ-ನಟ ರಾಗಿದ್ದ ದಿವಂಗತ ಗುರುದತ್ ಅವರ ತೀರ್ಥರೂಪರವರು. ಶಿವಶಂಕರ ರಾಯರ ಪತ್ನಿ ವಾಸಂತಿ ದೇವಿ ಬರಹಗಾರ್ತಿ-ಕಲಾ ಪ್ರೇಮಿ. ಅವರ 6ನೇಯ ಮಗ ವಿಠಲರಾಯರು ಸ್ವಾಮಿ ರಾಮದಾಸರಾಗಿ ವಿಶ್ವ ಖ್ಯಾತಿ ಪಡೆದ ಮಹನೀಯರು. ಆಧ್ಯಾತ್ಮಿಕ ಪಥ ದಲ್ಲಿ ಜನರನ್ನು ಸೆಳೆಯುವ ಅವರ "ಆನಂದಾಶ್ರಮ" ಇಂದಿಗೂ "ಕಾನಂಗಾಡ್"ನಲ್ಲಿ ಮಾತೆ ಕೃಷ್ಣಾಬಾಯಿ ಅವರ ನೇತೃತ್ವದಲ್ಲಿ ಅನೇಕಾನೇಕ ಆಧ್ಯಾತ್ಮಿಕ-ಸಾಮಾಜಿಕ

ಚಟುವಟಿಕೆಗಳಿಂದ ಮೆರೆಯುತ್ತಿದೆ. ಅವರ ಎಂಟನೆಯ ಮಗ ಶ್ರೀನಿವಾಸರಾಯರು ಚಿತ್ರಕಲೆ-Photography ಮುಂತಾದುವುಗಳಲ್ಲಿ ಪ್ರಖ್ಯಾತಿ ಪಡೆದಿದ್ದರು. ಅವರ ಮಗಳು ಶ್ರೀ ಲಕ್ಷ್ಮೀದೇವಿಯ ಮಗ ಶ್ರೀ ತ್ರಿಕನ್ನಾಡ್ ಮುಕುಂದರಾಯರು cartoon, skits ಇತ್ಯಾದಿ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಿ ಅಂದಿನ ದಿನಗಳಲ್ಲಿ ಜನರನ್ನು ಮರಳು ಗೊಳಿಸುತ್ತಿದ್ದರು. ಅವರ ವ್ಯಂಗ್ಯ ಚಿತ್ರಗಳನ್ನು ಜನರು ಬಹಳ ಮೆಚ್ಚಿಕೊಂಡಿದ್ದರು. ಹೀಗೆಯೇ ಅವರ ಗಂಡು ಮಕ್ಕಳು ಒಂದಲ್ಲ ಒಂದು ಕ್ಷೇತ್ರದಲ್ಲಿ ಗಣ್ಯ ಸ್ಥಾನ ಪಡೆದ ವ್ಯಕ್ತಿಯೆಂದೆನಿಸಿ ಕೊಂಡಿದ್ದರು.

ಪಡುಕೋಣೆ ನರಸಿಂಗರಾಯರು ಕುಶಲ ಕೈಗಾರಿಕೆಗಳಲ್ಲಿ ಬಹಳ ಆಸಕ್ತಿ ಪಡೆದು ವಿವಿಧ ವಸ್ತುಗಳನ್ನು ನಿರ್ಮಿಸುತ್ತಿದ್ದರು. Clay modelling ನಲ್ಲಿ ಕೆಲಸ ಮಾಡಿ ವರ್ಷ ವರ್ಷ ಬರುವ ಗಣಪತಿ ಹಬ್ಬದ ಸಮಯ ಅನೇಕಾನೇಕ ಗಣಪತಿಗಳನ್ನು ರಚಿಸುತ್ತಿದ್ದರು ಅವರ ವಿಗ್ರಹಗಳಲ್ಲಿ ವೈವಿಧ್ಯತೆ ಇತ್ತು. ನಿಂತಿರುವ ಗಣಪತಿ-ಕೂತಿರುವ ಗಣಪತಿ-ನೃತ್ಯ ಗಣಪತಿ-(ಒಮ್ಮೆ ತಮ್ಮ ಮೊದಲ ಮೊಮ್ಮಗ ಶಂಕ್ರು ಅಂಬೆಗಾಲಿಕ್ಕಿ ಮುಂದಕ್ಕೆ ಓಡುವುದನ್ನು ನೋಡಿ ಅಂಬೆಗಾಲಿಕ್ಕುವ ಗಣಪತಿಯನ್ನೂ ನಿರ್ಮಿಸಿದ್ದರಂತೆ!) ಇತ್ಯಾದಿ ಆಕರ್ಷಕ, ಮುದ್ದು ಮುದ್ದಾದ ಗಣಪತಿ ವಿಗ್ರಹ ಗಳನ್ನು ಮಾಡಿ ಜನರ ಆದರಣೆಯನ್ನು ಗಳಿಸಿದ್ದರು. ಅಲ್ಲದೆ ತೆಂಗಿನ ಚಿಪ್ಪನ್ನು ಕೊರೆದು-ಕೆರೆದು ಅನೇಕಾನೇಕ Models ಗಳನ್ನೂ ಮಾಡುವ ಕುಶಲತೆ ಪಡೆ ದಿದ್ದರು. ರಚನಾತ್ಮಕ ಕೃತಿಗಳು ಅವರ ಪಾಲಿನವು. ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅವರ ಕೃತಿಗಳು ಬಹುಮಾನ ಪಡೆಯುತ್ತಿದ್ದುವು. ಇದಲ್ಲದೆ ಅವರಿಗೆ ತೋಟಗಾರಿಕೆ-ಕೃಷಿಗಳಲ್ಲೂ ಆಸಕ್ತಿಯಿದ್ದು ಗಿಡಮರಗಳ ಲಾಲನೆ ಪಾಲನೆ ಅವರಿಗೆ ಅತ್ಯಾನಂದ ಕೊಡುವ ಕಾಲಕ್ಷೇಪವಾಗಿತ್ತು. ಹಣ್ಣು ಕೊಡುವ ಗಿಡ ಮರಗಳೊಂದಿಗೆ ಅಪರೂಪದ ತರಕಾರಿಗಳನ್ನು ಹೂ ಗಿಡಗಳನ್ನು ನೆಟ್ಟು ಬೆಳಸಿ ತಮ್ಮ ತೋಟಕ್ಕಾಗಿ ಹೆಮ್ಮೆಪಡುತ್ತಿದ್ದರು. ಅವರ ತೋಟದಲ್ಲಿ ಬೆಳೆಯುತ್ತಿದ್ದ ಗಡಿಯಾರದ ಹೂವು-ಮಂದಾರ ಪುಷ್ಪ. ತರಕಾರಿಗಳಲ್ಲಿ "ಘಾಗೀಲ"-ಇತ್ಯಾದಿ ನಾವು ಈಗಲೂ ಯಾವ ತೋಟದಲ್ಲೂ ಸಾಮಾನ್ಯವಾಗಿ ನೋಡುತ್ತಿಲ್ಲ. ಅವರ ಪುತ್ತೂರಿನ ಸ್ವಂತ ಮನೆಯ ತೋಟ ಪ್ರೇಕ್ಷಣೀಯವಾಗಿತ್ತು. ವರ್ಷ ವರ್ಷ ಬರುವ ಶ್ರೀ ಗೋಕುಲಾಷ್ಟಮಿ ಹಬ್ಬವನ್ನು ಅವರು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಶ್ರೀ ವೇಣುಗೋಪಾಲ ಮೂರ್ತಿಯನ್ನು ಅವರೇ ರಚಿಸಿ ಹಬ್ಬದ ಸಮಯ ಮನೆಯಲ್ಲಿ ಅರಳಿದ ವಿವಿಧ ಹೂ ಗಳಿಂದ ಅಲಂಕರಿಸುವ ಆ ವೈಭವ ಕಣ್ಣಿಗೆ ಹಬ್ಬವಾಗಿತ್ತು. ಶ್ರೀ ರಮಾವಲ್ಲಭ ದಾಸರ ಅಷ್ಟಮಿ ವ್ರತದ ಭಜನೆಗಳನ್ನು ಅವರ ಕುಟುಂಬ ಸಂಪ್ರ್ಯವಾಗಿ ಹಾಡಿ ಸಾಂಗೋಪಾಂಗವಾಗಿ ವ್ರತ ಕೈಕೊಳ್ಳುತ್ತಿದ್ದು, ಈ ಕಾರಣದಿಂದ ಅವರ ಮನೆತನ ಹೆಸರು ವಾಸಿಯಾಗಿತ್ತು. ಕುಶಲ ಕೈಗಾರಿಕೆ ತೋಟಗಾರಿಕೆಯ ವಿದ್ಯೆಯ ಜೊತೆಗೆ

ಅವರು ಮುಕಮುಲ್ ವೇಲಿ ಚವ್ಕಿ ಕೆಲಸ ಮಾಡುವವರಲ್ಲಿಯೂ ಚಾತುರ್ಯ ಪಡೆದಿದ್ದರು. ರಂಗ ಸ್ಥಳದಲ್ಲಿ ಜರಗುತ್ತಿರುವ ನೃತ್ಯ-ನಾಟಕಗಳಿಗೆ ಬೇಕಾಗುವ ಸಲಕರಣೆಗಳನ್ನು ವೇಷಭೂಷಣಗಳನ್ನೂ ಅತ್ಯಾಸಕ್ತಿಯಿಂದ ಮಾಡಿ ಸಹಕರಿಸುತ್ತಿದ್ದರು. ಅವರ ವ್ಯಕ್ತಿತ್ವ ಬಹುಮುಖವಾದುದು—ಮಾತಿನಲ್ಲಿ ಲವಲವಿಕೆ ಹಾಸ್ಯ ವಿಡಂಬನೆಗಳಿಂದ ಚತುರತನವಾಗಿ ಸಂಭಾಷಿಸುತ್ತಿದ್ದರು. ಕುಶಲ ಕೈಗಾರಿಕೆ ಇತ್ಯಾದಿ ವಿಷಯಗಳಲ್ಲದೆ ಅವರು ಸಾಹಿತ್ಯದಲ್ಲೂ ಅಭಿರುಚಿ ಪಡೆದಿದ್ದರು. ಹೆಚ್ಚಾಗಿ ಹಾಸ್ಯಪ್ರದ ಲೇಖನಗಳನ್ನು ಬರೆಯಲು ನಿಸ್ಸೀಮರು. ಹಾಸ್ಯೋಕ್ತಿಗಳು–ಹರಟೆಗಳು–ಲಘು ಬರಹಗಳು-ಗಾದೆಗಳಿಂದ ಕೂಡಿದ್ದ ಅವರ ಸಂಭಾಷಣೆ ಬಹಳ ಸ್ವಾರಸ್ಯಕರವಾಗಿತ್ತು. ಸಾರಸ್ವತ ಜಾತಿಯ ಬೇರೆ ಬೇರೆ ಮನೆತನದವರ Family ಹೆಸರುಗಳಿಗೆ ತನ್ನದ್ದೇ ಆದ ಅಡ್ಡಹೆಸರು-ಉಪನಾಮ (Nicknames) ಗಳನ್ನು ಕೊಟ್ಟು ನಗಿಸುವ ರೂಢಿಯು ಇತ್ತು. ಅವರ ಬರೆಹ ಪ್ರಕಟವಾಗದೆ ಇದ್ದ ಸಾಹಿತ್ಯ ಭಂಡಾರ ಎಲ್ಲವೂ ಕೊಂಕಣಿ ಭಾಷೆಯ ಅಮೂಲ್ಯ ಸಾಹಿತ್ಯ ನಿಧಿ. ಬೂದಿ [illegible] ಹಾಸ್ಯವಿಡಂಬನೆ ಪಡುಕೋಣೆ ಕುಟುಂಬದವರಿಗೆ ದೈವದತ್ತವಾಗಿ [illegible]

ಜನನ

ಪಡುಕೋಣೆ ಬಾಲಕೃಷ್ಣರಾಯರು ಮಗ ನರಸಿಂಗರಾಯರು ಪ್ರಾಪ್ತ ವಯಸ್ಸಿಗೆ ಬಂದೊಡನೆ ಮಂಗಳೂರಿನ ಊರ್ವದಲ್ಲಿದ್ದ ಪರಮೇಶ್ವರ ಮೂಡುಬಿದ್ರೆ ಮತ್ತು ಪತ್ನಿ ಅಂಬಾಬಾಯಿ ಅವರ ಸುಪುತ್ರಿ ಚಂದ್ರಭಾಗಿಯನ್ನು ವಿವಾಹವಾದರು. ಅವರ ದಾಂಪತ್ಯ ಜೀವನದಲ್ಲಿ ಮೂರು ಮಕ್ಕಳು ಹುಟ್ಟಿ ಮೃತರಾದರು. ಕ್ರಿ. ಶ. 1896ರಲ್ಲಿ ಡಿಸೆಂಬರ 30 ರಂದು ರಾತ್ರಿ ಘಳಿಗೆ 16-ವಿಘಳಿಗೆ 1[illegible] ಲಗ್ನದಲ್ಲಿ ಅವರಲ್ಲಿ ಹುಟ್ಟಿದ ನಾಲ್ಕನೆಯ ಗಂಡುಮಗುವೆ ಪಡುಕೋಣೆ ರಮಾನಂದರಾಯರು. ಆಗಿನ ಕಾಲದಲ್ಲಿ ಕ್ಷಯರೋಗವು ಬಹಳ ಸಾಮಾನ್ಯವಾದ ಕಾಯಿಲೆಯಾಗಿತ್ತು. ಸೌಭಾಗ್ಯವತಿ ಚಂದ್ರಭಾಗಿಯೂ ಈ ರೋಗದಿಂದ ಪಾರಾಗಲಿಲ್ಲ. ಆಕೆಗೆ ಮೊದಲ 3 ಮಕ್ಕಳು ಸತ್ತು ನಾಲ್ಕನೆಯ ಬಸುರಿನಲ್ಲಿ ಹುಟ್ಟಿದ ಮಗು ರಮಾನಂದ. ಈ ಮಗುವಾದರೂ ಬದುಕಲಿ-ತನ್ನ ಹತ್ತಿರ ಬಂದರೆ ಅದಕ್ಕೂ ಕ್ಷಯರೋಗ ತಗಲಿ ಕಳೆದುಕೊಳ್ಳಬೇಕಾದೀತು ಎಂಬ ಭೀತಿಯಿಂದ ಮಗುವು ಹತ್ತಿರ ಬರುವಾಗ ಅದನ್ನು ಹೊಡೆದು ಓಡಿಸುತ್ತಿದ್ದರಂತೆ. ಮಗುವು ಬದುಕಬೇಕೆಂಬ ಮಾತೃಹೃದಯದ ಆಕಾಂಕ್ಷೆ, ಮಗುವನ್ನು ಮುದ್ದಾಡುವ ಆಸೆ ಇವೆಲ್ಲವನ್ನೂ ತ್ಯಜಿಸಿ ಸುಖಸಂತೋಷವನ್ನು ತ್ಯಾಗ ಮಾಡಬೇಕಾದ ಪ್ರಸಂಗ. ಆ ದುಃಖದಲ್ಲಿಯೂ ಸುಖವನ್ನು ಕಂಡ ಆಕೆಯದು ಎಂತಹ ಗಟ್ಟಿ ಮನಸ್ಸು? ಮಗು ರಮಾನಂದನಿಗೆ 2-2½ ವರುಷ

ಗಳಿನ್ನುವಾಗ ಚಂದ್ರಭಾಗಿಯ ಆರೋಗ್ಯ ತೀರಾ ಹದಗೆಟ್ಟುಹೋಯಿತು. ಕೈಸೋಣ ತನ್ನ ಮಗುವಿನ ಎಲ್ಲ ಜವಾಬ್ದಾರಿಯನ್ನೂ ಅಣ್ಣ ಗಣೇಶ ಮೂಡುಬಿದ್ರೆ ಅವರಿಗೆ ವಹಿಸಿಕೊಟ್ಟು, ಒಂದು ದುರ್ದಿನ ಇಹಲೋಕವನ್ನು ತ್ಯಜಿಸಿ, ಪರಲೋಕ ಯಾತ್ರೆಯನ್ನು ಕೈಕೊಂಡರು. ತಾಯಿಯಿಲ್ಲದ ಮಗುವನ್ನು ಎತ್ತಿಕೊಂಡು ಮೂಡುಬಿದ್ರೆ ಗಣೇಶರಾಯರು ಮಂಗಳೂರಿಗೆ ಬಂದು ತನ್ನ ಮಡದಿ ರತ್ನಾಬಾಯಿಯ ಮಡಿಲಲ್ಲಿ ಹಾಕಿದರು.

ಬಾಲ್ಯ

ಮೂಡುಬಿದ್ರೆ ಗಣೇಶರಾಯರು ಮಂಗಳೂರಿನಲ್ಲಿ ತಾಲ್ಲೂಕು ಶಿರಸ್ತೇದಾರರಾಗಿದ್ದರು. ಅವರ ಆರ್ಥಿಕಸ್ಥಿತಿಯು ಅನುಕೂಲವಾಗಿದ್ದು ಸಂಸಾರವನ್ನು ಸುಗಮವಾಗಿ ಸಾಗಿಸುತ್ತಿದ್ದರು. ಅವರಿಗೆ ಪಿತ್ರಾರ್ಜಿತವಾಗಿ ಮೂಡುಬಿದ್ರೆಯ ಕೋಟೆಯ ಒಳಗಿನ ಜಮೀನು ಎಲ್ಲವೂ ಬಂದಿತ್ತು. ಆದ್ದರಿಂದ ಅವರ ಕುಟುಂಬಕ್ಕೆ "ಮೂಡುಬಿದ್ರೆ" ಎಂಬ ಹೆಸರಿಗೆ ಬದಲಾಗಿ "ಕೋಟೆ ಬಾಗಿಲದವರು" ಎಂಬ ಹೆಸರು ರೂಢಿಗೆಬಂದಿತ್ತು. ಆದರೆ ಈ ಜಮೀನು ಅವರಿಗೆ ಯಾವ ಆರ್ಥಿಕ ನೆರವೂ ಕೊಡಲಿಲ್ಲ. ಅದರಿಂದ ಬರುವ ವರಮಾನ ತಿಂಗಳ ಕ್ಷೌರಕ್ಕೂ ಸಾಲದು ಎನ್ನುವಂತಿತ್ತಂತೆ! ಆದ್ದರಿಂದ ಆ ಜಮೀನನ್ನು ಕುಟುಂಬದ ಒಂದು ಬಡ ಸಂಸಾರ ಎಂದೇ ಪಾಲಿಸಿ ಕಾಪಾಡಿಕೊಂಡು ಬಂದರು. ಗಣೇಶರಾಯರು Incomc Tax Officer ಆಗಿಯೂ ಕೆಲಸ ಮಾಡುತ್ತಿದ್ದರು. ಅವರ ಧರ್ಮಪತ್ನಿ ರತ್ನಾಬಾಯಿ 5 ಗಂಡು ಮಕ್ಕಳನ್ನು 3 ಹೆಣ್ಣು ಮಕ್ಕಳನ್ನು ಹಡೆದು ಮನೆ ತುಂಬಿಸಿದರು. ಈ ದಂಪತಿಗಳು ಸಂಸಾರದಲ್ಲಿ ಕಷ್ಟ-ಸುಖಗಳನ್ನು ಜೊತೆ ಜೊತೆಯಾಗಿಯೇ ಅನುಭವಿಸುತ್ತಿದ್ದರು. ಮನೆ ತುಂಬ ಮಕ್ಕಳಿದ್ದರೂ ಈ ಸಂತಾನ ಭಾಗ್ಯದಲ್ಲಿ ನಾದಿನಿಯ ಮಗು ರಮಾನಂದನ ಆರೈಕೆಯೂ ಅವರ ಪಾಲಿಗೆ ಬಂದರೂ ಸೌ॥ ರತ್ನಾಬಾಯಿ ಬೇಸರಿಸದೆ ಮುದ್ದಿನಿಂದ, ಪ್ರೀತಿಯಿಂದು ತಾಯಿಯನ್ನು ಕಳೆದುಕೊಂಡ ಮಗುವನ್ನು ಸಾಕಿ ಬೆಳಸಿದರು. ಅವರ ಮನಸ್ಸು ಪಕ್ವವಾದುದು. ಪ್ರೇಮ ಅಗಾಧವಾದುದು. ಅವರ ಮನೋವೃತ್ತಿ ಆಧ್ಯಾತ್ಮಿಕ ಪಥದಲ್ಲಿ ಸಾಗಿದ್ದು ಮನಃಶಾಂತಿಯನ್ನು ಪಡೆದಿದ್ದರು. ಮರಾಠಿ ಭಾಷೆಯಲ್ಲಿ "ಅಭಂಗ"ಗಳನ್ನು ರಚಿಸುತ್ತಿದ್ದರಂತೆ. ಭಾಗವತ-ಪುರಾಣ ಪಾರಾಯಣಗಳಿಂದ ಕಾಲ ಕಳೆದು ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದ ಸಾಧ್ವೀಮಣಿ. ಪತಿ ಗಣೇಶರಾಯರು ಅವರ ಸ್ವಂತ ಮನೆಗೆ "ರತ್ನ ವಿಲಾಸ" ಎಂಬ ಹೆಸರಿಟ್ಟದ್ದು ಸಾರ್ಥಕವಾಯ್ತು. ಮಗು ರಮಾನಂದನು ಬೆಳೆಯುತ್ತಿದ್ದಂತೆ ಮನೆ ಮಕ್ಕಳ ಮಧ್ಯೆ ಜಗಳ ವಗೈರೆ ಆಗುತ್ತಿರುವಾಗಲೂ ಮಾತೆ ರತ್ನಾಬಾಯಿ ತನ್ನ ಮಕ್ಕಳಿಗೆ ಶಿಕ್ಷಿಸುತ್ತಿದ್ದರಲ್ಲದೆ ರಮಾನಂದನ ಮೈಗೆ ಕೈಕೂಡ ತಟ್ಟುತ್ತಿರಲಿಲ್ಲವಂತೆ! ಹಲವೊಮ್ಮೆ

ತುಂಟ ರಮಾನಂದನು ಕಿರುಕುಳ ಮಾಡಿ ಆ ಮಕ್ಕಳನ್ನು ಶಿಕ್ಷೆಗೆ ಗುರಿಮಾಡಿದಸಂದರ್ಭ ಇದ್ದುವಂತೆ !

ಮಗ ರಮಾನಂದನು ಸೋದರ ಮಾವನ ಮನೆಯಲ್ಲಿ ಅದ್ದೂರಿಯಾಗಿ ಬೆಳೆಯು. ತ್ತಿದ್ದಂತೆ ತಂದೆ ಪಡುಕೋಣೆ ನರಸಿಂಗರಾಯರು ಎರಡನೇಮದುವೆ ಮಾಡಿಕೊಂಡರು. ಆನುಲಾಡಿ ಕುಟುಂಬದ ಸೌ|| ಶಾಂಭವಿ ಎಂಬ ಕನ್ಯೆ ಅವರ ಜೀವನ ಸಂಗಾತಿಯಾಗಿ ಬಂದು ಮನ-ಮನೆ ತುಂಬಿಸಿದರು. ಸೌ|| ಶಾಂಭವಿಗೆ ಸುಶ್ರಾವ್ಯವಾದ ಕಂಠವಿದ್ದು ಅಷ್ಟಮಿ ಭಜನೆ ಹಾಡುವುದರಲ್ಲಿ ಹೆಸರುವಾಸಿಯಾದರು. ಈ ನವ ದಂಪತಿಗಳಿಗೆ 6 ಗಂಡುಮಕ್ಕಳು 2 ಹೆಣ್ಣುಮಕ್ಕಳು ಹುಟ್ಟಿವವು ಹೊಸ ಸಂಸಾರದ ನಿರ್ವಹಣೆ ಹಾಗೂ ಜವಾಬ್ದಾರಿಯಲ್ಲಿ ಬಾಲಕ ರಮಾನಂದನು ತಂದೆ-ಮಲತಾಯಿಯಿಂದ ಬೇರೆಯಾಗಿಯೇ ಬೆಳೆದು, ಸೋದರ ಮಾವನ ಮನೆಯಲ್ಲಿಯೇ ದೊಡ್ಡವನಾದನು.

ವಿದ್ಯಾಭ್ಯಾಸ

ಚಿರಂಜೀವಿ ರಮಾನಂದನ ವಿದ್ಯಾಭ್ಯಾಸ ಮಂಗಳೂರಿನಲ್ಲಿಯೇ ಆಯಿತು. ಅಲ್ಲಿಯ Elementary ಶಾಲೆಯ ವಿದ್ಯಾಭ್ಯಾಸ ಆದಮೇಲೆ ಗಣಪತಿ ಹೈಸ್ಕೂಲಿನಲ್ಲಿ S.S.L.C. ಆಯಿತು. Intermediate ವಿದ್ಯಾಭ್ಯಾಸ ಅಲ್ಲಿನ ಸರಕಾರೀ ಕಾಲೇಜಿನಲ್ಲಿ ಮಾಡುತ್ತಿರುವಾಗ ಯುವಕ ರಮಾನಂದನಿಗೆ ಇಂಗ್ಲಿಷ್ ಸಾಹಿತ್ಯದ ರುಚಿ ಹತ್ತಿತು. ಚಿಕ್ಕಪ್ಪ ವಿಠಲರಾಯರ ಸತ್ಸಂಗದಿಂದ ಇಂಗ್ಲಿಷ್ ಗದ್ಯ-ಪದ್ಯದ ಹುಚ್ಚು ಹಿಡಿಯಿತು. ಇಂಗ್ಲಿಷ್ ಭಾಷೆಯ ಉತ್ತಮ ಹೆಸರುವಾಸಿ ಬರಹಗಾರರ ಸಾಹಿತ್ಯವನ್ನು ಓದುವುದು ಪ್ರಿಯವಾಗಿತ್ತು. P. G. Wodehouse ಮುಂತಾದ ಹಾಸ್ಯ ಬರಹಗಾರರ ಪುಸ್ತಕಗಳು ಅವರ ಮನಸೆಳೆದುವು. ಇದರಿಂದ ಅವರು ಸಾಹಿತ್ಯ ರಚನೆಯತ್ತ ಪೂರ್ಣ ಗಮನ ಹರಿಸಿದರು.

Intermediate ಆದಮೇಲೆ ಡಿಗ್ರಿ ಕಾಲೇಜು ಮಂಗಳೂರಿನಲ್ಲಿ ಆ ದಿನಗಳಲ್ಲಿ ಇಲ್ಲದಿದ್ದ ಕಾರಣ ಪದವಿ ಪಡೆಯಲು ವಿದ್ಯಾರ್ಥಿಗಳು ಮದರಾಸಿಗೆ ಹೋಗಬೇಕಾಗಿತ್ತು. ಯುವಕ ರಮಾನಂದನಿಗೂ ಈ ಸಮಸ್ಯೆ ಎದುರಿಗೆ ಬಂದು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿತ್ತು. ಅಂದಿನ ಸಮಾಜದ ಪದ್ಧತಿಯಂತೆ ರಮಾನಂದನಿಗೆ ಮದುವೆಯ ವಯಸ್ಸಾಗಿಯೂ ಇತ್ತು. ಸೋದರ ಮಾವನು ತನ್ನ ಮಗಳು ಚಿ|| ಸೌ|| ಶಾಂತಿ ಎಂಬ ಕನ್ಯೆಯನ್ನು ರಮಾನಂದನಿಗೆ ಕೊಟ್ಟು ಮನೆ ಅಳಿಯನನ್ನಾಗಿ ಮಾಡಿಕೊಳ್ಳುವ ಆಸೆ ಪಟ್ಟಿದ್ದಿರಬೇಕು. ಆದರೆ ದೈವವು ಬೇರೊಂದು ಬಗೆಯಿತು. ಆ ಕನ್ಯೆ ವಿಷಮಜ್ವರದ ಕಾಯಿಲೆ ಯಿಂದ ಮೃತಳಾದುದು ಕುಟುಂಬಕ್ಕೆಲ್ಲ ವಿಷಾದಕರ ವಿಷಯವಾಯಿತು.

ವಿವಾಹ

ಯುವಕ ರಮಾನಂದ Intermediate ಓದುತ್ತಿದ್ದಾಗ ಆತನಿಗೆ ಕೇವಲ 19 ವರುಷ ಪ್ರಾಯ. ಅದೇ ಸಮಯ, ಅಂದಿನ ಸಾಮಾಜಿಕ ರೂಢಿಯಂತೆ ಕ್ರಿ. ಶ. 1916ರಲ್ಲಿ ಆತನ ವಿವಾಹವೂ ಜರುಗಿತು. ಪುತ್ತೂರಿನ ಗಣ್ಯರೂ ವಕೀಲರಾದ ಸಹಕಾರ ಚಳುವಳಿಯ ಪಿತರಾದ–ಸಮಾಜ ಸೇವಾಧುರೀಣರಾದ ಕರ್ಮಯೋಗಿಗಳಾದ ಮೊಳಹಳ್ಳಿ ಶಿವರಾಯರ ಮತ್ತು ಪತ್ನಿ ಅನಸೂಯ (ಉಮಾ) ಅವರ ಮೊದಲ ಮಗಳು ಚಿ|| ಸೌ|| ಸುಶೀಲೆ ಎಂಬ ಕನ್ಯೆಯನ್ನು ಕೊಟ್ಟು ಮದುವೆ ಪುತ್ತೂರಿನಲ್ಲಿ ವಿಜೃಂಭಣೆಯಿಂದ ಜರುಗಿತು. ಹಿರಿಯರು ವರದಕ್ಷಿಣೆ ಪಡೆಯದೆ ಅದಕ್ಕೆ ಬದಲಾಗಿ ರಮಾನಂದನ ಮುಂದಿನ ವಿದ್ಯಾಭ್ಯಾಸದ ಎಲ್ಲ ಜವಾಬ್ದಾರಿಯನ್ನು ಮಾವನವರಿಗೆ ವಹಿಸಿಕೊಟ್ಟು ಆತನ ಭವಿಷ್ಯವು ಭವ್ಯವಾಗುವಂತೆ ಏರ್ಪಾಟು ಮಾಡಿದರು. Intermediate ಪರೀಕ್ಷೆ ಪಾಸಾದ ಮೇಲೆ ಮೊಳಹಳ್ಳಿ ಶಿವರಾಯರು ಅಳಿಯನನ್ನು ಮದರಾಸಿಗೆ ಕಳುಹಿಸಿ ತನ್ನ ಅಣ್ಣ ಸುಬ್ಬರಾಯರ ಮನೆಯಲ್ಲಿ ವಸತಿ ಊಟದ ವ್ಯವಸ್ಥೆಮಾಡಿ ಮುಂದಿನ ಓದಿಗೂ ಅನುಕೂಲ ಮಾಡಿಕೊಟ್ಟರು. ಮದರಾಸಿನ Presidency College ನಲ್ಲಿ ರಮಾನಂದನು B. A. ಹಾಗೂ M. A. ಪರೀಕ್ಷೆ ಮುಗಿಸಿ ಅಲ್ಲಿಯೇ L. T. ಯನ್ನು ಮಾಡಿಕೊಂಡರು. ರಜಾ ದಿನಗಳಲ್ಲಿ ಅವರು ಮಂಗಳೂರಿಗೆ ಬಂದು ಸೋದರ ಮಾವನ ಮನೆಯಲ್ಲೂ ಪುತ್ತೂರಿನ ಮಾವನ ಮನೆಯಲ್ಲೂ ಇರುತ್ತಿದ್ದರು.

ದಾಂಪತ್ಯ

ಪಡುಕೋಣೆ ರಮಾನಂದರಾಯರ ಪತ್ನಿ ಸುಶೀಲೆ ಸುಸಂಸ್ಕೃತಳು. Middle School ವಿದ್ಯಾಭ್ಯಾಸ ಪುತ್ತೂರಲ್ಲಿ ಮುಗಿಸಿ ತನ್ನ 13ನೇ ವಯಸ್ಸಿಗೇ ವಿವಾಹವಾಗಿ ಗೃಹಿಣಿಯಾದರು. ಶಾಲೆಯ ಪಾಠಗಳನ್ನು ಬಿಟ್ಟು ತಾಯಿಯ ನೇತೃತ್ವದಲ್ಲಿ ಸಂಸಾರದಲ್ಲಿ ಪತಿಗೆ ಯೋಗ್ಯ ಪತ್ನಿ, ಮಕ್ಕಳಿಗೆ ಅಕ್ಕರೆಯ ತಾಯಿ, ಅತಿಥಿಗಳಿಗೆ ಆದರದ ಗೃಹಿಣಿಯಾಗಲು ತರಬೇತು ಪಡೆದರು. ಮಾತೆ ಸೌ|| ಅನಸೂಯ (ಉಮಾ) ಸುಶ್ರಾವ್ಯ ಕಂಠಶ್ರೀಯಿಂದ ಮರಾಠಿ ಹಾಡುಗಳನ್ನು ಹಾಡುತ್ತಿದ್ದರಂತೆ· ಮರಾಠಿ ಭಾಷೆಯಲ್ಲಿ ಕವಿತೆಗಳನ್ನು ರಚಿಸುತ್ತಿದ್ದರಂತೆ. ಅವರ ಅಕ್ಕಂದಿರು ವಿಟ್ಲದಲ್ಲಿ (ಪುತ್ತೂರಿನಿಂದ 8-10 ಮೈಲು ದೂರ) ಪುರೋಹಿತ ಹಾಗೂ ಆಯುರ್ವೇದ ಪಂಡಿತರ ಕುಟುಂಬಕ್ಕೆ ಸೇರಿ ದೈವಿಕ ಭಾವನೆಗಳ ಗಣಿಗಳಾಗಿದ್ದರು. ಭಾಗವತ-ರಾಮಾಯಣ ಮಹಾಭಾರತದ ಕಥೆಗಳು ಅವರ ನಾಲಿಗೆ ತುದಿಯಲ್ಲಿದ್ದವು. ಈ ಗ್ರಂಥಗಳ ಯಾವುದೇ ಕಥೆ-ಸಂದರ್ಭ-ಸಂಭಾಷಣೆ ಕೇಳಿದರೂ ಅವರು ತತ್‌ಕ್ಷಣ

ಮಾತಿನ ಚಾತುರ್ಯದಿಂದ ಸ್ಪಷ್ಟವಾಗಿ ವಿವರಿಸಿ ಜನರ ಮನಸ್ಸನ್ನು ಸೂರೆ ಗೊಳ್ಳುತ್ತಿದ್ದರು. ಅವರ ಸ್ವಯಂ ಶಿಕ್ಷಣ ಪರಿಸರದಲ್ಲಿ ನಡೆಯುವ ವಿಷಯಗಳಲ್ಲಿನ ಆಸಕ್ತಿ ತಿಳುವಳಿಕೆ ಇತ್ಯಾದಿ ಇಂದು ನಮ್ಮ ಎಣಿಕೆಗೂ ಮೀರಿದ ಪ್ರತಿಭೆ. ಆಗ ಈ ಕನ್ಯೆಗಳಿಗೆ 7-9-10-11 ವಯಸ್ಸಿಗೇ ವಿವಾಹ ಮಾಡುವ ಪದ್ಧತಿಯಿತ್ತು. ಚಿಕ್ಕಂದಿನಲ್ಲಿಯೇ ವಿವಾಹ ಮಾಡಿದರೆ ಸೇರಿದ ಕುಟುಂಬಕ್ಕೆ Graft (ಕಸಿ ಮಾಡು ವುದು) ಆಗುವುದಕ್ಕೆ ಅನುಕೂಲವೆನ್ನುತ್ತಿದ್ದರು. ಕನ್ಯೆಯ ಹೆಸರನ್ನು ಬದಲಾಯಿಸು ತ್ತಿದ್ದರು. ತವರಿನ ಮೋಹಕ್ಕಿಂತ ಸೇರಿದ ಮನೆಯ ವಾತ್ಸಲ್ಯ ಅವರನ್ನು ಆವರಿಸು ತ್ತಿತ್ತು. ಇಂತಹ ದೊಡ್ಡಮ್ಮ-ಅಮ್ಮನ ಮತ್ತು ಧೀಮಂತ, ಶ್ರೀಮಂತ ಅಪ್ಪನ ಆರೈಕೆಯಲ್ಲಿ ಬೆಳೆದ ಸುಶೀಲೆ ಸಂಸಾರದ ಸುಖ ದುಃಖ ಜವಾಬ್ದಾರಿಗಳನ್ನು ಅರಿತ ಕನ್ಯೆಯಾಗಿದ್ದಳು. ತವರು ಮನೆಯ ಸುಶೀಲೆ ಗಂಡನ ಮನೆಯಲ್ಲಿ "ಸೀತಾದೇವಿ" ಆದರು.

ಪತಿ ರಮಾನಂದರಾಯರು ವಿಶ್ವಾವಿದ್ಯಾಲಯದ M. A. L. T. ಪದವಿ ಪಡೆದು ರಾಜ ಮಹೇಂದ್ರಿಯಲ್ಲಿ Lecturer in Chemistry ಆಗಿ ನೇಮಕರಾದರು. ಜೀವನದಲ್ಲಿ ತಮ್ಮ ಮೊದಲ ಉದ್ಯೋಗಕ್ಕೆ ಸೇರಿದರು. ಹಾಗೂ ಪತ್ನಿ ಸುಶೀಲೆ (ಸೀತಾದೇವಿ) ಯೊಡನೆ ಮೊದಲ ಬಿಡಾರ ಹೂಡಿ ಸಂಸಾರ ಆರಂಭಿಸಿದರು. ಸೌ॥ ಸುಶೀಲೆಗೆ ಆಗ ಕೇವಲ 17–18 ವರ್ಷ ಪ್ರಾಯ. ಕಾಲೇಜಿನಲ್ಲಿ ರಮಾನಂದರಾಯರೂ ತರುಣ ಅಧ್ಯಾಪಕರು. ಅವರ ಶಿಷ್ಯವರ್ಗದಲ್ಲಿ ಅವರಿಗಿಂತಲೂ ವಯಸ್ಸಾದವರು ಇದ್ದರಂತೆ ! ಮನೆಯಲ್ಲಿ ಮಡದಿ ಅಚ್ಚುಕಟ್ಟಾಗಿ ಸಂಸಾರ ಸಾಗಿಸುತ್ತಿದ್ದರು. ಇಬ್ಬರ ಅಡಿಗೆಗೆ ಎಷ್ಟು ಹೊತ್ತು ? ತುಂಬಿದ ಮನೆಯಲ್ಲಿ ಬೆಳೆದ ಸುಶೀಲೆ ಸಮಯ ಕಳೆಯು ವುದು ಹೇಗೆ? ಎಂಬ ಸಮಸ್ಯೆಗೆ ಪತಿ "ಪುಸ್ತಕ ಓದು" ಎಂದು ಕಾಲೇಜಿನಿಂದ ಇಂಗ್ಲಿಷ್ ಕಾದಂಬರಿಗಳನ್ನು ತಂದುಕೊಡುತ್ತಿದ್ದರಂತೆ, Middle School ವರೆಗೆ ಮಾತ್ರ ಓದಿದ್ದ ಸುಶೀಲೆಗೆ ಅವರು ತಂದುಕೊಡುತ್ತಿದ್ದ ಇಂಗ್ಲಿಷ್ ಕಾದಂಬರಿ ಗಳು ನುಂಗಲಾರದ ತುತ್ತು ಆಗುತ್ತಿತ್ತು. ಆದರೂ ಪ್ರಯತ್ನಿಸುತ್ತಿದ್ದರು. ಕಾಲೇಜಿನಿಂದ ಸಾಯಂಕಾಲ ಮನೆಗೆ ಬಂದು "ಓದಿದೆಯಾ ?" ಎಂದು ಕೇಳಿದಾಗ "ಓದಿದೆ-ಆದರೆ ನನಗೆ ಏನೂ ಅರ್ಥವಾಗಲಿಲ್ಲ!" ಎಂದು ಉತ್ತರಿಸಿದಾಗ "ಹಾಗೆಯೇ ಓದುತ್ತಲೇ ಇರು, ಓದುತ್ತಾ ಓದುತ್ತಾ ಸ್ವಲ್ಪ ಸ್ವಲ್ಪ ಅರ್ಥವಾಗುತ್ತದೆ. ಕ್ರಮೇಣ ಕಾದಂಬರಿ ನಿನ್ನನ್ನು ಬಿಡುವುದಿಲ್ಲ" ಎಂದು ಪತ್ನಿಯನ್ನು ಓದುವ ಹವ್ಯಾಸಕ್ಕೆ ಹುರಿ ದುಂಬಿಸುತ್ತಿದ್ದರಂತೆ. ಕಾಲ ಸರಿದಂತೆ ಅವರ ಎಣಿಕೆಗೆ ಮೀರಿ ಸುಶೀಲೆ ಬಿಡದೆ ಕಾದಂಬರಿಗಳನ್ನು ಓದಿ ಸಮಯವನ್ನು ಯೋಗ್ಯರೀತಿಯಿಂದ ಕಳೆಯುವಂತಾಯಿತು. ಒಮ್ಮೊಮ್ಮೆ ಕಾದಂಬರಿ ಓದಲು ಆರಂಭಿಸಿದರೆ ಅದು ಬಹಳ ಸ್ವಾರಸ್ಯವಾಗಿದ್ದರೆ

ಒಲೆಯ ಮೇಲಿರುವ ಒಗ್ಗರಣೆ ಸೀದು ಹೋದಾಗಲೂ ಗೊತ್ತಾಗುತ್ತಿರಲಿಲ್ಲವಂತೆ. ಓದಿನ ಹುಚ್ಚಿನಲ್ಲಿ ಅವರು ಅಷ್ಟು ಮೈಮರೆಯುತ್ತಿದ್ದರು.

ಚೊಚ್ಚಲು ಸಂಭ್ರಮ

ರಾಜ ಮಹೇಂದ್ರಿಯಲ್ಲಿ ರಮಾನಂದರಾಯರ ದಾಂಪತ್ಯದ ಐದು ವರುಷಗಳು ಕಳೆದಿದ್ದುವು. ಆದರೂ ಮಗುವಾಗಲಿಲ್ಲ ಎಂಬ ಕೊರತೆ ಎರಡು ಕುಟುಂಬಗಳಿಗೂ ಇತ್ತು. ಸುಶೀಲೆಯ ತಾಯಿ ಕಳವಳದಿಂದ ಮಗಳು ಗರ್ಭವತಿಯಾಗಿ ಸಸೂತ್ರವಾಗಿ ಪ್ರಸವವಾದರೆ ವಿಟ್ಲದ ಶ್ರೀ ಅನಂತೇಶ್ವರ ಸ್ವಾಮಿಗೆ "ಬೆಳ್ಳಿಯ ತೊಟ್ಟಿಲು....ಚಿನ್ನದ ಮಗು"ವನ್ನು ಕೊಡುವೆ ಎಂದು ಹರಕೆ ಹೊತ್ತರಂತೆ; ಸುಶೀಲೆಗೆ ಆಗ ಕೇವಲ 18 ವರುಷ ವಯಸ್ಸು. ಆದರೂ ದೊಡ್ಡ ಹೆಂಗಸೆಂಬ ಮೂಢ ಕಲ್ಪನೆ.

ಶ್ರೀ ಅನಂತೇಶ್ವರನ ಅನುಗ್ರಹದಿಂದ ಸುಶೀಲೆಯ ಗರ್ಭದಲ್ಲಿ ನಾನು ಪ್ರವೇಶಿಸಿದೆ.

ಅಮ್ಮನ ಅಪರೂಪದ ಬಸಿರು ಎಲ್ಲರಿಗೂ ಎಲ್ಲಿಲ್ಲದ ಉತ್ಸಾಹದ ಸಂಭ್ರಮ. ಕ್ರಿ.ಶ. 1921 ಅಗೋಸ್ತು 11 ರಂದು. ನಾನು ಪುತ್ತೂರಿನಲ್ಲಿ ಅಮ್ಮನ ತವರು ಮನೆಯಲ್ಲಿ ಹುಟ್ಟಿದಾಗ ನನ್ನ ಅಜ್ಜನ (ಮೊಳಹಳ್ಳಿ ಶಿವರಾಯರ) ತಾಯಿ ಬದುಕಿದ್ದರು. ಅಜ್ಜಮ್ಮನವರು ಮನೆಯ ಜಗುಲಿಯ ಮೇಲೆ ಕೂತು ಹಾರಾಡುವ ಕಾಗೆಗೂ, ನೆಲದ ಮೇಲೆ ಹರಿಯುವ ಇರುವೆಗೂ-ಬಂದು ಹೋಗುವ ಜನರೆಲ್ಲರಿಗೂ "ನಮ್ಮ ಸುಶೀಲೆಗೆ ಹೆಣ್ಣುಮಗು! ಹುಣ್ಣಿಮೆಯ ಚಂದ್ರನಂತೆ ಮುದ್ದು ಮುದ್ದಾಗಿದೆ!" ಎಂದು ಕೊಂಡಾಡಿದರಂತೆ.

ತೊಟ್ಟಿಲಿಡುವ ಶಾಸ್ತ್ರ ಆಗಿ ನಾಮಕರಣ ಮಾಡುವಾಗ ನನಗೆ ನನ್ನ ತಂದೆಯ ತಾಯಿಯ ಹೆಸರಾದ "ಚಂದ್ರಭಾಗಿ" ಎಂಬ ಹೆಸರನ್ನೇ ಕಿವಿಯಲ್ಲಿ ಉಸಿರಿಸಿದರಂತೆ. (ಪಂಡರಪುರದಲ್ಲಿ ಹರಿಯುತ್ತಿರುವ 'ಚಂದ್ರಭಾಗ' ನದಿಯ ಹೆಸರಿನಂತೆ ನನ್ನ ಹೆಸರು ಕ್ರಮೇಣ 'ಚಂದ್ರಭಾಗಿ'ಯಿಂದ ಮಾರ್ಪಟ್ಟು 'ಚಂದ್ರಭಾಗ' ಆಯಿತು.)

ಹೆತ್ತವರ ಸಂಸಾರ–ನನ್ನ ಬಾಲ್ಯ

ನನಗೆ ಒಂದು–ಒಂದೂವರೆ ವರುಷ ಎನ್ನುವಾಗ ತಂದೆಗೆ ತಲಚೇರಿಗೆ ವರ್ಗವಾಯಿತು ತಲಚೇರಿಯಿಂದ ತಂದೆ ಆಗಾಗ್ಗೆ ಮಂಗಳೂರಿಗೂ ಪುತ್ತೂರಿಗೂ ರಜಾ ಕಾಲದಲ್ಲಿ ಕುಟುಂಬ ಪ್ರವಾಸ ಕೈಕೊಳ್ಳುತ್ತಿದ್ದರು. ನಮಗೆಲ್ಲ ಪುತ್ತೂರು ಅಜ್ಜನ ಮನೆ ಅತ್ಯಂತ ಪ್ರೀತಿಯ ಸ್ಥಳವಾಗಿತ್ತು. ನಮ್ಮ ಅಜ್ಜಿಯನ್ನು ಪ್ರೀತಿಯಿಂದ ನಾವು

"ಪುತ್ತೂರಮ್ಮಾ" ಎಂದು ಕೂಗುತ್ತಿದ್ದೆವು. ನನ್ನನ್ನು ಅವರು "ಚಂದ್ರೂ" ಎಂದು ಅಕ್ಕರೆಯಿಂದ ಕರೆಯುತ್ತಿದ್ದರು. ಪುತ್ತೂರಿನ ಪರ್ಲಡ್ಕ ಎಂಬ ಬಡಾವಣೆಯಲ್ಲಿ ನಮ್ಮ ಇನ್ನೊಬ್ಬ ಅಜ್ಜನ ಸ್ವಂತ ಮನೆಯೂ ಇದ್ದುದರಿಂದ ನಮಗೆ ರಜಾ ದಿನಗಳು ಬಹಳ ಬೇಗ ಕಳೆಯುತ್ತಿತ್ತು. ತಂದೆಯವರಿಗೆ ತಲಚೇರಿಯಿಂದ ಮಂಗಳೂರಿಗೆ ವರ್ಗವಾದಾಗ ನಾನು ಪುತ್ತೂರಿನಲ್ಲೇ ಪ್ರೈಮರಿ ಮುಗಿಸಿ ಮಿಡ್ಲ್ ಸ್ಕೂಲು ವಿದ್ಯಾಭ್ಯಾಸ ಮಾಡುತ್ತಿದ್ದೆ. ಮಂಗಳೂರಿನಲ್ಲಿ ತಂದೆ–ತಾಯಿಯರ ಸಂಸಾರ ದೊಡ್ಡದಾಯಿತು. ನನಗೊಬ್ಬ ತಮ್ಮ–ಹೆಸರು ಪ್ರಭಾಶಂಕರ-ನನ್ನ ಅನಂತರ ಹುಟ್ಟಿದ. ಅವನ ತರುವಾಯ ಎರಡೆರಡು ವರುಷಗಳ ಅಂತರದಲ್ಲಿ ಎರಡು ಹೆಣ್ಣು ಮಕ್ಕಳು ಹುಟ್ಟಿದರು. ಅವರ ಹೆಸರು ಶಾಂತಿ ಮತ್ತು ಜಯವಂತಿ.

ಜಯವಂತಿ ಹುಟ್ಟಿದ ಮೇಲೆ ತಾಯಿಗೆ ಕ್ಷಯರೋಗ ಬಂತು. ಅವರನ್ನು ಬೆಂಗಳೂರಿನ ಮಾಗಡಿ ಆಸ್ಪತ್ರೆಗೆ ಸೇರಿಸಲಾಯಿತು. ಸುಮಾರು 5-6 ತಿಂಗಳು ಅವರ ಔಷಧೋಪಚಾರ ಆಗುತ್ತಿರುವ ವೇಳೆ ಜಯವಂತಿ ಕೈ ಕೂಸು. ಆಕೆಯ ಆರೈಕೆಯನ್ನು ನಮ್ಮ ಚಿಕ್ಕಮ್ಮ–ಶಾರದಾಬಾಯಿ ಲಾಭಾದಾಯ (ಮೊಳಹಳ್ಳಿ ಶಿವರಾಯರ ಎರಡನೇ ಮಗಳು) ಮಾಡಿ ಅಕ್ಕರೆಯಿಂದ ಬೆಳೆಸಿದರು. ಅಮ್ಮ ಪೂರ್ಣ ಹುಶಾರಾಗಿ ಮನೆ ಸೇರಿದ ಏಳು ವರ್ಷಗಳ ಮೇಲೆ–1934ರಲ್ಲಿ–ಮತ್ತೊಂದು ಹೆಣ್ಣನ್ನು ಹೆತ್ತರು. ತುಂಬಿದ ಬಸುರಿ ಅಮ್ಮ ಪೀರ್ ಕಂಪೆನಿಯ "ಯಶೋಧರಾ" ನಾಟಕವನ್ನು ನೋಡಿ ಮನೆಗೆ ಬಂದ ಮೇಲೆ ಪ್ರಸವ ವೇದನೆಗೆ ತುತ್ತಾಗಿ ಹಡೆದದ್ದರಿಂದ ಹುಟ್ಟಿದ ಮಗುವಿಗೆ "ಯಶೋಧರಾ" ಎಂಬ ನಾಮಕರಣ ಮಾಡಿದರು. ಅವರು ಆ ನಾಟಕವನ್ನು ತುಂಬಾ ಮೆಚ್ಚಿದ್ದರು.

ಮತ್ತೆ ಎರಡು ವರ್ಷಗಳ ಅನಂತರ 1936ರಲ್ಲಿ, ಅಮ್ಮನು ಮತ್ತೊಂದು ಹೆಣ್ಣನ್ನು ಹೆತ್ತರು. ಆದರೆ ಆ ಮಗು ಕೆಲವೇ ಗಂಟೆಗಳಲ್ಲಿ ದೈವಾಧೀನವಾಯಿತು. ತಮ್ಮ ಐದನೆಯ ಹೆಣ್ಣು ಮಗುವನ್ನು ಕಂಡು ಅಪ್ಪ ಅಸಮಧಾನ ಮರೆತು "ನನಗೆ ಪಂಚ ಕನ್ನೆಯರ ಲಭ್ಯ" ಎಂದು ಹೆಮ್ಮೆಯಿಂದ ಹೇಳಿದರಂತೆ. ಎಲ್ಲಿ ಗಂಡು ಮಕ್ಕಳು ಹೆಚ್ಚಾಗಿರುವರೋ ಅವರಿಗೆ ಹೆಣ್ಣು ಮಕ್ಕಳ ಸಂತಾನಕೊಟ್ಟು ನಿಸರ್ಗ ಸಮತೋಲನ ಮಾಡುವ ನಿಯಮ ಎಂದುಕೊಂಡರು. ಆದರೆ ಆ ಮುದ್ದು ಮಗುವಿನ ನಿಧನದಿಂದ ಇಬ್ಬರೂ ತುಂಬಾ ನೊಂದುಕೊಂಡರು. ಅದನ್ನು ಮರೆಯಲು ಸಾಧ್ಯವೆ? ಸಮಾಧಾನ ತಂದುಕೊಳ್ಳಲು ಅಮ್ಮನಿಗೆ 3-4 ತಿಂಗಳುಗಳೇ ಬೇಕಾದುವು.

ಮಂಗಳೂರು ಮನೆ-ಕಲಾ ಪ್ರಪಂಚ

ಮಂಗಳೂರಿನಲ್ಲಿ ನನ್ನವಿದ್ಯಾಭ್ಯಾಸ ಮುಂದುವರಿಯಿತು. 'ಬೆಳೆಯುತ್ತಿರುವ ನನಗೆ' ಹಿರಿಯ ಮಗಳಾಗಿ, ತಂದೆ-ತಾಯಿಯವರ ವ್ಯಕ್ತಿತ್ವ-ಅವರ ವಿಶಾಲ ಹೃದಯ-ಅವರಿಗೆ

ಲಲಿತ ಕಲೆಗಳಲ್ಲಿರುವ ಆಸಕ್ತಿ-ಅವರ ಅತಿಥಿ ಸತ್ಕಾರ-ಎಲ್ಲವೂ ಸ್ಫೂರ್ತಿಕೊಡುತ್ತಿದ್ದವು. ಆ ಅಂದದ ವಾತಾವರಣದಲ್ಲಿ ಹಕ್ಕಿಯಂತೆ ಸ್ವೇಚ್ಛೆಯಾಗಿ, ಸ್ವತಂತ್ರಳಾಗಿ, ಆನಂದ ದಿಂದ ಬೆಳೆಯುತ್ತಿದ್ದೆ. ತಂದೆಯವರು ನಮಗೆ ಸಾಹಿತ್ಯಾಭಿರುಚಿಯ ಮಾಧುರ್ಯವನ್ನು ತಿಳಿಸುತ್ತಿದ್ದರು. ನಾನೂ ಶಂಕ್ರುವೂ ಸೇರಿ ಅವರ ಆದೇಶದಂತೆ ಪಂಜೆ ಮಂಗೇಶ ರಾಯರ ಹಾಗೂ ಹೊಯಿಸಳರ ಶಿಶು ಸಾಹಿತ್ಯದ ಪದಗಳನ್ನು ಕಂಠ ಪಾಠಮಾಡಿ ಎಲ್ಲರೆದುರಿಗೆ ಹೇಳುತ್ತಿದ್ದೆವು. ನಾಟ್ಯದಲ್ಲಿಯೂ ಆಸಕ್ತಿ ಪಡೆದ ನನಗೆ ಯಾವ ತಡೆಯೂ ಹಾಕದೆ ನನ್ನ ಅಭಿಲಾಷೆಯನ್ನು ಪ್ರೋತ್ಸಾಹಿಸಿದರು. ತಂದೆಯವರು ಕವಿತೆ ಗಳನ್ನು ಬರೆಯುತ್ತಿದ್ದರು. ಆ ನಾಟಕಗಳಲ್ಲಿ ನಾವೆಲ್ಲ ಭಾಗವಹಿಸಿ ನಟಿಸುವಂತೆ ತರಬೇತು ಕೊಡುತ್ತಿದ್ದರು. ಅವರಿಗೆ ನಾಟಕಗಳಲ್ಲಿದ್ದ ಅಭಿಲಾಷೆಯಿಂದಾಗಿ ಆಗ ಮಂಗಳೂರಿಗೆ ಪ್ರವಾಸ ಕೈಕೊಳ್ಳುತ್ತಿದ್ದ ನಾಟಕ ಕಂಪೆನಿಯ ನಟವರ್ಗವೆಲ್ಲ ನಮ್ಮಲ್ಲಿ ಆಗಾಗ್ಗೆ ಬಂದು ಹೋಗುತ್ತಿದ್ದ ಅತಿಥಿಗಳಾಗಿದ್ದರು. ಶ್ರೀ ಸದಾಶಿವ ಗರೂಡ್ ಕಂಪೆನಿಯವರ ಹಾಗೂ ಮುಹಮ್ಮದ್ ಪೀರ್ ಅವರ ನಾಟಕಗಳನ್ನು ನಾವು ಒಂದನ್ನೂ ಬಿಡದೆ ನೋಡುತ್ತಿದ್ದೆವು. ಕಲಾ ಸಾಮ್ರಾಜ್ಯದಲ್ಲಿ ತೇಲಾಡುತ್ತಿದ್ದೆವು. ಅಲ್ಲದೆ ಸಂಗೀತಗಾರರಾದ ಅಬ್ದುಲ್ ಕರೀಂ ಖಾನ್ ಮುಂತಾದವರ ಸಂಗೀತ ಕಚೇರಿ ಗಳಿಗೂ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆ ಅಬ್ದುಲ್ ಕರೀಂ ಅವರ ಸಂಗೀತಕ್ಕೆ ತಂದೆಯವರು ಪರವಶರಾಗಿ ಕೊರಳಲ್ಲಿದ್ದ ಚಿನ್ನದ ಸರವನ್ನು ಕೊಟ್ಟರಂತೆ. ಅದೇ ಅವರಿಗೆ ಸಂಗೀತ ಕಲೆಯ ಮೇಲಿದ್ದ ಅಭಿಮಾನದ ಕುರುಹು! ಅಮ್ಮನವರೂ ಮನೆಯಲ್ಲಿ ಲಕಡಿಬುವಾ ಎಂಬ ಸಂಗೀತ ವಿದ್ವಾಂಸರಿಂದ (ಅಬ್ದುಲ್ ಅವರ ಶಿಷ್ಯಂದಿರು) ಸಂಗೀತವನ್ನು ಕಲಿತು ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಂದೆಯ ವರೊಂದಿಗೆ ಸಿ.ಕೆ. ವೆಂಕಟರಾಮಯ್ಯ ಅವರ "ಮಂಡೋದರಿ" ವಿ. ಸೀ ಅವರ "ಸೋಹ್ರಾಬ್-ರುಸ್ತುಂ" ಕೈಲಾಸಂ ಅವರ "ಹೋಂ-ರೂಲು" ಮುಂತಾದ ನಾಟಕ ಗಳಲ್ಲಿ ಯಶಸ್ವಿಯಾಗಿ ನಟಿಸುತ್ತಿದ್ದರು. ಕುಲೀನ ಮನೆತನದ ಗೃಹಿಣಿ ರಂಗಸ್ಥಳಕ್ಕೆ ಬಂದು ನಟಿಸುವುದು ಅಂದಿನ ದಿನಗಳಲ್ಲಿ ಸಮಾಜಕ್ಕೆ ಸವಾಲು ಆಗಿತ್ತು. ಕೈಲಾಸಂ ಅವರ Home-Rule ನ್ನು ಕೊಂಕಣಿ ಭಾಷೆಗೂ ಭಾಷಾಂತರಿಸಿ ಅದರಲ್ಲೂ ಪಾತ್ರ ವಹಿಸಿ ಮಂಗಳೂರು ಪುತ್ತೂರು ಮುಂತಾದ ಊರುಗಳಲ್ಲಿ ಪ್ರದರ್ಶನ ಕೊಟ್ಟರು. ಕೊಂಕಣಿ ಭಾಷೆಯ ಈ ನಾಟಕವನ್ನು ಕೈಲಾಸಂ ಅವರು ತುಂಬಾ ಮೆಚ್ಚಿಕೊಂಡು ತಮ್ಮ "Home-Rule" ನಾಟಕಕ್ಕೆ ಕನ್ನಡಕ್ಕಿಂತ ಕೊಂಕಣಿ ಭಾಷೆಯೇ ಬಹಳ ಯೋಗ್ಯವಾಗಿದೆ ಎಂದರಂತೆ.

ಮಂಗಳೂರು ಇತ್ಯಾದಿ ಪಟ್ಟಣಗಳಲ್ಲಿ ಮನೋರಂಜನೆ ಕಾರ್ಯಕ್ರಮಗಳಿಗೆ ಪಡುಕೋಣೆ ದಂಪತಿಗಳು ಪ್ರಸಿದ್ಧಿ ಪಡೆದರು. ಅವರ ಚೇತೋಹಾರಿ ಪ್ರದರ್ಶನಗಳು ಜನರ ಮನಸ ಸೆಳೆಯುತ್ತಿದ್ದುವು. ಶಿವರಾಮ ಕಾರಂತರ ಕಲಾ ಪ್ರಯೋಗಗಳಲ್ಲಿ ಅಮ್ಮ ಹಿನ್ನೆಲೆ

ಸಂಗೀತದ ನೆರವು ನೀಡುತ್ತಿದ್ದರು. ನಮ್ಮನ್ನು ಅವರ ನಾಟಕಗಳಲ್ಲಿ ನೃತ್ಯ, ಮತ್ತು ಇತರ ಪ್ರಯೋಗ ಕಾರ್ಯಕ್ರಮಗಳಿಗೆ ಕಳುಹಿಸಿ ನಮಗೂ ಅವರಿಗೂ ಉತ್ತೇಜನ ಕೊಡುತ್ತಿದ್ದರು. ಅವರ ಚಲನ ಚಿತ್ರದಲ್ಲಿ ಅಪ್ಪನವರು ಪಾತ್ರ ವಹಿಸಿದ್ದಾರೆ.

ಪುತ್ತೂರಿನ ದಸರಾ ಮಹೋತ್ಸವ ನಮ್ಮ ಬಾಳಿನಲ್ಲಿ ಸುವರ್ಣಪರ್ವವಾಗಿತ್ತು. ಕಲೆ, ಸಾಹಿತ್ಯ, ಕ್ರೀಡಾರಂಗ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುತ್ತಿದ್ದೆವು. ಅಂದಿನ ಆ ಅನುಭವಗಳಿಂದ ನಮ್ಮೆಲ್ಲರ ಜೀವನ ಇಂದು ಸುಸಂಸ್ಕೃತವಾಗಿದೆ.

ಮಕ್ಕಳ ಮೇಲೆ ಹೆತ್ತವರ ಪ್ರಭಾವ

ಮಂಗಳೂರಿನ ಮನೆಯಲ್ಲಿ ತಂದೆಯವರು ಅಂದಿನ ಅತ್ಯಾಧುನಿಕ ಸಾಧನ-ಸಲಕರಣೆ-ಯಂತ್ರಗಳನ್ನು ತಂದು ನಮ್ಮನ್ನು ಹರುಷಗೊಳಿಸುತ್ತಿದ್ದರು. ಮಂಗಳೂರಲ್ಲೇ ಎಂಬಂತೆ ನಮ್ಮಲ್ಲಿ ನಾವು ಮೊದಲಾಗಿ "His Master's Voice "Gramo Phone ತಂದದ್ದು, ನಮಗೆ ಅದೊಂದು ತೀರ ಹೆಮ್ಮೆಯ ವಿಷಯವಾಗಿತ್ತು. ಆಮೇಲೆ Radio ರೂಢಿಗೆ ಬಂದಾಗ ತಂದೆಯವರೇ ಮೊದಲಾಗಿ ಮನೆಗೆ ತಂದಿದ್ದರು. ಆಗ Head Phone ಹಾಕಿ ಪರದೇಶಗಳ ಪ್ರಸಾರ ಕೇಳಬೇಕಾಗಿತ್ತು. ಅಪ್ಪನು ನಮ್ಮನ್ನು ಮಧ್ಯರಾತ್ರಿ ಕೂಡ ಎಬ್ಬಿಸಿ "London ಕೇಳು-BBC ಪ್ರಸಾರ !" ಈಗ "Moscow ಕೇಳು !" ಎಂದು ಹೇಳಿ ಅವರ ಆನಂದದಲ್ಲಿ ನಾವೂ ಭಾಗಿಗಳಾಗುವಂತೆ ಮಾಡುತ್ತಿದ್ದರು. ಅಪ್ಪನಿಗೆ Photography ಯಲ್ಲಿ ಆಸಕ್ತಿ. ಕೆಮರಾ ಕೊಂಡು ನಮ್ಮೆಲ್ಲರ-ಕುಟುಂಬದ ಇತರ ಬಂಧುಗಳ ಸ್ನೇಹಿತರ-ವಿವಿಧ ವಿನೋದಾವಳಿ ಪ್ರದರ್ಶನಗಳ Photo ಗಳನ್ನು ತೆಗೆದು ತಾವೇ ಅವನ್ನು Dark Room ನಲ್ಲಿ Develop ಮಾಡುತ್ತಿದ್ದರು. ಅವರು ಅಷ್ಟು ದಶಕಗಳ ಹಿಂದೆ ತೆಗೆದ Photo ಗಳು ಇಂದಿಗೂ ಅಚ್ಚಳಿಯದೇ ನಮ್ಮ Album ಗಳಲ್ಲಿ ಮೆರೆದಾಡುತ್ತಿವೆ. ಸ್ಮೃತಿ ಪಟಲವನ್ನು ಕೆದಕುತ್ತವೆ. ಅಪ್ಪನವರು ಚಲನ ಚಿತ್ರ ವಿಮರ್ಶಕರಾಗಿದ್ದ ಕಾರಣ ನಾವು Hindustan Cinema Theatre ನಲ್ಲಿ ಅಂದಿನ ಅತ್ಯುತ್ತಮ ಚಿತ್ರಗಳನ್ನು ನೋಡುವ ಅವಕಾಶವಿತ್ತು. ರಾತ್ರಿಯ ಆಟವಾದರೂ ನಮ್ಮನ್ನು ಎಳಕೊಂಡು ಹೋಗುತ್ತಿದ್ದರು. ಮಧ್ಯಾಂತರದಲ್ಲಿ ನಮಗೆ ಕೊಡಿಸುತ್ತಿದ್ದ ಖಾರವಾದ ಪುರಿ ಹಾಗೂ ಆ ಖಾರವನ್ನು ಶಮನ ಮಾಡಲು ಅದಕ್ಕೆ ತಕ್ಕ ಸೋಡಾ ನೀರು ಕುಡಿಯುವುದು ನಮ್ಮ ಮೆಚ್ಚಿನ ಆಕರ್ಷಣೆ ಆಗಿತ್ತು. ನಿದ್ದೆಗಣ್ಣಲ್ಲಿ ಮಧ್ಯರಾತ್ರಿ ನಾವೆಲ್ಲ ಕೈ ಕೈ ಹಿಡಿದುಕೊಂಡು ಮನೆಗೆ ಬಂದು ಹಾಸಿಗೆಗಳಲ್ಲಿ

ಉಸುಳುತ್ತಿದ್ದರು ನಾವು ಅಂದಿನ ದಿನಗಳಲ್ಲಿ ಎಲ್ಲ ಲಲಿತಕಲೆಗಳ ಪ್ರಭಾವ ಪಡೆದು ಸುಸಂಸ್ಕೃತ ಜೀವನವನ್ನು ಬಾಳುತ್ತಿದ್ದೆವು. ಚಲನ ಚಿತ್ರ ಜಗತ್ತಿನ ಉತ್ತಮ ನಟ ನಟಿಯರ ವಿಷಯಗಳನ್ನೆಲ್ಲ ಮನೆಗೆ ಬರುತ್ತಿದ್ದ ಚಿತ್ರಲೋಕದ ಪತ್ರಿಕೆಗಳಿಂದ ತಿಳಿದು ಕೊಳ್ಳುತ್ತಿದ್ದೆವು. Charlie Chaplin, Mary Pickford, Harold lloyd, Greta Garbo, Doughlas Fairbanks, Buster Keaton ಇತ್ಯಾದಿ ನಟ-ನಟಿಯರೆಲ್ಲ ನಮಗೆ ತೀರಾ ಪರಿಚಿತರಾದವರಂತೆ ಇದ್ದರು !

ಪುತ್ತೂರಿಗೆ ಹೋದರೆ ಸಾಯಂಕಾಲ ಅಮ್ಮ ದೀಪದ ಕಂಬದ ಬೆಳಕಿನಲ್ಲಿ ನಮ್ಮನ್ನೆಲ್ಲ ಕೂರಿಸಿ ತುಲಸೀದಾಸ ರಾಮಾಯಣವನ್ನು ಓದಿ, ವಿವರಿಸಿ ನಮ್ಮನ್ನು ಕನಸಿನ ದಿವ್ಯ ಲೋಕಕ್ಕೆ ಕರೆದೊಯ್ಯುತ್ತಿದ್ದರು. ಅವರ ತಿಳುವಳಿಕೆ, ವಾಕ್ಚಾತುರ್ಯ, ಭಾಷಾಜ್ಞಾನ ಮತ್ತು ಅವರ ವಿಶಾಲ ದೃಷ್ಟಿಯಿಂದಾಗಿ ನಮಗೆ ಅವರ ರಾಮಾಯಣ ಕಥಾ ನಿರೂಪಣೆ ಮರೆಯಲಾಗದ ಮನರಂಜನೆಯಾಗಿತ್ತು. ನಮ್ಮ ಜತೆ ಹನುಮಂತ ನಿಗೂ ಒಂದು ಮಣೆ ಹಾಕಿ ನಮ್ಮನ್ನು ವಿನೋದಿಸುತ್ತಿದ್ದರು. ಅದೇ ಸಮಯ ತಂಗಿ ಜಯವಂತಿಯಲ್ಲಿ ಸಂಗೀತದ ಪ್ರತಿಭೆ ಕಂಡು ಅವಳನ್ನು ಪುರಂದರ ದಾಸರ ಪದಗಳನ್ನು ಹಾಡಲು ಉತ್ತೇಜಿಸುತ್ತಿದ್ದರು. ತಾವೇ ಹೇಳಿಕೊಡುತ್ತಿದ್ದರು. ದಾಸರ ಪದಗಳ ಸಾಹಿತ್ಯದ ಅಂದವನ್ನು ಎತ್ತಿ ಅರ್ಥ ಹೇಳುತ್ತಿದ್ದರು. ಅವುಗಳ ಆಧ್ಯಾತ್ಮಿಕ ಪಾಠ ನಿತ್ಯ ಜೀವನದಲ್ಲಿ ಎಷ್ಟೊಂದು ಫಲಕಾರಿಯಾಗಿದೆ ಎಂದು ತಿಳಿಸುತ್ತಿದ್ದರು. ತಂಗಿ ಶಾಂತಿಗೆ ಚಿತ್ರಕಲೆಯಲ್ಲಿರುವ ಅಭಿರುಚಿ ಮನಗಂಡರು. ಮುಂದೆ ಅವಳು ಕಲಾ ಶಾಲೆಗೆ ಹೋಗಿ ಪಾಠ ಕಲಿತು ಬರುವಂತೆ ಅವಳ ಪ್ರತಿಭೆ ಬೆಳಗಿಸಿದರು. ಅವಳು ಅನೇಕಾನೇಕ ಚಿತ್ರಗಳನ್ನು ಬರೆಯುತ್ತಿದ್ದಳು. ಅವಳು ಬರೆದ ಚಿತ್ರಗಳು ಪತ್ರ ಪುಸ್ತಕದಲ್ಲೂ ಪ್ರಕಟವಾದವು. ಏಕೈಕ ಪುತ್ರ ತಾನು ಬಯಸಿ ಮದುವೆಯಾದ ವಿದ್ಯಾವತಿ ಕನ್ಯೆ ಮನೆಗೆ ಬಂದಾಗ ಅವಳಲ್ಲಿ ಚಿತ್ರಕಲೆ, ವಾದ್ಯ ಸಂಗೀತದ (ಪಿಟೀಲು) ಅಭಿರುಚಿ–ಆಸಕ್ತಿ-ಪ್ರತಿಭೆ ಕಂಡು ಅವಳ ಕಲಾಸಕ್ತಿಯನ್ನು ಪ್ರಶಂಸಿಸಿ, ಆ ಕ್ಷೇತ್ರದಲ್ಲಿ ಅವಳು ಅಭಿವೃದ್ಧಿ ಆಗಬೇಕೆಂದು ಆಶಿಸಿದರು, ಸಹಕರಿಸಿದರು. ಸೌ॥ ವೃಂದಾಗೆ ಸಂಸಾರ ನಿರ್ವಹಣೆಯಲ್ಲಿ ಕಲಾಭ್ಯಾಸ ಮಾಡಲು ಕಷ್ಟವಾದರೂ ದೈವದತ್ತವಾಗಿ ಪಡೆದ ವರಗಳನ್ನು ಕಾಪಾಡಿಕೊಂಡು ಬರಲು ಶ್ರಮಪಡುವ ಸ್ವಭಾವವಿತ್ತು.

ಮಂಗಳೂರು ವಾಸ-ಫಲಕಾರೀ ಜೀವನ-ಕಲಾವಿದರ ಬೀಡು

ಅಂದಿನ ಆ ದಿನಗಳು ಬಹಳ ಚಟುವಟಿಕೆಗಳಿಂದ ಕಳೆಯುತ್ತಿದ್ದುವು. ಯಾವಾಗಲೂ ಮನೆ ತುಂಬಾ ಜನ. ಹಳ್ಳಿಗಳಿಂದ ಸಂಬಂಧಿಕರ ಮಕ್ಕಳು ಕಾಲೇಜು ವಿದ್ಯಾಭ್ಯಾಸ

ಕ್ಕಾಗಿ ಮಂಗಳೂರಿಗೆ ಬಂದು ಅಪ್ಪನಲ್ಲಿಯೇ ವಾಸಿಸುತ್ತಿದ್ದರು. ತಂದೆಯವರ ಆದಾಯ ವಿಚಾರಿ ಯಾವಾಗಲೂ ಖರ್ಚು-ಆರ್ಥಿಕ ಅಡಚಣೆ. ಅವರ ಜೀವನ ಜನತೆಯೊಂದಿಗೆ ಸೇರಿಕೊಂಡಿತ್ತು. ಸಾಮಾಜಿಕ ಜೀವನ ಸಾರ್ವಜನಿಕವಾಗಿತ್ತು. ಮನೆಗೆ ಮಧ್ಯಾಹ್ನ ಊಟಕ್ಕೆ ಬರುವ ಬಡ ಹುಡುಗರಿಗೆ ಬಡಿಸುವ ಹೊಣೆ, ಸಂತೃಪ್ತಿ ನನ್ನದಾಗಿತ್ತು. ಬಡವರಿಗೆ ಔದ್ಯೋಗಿಕ ತರಬೇತು ಕೊಡುವ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಹೆತ್ತವರ ಮನೆ ಛತ್ರದಂತೆ, ಧರ್ಮಶಾಲೆಯಂತೆ ನಡೆಯುತ್ತಿತ್ತು. ಸಾಹಿತಿಗಳಿಗೆಲ್ಲ ಅತಿಥಿ ಗೃಹವಾಗಿತ್ತು. ತೆರೆದ ಮನೆಯಾಗಿತ್ತು. ಖ್ಯಾತ ಸಾಹಿತಿಗಳು ಆಗಾಗ್ಗೆ ಬಂದು ಹೋಗುತ್ತಿದ್ದರು. ದ. ರಾ. ಬೇಂದ್ರೆ, ವಿ. ಸೀ, ಮಾಸ್ತಿ, ಜಿ. ಪಿ. ರಾಜರತ್ನಂ, ಕೈಲಾಸಂ, ಕೆ. ವಿ. ಅಯ್ಯರ್ ಮುಂತಾದ ಸಾಹಿತ್ಯ ಕ್ಷೇತ್ರದ ಅತಿರಥ–ಮಹಾರಥರೆಲ್ಲರೂ ತಂದೆ ತಾಯಿಯವರ ಆತಿಥ್ಯ ಪಡೆದು ನಮ್ಮ ಮುಗ್ಧಮನಸ್ಸಿನ ಬೆಳೆವಣಿಗೆಯಲ್ಲಿ ಅತ್ಯಂತ ಅಮೂಲ್ಯವಾದ ಪ್ರಭಾವ ಬೀರುತ್ತಿದ್ದರು. ಜಿ. ಪಿ. ರಾಜರತ್ನಂರವರು ನಮ್ಮ ಮಂಗಳೂರಿನ ಮನೆಯಲ್ಲಿ 4 ತಿಂಗಳಿದ್ದು "ಜೈನ ಧರ್ಮದ ಗ್ರಂಥ" ಬರೆದರು. ಶಿವರಾಮ ಕಾರಂತರು ಹಲವು ವರ್ಷ ಮನೆಯಲ್ಲಿದ್ದು ಮನೆಯವರಂತೆಯೇ ಇದ್ದರು. ರಜಾ ದಿನಗಳು ಬಂದರೆ ಅಪ್ಪ-ಅಮ್ಮ ನಮ್ಮನ್ನು ಬೆಂಗಳೂರಿಗೆ ಕರೆಕೊಂಡು ಬರುತ್ತಿದ್ದರು. ಕೆ. ವಿ. ಅಯ್ಯರ್ ಅವರ ಮನೆಯಲ್ಲೇ ವಾಸ. ಮಾಸ್ತಿ, ಬಿ ಎಂ. ಶ್ರೀ, ರಾಜರತ್ನಂ, ಡಿ. ವಿ. ಜಿ, ವಿ. ಸಿ. ಮುಂತಾದವರಲ್ಲಿ ಊಟ-ತಿಂಡಿಗಳಿಗೆ ಆಹ್ವಾನ-ಅವರೊಡನೆ ಒಡನಾಟ-ಮಾತು ಕತೆ ಸತ್ಸಂಗ! ಅವರೆಲ್ಲರ ವ್ಯಕ್ತಿತ್ವದ ಸಮಾಗಮ–ಜೀವನದ ಸಾರ್ಥಕತೆ-ನಾವು ಶ್ರೀಮಂತರಲ್ಲಿಲ್ಲ-ಆದರೆ ಈ ಎಲ್ಲ ಅನುಭವಗಳಿಂದ ನಮ್ಮ ಜೀವನ ಶ್ರೀಮಂತವಾಯಿತು– ಹಣದಲ್ಲಿ ಅಲ್ಲ– ಸಂಸ್ಕೃತಿಯಲ್ಲಿ. ದೇವರ ಅನುಗ್ರಹ !

ರಾಷ್ಟ್ರಭಕ್ತಿ-ಸ್ವಾತಂತ್ರ್ಯ ಹೋರಾಟ

ಆಗ ಭಾರತವು ಬ್ರಿಟಿಷ್‌ರ ಆಡಳಿತದಲ್ಲಿತ್ತು. ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿ ನಾಡೆಲ್ಲ ಹಬ್ಬಿತ್ತು. ಎಲ್ಲೆಲ್ಲೂ ಜನತೆಗೆ ಸ್ವಾತಂತ್ರ್ಯದ ಹುಚ್ಚು–ಕೆಚ್ಚು. ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಉಪ್ಪಿನ ಸತ್ಯಾಗ್ರಹ, ಪ್ರಭಾತಭೇರಿ ಮುಂತಾದುವುಗಳು ದಿನ ನಿತ್ಯದ ಕಾರ್ಯಕ್ರಮಗಳಾದುವು. ಸ್ವದೇಶಾಭಿಮಾನಿ ರಾಷ್ಟ್ರಗೀತೆಗಳು ರಾತ್ರಿ ಸಮಯ ಕಳ್ಳ ಸಾಗಣಿಕೆಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಸೇರುತ್ತಿದ್ದುವು. ಸ್ವಾತಂತ್ರ್ಯ ಆಂದೋಲನ-ಕ್ರಾಂತಿಯ ಕಹಳೆ ಮೊಳಗಿತು. ಸತ್ಯಾಗ್ರಹ ಸ್ವಾತಂತ್ರ್ಯಗಳ ಸಂದೇಶ ಮೂಲೆ ಮೂಲೆಗೂ ಹರಡಿತು. ತಂದೆ ತಾಯಿಯವರೂ ದೇಶಭಕ್ತರಾಗಿ ಈ ಕ್ರಾಂತಿಯಲ್ಲಿ ಭಾಗವಹಿಸಿ ಖಾದಿಬಟ್ಟೆ ಉಡಲು ಆರಂಭಿಸಿದರು. ಚರಕ, ತಕಲಿ ಮನೆ ಸೇರಿದುವು. ತಾವು ನೂಲನ್ನು

ತೆಗೆಯುವುದಲ್ಲವೇ ನಮಗೂ ಅದನ್ನು ಬಿಡುವಿನ ಸಮಯದಲ್ಲೆಲ್ಲ ನೂಲುವಂತೆ ಹೇಳುತ್ತಿದ್ದರು. ನಾವು ತೆಗೆದ ನೂಲನ್ನು ಖಾದಿ ಭಂಡಾರಕ್ಕೆ ಕೊಟ್ಟು ನೂಲಿಗೆ ಬದಲಾಗಿ ಅದೇ ತೂಕದ ಖಾದಿ ಬಟ್ಟೆ ಪಡೆಯುತ್ತಿದ್ದೆವು- ಪರದೇಶ ವಸ್ತುಗಳಿಗೆ ಬಹಿಷ್ಕಾರವಿತ್ತು. ಬ್ರಿಟಿಷ್ ಸರಕಾರಕ್ಕೆ ಧಿಕ್ಕಾರ-ಅದರ ಸಂಪರ್ಕ ಇರುವ ಎಲ್ಲದಕ್ಕೂ ಬಹಿಷ್ಕಾರ. ಪರದೇಶ ವಸ್ತುಗಳನ್ನು ಉರಿಸಿ ಧ್ವಂಸಮಾಡುವ ದಿಟ್ಟತನ....ಹೆತ್ತವರು ದೇಶಭಕ್ತಿಯಿಂದ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದುದು ನಮಗೆ ತಿಳಿಯದ ವಿಚಿತ್ರ ಅನುಭವವಾಗಿತ್ತು. ಸರಕಾರೀ ಹುದ್ದೆಯಲ್ಲಿದ್ದ ತಂದೆಯವರು ಜೈಲು ಸೇರದೇ ಇದ್ದುದೂ ನಮ್ಮ ಪುಣ್ಯ ಎನ್ನಬೇಕು ! ಗಾಂಧೀಜಿಯವರ ಪ್ರೇರಣೆ ಮೇರೆಗೆ ಹಿಂದೀ ಭಾಷೆಯನ್ನು ಕಲಿತರು. ತಾವು ಕಲಿತು ಪರೀಕ್ಷೆ ಪಾಸಾಗಿ ಇತರರಿಗೂ ಕಲಿಯಲು ಅವಕಾಶ ಕಲ್ಪಿಸಿಕೊಟ್ಟರು. ತಾವೇ ಪಾಠ ಹೇಳಲು ಆರಂಭಿಸಿದರು. ಊರಿಂದೂರಿಗೆ ಹೋಗಿ ಹಿಂದೀ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಅಮ್ಮನಿಗಂತೂ ಭಾಷೆ ಕಲಿಯುವುದು ಎಂದರೆ ನೀರು ಕುಡಿದಂತೆ ಸುಲಭವಾಗಿತ್ತು ಹೆತ್ತವರ ಈ ದೇಶಭಕ್ತಿ ನಿತ್ಯಜೀವನದಲ್ಲಿ ಅನೇಕಾನೇಕ ತೊಂದರೆಗಳನ್ನು ತಂದೊಡ್ಡಿತು ; ಆದರೆ ಎಲ್ಲವೂ ಒಂದು ಧ್ಯೇಯಕ್ಕೋಸರವಾಗಿತ್ತು. ಮಕ್ಕಳಿಗೆ ಆಡಂಬರದ ಜೀವನ ಕೊಡದಿದ್ದರೂ ಹೊಟ್ಟೆ ಬಟ್ಟೆಗೆ ಏನೂ ಕಮ್ಮಿ ಇರಲಿಲ್ಲ. ರುಚಿ-ಶುಚಿಯಾದ ಅಡಿಗೆ ಅಮ್ಮನದ.- ಎಂದೂ ನಮ್ಮ ಬಾಯಿ ಕಟ್ಟಿದವರಲ್ಲ. ತಿಂಡಿ-ತೀರ್ಥಗಳಿಗೆ ನಾವು ಆಸೆ ಪಡುವಂತಿರಲಿಲ್ಲ. ತೃಪ್ತಜೀವನ. ಆದರೆ ಇದ್ದ ಹೆಣ್ಣು ಮಕ್ಕಳಿಗೆ ತಕ್ಕಮಟ್ಟಿಗಾದರೂ ಒಡವೆಗಳನ್ನು ಮಾಡಿಸಲು ಕೈಕಟ್ಟಬೇಕಾದಾಗ ಅವರಿಗೆ ನೆನಪಾದ ಅಮ್ಮನ ಮೈಮೇಲಿದ್ದ ಗಟ್ಟಿ ಒಡವೆಗಳೆಲ್ಲ ಒಂದೊಂದೇ ಕ್ರಮೇಣ ಕಾಣೆಯಾದುದು ನಮ್ಮ ಗಮನಕ್ಕೆ ಬಂದಿರಲಿಲ್ಲ.

ಎಷ್ಟೇ ಕಷ್ಟಗಳಿದ್ದರೂ ಅಮ್ಮನವರೂ ಅಪ್ಪನೂ ಓದುವುದನ್ನು ಬಿಡಲಿಲ್ಲ-ಬರೆಯುವುದನ್ನೂ ಬಿಡಲಿಲ್ಲ. ಕಲಾಸೇವೆಯನ್ನೂ ಬಿಡಲಿಲ್ಲ. ಅಮ್ಮನವರು "ಕಟುಕರೋಹಿಣಿ ಸಂವತ್ಸರದಲ್ಲಿ" ಎಂಬ ನಾಟಕ ಬರೆದು ರಂಗಸ್ಥಳದಲ್ಲಿ ಪ್ರದರ್ಶಿಸಿದರು. ವರ್ಷಗಳನ್ನು ದಾಟಿ ಮುಂದೆ ಬರುವ ಸಮಾಜ ಜೀವನದ ವಿಡಂಬನೆಯ ಚಿತ್ರ ಅದರ ಕಥಾವಸ್ತು ಅಲ್ಲದೆ Chekov ಬರೆದ Uncle Varya ಎಂಬುದನ್ನು "ಸೋಣು ಮಾವ" ಎಂಬ ಹೆಸರಿಟ್ಟು ಭಾಷಾಂತರಿಸಿದರು. ಅನೇಕಾನೇಕ ಸಣ್ಣ ಕತೆಗಳನ್ನು ಬರೆದರು ಅಪ್ಪನೂ ವಿವಿಧ ರೀತಿಯ ಸಾಹಿತ್ಯ ರಚನೆಗಳನ್ನು ಮಾಡುತ್ತಲೇ ಇದ್ದರು. P. G. Wodehouse ಮುಂತಾದ ಹಾಸ್ಯ ಸಾಹಿತ್ಯ ಬರೆಯುವುದರಿಂದ ಸ್ಫೂರ್ತಿ ಪಡೆದು "ಹುಚ್ಚು ಬೆಳದಿಂಗಳಿನ ಹೂ ಬಾಣಗಳು" ಬರೆದರು. ಈ ಪುಸ್ತಕಕ್ಕೆ ಅವರ ಸೋದರತ್ತೆಯ ಮಗ ತ್ರಿಕನ್ನಾಡ್ ಮುಕುಂದರಾಯರೇ ಚಿತ್ರಗಳನ್ನು ಬರೆದರು.

ಅಂದಿನವರೆಗೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯ ರಸ ಇರಲಿಲ್ಲ. ಹಾಸ್ಯ ರಸ ಏಕೆ ಇರಬಾರದು ಎಂದು ಬರೆದ ಈ ಪುಸ್ತಕ ಅತ್ಯಂತ ಖ್ಯಾತಿ ಪಡೆಯಿತು. ಮುಂದೆ ಬರುವ ಬರೆಹಗಾರರಿಗೆ ಒಂದು ಮಾರ್ಗದರ್ಶನವಾಯಿತು.

ಹೆತ್ತವರ ಜೀವನ ತುಂಬು ಜೀವನ-ಭವ್ಯ ಜೀವನ-ಶ್ರೀಮಂತ ಜೀವನ. ಅಪ್ಪನಿಗೆ ಇಂಗ್ಲಿಷ್ ಹಾಗೂ ಕನ್ನಡ ಸಾಹಿತ್ಯ ಅಂದರೆ ತುಂಬಾ ಪ್ರಿಯವಾಗಿತ್ತು. ಓದುವ ಹುಚ್ಚು ಅವರನ್ನು ಕೊನೆಯವರೆಗೆ ಬಿಡಲೇ ಇಲ್ಲ ಎನ್ನಬೇಕು. ಮಂಗಳೂರಲ್ಲಿ "ಬಾಲಸಾಹಿತ್ಯ" ಮಂಡಲ-ಪುಸ್ತಕ ಭಂಡಾರಗಳಲ್ಲಿ ಕಾಲ ಕಳೆಯುತ್ತಿದ್ದರು. ಅದೇ ಸಮಯ ಅವರು ಪ್ರಕಾಶನದ ಕರಡು ಪ್ರತಿಗಳನ್ನು ಶುದ್ಧಗೊಳಿಸುವ ಚಾತುರ್ಯವನ್ನು ಕಲಿತರು. ಅವರಿಗೆ ಮುದ್ರಾ ದೋಷಗಳನ್ನು ಕಂಡರೆ ಸಹಿಸಲಾಗುತ್ತಿರಲಿಲ್ಲ. ಕಾಲೇಜು ಪ್ರಿನ್ಸಿಪಾಲರಾಗಿದ್ದ ಜಿ. ಕೆ. ಚೆಟ್ಟೂರ್ ಅವರಿಗೂ ಅಪ್ಪನಿಗೂ ನಿಕಟ ಸ್ನೇಹವಿತ್ತು. ಅವರಿಗೂ ಸಾಹಿತ್ಯ ಮತ್ತು ಕಲಾ ಚಟುವಟಿಕೆಗಳು ಪ್ರಿಯವಾದ ವಿಷಯಗಳಾಗಿದ್ದುವು. ಈ ಸ್ನೇಹದಿಂದ ಮಂಗಳೂರಿನಲ್ಲಿ ಕಲಾ ಜಗತ್ತು ಮೆರೆಯಿತು.

ಮಂಗಳೂರಿನಿಂದ–ಕೇರಳಕ್ಕೆ

ಮಂಗಳೂರಿನ ಜೀವನವನ್ನು ಅನುಭವಿಸಿದ ಮೇಲೆ ತಂದೆಯವರಿಗೆ ಕೇರಳದ ಪಾಲ್ಘಾಟಿಗೆ ವರ್ಗವಾಯಿತು. ಅಲ್ಲಿ ವಿಕ್ಟೋರಿಯಾ ಕಾಲೇಜಿನಲ್ಲಿ ನಮ್ಮ ವಿದ್ಯಾಭ್ಯಾಸ–ತಂದೆಯವರೇ ನಮಗೆ ರಸಾಯನ ಶಾಸ್ತ್ರದ ಅಧ್ಯಾಪಕರಾಗಿದ್ದರು! ಎರಡೇ ವರ್ಷಗಳ ಶಾಂತಮಯ–ಸುಖಮಯ ಜೀವನ. ಕಾಲೇಜಿನಲ್ಲಿ ಅಪ್ಪನೊಡನೆ ಮತ್ತು ಇತರ ಅಧ್ಯಾಪಕರೊಡನೆ ಟೆನ್ನಿಸ್ ಆಡುವುದು-ಕ್ರೀಡೆಗಳಲ್ಲಿ ಭಾಗವಹಿಸುವುದು, ಚರ್ಚಾ ಸ್ಪರ್ಧೆಗಳಲ್ಲಿ ಮಾತನಾಡುವುದು, ಕಾಲೇಜು ವಾರ್ಷಿಕೋತ್ಸವ ಬಂದರೆ ನರ್ತಿಸುವುದು, ಅಪ್ಪನ ನಿರ್ದೇಶನದಲ್ಲಿ ಇಂಗ್ಲಿಷ್ ನಾಟಕಗಳಲ್ಲಿ ಪಾತ್ರವಹಿಸುವುದು ಇತ್ಯಾದಿ ಕಾರ್ಯಕಲಾಪಗಳು. ಕಥಕ್ಕಳಿ ಪ್ರದರ್ಶನಗಳು ವಿನೋದದ ಕಾಲಕ್ಷೇಪವಾಗಿತ್ತು. Intermediate ತರಗತಿಗಳಲ್ಲಿ ನಾನು ನನ್ನ ತಮ್ಮನೂ (ನಾವು ಚಿಕ್ಕಂದಿನಿಂದ ಒಂದೇ ತರಗತಿಯಲ್ಲಿ ಜೊತೆಯಾಗಿಯೇ ವ್ಯಾಸಂಗ ಮಾಡಿದವರು) ಕನ್ನಡವನ್ನೇ Second Language ಆಗಿ ತೆಗೆದುಕೊಳ್ಳಬೇಕೆಂದು ಅಪ್ಪನ ಆಣತಿ-ಆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಿರಲಿಲ್ಲ. ಕನ್ನಡ ಕಲಿಯುವವರೂ ಇರಲಿಲ್ಲ. ನಾನು ನನ್ನ ತಮ್ಮ ಇಬ್ಬರೇ ಕನ್ನಡ ವಿದ್ಯಾರ್ಥಿಗಳು. ಆದ್ದರಿಂದ Second Language Period ಬಂದರೆ ನಮಗೆ ಬಿಡುವು! ಆಟ ಆಡುತ್ತಿದ್ದೆವು. ಬೇಸಿಗೆ ರಜಾ ಬಂದಾಗ ಪುತ್ತೂರಿಗೆ ಹೋಗಿ ಅಜ್ಜನ ಮನೆಯಲ್ಲಿದ್ದು ವರುಷದ ಪೂರ್ತಿ

Syllabus ನ ಪಾಠಗಳನ್ನು ಉಗ್ರಾಣ ಮಂಗೇಶರಾಯರಿಂದ ಕಲಿತು ಎರಡು ತಿಂಗಳು ಸಮಯ ಸಾರ್ಥಕಗೊಳಿಸುತ್ತಿದ್ದವು. ಈ ಪರೀಕ್ಷೆಯಲ್ಲಿ ನಾನೂ ತಮ್ಮನೂ Madras Presidency ನಲ್ಲಿ ಉತ್ತಮ ಅಂಕಗಳನ್ನು ಪಡೆದುದು, Rank ಗಿಟ್ಟಿಸಿದುದು ಅಪ್ಪನಿಗೆ ಹೆಮ್ಮೆಯ ವಿಷಯವಾಯಿತು.

ಅವರು ಕಾಲೇಜು Library ಯಿಂದ ಉತ್ತಮ ಪುಸ್ತಕಗಳನ್ನು ತಂದು ನಮಗೆ ಓದಲು ಕೊಡುತ್ತಿದ್ದರು. ಅಮ್ಮನೂ ಓದುತ್ತಿದ್ದರು. ಉತ್ತಮ ಸಾಹಿತಿಗಳ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳೆಲ್ಲವನ್ನೂ ಓದಿ ಜೀರ್ಣಿಸಿಕೊಳ್ಳುತ್ತಿದ್ದರು.

ನಮ್ಮ ಕಾಲೇಜು ವಿದ್ಯಾಭ್ಯಾಸದ ಜೊತೆಗೆ ಅಪ್ಪನು ನಮಗೆ ಮನೆಯಲ್ಲಿ ಜಗತ್ತಿನ ಅನೇಕ ವಿಷಯಗಳಲ್ಲಿ ಆಸಕ್ತಿ ಹುಟ್ಟುವಂತೆ ಮಾಡುತ್ತಿದ್ದರು. ಗಾಂಧೀ ತತ್ವ-ಆಧ್ಯಾತ್ಮ-ಬೌದ್ಧಮತ–ಇತ್ಯಾದಿ ವಿಷಯಗಳ ಸೂಕ್ಷ್ಮ ಪರಿಚಯ ಮಾಡಿಕೊಡುತ್ತಿದ್ದರು. ರಾಮಾಯಣ ಮಹಾಭಾರತದ ಪಾತ್ರಗಳ ವೈಶಿಷ್ಟ್ಯವನ್ನು ಹೇಳುತ್ತಿದ್ದರು. ಏಕೆ ಈ ಗ್ರಂಥಗಳು ಆಚಂದ್ರಾರ್ಕವಾಗಿ ಬೇಗುವ ಸಂಸ್ಕೃತಿಯ ಮೇರು ಕೃತಿಯಾಯಿತು ಎಂದು ತಿಳಿಸುತ್ತಿದ್ದರು. ವಿದ್ಯೆ ಮತ್ತು ವಿದ್ಯಾರ್ಜನೆ ಇವರಲ್ಲಿ ಶಿಸ್ತು ಇರಬೇಕಿತ್ತು. ಬರೆಯುವಾಗ ತಪ್ಪು ಕಂಡರೆ ಅವರಿಗೆ ಆಗದು. ಅಕ್ಷರಗಳು ಸ್ಪಷ್ಟವಾಗಿರಬೇಕು. ಪುಟಗಳು ನೋಡಲು ಚೆನ್ನಾಗಿರಬೇಕು: ಒಟ್ಟಿನಲ್ಲಿ ಬರಹದಲ್ಲಿ ಅಚ್ಚುಕಟ್ಟಿರಬೇಕಿತ್ತು. ಒಂದು ಪತ್ರವನ್ನು ಓದುವಾಗಲೂ ಬರೆವಣಿಗೆ ಚೆನ್ನಾಗಿದ್ದರೆ ಅದನ್ನು ಪದೇ ಪದೇ ಓದಿ ಆನಂದಿಸುತ್ತಿದ್ದರು. ಅಂತಹ ಪತ್ರವನ್ನು ಚಿನ್ನದಂತೆ ಕಾದಿರಿಸುತ್ತಿದ್ದರು. ಅಪ್ಪನಿಗೆ ಮಾತು ಕಮ್ಮಿ- ಅಪ್ಪನವರೇ ಮನೆಗೆ ಬಂದ ಅತಿಥಿಗಳೊಡನೆ ಸಂಭಾಷಣೆ ಮಾಡಬೇಕಾಗಿತ್ತು. ಆದರೆ ಬರೆಯುವುದರಲ್ಲಿ ಅಪ್ಪನಿಗೆ ಸೋಮಾರಿತನವೇ ಇರಲಿಲ್ಲ. ಪತ್ರ ಬಂದೊಡನೆ ಜವಾಬು ಬರೆಯಲು ಕುಳಿತುಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ಪತ್ರಕ್ಕೆ ಜವಾಬು ಬರಲು ತಡವಾದರೆ ಚಡಪಡಿಸುತ್ತಿದ್ದರು. ಅವರ ಅಕ್ಷರ ಮುತ್ತಿನಂತಹ ಅಕ್ಷರ. ಇಂಗ್ಲಿಷ್ ಹಾಗೂ ಕನ್ನಡ-ಓದುವವರಿಗೆ ಮಹದಾನಂದ.

ಮಕ್ಕಳ ಜವಾಬ್ದಾರಿ

ಅವರ ಪತ್ರಗಳಲ್ಲಿ ಮಕ್ಕಳಿಗೆ ಬೇಕಾದ ವಿಷಯಗಳನ್ನು ಆಯ್ದು ಬರೆಯುತ್ತಿದ್ದರು. ಅವರವರ ಪ್ರತಿಭೆಗೆ ತಕ್ಕ ಹುರುಪು ಕೊಡುತ್ತಿದ್ದರು. ಸಂಸಾರ ನೌಕೆಯ ಏರು ತಗ್ಗುಗಳಲ್ಲಿ ತೊಳಲಾಡುತ್ತಿರುವಾಗ ಜೀವನದ ಮೌಲ್ಯಗಳನ್ನು ಹೇಳುತ್ತಿದ್ದರು. ಅಂತಹ ಅಪ್ಪನ ಪತ್ರಗಳನ್ನು ಪಡೆದ ನಾವು ಧನ್ಯರು.

ನಾನು ಡಾಕ್ಟರ್ ಆಗಬೇಕಿತ್ತು ಎಂಬ ನನ್ನ ಅಮ್ಮನ ಆಸೆ ಪೂರೈಸಲಿಲ್ಲ. ನನ್ನ ತಮ್ಮ ಶಂಕರ್ರು ಇಂಗ್ಲಿಷ್ ಸಾಹಿತ್ಯದಲ್ಲಿ ಪದವಿ ಪಡೆದರೆ ಚೆನ್ನಾಗಿತ್ತು ಎಂದು ಹೇಳುತ್ತಿದ್ದ ಅಪ್ಪ ಅವನು ಇಂಜಿನಿಯರ್ ಆಗಿ ಕೈ ತುಂಬಾ ಸಂಪಾದಿಸಲಿ ಎಂದು ಆಸೆಪಟ್ಟರು. ತಂಗಿ ಶಾಂತಿಯು ಚಿತ್ರ ಕಲೆಯಲ್ಲಿ ತುಂಬಾ ಅಭಿವೃದ್ಧಿ ಪಡೆದಿದ್ದಳು. ಆದರೆ ಅವಳ ಆರೋಗ್ಯದಲ್ಲಿ ಕೊರತೆ ಕಂಡುಬಂತು. ಅವಳ ಕೈಕಾಲುಗಳಿಗೆ Rheumetoid Arthritis ಕಾಯಿಲೆ ಬಂದು ಅವಳು ಹಾಸಿಗೆ ಹಿಡಿಯುವಂತಾಯಿತು. ಆದರೂ ಅವಳ ಮಾನಸಿಕ ಚೈತನ್ಯದಿಂದಾಗಿ ಮತ್ತು ಮನೆಯಲ್ಲಿ ಆಕೆಗೆ ಸುಖ ಭೋಗವನ್ನು ಕೊಡುವ ಸಂಸಾರದಿಂದಾಗಿ ಯಾರಿಗೂ ಅವಳ ಕಾಯಿಲೆ ಅಷ್ಟೊಂದು ದುಃಖ ತರುವ ವಿಷಯವಾಗಿರಲಿಲ್ಲ. ತಂಗಿ ಜಯವಂತಿಯ ಹಾಡುಗಾರಿಕೆಗಾಗಿ ಅವರು ಎಷ್ಟು ಉತ್ತೇಜನ ಕೊಡುತ್ತಿದ್ದರೋ ಹೇಳ ತೀರದು. ಅವಳ ಸ್ಪಷ್ಟ ಉಚ್ಚಾರ, ಸಾಹಿತ್ಯಕ್ಕೆ ತಕ್ಕ ರಾಗ, ಶಬ್ದಗಳನ್ನು ಬಿಡಿಸಿ; ಆಯಾ ಶಬ್ದವನ್ನು ಒತ್ತಿ ಮನದಟ್ಟು ಮಾಡಿ ಕೊಡುವ ಚತುರತೆ-ಅವಳ ಸಂಗೀತ ಹೃದಯ ಸ್ಪರ್ಶಿಯಾಗಿರುವುದು ಅಪ್ಪನಿಗೆ ಅಮೃತ ಪಾನ ಮಾಡಿಸಿದಂತಾಗುತ್ತಿತ್ತು. ದೇವರ ನಾಮ ದಾಸರ ಪದಗಳು-ಭಾವ ಗೀತೆಗಳು-ಆಧುನಿಕ ಕವಿತೆಗಳನ್ನು ಅವಳು ಹಾಡುವಂತೆ ಮತ್ತೊಬ್ಬರಿಲ್ಲ ಎಂಬ ಹೆಮ್ಮೆ ಅವರದಾಗಿತ್ತು. ಆದರೂ ಅವಳ ಸಂಸಾರದ ಜವಾಬ್ದಾರಿ ಹೆಚ್ಚಿದಂತೆ ಅವಳ ತಂಬೂರಿಗೆ ತುಕ್ಕು ಹಿಡಿಯದಂತೆ ಆಗಾಗ್ಗೆ ಎಚ್ಚರಿಕೆ ಕೊಟ್ಟು ಅವಳ ಸಂಗೀತ ಕಲೆಯನ್ನು ಕಾಪಾಡಿದರು. ಕಿರಿಯ ತಂಗಿ ಪದವೀಧರೆ. ಯಶೋಧರೆ ಸಕಲ ವಿದ್ಯಾ ಸಂಪನ್ನೆ. ಮದ್ರಾಸಿನ ಯತಿರಾಜ ಕಾಲೇಜಿನ ಆರೇಳು ಭಾಷೆಗಳನ್ನು ಮಾತನಾಡಲು ಓದಲು ಬರೆಯಲು ಅರಿತವ ಜಾಣೆ. ಅವಳಿಗೆ ಅಮ್ಮನ ಪ್ರತಿಭೆ ರಕ್ತಗತವಾಗಿ ಬಂದಿದೆ. ಅನೇಕ ಭಾಷೆಗಳಲ್ಲೂ ಸಾಹಿತ್ಯ ರಚನೆ ಮಾಡಿದ್ದಾಳೆ. ರೇಡಿಯೋ ನಾಟಕಗಳು ಇತ್ಯಾದಿ ಬರೆದು ತಾನೇ ಪ್ರಸಾರ ಮಾಡಿ ಪ್ರಖ್ಯಾತಿ ಪಡೆದವಳು. ಅವಳ ಸ್ವಯಂ ಪ್ರೇರಿತ ಚಟುವಟಿಕೆಗಳು ಹೆತ್ತವರು ಹೆಮ್ಮೆ ಪಡುವಂತಿತ್ತು. ಸಾಹಿತ್ಯ ಅಲ್ಲದೆ ಸಂಗೀತದಲ್ಲೂ ಪ್ರತಿಭೆ-ನರ್ತನದಲ್ಲೂ ಪ್ರತಿಭೆ ಆದರೆ ಪೂರ್ವಕರ್ಮ ಫಲದಿಂದ ಎಂಬಂತೆ ಅವಳ ಜೀವನದ ಯೌವನದ ಹೊಸ್ತಿಲಲ್ಲೇ ಒಂದು ದುರಂತ ಒದಗಿತು. ದೇಹದ ಕೆಳಗಿನ ಮಾಂಸಖಂಡಗಳು ಬಲಹೀನವಾಗಿ ಅವಳು ತನ್ನ ಚಿಕ್ಕವಯಸ್ಸಿನಲ್ಲಿಯೇ ಅಂಗವಿಕಲಳಾದಳು. ಅದು ನಮ್ಮ ಹೆತ್ತವರಿಗೆ ವ್ಯಥೆ ತಂದಿತ್ತು ಒಂದು ದೊಡ್ಡ ಆಘಾತ ಜಗತ್ತಿನ ಎಲ್ಲ ಔಷಧೋಪಚಾರಗಳಾದರೂ ಅವಳ ಸ್ಥಿತಿ ವಾಸಿ ಆಗಲಿಲ್ಲ. ಆದರೂ ಆಕೆ ಆಶಾವಾದಿ. ಅವಳ ಸಾಹಿತ್ಯಾಭಿಲಾಷೆ ಕಂಡು ಅಪ್ಪನು ಅವಳಿಗೆ ಬರೆಯಲು ಹುರಿದುಂಬಿಸಿದರು. ಅವಳು ಬರೆದ ಸಾಹಿತ್ಯವನ್ನು ತಾವೇ ನಕಲು ತೆಗೆದು ಪ್ರಕಾಶನಕ್ಕೆ ತಾವೇ ತಯಾರಿಸಿ ಬೇರೆ ಬೇರೆ ಪತ್ರಿಕೆಗಳಿಗೆ ಕಳಿಸಿ ಅವು ಪ್ರಕಾಶಕ್ಕೆ ಬರುವಂತೆ ಮಾಡಿದರು. ಅವರ ನಿರಂತರ ಪ್ರಯತ್ನದಿಂದ ಅವಳ "ಆಕಾಶ ಬಾಣಗಳು" ಎಂಬ ಸಣ್ಣ ಕತೆಗಳ ಸಂಕಲನ ಕನ್ನಡ ಸಾಹಿತ್ಯ

ಪರಿಷತ್ತು ಪ್ರಕಟಿಸಿದೆ. ಅವಳ ಲೇಖನಗಳು Femina ಇತ್ಯಾದಿ ಪುಸ್ತಕಗಳಲ್ಲೂ ದಿನ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದ್ದುವು. ಅಪ್ಪನ ಉತ್ತೇಜನ ಅವಳಿಗೆ ಅವರ ಕೊನೆಯ ಉಸಿರು ಇರುವವರೆಗೂ ಇತ್ತು. ಆ ಉತ್ತೇಜನ ಆಕೆಯ ಬದುಕಿಗೆ ಒಂದು ಶಕ್ತಿ ಆಗಿತ್ತು. ಅವಳು ಬರೆಯುತ್ತಲೇ ಇದ್ದಳು. ಅವರು ಅವುಗಳನ್ನು ಮೆಚ್ಚಿ ಇನ್ನೂ ಇನ್ನೂ ಮೇಲಿನ ಮಟ್ಟ ಪಡೆಯಲು ಪ್ರೋತ್ಸಾಹಿಸುತ್ತಿದ್ದರು.

ನನ್ನ ಮದುವೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ Lecturer In Chemistry ಆಗಿದ್ದ ಹಾಗೂ ಭರತ ನಾಟ್ಯದ ನರ್ತಕರಾಗಿದ್ದ ಯು. ಎಸ್. ಕೃಷ್ಣರಾಯರೊಂದಿಗೆ ಆದಾಗ ಅವರಿಗೆ ಅತಿ ಆನಂದ. ನನ್ನ ನರ್ತನ ಹೆಚ್ಚು ಅಭಿವೃದ್ಧಿಯಾಗಬಹುದು ಎಂದು ಅವರು ಹಲವಾರು ಕನಸುಗಳನ್ನು ಕಂಡಿದ್ದರು. ಅವರ ಕನಸುಗಳು ನೆನಸಾದುವು. ನಮ್ಮಿಬ್ಬರ ಬದುಕು ವೈವಿಧ್ಯ ಪೂರ್ಣ, ಸ್ವಾರಸ್ಯಕರ ಎಂದು ತೃಪ್ತಿಪಟ್ಟರು. ನಮ್ಮ ನೃತ್ಯ ಜೀವನದ ಮೊದಲ ದಿನಗಳಲ್ಲಿ ನಾವು ಪಡಬಾರದ ಕಷ್ಟಪಟ್ಟೆವು. ಆದರೆ ಅಪ್ಪನು ನಮ್ಮ ಕಲಾ ಪ್ರೇಮವನ್ನು ಅರಿತು ನಮ್ಮನ್ನು ದೂರಲಿಲ್ಲ. ಮನ ನೋಯಿಸಲಿಲ್ಲ. ಅವರ ಸಹಾಕಾರ ಸಹಿಷ್ಣುತೆ ನಮ್ಮ ಬಾಳಿನಲ್ಲಿ ರಕ್ಷಾ ಕವಚದಂತೆ ಇತ್ತು. ನಮ್ಮ ವಿದೇಶ ಪ್ರವಾಸಕ್ಕಾಗಿ ಅವರು ಬಹಳ ಆತುರಪಟ್ಟಿದ್ದರು. ಅವರ ಆ ಆಸೆಯೂ ನೆರವೇರಿತು. ನಾವು ಅಲ್ಲಿಂದ ಬರೆಯುತ್ತಿದ್ದ ಪತ್ರಗಳನ್ನು ತಾವೇ Type ಮಾಡಿ ಪ್ರತಿಗಳನ್ನು ತೆಗೆದು ಹತ್ತಿರದ ಸಂಬಂಧಿಕರಿಗೆ ಕಳಿಸಿಕೊಡುತ್ತಿದ್ದರು. ಆ ಪತ್ರಗಳು ಸಂಬಂಧಿಕರು ಮಾತ್ರ ಓದುವಂತಹುವಲ್ಲ. ಕನ್ನಡಿಗರೆಲ್ಲ ಓದಬೇಕು ಎಂದು ನನ್ನನ್ನು ಅದರ ಅನುವಾದಕ್ಕಾಗಿ ಪ್ರೇರೇಪಿಸಿದರು. ಅವರ ಬಲವಂತದ ನೆರವಿನಿಂದ ನನ್ನ "ಗೆಜ್ಜೆಯ ಹೆಜ್ಜೆನುಡಿ" ಪ್ರಕಾಶಕ್ಕೆ ಬಂತು. ಅಪ್ಪನ ಆ ಪ್ರೇಮ ಆ ಸಹಕಾರ ಆ ಉತ್ತೇಜನ ಇಲ್ಲದಿದ್ದರೆ ನಮ್ಮಲ್ಲಿ ಹುದುಗಿದ ಅನೇಕ ಸಾಧನೆಗಳು ಬಹಿರಂಗಕ್ಕೆ ಬರುತ್ತಿರಲಿಲ್ಲ. ನಮ್ಮ ಕಲಾ ಪ್ರವಾಸದ ಅವಧಿಗಳಲ್ಲಿ ಅಮ್ಮ-ಅಪ್ಪ ನಮ್ಮ ಮನೆಯಲ್ಲಿದ್ದು ನಮ್ಮ ಮಕ್ಕಳ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದರು.

ಪತ್ನಿ ವಿಯೋಗ

ಅಪ್ಪ-ಅಮ್ಮನ ಜೀವನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಮೇಲೆ ಹಾಗೂ ವಿದ್ಯಾವಂತೆ-ಕಲೆಗಾರ್ತಿ-ಸತ್ಕುಲ ಪ್ರಸೂತೆ ಸೊಸೆ (ವೃಂದಾ) ಯನ್ನು ಮನೆ ತುಂಬಿಸಿಕೊಂಡ ತರುವಾಯ ತೃಪ್ತಿಯ ಜೀವನವಾಯಿತು. ಅಳಿಯಂದಿರೆಲ್ಲ ಯೋಗ್ಯ ಮನೆತನದಿಂದ ಬಂದು ಒಳ್ಳೆಯ ಉದ್ಯೋಗದಲ್ಲಿದ್ದರು. ಅಳಿಯಂದಿರ ಬಗ್ಗೆ ಎಲ್ಲಿಲ್ಲದ ಅಭಿಮಾನ. "ನಮಗೆ ನಾಲ್ಕು ಗಂಡು ಮಕ್ಕಳ ಲಭ್ಯವಾಯಿತು!" ಎಂದು

ಅಳಿಯಂದಿರನ್ನು ಕುರಿತು ಆಗಾಗ್ಗೆ ಹೇಳುತ್ತಿದ್ದರು. ಪಡುಕೋಣೆ ಕುಟುಂಬದಲ್ಲಿ ನಾಲ್ಕನೆಯ ಪೀಳಿಗೆ ಕಾಣುವುದು ತಲೆಯಾಂತರದಿಂದ ನಡೆದು ಬಂದ ರೂಢಿ. ನನ್ನ ತಮ್ಮನಿಗೆ ಚೊಚ್ಚಲು ಮಗು ಗಂಡು ಎಂದ ತಕ್ಷಣ ತಂದೆಯ ತಂದೆ ಹಾಗೂ ಮಲ ತಾಯಿ ಮದ್ರಾಸಿಗೆ ಬಂದು ಮರಿಮಗನ ಮುಖ ನೋಡುವಾಗ ಕನಕಾಭಿಷೇಕ ಮುಂತಾದ ಶಾಸ್ತ್ರಗಳನ್ನು ಆಚರಿಸಿದರು. ಅಪ್ಪನು ಮದರಾಸಿನಲ್ಲಿ ವಿದ್ಯಾ ಇಲಾಖೆ ಯಿಂದ ನಿವೃತ್ತಿ ಪಡೆದ ಮೇಲೆ ಪುನಹ ಬಳ್ಳಾರಿಯಲ್ಲಿ ವೀರಶೈವ ಕಾಲೇಜಿನ ಪ್ರಿನ್ಸಿ ಪಾಲರಾಗಿ ಕೆಲಸ ಮಾಡಿದರು, ಆದರೆ ಅಲ್ಲಿ ಅವರು ಮನೆ ಮಾಡಲಿಲ್ಲ. ಬೆಂಗಳೂರಿನ ಮಲ್ಲೇಶ್ವರದಲ್ಲಿ ಸಹಕಾರಿ ಯೋಜನೆಯ ಕಟ್ಟಡಗಳಲ್ಲಿ ಒಂದು Apartment ಕೊಂಡುಕೊಂಡರು. ಬಳ್ಳಾರಿಯ ಅವಧಿ ಮುಗಿದ ಮೇಲೆ ಮಂಗಳೂರಿನ Teachers' Training College ನಲ್ಲಿ ಪ್ರಿನ್ಸಿಪಾಲ್ ಆಗಿ ಕೆಲಸಮಾಡಿ ದರು. ಅದು ಅವರ ಉದ್ಯೋಗದಲ್ಲಿ ಕೊನೆಯ ಹುದ್ದೆ. ಮನೆ ಬೆಂಗಳೂರಿನಲ್ಲಿಯೇ ಇತ್ತು. ನಮಗೆಲ್ಲ ತವರು ಮನೆಯ ಭಾಗ್ಯಕೊಟ್ಟರು. ಮಕ್ಕಳು, ಮೊಮ್ಮಕಳ ಸಾನಿಧ್ಯದಲ್ಲಿ ಅವರ ವಾನ ಪ್ರಸ್ತಾಶ್ರಮದ ದಿನಗಳು ಕಳೆದುವು. ಬೆಂಗಳೂರಿನಲ್ಲಿ 5 ವರುಷಗಳ ಜೀವನ ಅವರಂದಂತೆ "ಪಂಚವಾರ್ಷಿಕ ಯೋಜನೆ" ಯಾಯಿತು. ಏಕೆಂದರೆ ಆನಂತರ ಅಲ್ಲಿ ಅಮ್ಮನಿಗೆ ಸಕ್ಕರೆರೋಗ ಮತ್ತು ಕ್ಷಯರೋಗ ಜೊತೆ ಜೊತೆ ಯಾಗಿಯೇ ಬಂದು ಆರೋಗ್ಯ ತೀರಾ ಕೆಟ್ಟುಹೋಯಿತು. ಅಪ್ಪನ ನಿವೃತ್ತಿ ವೇತನ ಸಾಲದೆ ಬಂತು ; ಮನೆಗೆ ಬೀಗ ಹಾಕಿ ಬೊಂಬಾಯಿಯಲ್ಲಿದ್ದ ಮಗನ ಆಶ್ರಯದಲ್ಲಿ ಇರಬೇಕಾಗಿ ಬಂತು. ಮಗ–ಸೊಸೆಯ ಆಶ್ರಯ ಆರೈಕೆಯಲ್ಲಿ ಅಮ್ಮನ ಕಾಯಿಲೆ ವಾಸಿಯಾಯಿತು. ಕೆಲವೇ ವರುಷಗಳಲ್ಲಿ ನನ್ನ ತಮ್ಮನಿಗೆ ಮದ್ರಾಸಿಗೆ ವರ್ಗ ವಾಯಿತು. ಹೆತ್ತವರನ್ನು ಕರಕೊಂಡೇ ಅವರು ಅಲ್ಲಿ ಬಿಡಾರ ಹೂಡಿದರು. ಅಲ್ಲಿ ಕಾಲ ಕ್ರಮೇಣ ಅಮ್ಮನ ಆರ್ಯೋಗ್ಯ ಅಧೋಗತಿಗೆ ಬರುತ್ತಿದ್ದು ಒಂದು ದಿನ ಅದು ಕ್ಯಾನ್ಸರ್ ಕಾಯಿಲೆ ಎಂದು ತಿಳಿಸಲಾಯಿತು. ಬೊಂಬಾಯಿಗೆ ಕರಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಲಾಯಿತು. ಸ್ವಲ್ಪ ವಾಸಿಯಾದ ಮೇಲೆ ನನ್ನ ಮಗನ ಮದುವೆ ಗಾಗಿ ಬೆಂಗಳೂರಿಗೆ ಬಂದರು. ಮೊಮ್ಮಗನ ಮದುವೆ ನೋಡುವ ಹಂಬಲ ಅವರಿಗಿತು. ಮತ್ತೆ ಕಾಯಿಲೆ ಹದಗೆಟ್ಟು ಹೋಯಿತು. ಬೊಂಬಾಯಿಯಲ್ಲಿ ತೀವ್ರ ಔಷಧೋಪ ಚಾರಗಳಾದುವು. ಆರು ತಿಂಗಳಲ್ಲೇ ಆಸ್ಪತ್ರೆಯಲ್ಲಿಯೇ ಕ್ರಿ. ಶ. 1969 ರ ಡಿಸೆಂಬರ್ 11 ರಂದು ಅಮ್ಮನ ಅವಸಾನವಾಯಿತು. ಒಂದು ವರುಷ ಕ್ಯಾನ್ಸರ್ ಕಾಯಿಲೆ ಯಿಂದ ನರಳಿ ಕೊನೆಗೆ ದೈವಾಧೀನರಾದರು. (ಆಗ ಅವರ ವಯಸ್ಸು 66 ವರುಷ 6 ತಿಂಗಳು, 6 ದಿವಸಗಳು. ಅಪ್ಪನೂ ಅವರ Treatment ಗೆ ಹಣವನ್ನು ನೀರಿ ನಂತೆ ಸುರಿದರು. ಸಾಲ ಪಡೆದರು. ಸಂಬಧಿಕರು ಧನ ಸಹಾಯ ವಿತ್ತರು. ಆದರೂ ಅವರನ್ನು ಬದುಕಿಸಲು ಆಗಲಿಲ್ಲ. ಕೊನೆಯ ದಿನಗಳಲ್ಲಿ ಅಮ್ಮನು ಸಾವನ್ನು ಆತುರ ದಿಂದ ನಿರೀಕ್ಷಿಸುತ್ತಿದ್ದರು. ಆಹ್ವಾನಿಸುತ್ತಿದ್ದರು. ತನ್ನ ಅವಸಾನ ಆದ ಮೇಲೆ

ನಾವು ಏನೇನು ಮಾಡಬೇಕು ಎಂದು ವಿವರವಾಗಿ ಹೇಳುತ್ತಿದ್ದರು. ಕೆಲವು ವಿಷಯ ಗಳನ್ನು ಬರೆದೂ ಇಟ್ಟಿದ್ದರು. "ಪತಿಯ ಯೋಚನೆ ನನಗಿಲ್ಲ. ಸೊಸೆ ಒಳ್ಳೆಯವಳು. ಮಗನಿಗೆ ಜವಾಬ್ದಾರಿ ಇದೆ" ಅಳಿಯಂದಿರು ಹೆಣ್ಣು ಮಕ್ಕಳು ಚೆನ್ನಾಗಿದ್ದಾರೆ ಯಶೋಧರೆಯನ್ನು ಮಾತ್ರ ನೋಡಿಕೊಳ್ಳಿ" ಎಂದು ನಮಗೆ ತಮ್ಮ ಮನದಾಸೆ ತಿಳಿಸಿ ಭಗವಂತನ ಪಾದ ಸೇರಿದರು.

ಅಮ್ಮನ ನಿಧನವಾದ ಮೇಲೆ ಅಪ್ಪನು ತನ್ನ ಜೀವನ ಸಂಗಾತಿಯನ್ನು ಕಳೆದುಕೊಂಡರು. ಅವರಿಬ್ಬರ ಮದುವೆಯ 50 ವರುಷದ ಸುವರ್ಣ ಮಹೋತ್ಸವವನ್ನು ಬೆಂಗಳೂರಲ್ಲಿ ನಮ್ಮ ಮನೆಯಲ್ಲಿ ನಾವು ಭೂ ಪ್ರದಕ್ಷಿಣೆಯ ಕಲಾ ಪ್ರವಾಸ ಕೈಕೊಂಡಾಗ 1966 ರಲ್ಲಿ ವಿಜೃಂಭಣೆಯಿಂದ ಜರುಗಿಸಿದ್ದರು. (ಆ ವರುಷ ನಮ್ಮ ಇಬ್ಬರ ಮದುವೆಯ ರಜತ ಮಹೋತ್ಸವವೂ ಆಗಿತ್ತು.) ಅಪ್ಪನ ಎಲ್ಲ ಚಟುವಟಿಕೆಗಳಲ್ಲಿ ಅವರೊಂದಿಗೆ ಜೀವನವನ್ನೆಲ್ಲ ಸವೆಸಿದ್ದರು, ನೆರವು ಕೊಟ್ಟಿದ್ದರು. ಪತ್ನಿಯಾಗಿ, ತಾಯಿಯಾಗಿ, ಗೃಹಿಣಿಯಾಗಿ-ಅತಿಥಿಯಾಗಿ–ಸಮಾಜ ಸೇವಕಿಯಾಗಿ–ಕಲೆಗಾರ್ತಿಯಾಗಿ– ಸಂಸಾರ ದಲ್ಲಿ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಜೀವನವನ್ನು ಚಂದವಾಗಿ ಸಾರ್ಥಕವಾಗಿ ಬಾಳಿದ್ದ ಅಮ್ಮನಂತಹ ಬಾಳಗೆಳತಿಯನ್ನು ಕಳೆದುಕೊಂಡ ಅಪ್ಪ ತಕ್ಷಣವೇ ತಬ್ಬಲಿ ಯಾದರು. ಅನಂತರ ಅವರು ಮಕ್ಕಳೊಂದಿಗೆ ಇದ್ದು ಕಾಲ ಕಳೆದರು. ಮಕ್ಕಳ ಸುಖ ಅವರದ್ದಾಗಿತ್ತು. ಮಕ್ಕಳೊಡನೆ ಮಕ್ಕಳಾಗಿ, ದೊಡ್ಡವರೊಡನೆ ದೊಡ್ಡವರಾಗಿ ವಾತಾವರಣದಲ್ಲಿ ಸಹಜವಾಗಿ ಬೆರತುಕೊಳ್ಳುತ್ತಿದ್ದರು. ಅವರು ರಸಿಕರು ಒಳ್ಳೆ ಸಂಗೀತ-ಸಾಹಿತ್ಯ-ನೃತ್ಯ-ಚಿತ್ರಕಲೆ-ಶಿಲ್ಪ ಎಲ್ಲದರಲ್ಲೂ ಅಂದ ಕಂಡು ಆನಂದಿಸು ತ್ತಿದ್ದರು. ಸೌಂದರ್ಯೋಪಾಸನೆ ಮಾಡುತ್ತಿದ್ದರು. ಅವರು ಜೀವನದಲ್ಲಿ ಪ್ರಾಸಂಗಿಕ ವಿಷಯಗಳನ್ನು ತ್ಯಜಿಸಲಿಲ್ಲ. ತ್ಯಜಿಸಿ ತಾನೂ ಕಷ್ಟಪಟ್ಟು ಇತರರಿಗೂ ಕಷ್ಟಕೊಡುವ ಗೋಜಿಗೆ ಹೋಗಲಿಲ್ಲ ರಸಿಕರಾಗಿ ಬದುಕಿದ ಜೀವ. ಪ್ರಕೃತಿಯಲ್ಲಿ, ಮಾನವನಲ್ಲಿ ಅಂದ-ಚೆಂದವನ್ನು ಮೆಚ್ಚುವ ಪ್ರವೃತ್ತಿ–ಇತರರ ಬಾಳಿಗೆ ಬೆಳಕು ಕೊಡುವ ಸ್ವಭಾವ. ಎಲ್ಲಿ ಒಳ್ಳೆಯ ನಾಟ್ಯ ವಿರಲಿ, ನಾಟಕ ವಿರಲಿ, ಕಲಾ ಪ್ರದರ್ಶನ ವಿರಲಿ, ಸಂಗೀತ ವಿರಲಿ ಅತ್ಯಂತ ಉತ್ಸಾಹದಿಂದ ಹೋಗುತ್ತಿದ್ದರು.

ಸಾಮಾನ್ಯವಾಗಿ ವಯಸ್ಸಾದವರು ಇಂದಿನ ಯುವ ಜನಾಂಗದವರಿಗೆ ಒಂದು ಹೊರೆ ಯಾಗಿರುತ್ತಾರೆ. ಕಾಯಿಲೆಯಿಂದಲೋ ಅಥವಾ ಅವರ ಮಾನಸಿಕ ಪ್ರವೃತ್ತಿ ಯಿಂದಲೋ ಅಥವಾ ಆಧುನಿಕ ಜೀವನದ ಸ್ಥಿತಿಗಾಗಿಯೇ ಯಾವಾಗಲೂ ಅತೃಪ್ತಿ ಯಿಂದ ಗೊಣಗುತ್ತಲೇ ಇರುತ್ತಾರೆ. ತಾವೂ ಸುಖವಾಗಿರುವುದಿಲ್ಲ ; ಇತರರಿಗೂ ಸುಖವಾಗಿರಲು ಬಿಡುವುದಿಲ್ಲ. ಆದರೆ ಅಪ್ಪನಂತಹ ವಯಸ್ಸಾದವರು ನೂರು ವರುಷ

ಬಾಳಿದರೂ ಸಾಲದು ಎಂಬಂತ್ತಿತ್ತು. ಕಾರಣ ಅವರ ಮಕ್ಕಳು ಇಂದಿನ ಯುವ ಎಳಿಗೆಯ ಆಧುನಿಕತೆಗೆ ಮಾರು ಹೋಗಿರಲಿಲ್ಲ.

ಇಳಿ ವಯಸ್ಸಿನಲ್ಲಿ ಜೀವನದಲ್ಲಿ ದುರ್ಘಟನೆ–ಮಗಳ ಮರಣ

ನಮ್ಮ ತಂಗಿ ಚಿ|| ಸೌ|| ಶಾಂತಿ ವಾತ ಮತ್ತು ಕಾಲಿನ ಕೀಲು ನೋವಿನಿಂದ ಕೆಲವು ವರುಷಗಳಿಂದ ಹಾಸಿಗೆ ಹಿಡಿದಿದ್ದಳು. ಆದರೆ ಅವಳು ಜೀವನವನ್ನು ಬಹಳ ಸಂತೋಷ ದಿಂದ ಉತ್ಸಾಹದಿಂದ ಬಾಳಲು ಆಕೆಯ ಪತಿ ಅವಳಿಗೆ ಮಾಡಿದ ಚಿಕಿತ್ಸೆ ಮತ್ತು ಸೇವೆ ಅಸಾಮಾನ್ಯವಾದುದು. ಪೂರ್ವಜನ್ಮದ ಪುಣ್ಯವೆಂಬಂತೆ ಆಕೆಯ ಪತಿ ಅವಳಿಗೆ ಬೇಕಾದುದನ್ನು ಒದಗಿಸಿ ಪತ್ನಿಯನ್ನು ಸುಖದ ಸುಪ್ಪತ್ತಿಗೆಯಲ್ಲಿರಲು ಪ್ರಯತ್ನಿಸಿದ ಫಲವಾಗಿ ಅಮ್ಮ ಹಾಗೂ ಅಪ್ಪನಿಗೆ ಅವಳ ವಿಷಯವಾಗಿ ಹೆಚ್ಚಾದ ಚಿಂತೆ ಇರಲಿಲ್ಲ. ಶಾಂತಿಯು ಮಲಗಿದ್ದಲ್ಲೇ ಇದ್ದರೂ ಮನೆಯ ಗೃಹಲಕ್ಷ್ಮಿಯಾಗಿದ್ದಳು. ಭರಣಿ ನಕ್ಷತ್ರ ಇದ್ದ ಆಕೆ ಧರಣಿ ಆಳುವಂತೆ ರಾಣಿ ಸುಖ ಅನುಭವಿಸುತ್ತಿದ್ದಳು. ಮನೆಗೆ ಬಂದು ಹೋಗುವವರನ್ನು ನಕ್ಕು–ಆಹ್ವಾನಿಸಿ-ಅವರು ಇಷ್ಟಪಡುವ ತಿಂಡಿ–ತೀರ್ಥ ಗಳನ್ನು ಮಾಡಿಸಿ-ಸತ್ಕರಿಸಿ–ಸುಮಂಗಲಿಯರಿಗೆ ಅರಸಿನ ಕುಂಕುಮ–ಹೂ ಹಣ್ಣು ಕೊಟ್ಟು ಕಳುಹಿಸುತ್ತಿದ್ದುದು ಅವಳ ವ್ಯಕ್ತಿತ್ವದ ವಿಶಿಷ್ಟಗುಣವಾಗಿತ್ತು. ಅವಳಿಗೆ ಎಲ್ಲದರಲ್ಲಿಯೂ ಅಚ್ಚುಕಟ್ಟು ಅಂದ-ಚೆಂದ ಬೇಕಾಗಿತ್ತು. ಮಲಗಿದ್ದಲ್ಲೇ ಇದ್ದರೂ ಜಗತ್ತಿನ ಎಲ್ಲ ಆಗು-ಹೋಗುಗಳ ಪರಿಚಯ ಅವಳಿಗಿತ್ತು. ಅಂದರೆ ಪತಿ ಮನೆಗೆ ತಂದು ಹಾಕುತ್ತಿರುವ ಅನೇಕ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುತ್ತಿದ್ದಳು. ಪತ್ರ ವ್ಯವಹಾರದಲ್ಲಿ ಅಪ್ಪನಂತೆ ನಿಸ್ಸೀಮಳು. ಅಲ್ಲದೆ ಸನಾತನ ಧರ್ಮದ ಎಲ್ಲ ಸತ್ಕಾರ್ಯ ಗಳಲ್ಲೂ ನಂಬಿಕೆಯಿದ್ದು ಸಂಸಾರದ ನಿರ್ವಹಣೆಯನ್ನು ಅತಿ ಶ್ರದ್ಧೆಯಿಂದ ಮಾಡಿಸು ತ್ತಿದ್ದಳು. ಆಕೆಗೆ ಒಬ್ಬನೇ ಮಗ–ನೋಡಲು ತುಂಬಾ ಸುಂದರ ಆತನಿಗೆ ಅತನೇ ಆರಿಸಿ ತಂದ ಹೆಣ್ಣು ಮಗಳನ್ನು ವಿವಾಹಗೈದು ಮನೆ ತುಂಬಿಸಿ ಕೊಂಡಾಗ ತಂಗಿ ಶಾಂತಿಗೆ ಎಲ್ಲಿಲ್ಲದ ಪರಮ ಆನಂದ. ಸೊಸೆಯ ಚೊಚ್ಚಲ ಬಸುರಿಗೆ ಶಾಂತಿ ತಾನು ಮಾಡಬೇಕಾದ ಕಾರ್‍ಯಗಳನ್ನೆಲ್ಲ ಚಂದವಾಗಿ ಮಾಡಿದಳು. ಮೂರನೇ ತಿಂಗಳ ಸಂಭ್ರಮ–5ನೇ ತಿಂಗಳ ಸಂಭ್ರಮ–ಇತ್ಯಾದಿ.

ಅಕಸ್ಮಾತ್ ಒಂದು ದಿನ ಜುಲೈ 8 ರಂದು 1977ರಲ್ಲಿ ಅವಳಿಗೆ ಉಸಿರಾಡಲು ತೊಂದರೆ ಆಯಿತು. ಅಪ್ಪ ಆಗ ಅವಳ ಮನೆಯಲ್ಲಿ ಕೆಲವು ದಿನ ಇರಲು ಬಂದಿದ್ದರು. ಅವರಿಗೆ ಚಿಂತೆ ಕೊಡಬಾರದೆಂದು ಒಂದು ದಿನವೆಲ್ಲ ಸಹಿಸಿ ನರಳಾಡಿದಳು. ಅವರಿಗೆ ಗೊತ್ತಾಗಬಾರದೆಂದು ಕಟ್ಟಪ್ಪಣೆ ಮಾಡಿದಳು. ಆದರೆ ಕೊನೆಗೆ ಆಸ್ಪತ್ರೆಗೆ ಕೊಂಡು ಹೋಗಬೇಕಾಯಿತು. Intensive Care Unit ನಲ್ಲಿ ಸೇರಿಸಬೇಕಾಯಿತು.

ಅಲ್ಲಿ ಆಕೆಯ ಕಾಯಿಲೆ Lung Cancer ಎಂಬುದಾಗಿ ತಿಳಿಸಿದರು. ಈ ಕ್ರೂರ ಕಾಯಿಲೆಯನ್ನು ಅವಳಿಂದ ಮರೆಮಾಚಬೇಕಾಯಿತು. ಆಸ್ಪತ್ರೆಯಲ್ಲಿ ಅಪ್ಪ ಹೋಗಿ ಅವಳನ್ನು ಕಂಡಾಗ "ಆನ್ನಾ–ನನ್ನ ವಿಷಯ ನೀವು ಏನೂ ಯೋಚನೆ ಪಡಬಾರದು ! ನಿಮಗೆ ವಯಸ್ಸಾಗಿದೆ. ಈ ವಯಸ್ಸಿನಲ್ಲಿ ಚಿಂತೆ ನಿಮಗೆ ಒಳಿತಲ್ಲ" ಎಂದಾಗ ಅಪ್ಪ ಅಳುವನ್ನು ತಡೆಯಲಾರದೆ ಕೋಣೆ ಬಿಟ್ಟು ಹೊರಗೆ ಬಂದು ಸಂಕಟಪಟ್ಟರಂತೆ. ಚೊಚ್ಚಲ ಬಸುರಿ ಸೊಸೆಗೆ ಆಗ 8 ತಿಂಗಳು ತುಂಬಿತ್ತು. ಮೊಮ್ಮಗುವನ್ನು ನೋಡುವ ಆಸೆ ಆಕೆಗೆ. ಸೊಸೆಗೆ ಬಳೆ ತೊಡಿಸಿದ್ದ ಶಾಸ್ತ್ರದ ವಿಜೃಂಭಣೆಯ ವಿವರ ತಿಳಿದು ಸಂತೋಷಪಟ್ಟಳು-ಅಷ್ಟೇ. ಮೊಮ್ಮಗುವನ್ನು ನೋಡುವ ಭಾಗ್ಯ ಪಡೆದು ಬಂದಿರಲಿಲ್ಲ. ನೆರೆಹೊರೆಯವರ ಮಕ್ಕಳನು ಮುದ್ದಿಸುತ್ತಿದ್ದ ಶಾಂತಿಗೆ ತನ್ನ ವಂಶದ ಕುಡಿಯನ್ನು ಮುದ್ದಿಸುವ ಪುಣ್ಯ ಇರಲಿಲ್ಲ. ಆಗೋಸ್ತು 4 ರಂದು 1977 ರಲ್ಲಿ ಶಾಂತಿಯು ದೈವಾಧೀನಳಾದಳು. ಮಗುವು ಸೆಪ್ಟೆಂಬರ್ 17 ರಂದು ಹುಟ್ಟಿತು. ಗಂಡುಮಗು ಅಕ್ಕರೆಯ ಅಜ್ಜಿಯನ್ನು, ಆಕೆಯ ಅಗಾಧ ಪ್ರೇಮವನ್ನು ಕಳೆದುಕೊಂಡು ಹುಟ್ಟಿದ ಮಗುವನ್ನು ಕಂಡರೆ ನಮಗೆಲ್ಲರಿಗೂ ತಡೆಯಲಾಗದ ದುಃಖ ವಾಗುತ್ತಿತ್ತು.

ಆಕೆಯ ಪತಿಯಂತೂ ತೀರಾ ಏಕಾಂಗಿಯಾದರು. ಸುಮಾರು 15–20 ವರ್ಷ ಗಳಿಂದ ರಾತ್ರಿ-ದಿವಸ ಪತ್ನಿ ವ್ರತ ಕೈಕೊಂಡು ಆರೈಕೆ ಮಾಡಿದ ಪತಿ ಇಂದು ಆಕೆ ಯನ್ನು ಪ್ರತ್ಯಕ್ಷ ಕಾಣದಿದರೂ ಅವಳನ್ನು ತನ್ನ ಹೃದಯ ದೇಗುಲದಲ್ಲಿ ಶಾಶ್ವತವಾಗಿ ಪ್ರತಿಷ್ಠಿಸಿಕೊಂಡು ಪೂಜಿಸುತ್ತಿದ್ದಾರೆ. ನಮಗಂತೂ ಶಾಂತಿ ದೈಹಿಕವಾಗಿ ಇಲ್ಲದಿದ್ದರೂ ಅವಳ ಚೇತನ ನಮ್ಮನ್ನೆಲ್ಲರನ್ನು ಗಳಿಗೆ ಗಳಿಗೆಗೆ ಜಾಗೃತಿ ಗೊಳಿಸುತ್ತದೆ–ಶಾಂತಿಯ ಆತ್ಮಕ್ಕೆ ಶಾಂತಿ ಇರಲಿ.

ಅಪ್ಪನ ವೃದ್ಧಾಪ್ಯ

ಮಗಳ ಮರಣ ಅವರನ್ನು ಕಂಗಾಲು ಮಾಡಿತು. ಅಳಿಯನ ಮನೆಗೆ ಹೋಗುವುದನ್ನೇ ಬಿಟ್ಟರು. ನಗುಮುಖದಿಂದ ಕರೆಯುವ ಮಗಳು-ಅವಳ ಅಕ್ಕರೆಯ ಆತಿಥ್ಯ ಮರೆತು ಹೇಗೆ ತಾನು ಅಲ್ಲಿಗೆ ಹೋಗಿ ಇರಲಿ ಎಂದು ನೊಂದುಕೊಂಡರು. ಕಣ್ಣಮುಂದೆ ಮಗಳ ಸಾವು ನೋಡುವುದು ತಂದೆಯ ಜೀವನದಲ್ಲಿ ಎಂತಹ ದುರಂತ! ಅವರು ದಿನ ನಿತ್ಯ ದೇವರ ಮುಂದೆ ಕೂತು ಪ್ರಾರ್ಥಿಸಿಲ್ಲ. ಆದರೆ ಆಧ್ಯಾತ್ಮದಲ್ಲಿ ನಂಬಿಕೆ ಇದ್ದವರು ; ಸನಾತನ ಧರ್ಮದಲ್ಲಿ ನಂಬಿಕೆ ಇದ್ದವರು, ನಮ್ಮ ಹಿಂದೂ ಸಂಸ್ಕಾರಗಳಲ್ಲಿ ನಂಬಿಕೆ ಇದ್ದವರು. ಅವರು ಮದ್ರಾಸಿನ ತನ್ನ ಮನೆಯಲ್ಲಿ ವಾರಕ್ಕೊಮ್ಮೆ "The Spiritual Centre" ಎಂಬ ಸಂಸ್ಥೆಯನ್ನು ಸ್ಥಾಪಿಸಿ ಆಧ್ಯಾತ್ಮಿಕ ವಿಷಯಗಳಲ್ಲಿ

ಗಣನೀಯ ವ್ಯಕ್ತಿಗಳಿಂದ ಭಾಷಣಗಳನ್ನು ಏರ್ಪಡಿಸಿದ್ದರು. ಆ ಭಾಷಣಗಳನು ಜೀರ್ಣಿಸಿಕೊಂಡ ಪರಿಣಾಮ ಇಂದು ಅವರ ರಕ್ಷಣೆಗೆ ಬಂತು. ಅವರು Bible ನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಗೀತೆಯನ್ನೂ ಓದುತ್ತಿದ್ದರು. ಅಮ್ಮನ ಕೊನೆಯ ದಿನಗಳಲ್ಲಿ ಪಾರಮಾರ್ಥಿಕ ವಿಷಯಗಳಲ್ಲಿ ಆಸಕ್ತಿ ಪಡೆದಾಗ ತಂದೆಯವರೂ ಅಮ್ಮನೊಡನೆ ಮನಸ್ಸನ್ನು ಪಕ್ವ ಮಾಡಿಕೊಂಡಿದ್ದರು. ಅಮ್ಮನು ಸಂತ ಜ್ಞಾನೇಶ್ವರ ಸದ್ಗುರುಗಳ ಮರಾಠಿ ಭಾಷೆಯ "ಜ್ಞಾನೇಶ್ವರಿ" ಯನ್ನು ಟೀಕಾ ಸಹಿತ ಉಪನ್ಯಾಸಗಳನ್ನು ಕೊಡುತ್ತಿದ್ದರು. ಕನ್ನಡದಲ್ಲೂ-ಕೊಂಕಣಿ ಭಾಷೆಯಲ್ಲೂ ಸ್ವಾಮಿ ರಾಮದಾಸ್ ಮತ್ತು ಚಿತ್ರಾಪುರ ಮಠದ ಗುರು ಶ್ರೀ ಆನಂದಾಶ್ರಮ ಸ್ವಾಮಿಗಳ ಸನ್ನಿಧಿಯಲ್ಲಿ ಅವರು ಯಾವ ಅಳುಕೂ ಇಲ್ಲದೆ "ಜ್ಞಾನೇಶ್ವರಿ"ಯನ್ನು ಕುರಿತು ಉಪನ್ಯಾಸ ಕೊಟ್ಟದ್ದು ಅಪ್ಪನ ಹೆಮ್ಮೆಯ ವಿಷಯವಾಗಿತ್ತು. ಅಲ್ಲದೆ ಅಮ್ಮ Koran, Bible, ಬುದ್ಧಗ್ರಂಥಗಳಿಂದ ವಿಷಯಗಳನ್ನು ಆಯ್ದು ಅಧ್ಯಾತ್ಮವನ್ನು ವಿವರಿಸುತ್ತಿರುವಾಗ ಅಪ್ಪ ಮಾತ್ರವಲ್ಲ ನಾವೆಲ್ಲರೂ ಅವರ ವಿಶಾಲ ದೃಷ್ಟಿಗಾಗಿ ಸ್ತಂಭೀಭೂತರಾಗುತ್ತಿದ್ದೆವು! ಅಮ್ಮನಿಗೆ ಭಾಷಾಜ್ಞಾನವಿತ್ತು-ವಾಕ್‌ಝುರಿಯಿತ್ತು-ವಾಕ್‌ಜಾಲವಿತ್ತು ಯಾವ ವಿಷಯವನ್ನಾದರೂ ಸ್ವಾರಸ್ಯವಾಗಿ ವಿವರಿಸುವ–ಉತ್ಪ್ರೇಕ್ಷೆಯಿಂದ ನಗಿಸುವ ಚಾತುರ್ಯ ಪಡೆದಿದ್ದರು. ಅಮ್ಮ ಕೂತ ಕಡೆಗೆ ಸಾರಸ್ವತ ಜನರೆಲ್ಲರೂ ಅಯಸ್ಕಾಂತ ಆಕರ್ಷಿಸುವಂತೆ ಬಂದು ಸುತ್ತಲೂ ಕುಳಿತು ಅವರು ನಗಿಸುವ ಅಲೆಗಳಲ್ಲಿ ಈಜುತ್ತಿದ್ದರು! ಅವರೊಡನೆಯ ಸಂಭಾಷಣೆ ಒಂದು ಮಹೋತ್ಸವವಾಗಿತ್ತು. ಅಪ್ಪನಿಗೆ ಮಾತು ಕಮ್ಮಿ ಮತ್ತು ಮಾತಿನಲ್ಲಿ ಸ್ವಲ್ಪ ತಡೆಯಿತ್ತು. ಆದ್ದರಿಂದ ಸಂಭಾಷಣೆ ಆಗದು. ಜನರನ್ನು ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದರು. ಓದು ಹೆಚ್ಚು. ಬರೆಯಲು ಎಂದೂ ಆಲಸ್ಯಪಟ್ಟಿಲ್ಲ. ಪುಟ ಪುಟಗಳನ್ನು ಬರೆದು ತನ್ನ ಬಾಯಿ ಆಡದೆ ಇದ್ದ ಮಾತುಗಳನ್ನು ಬರೆದು ತಿಳಿಸುತ್ತಿದ್ದರು. ಮನೆಗೆ ಅತಿಥಿಗಳು ಬಂದರೆ ಗೃಹ ಕೃತ್ಯಗಳನ್ನು ಬಿಟ್ಟು ಅಮ್ಮನೆ ಸಂಭಾಷಣೆಗೆ ಕುಳಿತುಕೊಳ್ಳಬೇಕಾಗಿತ್ತು.

ಅಪ್ಪನು ವಯಸ್ಸಾದಂತೆ ಪ್ರಾಪಂಚಿಕ ವಿಷಯಗಳನ್ನು ತ್ಯಜಿಸದೆ ಅಧ್ಯಾತ್ಮಿಕ ಪಥದಲ್ಲಿ ಮನಸ್ಸನ್ನು ತರಬೇತಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಅಧ್ಯಾತ್ಮಿಕ ವಿಷಯಗಳ ವಿಚಾರವಾಗಿ ಲೇಖನಗಳನ್ನೂ ಪುಸ್ತಕಗಳನ್ನೂ ಬರೆಯಲು ಆರಂಭಿಸಿದರು. "ಹುಚ್ಚು ಬೆಳದಿಂಗಳಿನ ಹೂ ಬಾಣಗಳು" ಬರೆದ ಅಪ್ಪನ ಲೇಖನಿಯಿಂದ "The Cloak" "Mirdad" "Rcturn of Shakuntala" ಎಂಬ ಹಲವಾರು ಗಮನಾರ್ಹ ಗಂಭೀರ ಸಾಹಿತ್ಯ ಕೃತಿಗಳು ಹೊರಬಂದುವು. ಅವರಿಗೆ ಪೂಜೆ-ಪುನಸ್ಕಾರಗಳ ವ್ಯವಹಾರ ಇಲ್ಲದಿದ್ದರೂ ಅವರಿಗೆ ಮನುಷ್ಯನ ಮರಣಾನಂತರ ಮಾಡುವ ಸಂಸ್ಕಾರಗಳಲ್ಲಿ ನಂಬಿಕೆ ಇತ್ತು. ಜೀವಾತ್ಮನು ದೇಹ ಬಿಟ್ಟು ಪರಮಾತ್ಮನೊಡನೆ ಐಕ್ಯವಾಗುವ ಮುಂಚೆ ಇರುವ ಸ್ಥಿತಿಯನ್ನು ನಮಗೆ ವಿವರಿಸುತ್ತಿದ್ದರು.

ಮರಣದ ನಂತರದ 10 ದಿನಗಳು ಹೇಗೆ ಅರ್ಥಗರ್ಭಿತವಾದುವು? 9, 10, 11, 12ನೇ ದಿನಗಳಲ್ಲಿ ಆತ್ಮದ ಸ್ಥಿತಿ ಏನು? 12ನೇ ದಿನ ಎಂದರೇನು? ವೈಕುಂಠ ಸಮಾರಾಧನೆಯು ಏನದು ಏಕೆ? ಮಾಸಿಕ, ವರ್ಷಾಂತಿಕ-ವಾರ್ಷಿಕ ತಿಥಿ ಏಕೆ ಮಾಡಬೇಕು ಎಂದು ತಿಳಿಸುತ್ತಿದ್ದರು. ಇದೇ ವಿಚಾರವಾಗಿ ಅವರ ಮನಸ್ಸು ಓಡುತ್ತಿದ್ದಂತೆ "A Spirit Unborn" ಎಂಬ ಒಂದು ಕಾದಂಬರಿ ಬರೆಯಬೇಕೆಂದು ಬಹಳ ಆಸೆಪಟ್ಟಿದ್ದರು. "Life Unborn" ಎಂಬ ಕಥಾವಸ್ತು ವಿಷಯ ವಿಚಾರ ಅವರು ಗಾಢವಾದ ಯೋಚನೆಗಳನ್ನು ಮಾಡುತ್ತಿದ್ದರು. ಮಾನವನ ಅವಸಾನದ ಕಾಲದಲ್ಲಿ ಪ್ರಾಣವು ದೇಹವನ್ನು ಕಳೆದುಕೊಂಡು ತಬ್ಬಲಿಯಂತೆ ಆಕಾಶದಲ್ಲಿ ಹಾರಾಡಿ ಹಾರಾಡಿ ಕೊನೆಗೆ ಯಾವುದಾದರೂ ಒಂದು ದೇಹವನ್ನು ಹೊಕ್ಕಲು ಹಾತೊರೆಯುತ್ತದೆಯಂತೆ. ಆ ಘನವಾದ ವಿಷಯಕ್ಕೆ ತಕ್ಕ ಸಂಕಲ್ಪ ಮನಸ್ಸು ಮಾಡಿದರೂ ಬರೆಯಲು ಕೂತರೆ ಲೇಖನಿ ಓಡುವುದಿಲ್ಲ ಎಂದು ಕೊರಗುತ್ತಿದ್ದರು.

ಅಪ್ಪನಿಗೆ ಆಗ 80ರ ವಯಸ್ಸಾದರೂ ಮುದುಕರಂತಿರಲಿಲ್ಲ. ವಯಸ್ಸು ಅವರನ್ನು ಕುಗ್ಗಿಸಲಿಲ್ಲ. 40-45 ವರುಷದ ತರುಣರಂತೆ ಇದ್ದರು! ಆರೋಗ್ಯ ದೃಷ್ಟಿಯಿಂದ ಅಪ್ಪ ಭಾಗ್ಯವಂತರೇ ಎನ್ನಬೇಕು. ಯಾವ Serious ಕಾಯಿಲೆಗಳು ಬಂದಿಲ್ಲ. Diabetes, ರಕ್ತದ ಒತ್ತಡ ಹೃದ್ರೋಗ, ವಾತದ ನೋವು, ಕೈ ನಡುಕ ಯಾವುದೂ ಇರಲಿಲ್ಲ. ಸ್ವಲ್ಪ ಜ್ವರ ಬಂದರೆ ಸಹನ ಶಕ್ತಿ ಇರಲಿಲ್ಲ: ಏಕೆಂದರೆ ತನ್ನಿಂದ ಇತರರಿಗೆ ತೊಂದರೆಯಾಗಬಾರದು ಎಂಬ ಕಳವಳದಿಂದ ಅವರಿಗೆ ಹಸಿವು, ನಿದ್ದೆ, ಜೀರ್ಣಶಕ್ತಿ ಎಲ್ಲವೂ ಆರೋಗ್ಯಕರವಾಗಿತ್ತು. ಅವರನ್ನು ಕಂಡವರೆಲ್ಲ ಅವರ ಆರೋಗ್ಯ ಮತ್ತು ಲವಲವಿಕೆ ಕಂಡು ವಿಸ್ಮಿತರಾಗುತ್ತಿದ್ದರು.

ಸಾವಿನ ಭಯ

ಅಪ್ಪನ ಆರೋಗ್ಯ ದೃಷ್ಟಿ ಬೀಳುವಂತಿತ್ತು. 80 ವರುಷದ ಮೇಲೂ ಗಟ್ಟಿಮುಟ್ಟಾದ ಮೈಕಟ್ಟು-ಆರೋಗ್ಯವಾದ ಶರೀರ-ಮಾನಸಿಕ ದೈಹಿಕ ಶಕ್ತಿ ಇತ್ತು. ಮಾಸದ ನೆನಪುಗಳು ಪರಿಸರದಲ್ಲಿ ಜೀವಂತ ಆಸಕ್ತಿ-ಏಕಾಗ್ರತೆ ಇತ್ಯಾದಿ. ರಕ್ತ ಚಲನೆಯ ತೊಂದರೆಯಾದ ಮೇಲೆ ವೈದ್ಯರು ಉಪದೇಶಿಸಿದಂತೆ ಅವರ ಜೀವನ ಸಂಗಾತಿಯಾಗಿದ್ದ ನಶ್ಯವನ್ನೂ ಬಿಟ್ಟು ಬಿಡಬೇಕಾಯಿತು! ತಟ್ಟನೆ ಒಂದೇ ಮನಸ್ಸು ಮಾಡಿ ಒಂದೇ ಘಳಿಗೆಯಲ್ಲಿ ಎಂಬಂತೆ ನಶ್ಯವನ್ನು ತ್ಯಜಿಸಿದುದು ಅವರ ವ್ಯಕ್ತಿತ್ವದ ಹಿರಿಮೆ!

1978ರಲ್ಲಿ ಅವರು ಬೆಂಗಳೂರಿಗೆ ಬಂದು ನನ್ನ ಮನೆಯಲ್ಲಿ ವಾಸವಾಗಿದ್ದರು. ಬೆಂಗಳೂರಿನ ಹವೆ ಆ ದಿವಸಗಳಲ್ಲಿ ಬಹಳ ಅನಿಶ್ಚಿತತೆ-ಚಂಚಲ ಆಗಿತ್ತು. ಜ್ವರವಾಗಲೂ

ಛಳಿ-ಗಾಳಿಯಿಂದ ಅಪ್ಪನಿಗೆ ಮೊಣಕಾಲು ನೋಯಲು ಶುರು ಆಯಿತು; ಭಯದಿಂದ ಯೋಚನೆ ಗೀಡಾದರು. ರಾತ್ರಿ ನಿದ್ದೆಯಿಲ್ಲದೆ ಒದ್ದಾಡಿದರು. ಬೆಳಿಗ್ಗೆ ಎದ್ದು ನನ್ನ ಮಗ ಜಯದೇವನೊಡನೆ "ಅದೇಕೋ ತುಂಬಾ ಭಯವಾಗುತ್ತಿದೆ. ನನ್ನನ್ನು ಯಾರೋ ಎತ್ತಿ ಬಿಸಾಡುವಂತೆ ಆಗುತ್ತಿದೆ!" ಎಂದು ಗಾಬರಿಪಟ್ಟರು. ಆಗ ನನ್ನ ಮಗ "ಅಜ್ಜಾ-ಏಕೆ ಭಯ? ಯಾತರ ಭಯ? ಏಕೆ ಪ್ರಾಣದ ಮಮತೆ? ಎಂದಾದರೂ ಮನುಷ್ಯ ದೇಹ ಬಿಟ್ಟು ಹೋಗಲೇ ಬೇಕಲ್ಲವೇ? ನೀನಾದರೂ ನಿನ್ನ ವಯಸ್ಸಿನಲ್ಲಿ ಈ ಸತ್ಯಕ್ಕೆ ತಯಾರಾಗಿರಬೇಕಲ್ಲವೇ?" ಎಂದಾಗ ಅವರು "ಹೌದು-ನಿಜ-ಆದರೆ ನನ್ನ ಮನಸ್ಸು ಮರಣಕ್ಕೆ ಇನ್ನೂ ತಯಾರಾಗಿಲ್ಲ' ಎಂದರಂತೆ. ಆ ಮೇಲಿಂದ ಅವರು ನಮ್ಮಲ್ಲಿದ್ದ "The Tibetan Book of the Dead" ಓದಲು ಆರಂಭಮಾಡಿದರು. ಬೊಂಬಾಯಿಗೆ ವಿಮಾನದಲ್ಲಿ ಹಾರಿ ಮಗನ ಮನೆ ಸೇರಿದರು. ಅಂದು ಹೋದವರು ಮತ್ತೆ ಮಗನ ಮನೆ ಬಿಡಲಿಲ್ಲ.

ಅಪ್ಪನ ಕೊನೆಯ ಐದಾರು ವರುಷಗಳು

ತಾನಾಯಿತು–ತನ್ನ ಓದು ಬರಹ ಆಯಿತು. T. V, Radio ಉಪಯೋಗವಾಯಿತು. ಬಂದವರೊಡನೆ ಶಾಂತಚಿತ್ತ ಮಂದಹಾಸದ ಅವರ ಸ್ನೇಹದ ಸಹವಾಸ. ತನ್ನ ದಿನ ನಿತ್ಯದ Diary ಯನ್ನು ತಪ್ಪದೆ ಬರೆಯುತ್ತಿದ್ದರು. ಯಾರ ಹುಟ್ಟು ಹಬ್ಬ ಯಾರ ಮದುವೆಯ ವಾರ್ಷಿಕೋತ್ಸವ ಇತ್ಯಾದಿ ಎಲ್ಲವನ್ನು Diary ಯಲ್ಲಿ ಗುರುತು ಹಾಕಿಕೊಂಡು ಆಯಾ ದಿನಕ್ಕೆ ಸರಿಯಾಗಿ ಆಯಾ ಸಂಬಂಧಿಕರಿಗೆ ಮಮತೆಯ ಆಶೀರ್ವಾದ ಪೂರ್ವಕ ಪತ್ರಗಳನ್ನು ವರ್ಷ ವರ್ಷವೂ ಕಳುಹಿಸುತ್ತಿದ್ದರು. ಒಮ್ಮೊಮ್ಮೆ ಮಕ್ಕಳಿಗೆ-ಮರಿ ಮಕ್ಕಳಿಗೆ ಪ್ರಿಯವಾದ ವಾರ ಪತ್ರಿಕೆಗಳನ್ನೋ ಮಾಸಿಕಗಳನ್ನೋ ಚಂದಾ ಹಣ ಕಳಿಸಿ ಹುಟ್ಟು ಹಬ್ಬದ ಉಡುಗೊರೆಯಾಗಿ ವರ್ಷವಿಡೀ ಮನೆ ಸೇರುವಂತೆ ಏರ್ಪಾಟು ಮಾಡುತ್ತಿದ್ದರು. ಮರಿ ಮಕ್ಕಳಿಗಂತೂ ಅವರು ಬರೆಯುತ್ತಿದ್ದ ಪತ್ರಗಳು ಅಮೂಲ್ಯವಾದುವು. ನನ್ನ ಮೊಮ್ಮಗಳಿಗೆ ದಿನ ಪತ್ರಿಕೆಗಳಲ್ಲಿನ Comics-Skits, Cortoons ಎಲ್ಲಾ ಒಟ್ಟುಗೂಡಿಸಿ ಮಕ್ಕಳ ಪುಟಗಳನ್ನು ಜೋಪಾನವಾಗಿ ಕಾದಿರಿಸಿ, ಕತ್ತರಿಸಿ ಕಳುಹಿಸುತ್ತಿದ್ದರು. ಪರಲೋಕ ಯಾತ್ರೆ ಕೈಕೊಳ್ಳುವ ಒಂದೇ ಒಂದು ವಾರದ ಮುಂದೆ ನನ್ನ ಮೊಮ್ಮಗನಿಗೆ ಒಂದು Limerick ಕಳಿಸಿ ಸಂತೋಷ ಪಡಿಸಿದ್ದರು. ಪ್ರತಿಯೊಬ್ಬರ ಮನಸ್ಸನ್ನು ಅರಿತು ವ್ಯವಹರಿಸುವ ಚಾತುರ್ಯ, ಆತ್ಮೀಯತೆ, ಮಮತೆ ಅವರ ಹೃದಯ ತುಂಬಿತ್ತು. Capital Letters ನಲ್ಲಿ ಮುದ್ದು ಮುದ್ದಾದ ಅಕ್ಷರಗಳನ್ನು ಬರೆದು ಮಗುವು ಸುಲಭವಾಗಿ ಓದುವಂತೆ ಇತ್ತು. ಮಗು ಅರ್ಜುನನ Thanking Letter ಅವನಿಗೆ ಸೇರುವ ಮುಂಚೆಯೇ ಅವರು ಸ್ವರ್ಗಸ್ಥರಾಗಿದ್ದರು!

ಇತ್ತೀಚೆ ವರುಷಗಳು ಸಮೀಪಿಸುತ್ತಿ ಅವರ ಕಣ್ಣು ದೃಷ್ಟಿ ಮಂದವಾಗುತ್ತ ಬಂದಿತ್ತು. “Cataract ಬಂದಿದೆ” ಎಂದರು ವೈದ್ಯರು. ಓದಲಾರದೆ ಇರುವ ಅವರ ಬಗೆ ನಮಗೆ ನೋಡಲಾಗುತ್ತಿರಲಿಲ್ಲ. ಹೇಳಿದುದನು ಬಿಟ್ಟರೆ ಏನು ಹೇಳಲು ಸಾಧ್ಯ ? T. V. ನೋಡುವುದು, Radio News ಕೇಳುವುದು ಅವರ ನಿತ್ಯದ ಹವ್ಯಾಸ ಆಗಿತ್ತು. ಈ ಎರಡು ಪ್ರಸಾರ ಯಂತ್ರಗಳಿಂದ ಬರುವಂತಹ ವಿಶಾಲ ಜಾಗತಿಕ ದೈನಂದಿನ ವಾರ್ತೆ ಇತ್ಯಾದಿಗಳನ್ನು ಮನಗೂಡಿಸಿಕೊಳ್ಳುತ್ತಿದ್ದರು. ಮನೆಯ ದೇವರ ಶಿರಸ್ಸಿನ ಮೇಲೆ ಹೂ ಮುಡಿಸಲು ಮರೆತರೂ T. V. ಮತ್ತು Radio ವಾರ್ತಾ ಪ್ರಸಾರ ತಪ್ಪಿಸಿಕೊಳ್ಳುತ್ತಿರಲಿಲ್ಲ! T. V. ಯಲ್ಲಿಯ ವಿವಿಧ ವಿಷಯಗಳನ್ನು ನೋಡುವುದು–ಅವನ್ನು ಟೀಕಿಸುವುದು ದಿನ ನಿತ್ಯದ ಚರ್ಚೆಯಾಗಿತ್ತು. ಕಾರ್ಯಕ್ರಮಗಳನ್ನು ನೋಡಲೇ ಬೇಕು. ಚೆನ್ನಾಗಿದ್ದರೆ ಮೆಚ್ಚುವರು. ಇಲ್ಲದಿದ್ದರೆ ಬಾಯಿ ತುಂಬಾ ಬಯ್ಯುತ್ತಿದ್ದರು.

ಇದೇ ಅವಧಿಯಲ್ಲಿ ಅವರ ಮೊಮ್ಮಗನಿಗೆ ಅಮೆರಿಕದಲ್ಲಿರುವ ಮಗನ ಮಗನಿಗೆ ಹೆಣ್ಣು ಮಗುವಾಯಿತು. ಪಡುಕೋಣೆ ಕುಟುಂಬದಲ್ಲಿ ನಾಲ್ಕನೆಯ ಪೀಳಿಗೆಯನ್ನು ನೋಡುವ ಸುವರ್ಣ ಸಂದರ್ಭ ಬರುವುದು ತಲಾಂತರದಿಂದ ನಡೆದು ಬಂದ ರೂಢಿ. ಆ ಪ್ರಕಾರ ಅಪ್ಪನ ಜೀವಮಾನದಲ್ಲೂ ಈ ಅವಕಾಶ ಬಂತು. ಆದರೆ ಅದು ಗಂಡಾಗಿದ್ದರೆ ಕನಕಾಭಿಷೇಕ ಇತ್ಯಾದಿ ಶಾಸ್ತ್ರೋಕ್ತ ಕಾರ್ಯಕ್ರಮಗಳು ಜರುಗಬೇಕಾಗಿತ್ತು. ಅದು ಹೆಣ್ಣು ಮಗು. ಮುತ್ತಜ್ಜನಿಗೆ ತೋರಿಸಲು ಭಾರತಕ್ಕೆ ಬಂದರು. ಆದರೂ ಅವರು ಆ ಮಗುವಿನ ದರ್ಶನ ಪಡೆಯುವುದಕ್ಕೆ ಮುಂಚೆ ತಾನು ಮಾಡಬೇಕಾಗಿದ್ದ ಸತ್ಕಾರ್ಯವನ್ನೆಲ್ಲ ಮಾಡಿ ಕನಕಾಭಿಷೇಕವನ್ನು ಮಾಡಿದರು. ಈಗಿನ ಕಾಲದಲ್ಲಿ ಹೆಣ್ಣಿಗೂ ಗಂಡಿಗೂ ವ್ಯತ್ಯಾಸವಿಲ್ಲ ಎಂಬ ನಂಬಿಕೆಯಿಂದ ಮೊಮ್ಮಗ ಮೈತ್ರೇಯನು ಪ್ರೇಮದಿಂದ “ಅಜ್ಜಾ–ಗಂಡು ಹುಟ್ಟಲಿಲ್ಲವೆಂದು ಬೇಸರಪಟ್ಟಿಲ್ಲವಷ್ಟೇ? ಶೀಘ್ರವಲ್ಲಿಯೇ ನನ್ನ ಗಂಡು ಮಗುವನ್ನು ನಿನ್ನ ಮಡಿಲಿನಲ್ಲಿ ಹಾಕುವೆ-ಆಯುಷ್ಮಂತರಾಗಿ ಬಾಳಿ!” ಎಂದಾಗ ಅಪ್ಪನಿಗೆ ಆದ ಹರುಷ ಹೇಳತೀರದು! ಹೆಣ್ಣು ಮಕ್ಕಳ ಕಡೆಯಿಂದ ಇಷ್ಟರಲ್ಲೇ ಅವರಿಗೆ ಹಲವಾರು ಮರಿ ಮಕ್ಕಳು ಹರುಷ ತಂದಿದ್ದರು. (ಮೊಮ್ಮಕ್ಕಳಲ್ಲಿ 7 ಗಂಡು 2 ಹೆಣ್ಣು-ಮರಿಮಕ್ಕಳಲ್ಲಿ 5 ಗಂಡು 4 ಹೆಣ್ಣು) ಆದರೂ ಪಡುಕೋಣೆ ಕುಟುಂಬದ ಕುಡಿಯೆಂದರೆ ಅದೊಂದು ವಿಶೇಷ ಅನುಗ್ರಹವಲ್ಲವೇ ?

ಅಪ್ಪನ ಕೊನೆಯ ಸಾರ್ವಜನಿಕ ಮಹತ್ವದ ಕಾರ್ಯವೆಂದರೆ ಬೆಂಗಳೂರಿನಲ್ಲಿ S. V. C. Bank ನ Platinum Jubilee ಸಂದರ್ಭದಲ್ಲಿ ಆ Bank ನವರು ಪ್ರಕಟಿಸಿದ್ದ Souvenir ನ್ನು ಬಿಡುಗಡೆ ಮಾಡಲು ಅವರಿಗೆ ವಹಿಸಿ

(94ನೇ ಪುಟ ನೋಡಿ)

ಪ. ರಮಾನಂದರಾಯರ ಸಾಹಿತ್ಯ ಸೇವೆ

ನವೀನ ದೃಷ್ಟಿಯ ವಿಶಿಷ್ಟ ಕೃತಿ

ದ. ರಾ. ಬೇಂದ್ರೆ

ಕನ್ನಡದಲ್ಲಿ ವಿನೋದಕರವಾದ ಬರವಣಿಗೆಯು ತೀರ ಕಡಿಮೆ. ಇತ್ತೀಚೆ ಅದು ಪತ್ರಿಕೆಗಳಲ್ಲಿ ವಿವಿಧವಾಗಿ ತಲೆದೋರುತ್ತಿದೆ. ಆದರೆ ಅದರ ಉದಯಾಸ್ತಗಳು ಪತ್ರಿಕೆಗಳ ಆಕಾಶದಲ್ಲಿಯೆ ಉಳಿದುಕೊಂಡಿವೆ. ಕ್ಷಣಿಕ ರಂಜನೆಗೆ ಹುಟ್ಟಿದ ಬರೆಹಗಳು ಒಮ್ಮೆ ಸೀಪಿ ಒಗೆವ ಕಿತ್ತಳೆಯ ತೊಳೆಯಂತೆ ಒಮ್ಮೆ ಓದಿದ ಮೇಲೆ ನಿಃಸಾರವೆಂದು ಬಗೆಯಲಾಗುವದು. ನಗೆಬರೆಹಗಳಲ್ಲಿ ಚಂದ್ರನಂಥ ಒಂದು ಗುಣವಿದೆ. ದೇವತೆಗಳು ರಸ ಕುಡಿದು ಬಿಡುವ ಕೃಷ್ಣಪಕ್ಷವಿದೆ : ಆದರೆ ಮತ್ತೆ ರಸದುಂಬಿಕೊಳ್ಳುವ ಶುಕ್ಲಪಕ್ಷವೂ ಅದಕ್ಕಿದೆ. ವಿನೋದಸಾಹಿತ್ಯವು ದಿನಬಳಕೆಯಿಂದ ಸಾರಹೀನವಾದರೂ ಕೆಲದಿನಗಳನಂತರದಲ್ಲಿ ಮತ್ತೆ ರಸವತ್ತಾಗುವದು. ಇಂಥ ಬರವಣಿಗೆಗಳು ಪುಸ್ತಕರೂಪದಲ್ಲಿ ಬಂದರೆ ವಿರಾಮಕಾಲವನ್ನು ಉಲ್ಲಾಸದಲ್ಲಿ ಕಳೆಯಲು ಅನುಕೂಲವಾಗುವದು. ಶ್ರೀ. ಪ. ರಮಾನಂದರಾಯರ ಲೇಖನಗಳು ಸಂಗ್ರಹಣೀಯವಾಗಿರುವವಾಗಿ ಅವುಗಳನ್ನೋದಿದವರು ಯಾರೂ ಒಪ್ಪಬಹುದು.

ಅನೇಕ ಇಂಗ್ಲಿಷ, ಅಮೇರಿಕನ್ ಗ್ರಂಥಕರ್ತರ ಛಾಯೆಯು ತಮ್ಮ ಕೃತಿಗಳಲ್ಲಿ ಕಾಣಬಹುದಾಗಿ ಗ್ರಂಥಕರ್ತರೆ ಸೂಚಿಸಿದ್ದಾರೆ. ಆ ಮೂಲಗಳ ಬದಿಬದಿಗೆ ಈ ಕೃತಿಗಳು ಅಷ್ಟು ಪ್ರಭಾವಶಾಲಿಗಳಾಗಿ ತೋರಲಿಕ್ಕಿಲ್ಲ. ಆದರೆ ಪ್ರತಿ ಕೃತಿಗಳೆಂದು ಭಾವಿಸದೆ ಇವುಗಳನ್ನೂ ಕೃತಿಗಳೆಂದೆ ಭಾವಿಸಿದರೆ ಮೆಚ್ಚುಗೆಗೆ ಇವುಗಳಲ್ಲಿಯೂ ಅವಕಾಶ ಉಂಟು. ‘ಶ್ರೀನಿವಾಸನ ಅಕೃತ್ಯ’ವು ಸುಕೃತ್ಯವಾಗಿ ತೋರಲಿಕ್ಕಿಲ್ಲ; ‘ವಿಮೋಚನೆ’ಯ ಪ್ರಾರಂಭದ ಭಾಗವು ವಿಮೋಚನೆಗೆ ಯೋಗ್ಯವಾಗಿ ತೋರಬಹುದು; ‘ಪತ್ತೇದಾರನಾದ ಸೂಕ್ಷ್ಮಬುದ್ಧಿಯು, ಪತ್ತೇದಾರನ ಸೂಕ್ಷ್ಮಬುದ್ಧಿಯಂತೆಯೆ ಕಿರುಕುಳ ಕಾಟವಾಗಿ ಎನಿಸೀತು; ‘ಚಿಕ್ಕರಾಮುವು ಅಜ್ಜಿಗೆ ಹೇಳಿದ ಕಥೆಯು’ ಕೆಲವರಿಗೆ ತೀರ ಹುಡುಗಬುದ್ಧಿಯ ಹುಡುಗಾಟಿಕೆಯಾಗಿ ಕಂಡೀತು : ಆದರೆ ನೋಡಬೇಕಾದ ರೀತಿಯಲ್ಲಿ ನೋಡಿದರೆ ಅಲ್ಲಿಯೂ ಸ್ವಾರಸ್ಯವು ತೋರದಿರಲಾರದು. ಏನಿದ್ದರೂ ಶ್ರೀ. ಪ. ರಮಾನಂದರಾಯರ, ಪರಮಾನಂದಕರವಾದ ಈ ಬರೆಹಗಳು ಕೇವಲ ಪ್ರಯೋಗಗಳು ಎಂದು ಯಾರೂ ಒಪ್ಪಲಾರರು. ಅಲ್ಲಿಯ ನಗೆಯಲ್ಲಿ ಹೊಸತನವಿದೆ ; ನವೀನ ದೃಷ್ಟಿಯಿದೆ, ಶೈಲಿಯಲ್ಲಿ ಹಿಡಿತವಿದೆ.

ನಗೆಯು ಬೆಳದಿಂಗಳಿನಂತೆ ಸೌಮ್ಯವೂ ಆಲ್ಹಾದಕರವೂ ಇದ್ದರೂ ತಲೆಗೇರಿದರೆ ಹುಚ್ಚು ಹಿಡಿಸಿಬಿಡುವದು. ಆ ನಗೆಯ ಹುಚ್ಚುಬೆಳದಿಂಗಳನ್ನು ಶ್ರೀ. ಪ. ರಮಾ

ನುವರಾಯರು ಚೆನ್ನಾಗಿ ಅನುಭವಿಸಿದ್ದಾರೆ. ಅಂಥ ಹುಚ್ಚಿನಲ್ಲಿ ಹೊಳೆಯುವ ಹಾಸ್ಯೋಕ್ತಿಗಳು ಬಾಣಗಳಂತೆ ಎದೆಯಲ್ಲಿ ನಾಟಿ ನಿಂತರೂ ಹೂವಿನಂತೆ ಮೃದು ಸ್ಪರ್ಶದಿಂದ ಮರುಳುಗೊಳಿಸುವವು. ಅಂಥ ಹೂಬಾಣಗಳನ್ನು ಅವರು ಅನೇಕಾನೇಕವಾಗಿ ಎಸೆದಿದ್ದಾರೆ. ಅವರ ಬತ್ತಳಿಕೆಯಲ್ಲಿ ಹತ್ತು ದಿಕ್ಕಿನ ಅಸ್ತ್ರಗಳಿವೆ. ಒಂದೊಂದರಲ್ಲಿಯೂ ಒಂದೊಂದು ಬಗೆಯ ಮೋದಕ, ಮಾದಕ, ಆಲ್ಹಾದಕ, ಚೋದಕ ಶಕ್ತಿಯಿದೆ. ಕೇವಲ ಪತ್ರಿಕೆಗಳಲ್ಲಿಯೇ ಬರೆದು ಬಿಸಾಡಿಬಿಡಬಹುದೆಂದು ಅವರು ತಿಳಿದಿದ್ದ ಈ ಬರೆಹಗಳನ್ನು ಸಂಗ್ರಹಿಸುವ ಮೂಲಕ ‘ಮನೋಹರ ಗ್ರಂಥಮಾಲೆಯವರು ‘ಶ್ರೀಯುತರು ಉತ್ತಮ ವಿನೋದಲೇಖನಗಳನ್ನು ಬರೆಯಲು ಅರ್ಹತೆಯಿದ್ದೂ ಮತ್ತೆ ಬರೆಯದೆ ಇಷ್ಟು ದಿವಸ ಸುಮ್ಮನಿದ್ದದ್ದು ತಪ್ಪೆಂದು ಜಾಹೀರು ಮಾಡಿದ್ದಾರೆಂದು ನಾನು ತಿಳಿಯುತ್ತೇನೆ. ಈ ನೋಟೀಸಿನ ಮೂಲಕ ಎಚ್ಚರಾಗಿ ಅವರು ಹೊಸ ವಿನೋದಲೇಖನಗಳನ್ನು ಬರೆಯದಿದ್ದರೂ, ತಮ್ಮ ವಿನೋದದ ಮರ್ಮವನ್ನು ಬೆಳಗುವ ಶ್ರೀ. ಮುಕುಂದರಾಯರ ಚಿತ್ರಕೃತಿಗಳ ಜೊತೆದೊರೆಯು ಬೇಕೆಂದಾದರೂ ಅವರು ಲೇಖನ ವ್ಯವಸಾಯವನ್ನು ಮುಂದುವರಿಸುವರೆಂದು ನಾನು ನಂಬಿದ್ದೇನೆ.

ಈ ಬರೆಹಗಳಲ್ಲಿ ನವರಸಪ್ರೌಢಿಯಿದೆ. ಎಲ್ಲ ರುಚಿಗಳಿಗೂ ಅಲ್ಪಸ್ವಲ್ಪ ಆಹಾರವಿದೆ. ಯಾವ ಭಾವವನ್ನೂ ಉನ್ಮಾದಕರವಾಗಿ ಬೆಳೆಸಿಕೊಂಡು ಹೋಗುವ ಹಿಡಿತವು ಇಲ್ಲಿಯ ಶೈಲಿಯಲ್ಲಿದೆ. ಕನ್ನಡ ವಾಚಕರಿಗೆ ಇಲ್ಲಿಯ ವಿನೋದದಿಂದಾದರು ಕೆಲಕಾಲವನ್ನು ಸುಖವಾಗಿ ನಗೆಯಲ್ಲಿ ಕಳೆಯಲು ಅನುಕೂಲವಾದರೆ ಬರೆಹಗಳಿಗೆ ಕೃತಾರ್ಥತೆ ಬಂತು.

ಶ್ರೀನಿವಾಸನ ಅಕೃತ್ಯದ ಚರಿತ್ರೆಯನ್ನು ನಿಮಗೆ ಹೇಳಿ ಮುಗಿಸಿದ್ದಾಯಿತು. ಆದರೆ ನನ್ನ ಮನಸ್ಸಿನಲ್ಲಿದ್ದುದನ್ನು ನಿಜವಾಗಿ ಹೇಳುವುದಾದರೆ ಅವನ ಅಕೃತ್ಯ ಅವನು ಗುಲಾಬಿಯನ್ನು ಚುಂಬಿಸಿದ್ದುದರಲ್ಲಿಲ್ಲ; ಗೋವರ್ಧನರಾಯರಂದಂತೆ ಅದೇನು ಪಂಚಮಹಾಪಾತಕವೇ? ಕಣ್ಣನ್ನನನ್ನು ಕೋಪಾಗ್ನಿಯಿಂದ ತನ್ನ ಕೊಠಡಿಯಿಂದ ಹೊರಗೆ ಒದೆದುದರಲ್ಲಿಯೂ ಶ್ರೀನಿವಾಸನ ಅಕೃತ್ಯವಿರಲಿಲ್ಲ. ನಿಶ್ಚಯತಾಂಬೂಲದಂತಹ ತಿರುಳಿಲ್ಲದ ಕಥೆಯನ್ನು ‘ವೀರಕೇಸರಿ’ಯಲ್ಲಿ ಪ್ರಕಟವಾಗುವಂತೆ ಬರೆದು ನಮ್ಮ ಬಡವಾಚಕ ವೃಂದವನ್ನು ಪೀಡಿಸಿದುದೇ ಅವನ ಅತಿದೊಡ್ಡ ಅಕೃತ್ಯವೆಂದು ನನ್ನ ಮತ. ಆದರೆ ನಿಮ್ಮ ಅಭಿಪ್ರಾಯ ಬೇರೆ ಇರಬಹುದು.

(ಹೂಬಾಣಗಳು)

ಮರೆಯಬಾರದ ಪುಸ್ತಕ

ಎಸ್. ರಾಮಚಂದ್ರ

“ನಕ್ಕು ನಗಿಸುವಾ ನುಡಿ ಲೇಸು” ಎಂದ ಪ್ರಾಚೀನ ಕವಿ ಸರ್ವಜ್ಞ. “ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ”ವೆಂದು ಸಾರಿದರು ಅರ್ವಾಚೀನ ಡಿ.ವಿ.ಜಿ. ನಿತ್ಯ ಜೀವನದ ನೋವು ಸುಲಿತಗಳನ್ನು ಮರೆತು ಕಳೆಯುವುದಕ್ಕೆ ನಗೆಯಂತಹ ಭೇಷಜ ಬೇರೊಂದಿಲ್ಲ ಎಂಬುದನ್ನು ಜನ ಎಂದೋ ಕಂಡುಕೊಂಡಿದ್ದರು. ‘Laugh and be fat’ ಎಂಬುದು ಸುಪ್ರಸಿದ್ಧ ಆಂಗ್ಲ ಸೂಕ್ತಿ. ಅಲೆಕ್ಸಾಂಡರ್ ಸ್ವಿಫ್ಟನ ಅಭಿಮತದಂತೆ ಆರೋಗ್ಯ ಪ್ರದಾಯಕ ವೈದ್ಯತ್ರಯದಲ್ಲಿ ‘Doctor Marryman’ (ವಿನೋದಶೀಲ) ಒಬ್ಬ. ತ್ರಿಮೂರ್ತಿಗಳ ಮುಖಾರವಿಂದದಲ್ಲೂ ಹಾಸ್ಯದ ಮಕರಂದವನ್ನು ಕಂಡುಕೊಂಡಿದ್ದಾರೆ ನಮ್ಮ ಕವಿಗಳು. ನಗೆಯ ಸಾರ್ವತ್ರಿಕತೆ, ಸಾರ್ವದೇಶಿಕತೆಗಳ ಬಗ್ಗೆ ಹೆಚ್ಚು ಹೇಳಬೇಕಿಲ್ಲ.

ಹೀಗಿದ್ದರೂ “ಭಾರತೀಯರ ಮುಖಕ್ಕೆ ನಗೆಯ ಪರಿಚಯವಿಲ್ಲ” ಎಂಬ ಅಪವಾದವಿರುವುದು ಎಂತಹ ವಿಪರ್ಯಾಸ! ಆದರೆ ಈ ಆರೋಪ ಸಾಹಿತ್ಯಕ್ಕೆ ಸಂಬಂಧಿಸಿದುದೇ ವಿನಾ ಜನಜೀವನಕ್ಕಲ್ಲ. ಜೀವನದಲ್ಲಿ ಸರ್ವವ್ಯಾಪಿಯಾದ ಹಾಸ್ಯ ಸಾಹಿತ್ಯದಲ್ಲಿ ಏಕೆ ಸ್ಥಾನಗಳಿಸಲಿಲ್ಲ ಎಂಬುದು ಒಂದು ನಿಗೂಢ ರಹಸ್ಯವೇ ಸರಿ. ನಮ್ಮ ಕಾವ್ಯ ತತ್ವಜ್ಞರು ಎಂಟೋ-ಒಂಬತ್ತೋ ರಸಗಳಲ್ಲಿ “ಹಾಸ್ಯ”ವೂ ಒಂದೆಂದು, ಹೆಸರಿಸಿ, ಅದರ ನಾನಾ ಪ್ರಭೇದಗಳನ್ನು ಸ್ಮಿತ, ಹಸಿತ, ವಿಹಸಿತ, ಉಪಹಸಿತ, ಅಪಹಸಿತ, ಅತಿಹಸಿತ ಹೀಗೆಂದು ಪಟ್ಟಿಮಾಡಿ ವಿವರಿಸಿದ್ದಾರೆ. ಸಾಲದುದಕ್ಕೆ “ಅಂತಃಸ್ಮಿತ”, “ಕೋಪಗರ್ಭ ಸ್ಮಿತ” ಮುಂತಾದುವೂ ಕಾಲಾಂತರದಲ್ಲಿ ಪಟ್ಟಿಯನು ಸೇರಿಕೊಂಡಿವೆ. ಇಷ್ಟೊಂದು ಸೂಕ್ಷ್ಮವಾಗಿ ಹಾಸ್ಯರಸ ವಿವೇಚನೆ ಮಾಡಿರುವ ನಮ್ಮ ಜನ ಅದೇಕೆ ಹಾಸ್ಯರಸ ಸೃಷ್ಟಿ ಮಾಡದೆ ಸಾಹಿತ್ಯ ಕ್ಷೇತ್ರವನ್ನು ಗಾರುಗಟ್ಟಿಸಿದರೋ ಹೇಳಲಾಗದು.

ಭಾರತೀಯ ದೇಶಭಾಷಾ ಸಾಹಿತ್ಯಗಳ ಮಾತು ಹಾಗಿರಲಿ, ಅವೆಲ್ಲಕ್ಕೂ ಮಾತೃಕಾಪ್ರಾಯವಾಗಿ, ವೈವಿಧ್ಯ-ವೈಪುಲ್ಯಗಳಲ್ಲಿ ಅನ್ಯಾದೃಶವೆಂಬಂತಿರುವ ಸಂಸ್ಕೃತದಲ್ಲೇ ಹಾಸ್ಯವು ಅಲ್ಲಿ-ಇಲ್ಲಿ ತೊಟ್ಟಿಕ್ಕುತ್ತಿದೆಯೇ ವಿನಾ ಎಲ್ಲೂ ನಿರ್ಝರವಾಗಿ ಹರಿದದ್ದಿಲ್ಲ. ವಾಲ್ಮೀಕಿ-ವ್ಯಾಸಾದಿ ಮಹಾಕವಿಗಳಲ್ಲೂ, ಭಾಸ-ಕಾಳಿದಾಸಾದಿ ನಾಟಕಕಾರರಲ್ಲೂ ನಗೆ ಮಿಂಚು ಒಮ್ಮೊಮ್ಮೆ ಸುಳಿಯುವುದನ್ನಷ್ಟೇ ಕಾಣಬಹುದು. ಈ ಕೆಲವು ಕವಿ–ಕಾವ್ಯ ಪ್ರಸಂಗಗಳನ್ನು ಬಿಟ್ಟರೆ ಮಿಕ್ಕೆಡೆಗಳಲ್ಲಿ ಕಂಡುಬರುವ ಹಾಸ್ಯವಾದರೂ

ಎಂತಹದು?- ಅದು ಮಲ್ಲಿಗೆಯ ಘಮವಲ್ಲ, ಉಳ್ಳಾಗಡ್ಡೆಯ ಘಾಟು! ಮೂಗು ಮುಚ್ಚಿಕೊಳ್ಳೋಣ ಎಂಬಷ್ಟು ಅಸಭ್ಯವಾದದ್ದು. “ಕಾವ್ಯೇಷು ರಮ್ಯ’ ವಾದ ನಾಟಕಗಳಲ್ಲಿ ಹೊಟ್ಟೆಯುಳಿದುಕೊಂಡು ತೆವಳಾಡುವ ತಿಂಡಿ ಬಾಕ ವಿದೂಷಕ-ಅವನ ಸಿಪ್ಪೆ, ಗೊರಕೆ,ಅಸಂಬದ್ಧ ಜಲ್ಪಗಳಲ್ಲೇ ಹಾಸ್ಯದ ಪರಮಾವಧಿ ಸಮಾಧಿ! ಅಪವಾದ ವೆಂಬಂತೆ ಶೂದ್ರಕನೊಬ್ಬ “ಮೃಚ್ಛಕಟಿಕ’ ಪ್ರಕರಣದಲ್ಲಿ ನಿರ್ಮಲ ಹಾಸ್ಯಕ್ಕೆ ಪಟ್ಟವಣೆ ಯನ್ನುಕೊಟ್ಟ. ಇನ್ನು ಹಳೆಕನ್ನಡ ಸಾಹಿತ್ಯವನ್ನು ಪಿಕ್ಕಿ ನೋಡಿದರೆ (ನಾಟಕವೇ ಇಲ್ಲ ವೆಂಬುದು ವಿಚಾರಣೀಯ) ಪದ್ಯ ಕಾವ್ಯಗಳಲ್ಲಿ ನಾರಣಪ್ಪನ ಉತ್ತರ ಭೂಪ, ರತ್ನಾ ಕರನ ಭರತಚಕ್ರೇಶ ವಾಚಕರಿಗೆ ಕಚಗುಳಿಯಿಡುತ್ತಾರೆ. ಹಳಬರಲ್ಲಿ ಕೊನೆಯವ ನಾಗಿ, ಹೊಸಬರಲ್ಲಿ ಮೊದಲಿಗನಾದ ಮುದ್ದಣ ಹಾಸ್ಯದ ಒಳ-ಹೊರಗುಗಳನ್ನು ಚೆನ್ನಾಗಿ ಬಲ್ಲ ‘ನಗಿಸಾಳ್ವನೀ ಮನ’!-ಅವನ ಹಿಂದೆಯೇ ಹೊಸಗನ್ನಡ ಹುಟ್ಟಿತು, ಜತೆಯಲ್ಲಿ ನಗೆಗಾರಿಕೆಯೂ ಬೆಳೆಯಿತು.

ಹಳೆಗನ್ನಡದಲ್ಲಿ ವಾಮನನಾಗಿದ್ದ ಹಾಸ್ಯಮೂರ್ತಿ ಆಧುನಿಕ ಸಾಹಿತ್ಯದಲ್ಲಿ ತ್ರಿವಿಕ್ರಮ ನಾಗಿರುವುದನ್ನು ಕಾಣುತ್ತೇವೆ. ಸಣ್ಣಕತೆ, ಕಾದಂಬರಿಗಳಲ್ಲಿ, ನಾಟಕಗಳಲ್ಲಿ, ವ್ಯಂಗ್ಯ-ವಿಡಂಬನೆಗಳಲ್ಲಿ, ಲಘು ಪ್ರಬಂಧಗಳಲ್ಲಿ, ಕವಿತೆಗಳಲ್ಲಿ, ಪತ್ರಿಕೆಗಳಲ್ಲಿ ಹೀಗೆ ಸರ್ವವ್ಯಾಪಿಯಾಗಿದೆ ಹಾಸ್ಯ. ನಗೆಗೇ ಮೀಸಲಾದ ‘ಕೊರವಂಜಿ’ಯಂತಹ ಪತ್ರಿಕೆ ಎರಡು ದಶಕಗಳಷ್ಟು ಕಾಲ ಜನಕ್ಕೆ ಮಂತ್ರ ಹಾಕಿ, ಕಾಡಿಗೆ ಓಡಿ ಹೋದದ್ದು ಮಾತ್ರ ಶೋಚನೀಯ. ವಿಕಟ ವಿನೋದಿನಿ-ವಿನೋದಗಳಂತಹ ಪತ್ರಿಕೆಗಳೂ ಕನ್ನಡದಲ್ಲಿ ಹಾಸ್ಯವು ಹಬ್ಬಿ ಹರಿಯಲು ಯಥಾಶಕ್ತಿ ಶ್ರಮಿಸಿವೆ. ಇಪ್ಪತ್ತೈದು ವರ್ಷಗಳಷ್ಟು ಹಿಂದೆ ಪ್ರಸಿದ್ಧವಾದ, ಅದಕ್ಕಿಂತಲೂ ಹಿಂದೆಯೇ ಸಿದ್ಧವಾಗಿದ್ದ ಪಡುಕೋಣೆ ರಮಾನಂದರಾಯರ ‘ಹೂಬಾಣ’ಗಳು ಕನ್ನಡದಲ್ಲಿ ಮರೆಯಲಾಗ ದೊಂದು ಹಾಸ್ಯಕೃತಿ. ಅದರ ಪರಿಚಯ ಈ ಲೇಖನದ ಉದ್ದೇಶ.

‘ಹುಚ್ಚು ಬೆಳದಿಂಗಳ ಹೂಬಾಣಗಳು’ (ಪುಸ್ತಕದ ಇಡಿಯ ಹೆಸರು) ಹದಿನಾಲ್ಕು ಪ್ರಬಂಧಗಳ ಒಂದು ಬತ್ತಳಿಕೆ. ಬತ್ತಳಿಕೆಯ ಬಾಣಗಳಲ್ಲಿ ಎಲ್ಲವುಗಳ ಮೊನೆಗೂ ಸವರಿದ ನಗೆಯ ಲೇಪ ಒಂದೇ ಪ್ರಮಾಣದಲ್ಲಿದೆ ಎನ್ನಲಾಗದು. ಕೊಡೆಯ ವಿಚಾರ, ಹರಿಕಮತನ ನೆನಪು, ಚಿಕ್ಕರಾಮು ಅಜ್ಜಿಗೆ ಹೇಳಿದ ಕಥೆ, ನನ್ನ ಭಾವ, ಅಂಕು ಡೊಂಕು ಸಂಕಪಾಲ, ಪತ್ತೇದಾರನಾದ ಸೂಕ್ಷ್ಮಬುದ್ಧಿ, ನಾನು, ನಾಗಣ್ಣ. ಈ ಏಳು ಮಾತ್ರ ಶುದ್ಧಾಂಗವಾಗಿ ಹಾಸ್ಯ ಪ್ರಬಂಧಗಳು. ಉಳಿದ ಏಳರಲ್ಲಿ ಅಷ್ಟಿಷ್ಟು ನಗೆಯ ತುಂತುರುಗಳಿದ್ದರೂ ಅವು ಕಥಾಂಶ ಪ್ರಧಾನ. ಹಾಗೆಯೇ ಹಾಸ್ಯಾತ್ಮಕ ಪ್ರಬಂಧ ಗಳಲ್ಲಿ ‘ನನ್ನ ಭಾವ’ ಮಾತ್ರ ಕನ್ನಡಿಗರು ಎಂದೆಂದಿಗೂ ಮರೆಯಬಾರದ ಪ್ರಬಂಧ. ಕನ್ನಡಕ್ಕೊಬ್ಬನೆ ‘ನನ್ನ ಭಾವ’ ಎಂದರೂ ಸರಿಯೆ! ಆತ ಶೂದ್ರಕನ ಶಕಾರ,

ಕುಮಾರವ್ಯಾಸನ ಉತ್ತರಕುಮಾರ. ಶೇಕ್ಸ್‌ಪಿಯರನ ಫಾಲ್‌ಸ್ಟಾಫ್‌ನಂತೆ ಚಿರಂಜೀವಿ. ಅನಾವಶ್ಯಕ ಪ್ರಶ್ನೆ ಕೇಳಿ ಕೊರೆಯುವವರು ನಮ್ಮಲ್ಲೇನೂ ಕಡಿಮೆಯಿಲ್ಲ. ಅಂತಹ ಅಧಿಕಪ್ರಸಂಗಿಯೊಬ್ಬ "ನನ್ನ ಭಾವ" ಈ ಪ್ರಬಂಧದಲ್ಲಿ ಬರುವ ಹಾವಳಿ. ಅವಕ್ಕೆ ಲೇಖಕರು ನೀಡುವ ಉಚಿತ ಉತ್ತರ ಓದುಗರು ತುಟಿ ಬಿರಿ ನಗುವಂತೆ ಮಾಡುತ್ತವೆ. ಅವರಲ್ಲೂ ಕೊನೆ ಕೊನೆಗೆ ಲೇಖಕರು ಸೋತು ಸಹನೆ ಮೀರಿ, ಕ್ಷೌರದ ಕತ್ತಿಯನ್ನು ಭಾವನತ್ತ ಬೀಸಿ, "ಇದು....ನಿನ್ನಂಥ ಭಾವಂದಿರ ಕುತ್ತಿಗೆಯನ್ನು ಕಡಿಯುವ ಕತ್ತಿ!...." ಎಂದು ಗುಡುಗಾಡುವಾಗ ಹಲ್ಲುಕಿರಿದು, ಕಣ್ಣು ಮಿಳುಕಿಸಿ, ಕೇಳುತ್ತಿದ್ದು, ಗುಡುಗೆಲ್ಲ ನಿಂತ ಮೇಲೆ ತಣ್ಣಗೆ "ಭಾವಯ್ಯಾ, ನಿನಗೆ ಸಿಟ್ಟು ಬಂದಿದೆಯೋ?" ಎಂದು ಪ್ರಶ್ನಿಸುವಾಗಲಂತೂ ಓದುಗನ ಪಕ್ಕೆ ಬಿರಿಯುತ್ತದೆ. ಭಾವನ ಈ ಪ್ರಶ್ನೆ ಶೇಕ್ಸ್‌ಪಿಯರನ 'Look my hood, it comes' ಮುಂತಾದ ಉದ್ಗಾರಗಳಂತೆ ಸಂದರ್ಭೋಚಿತವಾಗಿ ಉದ್ಧರಣ ಯೋಗ್ಯವಾದದ್ದು.

ನಗು ತರಿಸುವ ಇನ್ನೆರಡು ಬರೆಹಗಳೆಂದರೆ 'ಹರಿಕಮತನ ನೆನಪು' ಮತ್ತು 'ಅಂಕುಡೊಂಕು ಸಂಕಪಾಲ.' "ಹೂ ಬಾಣ"ಗಳಲ್ಲಿ ಲೇಖಕರು ಸ್ಥಾಯಿಯಾದರೆ ಹರಿಕಮತ ಸಂಚಾರಿ. ಇಬ್ಬರೂ ಸೇರುವಾಗ ರಸೋತ್ಪತ್ತಿ. ಅರ್ಧಾಂಗಿನಿ ರುಕ್ಮಿಣಿ "ಬಣ್ಣದ ಬೀಸಣಿಗೆ" ಎಂಬ ಸಿನೆಮಾ ನೋಡಬೇಕೆಂದು ಬಯಸಿದುದನ್ನು ಹರಿಕಮತನು ಮರತೇ ಬಿಟ್ಟು, ಅದೇನೆಂದು ತಿಳಿಯಲು ಚಡಪಡಿಸುತ್ತಿರುವಾಗ ಮಿತ್ರ ರಮಾನಂದನು ಕಾಣಸಿಗುವುದು, ಕಮತನಿಗೆ ನೆನಪಾಗಲೆಂದು "ಬ" ಕಾರಾದಿಯಾದ ಒಂದೊಂದೇ ಶಬ್ದಗಳನ್ನು ಉಚ್ಚರಿಸಿದ ರಮಾನಂದ ಸೋತು ಬಕರಾ ಆಗುವುದು 'ಹರಿಕಮತನ ನೆನಪು' ಎಂಬ ಪ್ರಬಂಧದ ವಸ್ತು. "ಅಂಕುಡೊಂಕು ಸಂಕಪಾಲ" ಎಂಬ ಒಗಟು ಬೇತಾಳದಂತೆ ಲೇಖಕನ ಬೆನ್ನು ಹತ್ತಿ ಅದನ್ನು ಬಿಡಿಸಲಾರದೆ ಆತ ಒದ್ದಾಡುತ್ತಿರುವಾಗ ಮಿತ್ರನನ್ನು ನೋಡಲೆಂದು ಬಂದ ಹರಿಕಮತನನ್ನು ಆ ಪಿಶಾಚಿ ಹಿಡಿದುಕೊಳ್ಳುವುದೂ ತುಂಬ ರೋಚಕವಾಗಿದೆ—'ಅಂಕುಡೊಂಕು' ಸಂಕಪಾಲದಲ್ಲಿ.

ಕೊಡೆಯ ವಿಚಾರದಲ್ಲಿ ಲೇಖಕರ ವಿಚಾರವಿಲಾಸ ಕೊಡೆಯ ಬೆನ್ನೇರಿ ವಿಹರಿಸುವುದು ಸ್ವಾರಸ್ಯವಾಗಿದೆ. ಕೊಡೆಯೆಂದರೇನು ಎಂದು ಜಿಜ್ಞಾಸೆ ಮಾಡುತ್ತಾ ಅದರ ಬಣ್ಣ, ಬಟ್ಟೆ, ಗಾತ್ರ, ಕಡ್ಡಿ, ಕಾಲು ಮುಂತಾದುವನೆಲ್ಲ ವರ್ಣಿಸಿ ಕೊಡೆಗೂ ತನಗೂ 'ದೀರ್ಘಕಾಲದ ದಾಂಪತ್ಯ ಸುಖವನ್ನು' ವಿಧಾತನು ಕರುಣಿಸಲೇ ಇಲ್ಲವೆಂದು ಲೇಖಕರು ಕೊರಗುವುದಾಗಲಿ, ಸ್ವಂತದ ಕೊಡೆ ಕೈಬಿಟ್ಟು ಹೋದಾಗ ಪರರ ಕೊಡೆಗೆ ಕೈಕೊಡಬೇಕೆಂಬ ರಹಸ್ಯ ಮಂತ್ರೋಪದೇಶವಾಗಲಿ ವಿನೋದಪೂರ್ಣವಾಗಿದೆ. 'ಚಿಕ್ಕರಾಮು

ಅಜ್ಜಿಗೆ ಹೇಳಿದ ಕಥೆ" ಅಜ್ಜಿ ಕತೆಯಂತೆಯೇ ಕಲ್ಪನಾ ರಮ್ಯವಾದದ್ದು. ವಿಶೇಷತೆಯೆಂದರೆ ಅಜ್ಜಿ ಕೂಡ ನಂಬದ ಕತೆಯನ್ನು ಮೊಮ್ಮಗ ಹೇಳುವುದು! –ಚಿಕ್ಕರಾಮು ಗಿಳಿಮರಿಯನ್ನು ಹೆರುವ ಕೋಳಿ ತತ್ತಿಯನ್ನು ಸೂಜಿ ಮೊನೆಯ ಮೇಲೆ ನಿಂತು ಹುಡುಕುವುದು, ಮಾವಿನ ಮರದಲ್ಲಿ ಕಲ್ಲಂಗಡಿ ಹಣ್ಣು ಪುಷ್ಕಳವಾಗಿ ಬೆಳೆಯುವುದು, ಅಂತಹ ಒಂದು ಹಣ್ಣಿನೊಳಕ್ಕೆ ಚಿಕ್ಕರಾಮು ಹೊಕ್ಕು ಹೊರಡುವುದು ಇವೆಲ್ಲ ಚಿಕ್ಕ ಮಕ್ಕಳ ಕಿವಿ ನಿಗುರಿಸುವ ಅದ್ಭುತ ಪ್ರಸಂಗಗಳೇ ಸರಿ. "ಪತ್ತೇದಾರನ ಸೂಕ್ಷ್ಮ ಬುದ್ಧಿ" ಎಂಬುದು ಒಂದು ಕಾಲದಲ್ಲಿ ನಾಯಿಕೊಡೆಗಳಂತೆ ತಲೆಯೆತ್ತುತ್ತಿದ್ದ ಸಾಹಿತ್ಯಿಕ-ಶಿಸ್ತು, ಉಚಿತತೆ-ಸಹಜತೆಗಳಿಲ್ಲದಿದ್ದರೂ ರಹಸ್ಯಮಯ-ಆಶ್ಚರ್ಯಕರ ಅದ್ಭುತ ಪತ್ತೇದಾರಿ ಕಾದಂಬರಿಗಳೆಂದು ಮೆರೆಯುತ್ತಿದ್ದ ಅಬದ್ಧ ರಚನೆಗಳ ಸವಿನೋದ ವಿಡಂಬನೆ. ಅರವಿಂದ-ಕೇಸರಿಗಳೆಂಬ ದಂಪತಿಗಳಿಗೆ ದಾಂಪತ್ಯ ಯೋಗವನ್ನು ಬೋಧಿಸಿ ಅವರ ನಡುವೆ ಸಾಮರಸ್ಯದ ಸೇತುವನ್ನು ಬಿಗಿಯುವವನು ನಾಗಣ್ಣ. ಆ ಕುರಿತಾದ ಲೇಖನ ನಾನು, ನಾಗಣ್ಣ. ಆ ಗಂಡ-ಹೆಂಡಿರ ವಕ್ರಚೇಷ್ಟೆಗಳಲ್ಲಿ ವಿನೋದಕ್ಕೆ ಧಾರಾಳ ಅವಕಾಶವಿದೆ.

ಕಥಾತ್ಮಕವಾದ ಏಳು ಪ್ರಬಂಧಗಳಲ್ಲಿ ವಿಮೋಚನೆ ಹೆಚ್ಚು ರಸವತ್ತಾದದ್ದು-ಮುದ್ದು ಹುಡುಗಿ ಕಮಲೆ ತನ್ನ ನಡೆ-ನುಡಿಗಳಿಂದ ಸರ್ವೋತ್ತಮ ನಾಯಕನ ಕಲ್ಲೆದೆಯನ್ನೂ ಕರಗಿಸಿ, ಅವರಲ್ಲಿ ದಯೆಯ ಎಳಲತೆಯೊಂದು ಕುಡಿಯೊಡೆಯುವಂತೆ ಮಾಡಿಬಿಡುವ ಸನ್ನಿವೇಶ-ಸರ್ವೋತ್ತಮ ನಾಯಕನಷ್ಟೇ ಅಲ್ಲ-ಓದುಗರೂ ಕಂಬನಿ ಮಿಡಿಯುವಷ್ಟು ಪ್ರಭಾವಿಯಾಗಿದೆ. ಶ್ರೀನಿವಾಸನ ಅಕೃತ್ಯ, ರಮೇಶ, ಚಿನ್ನದ ತೊಟ್ಟಿಲುಗಳಲ್ಲಿ ಹೆಚ್ಚಿನ ಕಥನ ಕೌಶಲವೇನೂ ಇಲ್ಲ. ಇವುಗಳಲ್ಲಿ ಕೈಯಲ್ಲಿದ್ದ ಒಂದು ಹಕ್ಕಿಯನು ಹಾರಬಿಟ್ಟು, ಪೊದೆಯೊಳಗಿನ ಎರಡಕ್ಕಾಗಿ ಕೈಚಾಚಿ ಮೂರನ್ನು ಕಳಕೊಳ್ಳುವ ರಮೇಶನ ಮೂರ್ಖತನಕ್ಕಾಗಿ ಒಂದಿಷ್ಟು ಮರುಕವುಂಟಾಗುತ್ತದೆ. 'ಆತ್ಮಹತ್ಯೆ' ಎಂಬುದರಲ್ಲಿ ಒಂದು ಕಾಲದ ನಾಟಕ-ನಾಟಕಮಂಡಳಿಗಳನ್ನು ನಗೆಯ ಜರಡಿಯಲ್ಲಿಟ್ಟು ಸೋಸುವುದನ್ನು ಕಾಣಬಹುದು. ಅಂತ್ಯದ 'ದೀಪಾವಳಿ' ಅತ್ತ ಹಾಸ್ಯವೂ ಅಲ್ಲ, ಇತ್ತ ಕತೆಯೂ ಅಲ್ಲದ ಒಂದು ಲಘು ಪ್ರಬಂಧ. 'ಬಾಳಿನ ಗುಟ್ಟಿರುವುದು ತಾಳುವುದರಲ್ಲಿ' ಎಂಬ ಸಂದೇಶವನ್ನು ಬೀರುತ್ತಾ, ಇಡಿಯ ಗ್ರಂಥಕ್ಕೆ ಸಂಹರಣ ರೂಪದಲ್ಲಿದೆ "ದೀಪಾವಳಿ."

ಇಲ್ಲಿರುವ ಲೇಖನಗಳಲ್ಲಿ ಹಲವದರ ಮೇಲೆ ಮಾರ್ಕ್‌ಟ್ವೈನ್, ವೊಡ್‌ಹೌಸ್, ಜೇಕಬ್ಸ್, ಓ ಹೆನ್ರಿ ಮುಂತಾದವರ ನೆರಳು ಹಾದಿರುವುದನ್ನು ಲೇಖಕರೇ ಒಪ್ಪಿಕೊಂಡಿದ್ದಾರೆ. ಹಾಗಿದ್ದರೂ ಹಾಸ್ಯ ಪ್ರಬಂಧವೇ ಇರಲಿ, ಕಥೆಯೇ ಆಗಿರಲಿ ಕನ್ನಡದಾಗಿಯೇ ಕಾಣುತ್ತವೆ ವಿನಾ 'ಸೀರೆಯುಟ್ಟ ದೊರಸಾನಿ'ಯಂತೆ ತೋರುವು

ದಿಲ್ಲ. ಪಾಶ್ಚಾತ್ಯ ಲೇಖಕರ ವರ್ಜನ್ಸಿಸಿಂಪಾಗಿಯೇ ಇರಲಿ ಕನ್ನಡದಲ್ಲಿ ಹುಟ್ಟಿಸಾದ ನಗೆಯ ಒಂದು ಬೆಳೆ ಬಂದಿರುವುದು ಶ್ಲಾಘನೀಯ ಸಂಗತಿಯೇ. ತನ್ನ ಕೃತಿ ಯಾರು ಯಾರಿಗೆ ಉಪಕೃತವಾಗಿದೆ ಎಂದು ಒಪ್ಪಿಕೊಳ್ಳುವ ಈ ಪ್ರಾಂಜಲತೆ ನಿಜ ವಾಗಿಯೂ ಅನುಸರಣೀಯ. ಎಲ್ಲ ತೊಂಡು ದನಗಳೂ ಮೇದು ಮುಗಿಸಿರುವ ಗೋಪಾಳ ಹಾಸ್ಯ ಎಂದು ಕೆಲವರು ತಿಳಿದುಕೊಂಡಂತಿದೆ; ಅದೇ ಸಾಧುವೆಂದು ಸಾಧಿಸುತ್ತಲೂ ಇದ್ದಾರೆ! ಏನೇ ಇರಲಿ, ಶ್ರೀ ಬೇಂದ್ರೆಯವರು ಮುನ್ನುಡಿಯಲ್ಲಿ ಹೇಳಿದಂತೆ "ಪ. ರಮಾನಂದರಾಯರ ಪರಮಾನಂದಕರವಾದ" ಈ ಬರೆಹಗಳು ಕೇವಲ 'ಪ್ರಯೋಗ'ಗಳು ಎಂದು ಯಾರೂ ಒಪ್ಪಲಾರರು. ಅಲ್ಲಿಯ ನಗೆಯಲ್ಲಿ ಹೊಸತನವಿದೆ; ನವೀನ ದೃಷ್ಟಿಯಿದೆ, ಶೈಲಿಯಲ್ಲಿ ಹಿಡಿತವಿದೆ....ಒಂದೊಂದರಲ್ಲೂ ಒಂದೊಂದು ಬಗೆಯ ಮೋದಕ, ಮಾದಕ, ಆಹ್ಲಾದಕ, ಜೀವಕ ಶಕ್ತಿಯಿದೆ.

ಪುಸ್ತಕದ ಹಾಳೆಗಳನ್ನು ತಿರುವುತ್ತಾ ಹೋದಂತೆ ಎದೆಯನ್ನು ಹೊಕ್ಕು ನೆತ್ತರದಲ್ಲಿ ನಗೆ ಹಾಲನ್ನು ಚಿಮ್ಮಿಸುವ ಹೂಬಾಣಗಳು ಅತ್ತಿತ್ತ ಹಾರಾಡುವುದನ್ನು ಕಾಣುತ್ತೇವೆ.

"ಕೊಡೆ ರಾಮುಗೆ ಸೀತೆಯನು... ರಾಮದೇವರ ಕಾಲದಲ್ಲಿಯೂ ಕೊಡೆಗಳಿದ್ದುವು...."

"ಅಂಗಡಿಕಾರನು....ಕಬ್ಬಿಣದ ಬಟ್ಟಲಲ್ಲಿ ಪಾಯಸವನ್ನು ಹಾಕಿ ನನ್ನ ಮುಂದಿಟ್ಟನು. ಪಾಯಸ ಆ ಬಟ್ಟಲಲ್ಲಿ ನಿಜವಾಗಿಯೂ ಇತ್ತೆಂದು ಒಂದು ಭೂತಕನ್ನಡಿಯಿಂದ ನೋಡಿ ಸಮಾಧಾನಪಟ್ಟೆನು."

"ನಿಶ್ಶಬ್ದವನ್ನು 'ದೇವಿ' ಎಂದು ನಮ್ಮ ಬರೆಹಗಾರರು ಯಾಕೆ ಸಂಬೋಧಿಸುವರೋ ನನಗೆ ತಿಳಿಯದು. ನಿಶ್ಶಬ್ದವಾಗಿರುವ ದೇವಿಯರನ್ನು ನಾನು ಇನ್ನೂ ನೋಡ ಬೇಕಷ್ಟೆ."

–ಇದು ಸ್ಥಾಲೀ ಪುಲಾಕ ನಿರ್ದೇಶನ. ಇಂತಹ ಉದಾಹರಣೆಗಳಿಂದಲೇ ಪುಸ್ತಕದ ಪೂರ್ಣ ಪರಿಚಯ ಆಗಲಾರದು. 'ಹೂಬಾಣ"ಗಳಲ್ಲಿರುವುದು ಬರಿಯ ನಗೆಹನಿ ಗಳಲ್ಲ, ಹಳ್ಳಗಳು. ಆದರದು ತಿಳಿನೀರಿನ ಹಳ್ಳ. ಆ ಹಳ್ಳದಲ್ಲಿ ಅವಗಾಹಿಸಿದಾಗ ಮಾತ್ರ "ಪರಮಾನಂದರಾಯರ ಪರಮಾನಂದಕರ" ಹಾಸ್ಯದ ಅರಿವಾದೀತು.

ಪ್ರಾಚೀನ ಸಾಹಿತ್ಯದಲ್ಲಿ ಹಾಸ್ಯ ಪ್ರಸಂಗಗಳು ಅತ್ಯಲ್ಪವೆಂದು ಮೊದಲಲ್ಲೇ ಹೇಳಿದ್ದಾ ಗಿದೆ. ಇರುವ ಹಾಸ್ಯವೂ ಶೃಂಗಾರಕ್ಕೆ ಪೂರಕವಾಗಿರುವುದೇ ಹೆಚ್ಚು. ಪರಿಣಾಮ ವಾಗಿ ಶೃಂಗಾರವನ್ನು ಸೋಂಕಿಸುವ ಅಶ್ಲೀಲತೆಯ ರೋಗ ಹಾಸ್ಯವನ್ನೂ ಬಿಟ್ಟಿಲ್ಲ.

ಹೊಸ ಸಾಹಿತ್ಯದಲ್ಲಿ ಹಾಸ್ಯವು ಸ್ವತಂತ್ರ ಸ್ಥಾನಮಾನಗಳನ್ನು ಪಡೆದಿದ್ದರೂ ಅದು ಆಗಾಗ 'ಅತಿಹಸಿತ' 'ಅಪಹಸಿತ'ಗಳ ಅಂಚನ್ನು ಮುಟ್ಟುವುದೂ ಇದೆ. ಪ. ರಮಾನಂದರು ಆ ಅಂಚಿನತ್ತ ಸುಳಿಯದಿದ್ದರೂ ಒಮ್ಮೊಮ್ಮೆ ಅವರ ಹಾಸ್ಯವಾಗಲಿ, ಭಾಷೆಯಾಗಲಿ ತೀರ ಬಾಲಿಶವಾಗಿ, ಪೇಲವವಾಗಿ ತೋರುತ್ತದೆ. 'ನಾನು ನಾಗಣ್ಣ' ಇದಕ್ಕೊಂದು ಉದಾಹರಣೆಯಾದೀತು. 'ಬಾಳೆಯ ಮಸಾಲೆ'ಯ ರುಚಿ ಯಾವುದೆಂಬುವೇ ಗೊತ್ತಾಗುವುದಿಲ್ಲ. ಹಾಸ್ಯ-ಅತ್ಯುಕ್ತಿಗಳಿಗೆ ಯಾವಾಗಲೂ ನಿಕಟ ಸಂಬಂಧ. 'ಹೂಬಾಣಗಳು' ಇವನ್ನು ಪುಷ್ಟೀಕರಿಸುತ್ತದೆ.

ಹೀಗೆ ಲೋಪ-ದೋಷಗಳು ಹಲವಿದ್ದರೂ 'ಹೂಬಾಣಗಳು' ಮೊದಲ ಬಾರಿ ಪ್ರಕಟವಾದ ಕಾಲವನ್ನು ಗಮನಿಸಿದಾಗ ಲೇಖಕರ ಪ್ರಯತ್ನವು ಅಭಿನಂದನೀಯವೆನ್ನಲೇಬೇಕು. ಪರಮಾನಂದರ ಹಾಸ್ಯದ ಅಂತರಂಗವನ್ನು ತೆರೆದು ತೋರುವ ಆಕರ್ಷಕ ಚಿತ್ರಗಳೂ ಹತ್ತಾರಿವೆ ಪುಸ್ತಕದಲ್ಲಿ. ಇದರಿಂದ ನಗೆ ಹೂವಿಗೆ ಪರಿಮಳವೂ ಸೇರಿದಂತಾಗಿ ವಾಚಕನ ಮನೋಭೂಮಿಕೆಯಲ್ಲಿ ಆಹ್ಲಾದಕರ ವಾತಾವರಣವೊಂದನ್ನು ನಿರ್ಮಿಸುತ್ತದೆ-'ಹೂಬಾಣಗಳು.'

(ಕೃಪೆ : ಉದಯವಾಣಿ)

ನನ್ನಗೊಬ್ಬ ಭಾವನಿರುವನು. ಮದುವೆಯಾದ ಪ್ರತಿಯೊಬ್ಬನಿಗೆ ಒಬ್ಬ ಭಾವನಿರಬೇಕಷ್ಟೆ! ಮದುವೆಯ ಸಮಯದಲ್ಲಿ ಪುರೋಹಿತರಿಲ್ಲದಿದ್ದರೂ ಮದುವೆಯಾಗಬಹುದು. ಮದುಮಗಳಿಲ್ಲದಿದ್ದರೂ ಒಂದು ವೇಳೆ ಮದುವೆಯಾಗಬಹುದೋ ಏನೋ! ಆದರೆ ಭಾವನೆಂದು ಒಬ್ಬನಿಲ್ಲದಿದ್ದರೆ ಯಾವ ಮದುವೆಯೂ ಆಗಲಾರದೆಂಬುದೇ ನನ್ನ ಅಭಿಪ್ರಾಯ. ಮದುಮಗಳಿಗೆ ಖಾಸಾ ಅಣ್ಣನಾಗಲಿ ಇಲ್ಲದೆ ಇದ್ದರೂ ಚಿಂತೆಯಿಲ್ಲ, ಮದುವೆಯ ಸಮಯದಲ್ಲಿ ಭಾವನೊಬ್ಬನು ಇದ್ದೇ ಇರುವನು. ಮದುವೆಯ ಸಮಾರಂಭಕ್ಕೆ ಅತ್ಯಗತ್ಯವಾದ ಸಾಮಗ್ರಿಗಳಲ್ಲಿ ಅವನೂ ಒಂದಾಗಿರುವನು. (ಅಥವಾ ಒಬ್ಬನಾಗಿರುವನು. ನಿಮಗೆ ಇಷ್ಟವಿದ್ದ ಹಾಗೆ ಓದಬಹುದು.)

(ಹೂಬಾಣಗಳು)

ಬೇಸಗೆಯ ಕಾಲ ಕಳೆಯಿತು. ಮಳೆಗಾಲ ಪ್ರಾರಂಭಿಸಿತು. ಪ್ರಣಯಿಗಳಿಗೆ ಮನೋಲ್ಲಾಸದ ಕಾಲ ಒದಗಿತು. ವಿರಹಿಗಳಿಗೆ ಟಪ್ಪಾಲು ಪೇದೆಗಳು ಸಾಕಾಗದೆ ಮೇಘಗಳನ್ನೂ ದೂತರನ್ನಾಗಿ ಮಾಡುವ ಕಾಲ ಒದಗಿತು. ಮೊದಲ ಮಳೆಯ ಸ್ಪರ್ಶವೂ ಆಯಿತು. ಬೆಳೆದ ಯೌವನ ಚಂದ, ಮೊದಲ ಮಳೆಯು ಚಂದ. ನನಗೆ ಹಳೆಯ ಹಾಡುಗಳು ಚಂದ.

(ಹೂಬಾಣಗಳು)

ಯುದ್ಧದ ಅಸಂಖ್ಯ ಮುಖಗಳು

ಟಿ. ಪಿ. ಅಶೋಕ

ಎರಿಕ್ ಮರಿಯಾ ರೇಮಾರ್ಕ್‌ನ ಜರ್ಮನ್ ಕಾದಂಬರಿ "ಆಲ್ ಕ್ವೈಯಟ್ ಆನ್ ದ ವೆಸ್ಟರ್ನ್ ಫ್ರಂಟ್" ಮೊದಲು ೧೯೨೯ರಲ್ಲಿ ಪ್ರಕಟವಾಯಿತು. ವಿಶ್ವದ ಸುಮಾರು ಮೂವತ್ತು ಭಾಷೆಗಳಿಗೆ ಅನುವಾದಗೊಂಡು ಲಕ್ಷಾಂತರ ಓದುಗರನ್ನು ಆಕರ್ಷಿಸಿದ ಈ ವಿಶಿಷ್ಟ ಕಾದಂಬರಿಯ ಅನುವಾದ ಮೊಟ್ಟಮೊದಲ ಬಾರಿಗೆ ಪಡುಕೋಣೆ ರಮಾನಂದರ ಮೂಲಕ ಹೊರಬಂದಿದೆ. ರೇಮಾರ್ಕ್‌ನ ಯಾವುದೇ ಕೃತಿ ಕನ್ನಡಕ್ಕೆ ಈ ಹಿಂದೆ ಅನುವಾದಗೊಂಡ ಹಾಗೆ ಕಾಣುವುದಿಲ್ಲ. ಹೀಗಾಗಿ ಹೊಸದೊಬ್ಬ ಕಾದಂಬರಿಕಾರನನ್ನು ಕನ್ನಡಕ್ಕೆ ಮೊದಲು ಪರಿಚಯ ಮಾಡಿಸಿದ ಯಶಸ್ಸು ರಮಾನಂದರಿಗೆ ಸಲ್ಲಬೇಕು. ೩೩೭ ಪುಟಗಳ ಈ ಬೃಹತ್ಕಾದಂಬರಿ ತನ್ನ ಅಸಂಖ್ಯ ವಿಶಿಷ್ಟ ವಿವರಗಳಲ್ಲಿ ಅನುವಾದಕರಿಗೊಂದು ಸವಾಲು. ಈ ಸವಾಲನ್ನು ಪಡುಕೋಣೆ ರಮಾನಂದರು ಸಮರ್ಥವಾಗಿ ಎದುರಿಸಿದ್ದಾರೆ. ಯುದ್ಧದ ಭೀತಿ ಹಲವು ಸ್ತರಗಳಲ್ಲಿ ವಿಶ್ವವನ್ನು ಆವರಿಸಿರುವ ಇಂದಿನ ಭೀಕರ ದಿನಗಳಲ್ಲಿ ಈ ಕೃತಿಯ ಅನುವಾದ ಔಚಿತ್ಯಪೂರ್ಣವಾಗಿದೆ.

ಈ ಕಾದಂಬರಿಯ ನಾಯಕ ಪಾಲ್ ಬೊಯ್ಮರ್ ಹದಿನೆಂಟರ ಪ್ರಾಯದ ಯುವಕ. ಇವನೇ ಈ ಕಾದಂಬರಿಯ ನಿರೂಪಕ. ಒಂದು ದೃಷ್ಟಿಯಿಂದ ಇದು ರೇಮಾರ್ಕ್‌ನ ಅನುಭವ ಕಥನವೇ ಹೌದು. ಸ್ವತಃ ರಣರಂಗದ ಅನುಭವಗಳನ್ನು ಕಂಡುಂಡ ರೇಮಾರ್ಕ್ ಪಾಲ್ ಬೊಯ್ಮರನ ಮೂಲಕ ಮಾತಾಡುತ್ತಿದ್ದಾನೆ ಅನಿಸುತ್ತದೆ. ಇದು ಪಾಲ್ ಬೊಯ್ಮರನ ವೈಯಕ್ತಿಕ ವೃತ್ತಾಂತವೇ ಆದರೂ ಈ ವೃತ್ತಾಂತದ ಪರಿಕ್ರಮದಲ್ಲೇ ಪರ್ಯಾಯವಾಗಿ ಬೆಳೆದು ನಿಲ್ಲುವ ಯುದ್ಧದ ಅಸಂಖ್ಯ ಮುಖಗಳು ಈ ಕೃತಿಗೆ ಒಂದು ಬೃಹತ್ ಚೌಕಟ್ಟನ್ನೇ ನೀಡಿದೆ. ಯುದ್ಧಕ್ಕಾಗಿ ಹೋದ ಹದಿಹರೆಯದ ತರುಣರ ಜೀವನದ ಅಮೂಲ್ಯ ಕ್ಷಣಗಳು ಛಿದ್ರಗೊಂಡು ಭಯ, ಉದ್ವೇಗ, ಭ್ರಮನಿರಸನಗಳಲ್ಲಿ ಕೊನೆಗೊಂಡ ಹೃದಯಸ್ಪರ್ಶಿ ಚಿತ್ರಣ ಇಲ್ಲಿದೆ. ಯುದ್ಧದ ಕೇವಲ ವಿಕಾರವನ್ನಲ್ಲದೆ ಅಂಥ ನಿರ್ಣಾಯಕ ಕ್ಷಣಗಳಲ್ಲೂ ಪುಟಿಯುವ ಮಾನವೀಯತೆಯನ್ನು ಸೂಕ್ಷ್ಮವಾಗಿ ಸೆರೆಹಿಡಿಯುವ ರೇಮಾರ್ಕ್‌ನ ಬರಹ ಕೇವಲ ಒಂದು ಐತಿಹಾಸಿಕ ವರದಿಯಾಗದೆ ವಿಶಿಷ್ಟ ಜೀವನ ಸಂದರ್ಭದ ಕೆಲವು ಮಹತ್ವಪೂರ್ಣ ಕ್ಷಣಗಳನ್ನು ಕಲಾತ್ಮಕವಾಗಿ ದಾಖಲು ಮಾಡುತ್ತದೆ. ಹೀಗೆ ಒಂದರ್ಥದಲ್ಲಿ ಯುದ್ಧ ವಿರೋಧಿಯಾಗುವ ರೇಮಾರ್ಕ್‌ನ ಕಾದಂಬರಿ ಯುದ್ಧದ ಅನಿವಾರ್ಯತೆ ಈ ಅನಿವಾರ್ಯತೆ

ಯಲ್ಲಿ ರೂಪುಗೊಳ್ಳುವ ನಿಷ್ಠುರ ಜೀವನ ದೃಷ್ಟಿಗಳನ್ನು ಮುಖಾಮುಖಿಯಾಗಿಸಿ ಒಂದು ಸಮಗ್ರ ಅನುಭವವನ್ನು ಸಮರ್ಥವಾಗಿ ಕಟ್ಟಿಕೊಡುತ್ತದೆ.

ಒಂದು ಜನಾಂಗದ ಕನಸುಗಳು ಯುದ್ಧದ ಅಸಹನೀಯ ಅನಿವಾರ್ಯತೆಯಲ್ಲಿ ಕಮರಿ ಹೋಗುವ ಚಿತ್ರಣವನ್ನು ಕಡೆಯುವಾಗ ಕೂಡ ಭಾವುಕವಾಗದೆ ರೇಮಾರ್ಕ್‌ನ ಬರಹ ವ್ಯಂಗ್ಯದಲ್ಲಿ ಎಲ್ಲವನ್ನೂ ಬಿಚ್ಚುತ್ತ, ಮೀರುತ್ತ ಹೋಗುವುದು ಆತನ ಪ್ರಬುದ್ಧತೆಗೆ ಸಾಕ್ಷಿಯಾಗುತ್ತದೆ. ಸಾವು-ಬದುಕಿನ ಮಧ್ಯೆ ನಿಂತ ಬದುಕುಗಳ ಚಿತ್ರ ರೋಚಕವೂ ತಾತ್ವಿಕವೂ ಒಟ್ಟೊಟ್ಟಿಗೇ ಆಗಿ ಕಾದಂಬರಿ ಅಸಾಧಾರಣ ಯಶಸ್ಸನ್ನು ಪಡೆದುಕೊಳ್ಳುತ್ತದೆ. ಯುದ್ಧದ ಭೀಕರತೆಗೆ ಕುರುಡಾಗಿ ಎಲ್ಲವನ್ನೂ ಇತಿಹಾಸದ ಚಲನೆಗೆ ಅನಿವಾರ್ಯವೆಂಬಂತೆ ತೆಗೆದುಕೊಳ್ಳುವ ವ್ಯವಸ್ಥೆಯ ದರ್ಪ, ಹುಂಬತನ ಮತ್ತು ಡಾಂಭಿಕತೆಗಳು ಇಲ್ಲಿ ಬಯಲಾಗುತ್ತವೆ. ನಷ್ಟದ ಅಗಾಧವೆಂದು ಪರಿಚಯವೇ ಇಲ್ಲವಂತೆ ಯುದ್ಧದ ಅಂತ್ಯದಲ್ಲಿ ಹೊರಡುವ ಸರ್ಕಾರಿ ಪ್ರಕಟಣೆ ರೇಮಾರ್ಕ್‌ನ ಕಟು ವ್ಯಂಗ್ಯಕ್ಕೆ ಭೀಕರ ಸಾಕ್ಷಿಯಾಗಿದೆ: "೧೯೧೮ರ ಅಕ್ಟೋಬರ್ ಒಂದು ದಿನ ಅವನು ಬಿದ್ದನು. ಆ ದಿನ ಇಡೀ ಪಶ್ಚಿಮ ಯುದ್ಧರಂಗವು ಎಷ್ಟು ಶಾಂತವಾಗಿತ್ತೆಂದರೆ, ಆ ದಿನದ ಅಧಿಕಾರಯುಕ್ತ ಸೈನಿಕ ಪ್ರಕಟಣೆಯು ಆ ದಿನದ ಯುದ್ಧದ ವರದಿಯನ್ನು ಈ ಒಂದೇ ಒಂದು ಮಾತಿನಲ್ಲಿ ಕೊಟ್ಟು ಮುಗಿಸಿತ್ತು "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ"

(ಕೃಪೆ : ಪ್ರಜಾವಾಣಿ)

ಅವರಲ್ಲಿಯೂ ರುಕ್ಮಿಣಿ ಪತಿಗೆ ಶತ್ರುವಾಗುವಷ್ಟು ರೂಪವತಿಯಾದ ಭಾರ್ಯೆಯಾಗಿರಲಿಲ್ಲ. ಹರಿಕಮತನು ಶೀಲವೇ ಸೌಂದರ್ಯವೆಂದು ತಿಳಿಯುವುದಕ್ಕೆ ಆರು ವರ್ಷಗಳಿಂದ ಯತ್ನಿಸುತ್ತಿದ್ದರೂ ಅವನ ಮನಸ್ಸಿನಲ್ಲಿ ಅವಳ ಕುರೂಪದ ಭಾವನೆಯೇ ಬಲವಾಗುತ್ತಿತ್ತು. ಕಚೇರಿಯಲ್ಲಿ ಕೆಲಸಮಾಡಿ ಬೇಸರಹತ್ತಿದಾಗ, ತನ್ನ ಅಂಗಿಯ ಜೇಬಿನಲ್ಲಿ ಸಾಹುಕಾರ ಪುತ್ತುಸೆಟ್ಟಿಯ ಬೀಡಿಕಟ್ಟು ಒಂದಿದ್ದರೂ ಅದರಿಂದ ಬೀಡಿಯನ್ನು ತೆಗೆಯದೆ ತನ್ನ ಹತ್ತಿರ ಕೆಲಸ ಮಾಡುತ್ತಿದ್ದ ರಾಮನಾಯಕನೊಡನೆ ಒಂದು ಬೀಡಿಯನ್ನು ಬೇಡುವ ಸಂಪ್ರದಾಯವನ್ನು ಅವನ ಇಟ್ಟುಕೊಂಡಿದ್ದನು. ರಾಮನಾಯಕ ಬೀಡಿಯನ್ನು ಕೂಡಲೆ ಕೊಡುತ್ತಿದ್ದನಾದನೂ, 'ಪುತ್ತುಸೆಟ್ಟಿಯ ಬೀಡಿ ಸೇದುವವನಿಗೆ ಈ ಹಾಳು ದೂಮಮೂಲ್ಯನ ಬೀಡಿ ಹಿಡಿದೀತೆ?, ಎಂದು ಪ್ರತಿಯೊಂದು ಸಾರೆ ಕೇಳುತ್ತಿದ್ದನು. 'ಹಿಡಿಯದೇನು? ತನ್ನ ಹೆಂಡತಿ ಕುರೂಪಿ, ಪರರ ಹೆಂಡತಿ ಸುರೂಪಿ ಎಂಬ ನಾಣ್ಣುಡಿ ನಿನಗೆ ಗೊತ್ತಿಲ್ಲವೆ?' ಎಂದು ಹರಿಕಮತನು ಯಾವಾಗಲೂ ಉತ್ತರ ಕೊಡುತ್ತಿದ್ದನು.

(ಹೂಬಾಣಗಳು)

ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ

ಜಿ. ಆರ್. ತಿಪ್ಪೇಸ್ವಾಮಿ

1914 ರಿಂದ 1918ರ ಕೊನೆಯವರೆಗೂ ನಡೆದ ಒಂದನೆಯ ಮಹಾಯುದ್ಧದ ವಿವರಗಳನ್ನು ಗರ್ಭೀಕರಿಸಿಕೊಂಡ 'ಎರಿಕ್ ಮರೀಯಾ ರೀಮಾರ್ಕ್‌ನ 'ಆಲ್ ಕೈಯಟ್ ಆನ್ ದ ವೆಸ್ಟರ್ನ್ ಫ್ರಂಟ್' ಎಂಬ ಜರ್ಮನ್ ಕಾದಂಬರಿಯ ಕನ್ನಡ ಅನುವಾದವೇ ಪಡುಕೋಣೆ ರಮಾನಂದರ "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ". ಸುಮಾರು 332 ಪುಟಗಳಷ್ಟು ವ್ಯಾಪಿಸಿರುವ ಈ ಕಾದಂಬರಿಯಲ್ಲಿ ಬರುವ ಕಥಾ ನಾಯಕ ಬೊಯ್ಮರನೇ ಯುದ್ಧ ವಿವರಣೆ ನೀಡುವ ನಿರೂಪಕನಾಗಿದ್ದಾನೆ. ಕಾಂಟೋರೇಕ್ ಎಂಬ ಉಪಾಧ್ಯಾಯನ ಭಾವೋದ್ರೇಕ ನುಡಿಗಳಿಗೆ ಮನಸೋತ ಪಾಲ್ ಮತ್ತು ಈತನ ಗೆಳೆಯರು ಯುದ್ಧ ಪ್ರವೇಶಿಸಿ ಸೈನಿಕ ಶಿಕ್ಷಣವೇ ಶಾಲಾ ಶಿಕ್ಷಣಕ್ಕಿಂತ ಉತ್ತಮವಾದುದೆಂದು ಭಾವನೆ ತಳೆದರು. ಆ ಮೂಲಕ ಸತ್ಯ ಮತ್ತು ಸುಳ್ಳುಗಳ ಶೋಧನೆಯಲ್ಲಿ ತೊಡಗಿದರು. ಇವರೆಲ್ಲರ ಯುದ್ಧ ಯಾತನೆ ಕ್ರೌರ್ಯಗಳ ಅನುಭವದ ಅಭಿವ್ಯಕ್ತಿಯಾದ ಈ ಕೃತಿಯಲ್ಲಿ ಸೈನಿಕರ ಘೋರಸ್ಥಿತಿ-ಭಯಂಕರ ರೋದನ-ಕರ್ಕಶ ಚೀರಾಟ-ಅಸ್ತವ್ಯಸ್ತ ಬದುಕು-ಊಟೋಪಚಾರ-ಇತ್ಯಾದಿ ಯುದ್ಧರಂಗದ ಸಮಸ್ತ ವಿಚಾರಗಳು ಪ್ರತಿ ಪುಟದಲ್ಲೂ ದಾಖಲಾಗಿದೆ. ಶೋಷಣೆ, ದಬ್ಬಾಳಿಕೆ-ಪ್ರೀತಿ-ಒಲವು ಈ ಎಲ್ಲದರ ಅನುಭವ ಪಡೆದ ನಿರ್ಭಾಗ್ಯ ಸೈನಿಕರ ಅಖಂಡ ಅನುಭವಗಳು ಹೊಸತೊಂದು ಲೋಕವನ್ನೇ ಸೃಷ್ಟಿಸುತ್ತವೆ. ಸಮರದ ನೈಜ ಚಿತ್ರಣ ನೀಡುತ್ತದೆ. ಮದ್ದು-ಗುಂಡುಗಳ ಮಧ್ಯೆಯೂ ಬದುಕಿ ಹೇಳುವ ಪಾಲ್‌ನು ತಾಯಿಯ ಬಳಿ ಯುದ್ಧದ ವಾಸ್ತವ ಚಿತ್ರ ಬಿಡಿಸುವಾಗ ಆತನ ಪರಿಸರದ ಅಶಾಂತಿ ವಾತಾವರಣದಲ್ಲಿ ಯಾತನೆಯ ಸಂಕೇತವಾಗಿಯೂ ಕಂಡು ಬರುತ್ತಾನೆ. ಬದುಕಿನಲ್ಲಿ ನಡೆಯುವ ಸೆಣೆಸಾಟ, ಉಜ್ವಲ ಭವಿಷ್ಯಕ್ಕಾಗಿ ಸೈನಿಕರು ನಡೆಸುವ ಚರ್ಚೆ-ಹೋರಾಟ-ಇವೆಲ್ಲ ಅವರ ಸ್ವಂತ ವಿಷಯವಷ್ಟೇ ಆಗಿರದೆ ಯಾವುದೇ ರಾಷ್ಟ್ರಗಳ ಮಧ್ಯೆ ನಡೆಯುವ ಯುದ್ಧದ ನೈಜ ಚಿತ್ರಣ ನೀಡುವ ಸಾರ್ವಕಾಲಿಕ ಸತ್ಯಗಳಾಗಿವೆ. ಈ ಹಿನ್ನೆಲೆಯಲ್ಲಿ ಇದೇ ಯೂರೋಪಿನ ರಾಜಕೀಯ ಪರಿಸರವನ್ನು ಈ ಕಾದಂಬರಿ ಎಳೆ ಎಳೆಯಾಗಿ ಬಿಡಿಸುತ್ತದೆ. ಅಲ್ಲದೆ ಮಾನವನಲ್ಲಿರಬಹುದಾದ ಸಹಜವಾದ ಆಸೆ-ಆಕಾಂಕ್ಷೆ, ಕಷ್ಟ-ಸುಖಗಳ ಬಗೆಗೂ ವಿಶೇಷ ಮಾಹಿತಿ ದೊರಕಿಸುವ ಈ ಕಾದಂಬರಿ ಕನ್ನಡದಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತದೆ. ಯಾವುದೇ ವಿಮೋಚನೆಗೆ ಒಳಗಾಗದೆ ಸಮರ್ಥನೀಯವಾಗಿ ಅನುವಾದಿಸಿರುವ ಪಡುಕೋಣೆ ರಮಾನಂದರ ಈ ಕಾದಂಬರಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶೇಷ ಚಾರಿತ್ರಿಕ ದಾಖಲೆ ನಿರ್ಮಿಸುತ್ತದೆಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ.

(ಕೃಪೆ: ಆಕಾಶವಾಣಿ)

ಗಮನಾರ್ಹ ಕೃತಿಗಳು

ಎಸ್. ದಿವಾಕರ್

ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಪ್ರಕಟವಾದ 'ಸಾದರ ಸ್ವೀಕಾರ'ಗಳನ್ನು ಗಮನಿಸಿದರೆ ಸಾಕು, ಕಳೆದ ವರ್ಷ ಕನ್ನಡದಲ್ಲಿ ಅಪಾರ ಗ್ರಂಥಗಳು ಪ್ರಕಟವಾಗಿವೆಯೆಂದು ಧಾರಾಳವಾಗಿ ಹೇಳಬಹುದು. ಪ್ರಕಟವಾದ ಎಲ್ಲ ಗ್ರಂಥಗಳನ್ನೂ ಓದುವುದಂತಿರಲಿ, ತಿರುವಿಹಾಕಲೂ ಸಾಧ್ಯವಿಲ್ಲ. ಇಂಥ ಹಿನ್ನೆಲೆಯಲ್ಲಿ ಕೆಲವು ಗಮನಾರ್ಹ ಕೃತಿಗಳನ್ನಷ್ಟೇ ಇಲ್ಲಿ ಪಟ್ಟಿ ಮಾಡುತ್ತಿದ್ದೇವೆ. ಈ ಪಟ್ಟಿ ಪರಿಪೂರ್ಣವೆಂಬ ಭ್ರಮೆಯಿಲ್ಲ. ಯಾಕೆಂದರೆ ನಮ್ಮ ಗಮನಕ್ಕೆ ಬಾರದ ಅನೇಕ ಉತ್ತಮ ಗ್ರಂಥಗಳೂ ಇರಬಹುದು. 'ಸುಧಾ' ಈ ವರ್ಷ ಯುಗಾದಿ ಪ್ರಯುಕ್ತ ಏರ್ಪಡಿಸಿದ್ದ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕೃತಿ ಶಾಂತಿನಾಥ ದೇಸಾಯಿಯವರ "ಸಂಬಂಧ." ಒಬ್ಬ ಅತಂತ್ರ ಹೆಣ್ಣಿನ ಸುತ್ತ ತಿರುಗುವ ನಾಲ್ಕಾರು ಪಾತ್ರಗಳ ಮೂಲಕ ಮಾನವೀಯ ಸಂಬಂಧಗಳನ್ನು ಪರಿಶೀಲಿಸುವ ಈ ಕೃತಿಯನ್ನು "ಸುಧಾ" ಯುಗಾದಿ ವಿಶೇಷಾಂಕ ಜೊಡನೆ ಉಚಿತವಾಗಿ ನೀಡಲಾಯಿತು. 65,000 ಪ್ರತಿಗಳಲ್ಲಿ ಮುದ್ರಣಗೊಂಡ "ಸಂಬಂಧ" ಕನ್ನಡ ಪ್ರಕಟನ ಕ್ಷೇತ್ರದ ಒಂದು ಮೈಲಿಗಲ್ಲೆನ್ನಬಹುದು.

ಕಳೆದ ವರ್ಷ ಪ್ರಾರಂಭವಾದ ಹೊಸ ಸಂಸ್ಥೆ 'ಪ್ರಿಂಟರ್ಸ್ ಪ್ರಕಾಶನ.' ಈ ಪ್ರಕಾಶನದ ಪ್ರಥಮ ಕೃತಿಯಾಗಿ ಬಂದ ಚಂದ್ರಶೇಖರ ಕಂಬಾರರ ಕಾದಂಬರಿ "ಸಿಂಗಾರೆವ್ವ ಮತ್ತು ಅರಮನೆ". ಶಿವಾಪುರದ ಅರಮನೆಯಲ್ಲಿ ನಡೆಯುವ ಘಟನೆಗಳು ನಿರೂಪಕ ಮತ್ತು ಶಿವನಿಂಗಪ್ಪರ ಮೂಲಕ ಬಿಚ್ಚಿಕೊಳ್ಳುವ ರೀತಿಯಲ್ಲಿ ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳನ್ನು ದಾಖಲಿಸುವ ಈ ಕೃತಿ ಈಗಾಗಲೇ ಮೂರು ಮುದ್ರಣಗಳನ್ನು ಕಂಡಿದೆ. ರಾಮಚಂದ್ರ ಶರ್ಮರು ಅನುವಾದಿಸಿರುವ 'ಈ ಶತಮಾನದ ನೂರು ಇಂಗ್ಲಿಷ್ ಕವನಗಳು' ಒಂದು ಮಹತ್ವಪೂರ್ಣ ಕೃತಿಯಾಗಿದೆ. ಬಿ. ಎಂ. ಶ್ರೀ. ಅವರ "ಇಂಗ್ಲಿಷ್ ಗೀತೆಗಳ" ನಂತರ ಅನೇಕ ದಶಕಗಳ ಮೇಲೆ ಪ್ರಕಟವಾಗುತ್ತಿರುವ ಈ ಸಂಗ್ರಹ, ಇಂಗ್ಲಿಷ್ ಕವಿಗಳ ಕಾವ್ಯ ಪರಿಣತಿಯನ್ನು ಪರಿಚಯ ಮಾಡಿಕೊಡುತ್ತದೆ. ಇದೇ ಪ್ರಕಾಶನ ಪ್ರಕಟಿಸಿರುವ ಸಿದ್ಧಲಿಂಗಯ್ಯನವರ "ಅವತಾರಗಳು" ಎಂಬ ಗ್ರಾಮೀಣ ಮೂಢನಂಬಿಕೆಗಳನ್ನು ಕುರಿತ ಕೃತಿ ಮತ್ತು ಪ್ರಸನ್ನರ "ತದ್ರೂಪ" ಎಂಬ ನಾಟಕ ಗಮನಾರ್ಹವಾಗಿವೆ.

ಕಳೆದ ವರ್ಷ ಎರಡು ಮೌಲಿಕ ಸಂಭಾವನಾ ಗ್ರಂಥಗಳು ಬಂದಿವೆ. ಇತ್ತೀಚೆಗೆ ನಿಧನರಾದ ಬಿಟಗೇರಿ ಕೃಷ್ಣಶರ್ಮರಿಗೆ ನೀಡಲಾದ "ಬೆಳುವಲ" ಗ್ರಂಥದಲ್ಲಿ ವ್ಯಕ್ತಿತ್ವ

ದರ್ಶನ, ಸಾಹಿತ್ಯ ಸಮೀಕ್ಷೆ ಮತ್ತು ಲೇಖನ ಗೌರವ ಎಂಬ ಮೂರು ಭಾಗಗಳಿವೆ. ಇವು ಕೃಷ್ಣಶರ್ಮರ ಸಿದ್ಧಿ–ಸಾಧನೆಗಳನ್ನು ಚಿತ್ರಿಸುತ್ತವೆ. ಅಪ್ರತಿಮ ಗಮಕ ಕಲಾವಿದೆಯಾದ ಶಕುಂತಲಾಬಾಯಿ ಪಾಂಡುರಂಗರಾವ್ ಅವರಿಗೆ ಅರ್ಪಿಸಲಾದ "ಗಮಕ ಶಾರದೆ" ಇನ್ನೊಂದು ಮುಖ್ಯ ಕೃತಿ.

ಸಣ್ಣಕತೆಯ ಕ್ಷೇತ್ರದಲ್ಲಿ ಕು. ವೀರಭದ್ರಪ್ಪನವರ "ಇನ್ನಾದರೂ ಸಾಯಬೇಕು," ರಾಘವೇಂದ್ರ ಪಾಟೀಲರ "ಪ್ರತಿಮೆಗಳು," ಎಂ. ಬಿ. ನಟರಾಜ್ ಅವರ "ಸ್ಫೋಟಕ." ಜಯಂತ ಕಾಯ್ಕಿಣಿಯವರ 'ಗಾಳ' ಗಮನ ಸೆಳೆಯುತ್ತವೆ. ಕುಂ. ವೀರಭದ್ರಪ್ಪನವರ ಕೃತಿ ಸಾಮಾಜಿಕ ಸಂದರ್ಭಗಳ ಹಿನ್ನಲೆಯಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಗಳನ್ನು ಪರಿಶೋಧಿಸಿದರೆ, ರಾಘವೇಂದ್ರ ಪಾಟೀಲರ ಕತೆಗಳು ಬದುಕಿನ ನೋವುಗಳನ್ನು ಭಾವಗೀತಾತ್ಮಕ ಧಾಟಿಯಲ್ಲಿ ಹಿಡಿದಿಡುತ್ತವೆ. ಎಂ. ಬಿ. ನಟರಾಜ್ ಮತ್ತು ಜಯಂತ ಕಾಯ್ಕಿಣಿಯವರ ಕಥಾ ಸಂಗ್ರಹಗಳು ಮನಸ್ಸಿನ ಅಗಮ್ಯ ಆಳಗಳನ್ನು ಸ್ಪರ್ಶಿಸಿ ಬದುಕಿನ ಅರ್ಥವನ್ನು ಕಂಡುಕೊಳ್ಳಲು ಯತ್ನಿಸುತ್ತವೆ.

ಬರಗೂರು ರಾಮಚಂದ್ರಪ್ಪನವರ ಕಾದಂಬರಿ "ಬೆಂಕಿ" ಸರ್ವಾಧಿಕಾರಿಯೊಬ್ಬನ ಕೃತ್ಯಗಳನ್ನು ದಾಖಲಿಸುತ್ತಾ, ಅವುಗಳಿಗೆ ಸಮಾಜ ಪ್ರತಿಕ್ರಿಯಿಸುವ ರೀತಿಯನ್ನು ಚಿತ್ರಿಸುತ್ತದೆ. ಕೆ. ವಿ. ತಿರುಮಲೇಶ್ ಅವರ ಕಾದಂಬರಿ "ಅನೇಕ" ಒಂದು ರೂಪಕ ಕೃತಿಯಾಗಿದೆ. ದ್ವೀಪವೊಂದರಲ್ಲಿ ಪುರಾತನ ಮನುಷ್ಯನಂತೆ ಕಾಣುವ ಅನೇಕ ಎಂಬ ವ್ಯಕ್ತಿ ನಿಸರ್ಗದೊಡನೆ ಒಂದಾಗಿ ಬದುಕುವ ಬಗೆ, ಮತ್ತು ಕೆಲ ಕಾಲಾನಂತರ ಆಗಮಿಸುವ ವಿಶಾಲ ಎಂಬುವನ ಕೃತ್ಯಗಳು ನಮ್ಮ ನಾಗರಿಕ ಜಗತ್ತಿನ ನೈತಿಕ ಅಧಃಪತನವನ್ನು ಸಾಂಕೇತಿಸುತ್ತವೆ. ಇದೇ ಲೇಖಕರ ಇನ್ನೊಂದು ಕಾದಂಬರಿ "ಆರೋಪ." ಹಾಗೆಯೇ ಡಾ|| ನಾ. ಮೊಗಸಾಲೆಯವರ "ಪ್ರಕೃತಿ" ಹೆಸರಿಸಬಹುದಾದ ಕಾದಂಬರಿಯಾಗಿದೆ.

ಕಳೆದ ವರ್ಷ ಕೆಲವು ಉತ್ತಮ ಕವನ ಸಂಗ್ರಹಗಳು ಪ್ರಕಟವಾಗಿವೆ. "ಸಂಗ್ರಹ ಕಾವ್ಯ" ಅರವಿಂದ ನಾಡಕರ್ಣಿಯವರ ಆಯ್ದ ಪ್ರಾತಿನಿಧಿಕ ಕವನಗಳ ಸಂಕಲನ. ಬದುಕಿನ ನಿಗೂಢಗಳನ್ನು ಬಗೆದುನೋಡುವ ಈ ಕವಿಯ ಆಶಯ ಇಲ್ಲಿನ ಕವನಗಳಲ್ಲಿ ಓದುಗರ ಸಂವೇದನೆಯನ್ನು ತಟ್ಟುವಂತೆ ರೂಪುಗೊಂಡಿದೆ. ಬಿ. ಆರ್. ಲಕ್ಷ್ಮಣರಾವ್ ಅವರ "ಲಿಲಿಪುಟ್ಟಿಯ ಹಂಬಲ"ದಲ್ಲಿ ಅತ್ಯಂತ ಲವಲವಿಕೆಯಿಂದ ತುಳುಕಾಡುವ ಕವನಗಳ ಜೊತೆಗೆ 'ವಾ–ನರ ಗೀತೆ,' 'ಸಂದಿಗ್ಧ'ದಂಥ ಪ್ರಬುದ್ಧ ಕವನಗಳೂ ಇವೆ. ಸು. ರಂ. ಎಕ್ಕುಂಡಿಯವರು ಬಹಳ ವರ್ಷಗಳ ನಂತರ ಪ್ರಕಟಿಸಿರುವ "ಬೆಳ್ಳಕ್ಕಿಗಳು" ಸಂಗ್ರಹದ ಕವನಗಳು "ಮುಗಿಲುಗಳು ಲಂಬಾಣಿಯುಟ್ಟ ಬಣ್ಣದ ಲಂಗಗಳಂತೆ

ಮನಸೂರೆಗೊಳ್ಳುತ್ತವೆ. ಕಾವ್ಯಲೋಕದಲ್ಲಿ ಈಚೆಗೆ ಮರೆಯಾಗುತ್ತಿರುವ ಸೌಂದರ್ಯಾರಾಧನೆ,ಸುಕುಮಾರ ಪ್ರಪಂಚಗಳು,ಮತ್ತೆ ಇಲ್ಲಿ ಧ್ವನಿ ಪಡೆದು,ಜೀವನೋತ್ಸಾಹ ಪುಟಿಸುತ್ತವೆ. ಜಯಂತ ಕಾಯ್ಕಿಣಿಯವರ "ಕೋಟಿ ತೀರ್ಥ" ಮತ್ತು ವೇಣುಗೋಪಾಲ ಸೊರಬರ "ಸುಳ್ಳು ಬುರುಕಿ" ಸಂಗ್ರಹಗಳು ಈ ಕವಿಗಳಲ್ಲಿ ಆಗುತ್ತಿರುವ ಹೊಸ ಆವಿಷ್ಕಾರಗಳಿಗೆ ಸಾಕ್ಷಿಯಾಗಿವೆ. ಮಕ್ಕಳಿಗಾಗಿ ಬರೆದ ಪದ್ಯಗಳಲ್ಲಿ ಟಿ. ಎಸ್. ನಾಗರಾಜ ಶೆಟ್ಟಿಯವರ "ನವಿಲುಗರಿ" ಒಂದು ಅಪರೂಪದ ಕೃತಿಯಾಗಿದೆ.

ವಿಮರ್ಶಾ ಕೃತಿಗಳಲ್ಲಿ ಡಾ|| ಜಿ ಎಸ್. ಶಿವರುದ್ರಪ್ಪನವರ "ಪ್ರತಿಕ್ರಿಯೆ." ಟಿ. ಪಿ. ಅಶೋಕರ "ಕಾರಂತರ ಕಾದಂಬರಿಗಳಲ್ಲಿ ಗಂಡು-ಹೆಣ್ಣು." ಸಿದ್ಧಲಿಂಗ ಪಟ್ಟಣಶೆಟ್ಟಿಯವರ "ಅನುಶೀಲನ," ರಮಜಾನ ದರ್ಗಾ ಅವರ "ಸಾಹಿತ್ಯ ಮತ್ತು ಸಮಾಜ," ಹಾ.ಮಾ. ನಾಯಕರ "ಸಮೂಹ," ಮಾಧವ ಕುಲಕರ್ಣಿಯವರ "ಯೋಚನೆಗಳು-ಲೇಖನಗಳು" ಅಭ್ಯಾಸಯೋಗ್ಯವಾಗಿವೆ. ಭಗವಾನ್ ಅವರ "ಬದಲಾವಣೆ" ವಿಶಿಷ್ಟ ವಿಮರ್ಶಾ ಧೋರಣೆಯುಳ್ಳ ಕೃತಿ. ಎಲ್. ಎಸ್. ಶೇಷಗಿರಿರಾಯರ "ಫ್ರಾನ್ಜ್ ಕಾಫ್ಕ" ಕಾಫ್ಕನ ಬದುಕು ಬರಹಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಉಪಯುಕ್ತ ಗ್ರಂಥ.

ಶ್ರೀರಂಗರ "ಕಾಲಾಯ ತಸ್ಮೈ ನಮಃ," "ನೀವೇ ಹೇಳಿರಿ" ನಾಟಕಗಳ ಜೊತೆಗೆ ಗಮನಿಸಬಹುದಾದ ಇನ್ನೆರಡು ನಾಟಕಗಳು ಪಿ. ವಿ. ವೈಕುಂಠರಾಜು ಅವರ "ಕಾನನ್ ದೇವಿ" ಮತ್ತು ರಾಮಚಂದ್ರದೇವರ "ರಥ ಮುಸಲ,". ಕುತೂಹಲಕ್ಕಾಗಿಯಾದರೂ ಶಿವರಾಮ ಕಾರಂತರು ಅನುವಾದಿಸಿರುವ "ಹೇಮಂತ" (ಶೇಕ್ಸ್‌ಪಿಯರನ 'ಹ್ಯಾಮ್ಲೆಟ್') ನಾಟಕವನ್ನು ಓದಬೇಕು. ಅಲ್ಲದೆ ಫ್ರೆಂಚ್ ನಾಟಕಕಾರ ಜೀನ್ ಅನ್ವಿಯ "ಅಂತಿಗೊನೆ," ಜಿ. ಎಸ್. ರಂಗನಾಥರಾಯರ ಸಮರ್ಥ ಅನುವಾದದಲ್ಲಿ ಪ್ರಕಟವಾಗಿದೆ. ಇನ್ನೂ ಒಂದು ಉತ್ತಮ ಅನುವಾದ "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ". ಬಹು ಹಿಂದೆಯೇ ಕೆಲವು ಅತ್ಯುತ್ತಮ ಕತೆಗಳನ್ನು ಬರೆದ ಪಡುಕೋಣೆ ರಮಾನಂದರು, ಒಂದನೇ ಮಹಾಯುದ್ಧದ ಹಿನ್ನೆಲೆ ಇರುವ ಈ ಅತ್ಯುತ್ತಮ ಜರ್ಮನ್ ಕಾದಂಬರಿಯನ್ನು ಅನುವಾದಿಸಿದ್ದಾರೆ.

ಡಾ|| ಹಿರೇಮಲ್ಲೂರ ಈಶ್ವರನ್ ಅವರ "ವಲಸೆ ಹೋದ ಕನ್ನಡಿಗನ ಕಥೆ" ಮತ್ತು ರಂ. ಶ್ರೀ. ಮುಗಳಿಯವರ "ಜೀವನ ರಸಿಕ-"ಇವೆರಡು ಕುತೂಹಲ ಹುಟ್ಟಿಸಿ, ಓದಿಸಿಕೊಳ್ಳುವ ಆತ್ಮಚರಿತ್ರೆಗಳು. ಎನ್. ಮರಿಶಾಮಾಚಾರ್ ಅವರ "ಸಮಕಾಲೀನ ಕಲೆ" ಲಲಿತ ಕೃತಿಯನ್ನು ಕುರಿತ, ಸಂಕ್ಷಿಪ್ತವಾದರೂ ಓದಲರ್ಹವೆನಿಸುವ ಸಚಿತ್ರ ಕೃತಿ. ಡಾ|| ವಸುಂಧರಾ ಫಿಲಿಯೋಜಾ ಅವರ "ಅಳಿದುಳಿದ ಹಂಪೆ," ವಿಜಯನಗರ ಪರಂಪರೆಯನ್ನು ಇತ್ತೀಚಿನ ಸಂಶೋಧನೆಗಳ ಹಿನ್ನೆಲೆಯಲ್ಲಿ ನಿರೂಪಿಸುವ ಮುಖ್ಯ ಗ್ರಂಥ.

ಉಲ್ಲೇಖಿಸಲೇಬೇಕಾದ ಇನ್ನೊಂದು ಪುಸ್ತಿಕೆ "ಪಾಲೋ ಫ್ರೆಯರೆಯ ವಿಮೋಚನಾವಾದಿ ಶಿಕ್ಷಣದ ಕಲ್ಪನೆ." ಮಹಾಬಲೇಶ್ವರರಾವ್ ಅವರ ಈ ಕೃತಿ, ತೃತೀಯ ಜಗತ್ತಿನ (ದ. ಅಮೆರಿಕ) ಮಹತ್ವಪೂರ್ಣ ಶಿಕ್ಷಣ ತಜ್ಞನ ವಿಚಾರಗಳನ್ನು ಪರಿಚಯ ಮಾಡಿಕೊಡುತ್ತದೆ.

ಪ್ರತಿ ವರ್ಷದಂತೆ ಕಳೆದ ವರ್ಷವೂ ಜನಪ್ರಿಯ ಕಾದಂಬರಿಗಳ ಸುರಿಮಳೆಯೇ ಆಗಿದೆ. ಪ್ರಸಿದ್ಧರಾದ ಟಿ. ಕೆ. ರಾಮರಾವ್, ಸಿರುಪಮಾ, ಕೆ. ಆರ್. ಪದ್ಮಜೆ, ಜೆ. ಶಾರದಾ ರಾಜಶೇಖರ್, ತ. ಪು. ವೆಂಕಟರಾವ್, ಸಾಯಿಸುತೆ, ಈಚನೂರು ಜಯಲಕ್ಷ್ಮಿ, ಎಂ. ಸಿ. ಪದ್ಮಾ, ಉಷಾ ನವರತ್ನರಾಂ, ವಿಜಯ ಸಾಸನೂರ, ಹೆಚ್. ಜಿ. ರಾಧಾದೇವಿ, ಬಿ. ಎಲ್. ವೇಣು, ಅಶ್ವಿನಿ, ಕೆ. ಗೀತಾ, ಮತ್ತು ಇನ್ನೂ ಅನೇಕರು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

(ಕೃಪೆ: ಸ.ಧಾ)

ನಮ್ಮ ಕೊಡೆಗಳಲ್ಲಿ ಮೇಲೆ ಸೂಚಿಸಿದ ಸುಧಾರಣೆಗಳಾಗುವ ವರೆಗೆ ನಾನು ಈ ವರ್ಷದ ಮಳೆಗಾಲಕ್ಕೆ ಯಾವ ಕೊಡೆಯನ್ನೂ ಕ್ರಯಕ್ಕೆ ತೆಗೆದು ಕೊಳ್ಳುವುದಿಲ್ಲವೆಂದು ನಿರ್ಧರಿಸಿದ್ದೇನೆ. ಅಷ್ಟರವರೆಗೆ? ಅಷ್ಟರವರೆಗೆ ಒಂದು ಅಥವಾ ಇನ್ನೊಂದು ಕೊಡೆ ನನ್ನ ಹತ್ತಿರ ಯಾವಾಗಲೂ ಇರುವಂತೆ ಈ ಒಂದು ಉಪಾಯವನ್ನು ಹೂಡಬೇಕೆಂದು ಆಲೋಚಿಸಿದ್ದೇನೆ. ಇದನ್ನು ಬೇರೆ ಯಾರಿಗೂ ಹೇಳಿ ಕೊಡಬೇಡಿ!

ನನ್ನ ಮುಂದೆ ಒಬ್ಬ ಟೊಣಪ ಒಂದು ಸುಂದರವಾದ ಕೊಡೆಯನ್ನು ಹಿಡಿಸಿಕೊಂಡು ಹೋಗುತ್ತಾನೆಂದು ತಿಳಿದುಕೊಳ್ಳೋಣ. ನಾನು ಕೂಡಲೇ ಅವನ ಹತ್ತಿರ ಹೋಗಿ, 'ಏನಯ್ಯಾ, ನನ್ನ ಕೊಡೆಯನ್ನು ನೀವೆಲ್ಲಿಗೆ ಹಿಡಿದುಕೊಂಡು ಹೋಗುತ್ತೀರಿ? ಇದರ ಅರ್ಥವೇನು?' ಎಂದು ಸಿಟ್ಟಿನಿಂದ ಕೇಳುತ್ತೇನೆ.

ಅವನು ಕೂಡಲೇ ದೀನಭಾವವನ್ನು ತಾಳಿ 'ಕ್ಷಮಿಸಿ, ಸ್ವಾಮಿ; ಈ ಕೊಡೆ ತಮ್ಮದೆಂದು ನನಗೆ ಗೊತ್ತಿರಲಿಲ್ಲ. ಅದಕ್ಕೆ ಯಾರೂ ಗಿರಾಕಿ ಇಲ್ಲವೆಂದು ತಿಳಿದುಕೊಂಡು ನಾನು ತೆಗೆದಿದ್ದೆ. ನಿಮ್ಮದಾದರೆ ಬೇಗನೇ ತೆಗೆದುಕೊಳ್ಳಿ' ಎಂದು ನಡುಗುತ್ತಾ ಹೇಳಿ, ಕೊಡೆಯನ್ನು ನನ್ನ ಸ್ವಾಧೀನ ಪಡಿಸುವನು. ನಾನು ಆ ಟೊಣಪನನ್ನು ಪ್ರಶ್ನಿಸಿದಂತೆಯೇ ಇನ್ನೊಬ್ಬ ಪುಣ್ಯಾತ್ಮ ನನ್ನನ್ನು ಪ್ರಶ್ನಿಸುವವರೆಗೆ ಆ ಕೊಡೆ ನನ್ನದಾಗುವುದು!

(ಹೂಬಾಣಗಳು)

ಹುಚ್ಚು ಬೆಳದಿಂಗಳಿನ ಹೂ ಬಾಣಗಳು

ಸೂರ್ಯನಾರಾಯಣ ಚಡಗ

ವಿಧಾತನ ಸೃಷ್ಟಿಯಲ್ಲಿ ಮಾನವ ಹಲವು ವಿಶಿಷ್ಟಗುಣಗಳಿಂದ ಪ್ರಪಂಚದ ಇತರ ಪ್ರಾಣಿಗಳಿಗಿಂತ ಶ್ರೇಷ್ಠ ಎನಿಸಿಕೊಂಡಿದ್ದಾನೆ. ಪ್ರಕೃತಿಯ ವೈವಿಧ್ಯಮಯ ವಿಚಿತ್ರ ಸಂಗತಿಗಳನ್ನು ವಿವೇಚನಾತ್ಮಕ ದೃಷ್ಟಿಯಿಂದ ಸೂಕ್ಷ್ಮವಾಗಿ ಅವಲೋಕಿಸುತ್ತಾ ಬಗೆ ಬಗೆಯ ಪ್ರಾಣಿಗಳ ನೈಸರ್ಗಿಕ ಪ್ರವೃತ್ತಿಗಳನ್ನು ಪರಿಶೀಲಿಸಿದಾಗ ಮಾನವ ವಿಕಾಸ ಪಥದಲ್ಲಿ ಗಣನೀಯವಾದ ಪ್ರಗತಿಯಿಂದ ಮುಂದುವರಿದಿರುವುದಲ್ಲದೆ ಜಗತ್ತಿನ ಇತರ ಪ್ರಾಣಿಗಳೊಂದಿಗೆ ಹೋಲಿಸಲಾರದಷ್ಟು ಉನ್ನತ ಸ್ಥಾನದಲ್ಲಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಮನುಷ್ಯ ಇತರ ಪ್ರಾಣಿಗಳಿಗಿಂತ ತೀರಾ ಭಿನ್ನವಾದ ಅಸಾಧಾರಣ ಗುಣ ಧರ್ಮವನ್ನು ಹೊಂದಿರುವುದಲ್ಲದೆ—ಅವನ ಮನಸ್ಸಿನ ವಿಕಾಸ, ವಿಚಾರ ಶಕ್ತಿಯ ವಿಶಾಲತೆ, ವ್ಯವಸ್ಥಿತ ಸಂಘ ಜೀವನ, ಉತ್ತಮ ಸಂಸ್ಕಾರ ಮತ್ತು ಪರಿಶುದ್ಧ ವಾದ ನಾಗರಿಕತೆಯಿಂದ ಅವನು ಸಂಪೂರ್ಣವಾಗಿ ಪ್ರಾಣಿವರ್ಗದಿಂದ ಬೇರೆಯಾಗಿದ್ದಾನೆ. ಜಗತ್ತನ್ನು ಆಳಬಲ್ಲ ...ಉಳಿಸಬಲ್ಲ ......ಅಳಿಸಬಲ್ಲ ಮಾನವ ಎರಡು ದೃಷ್ಟಿಯಿಂದಲಂತೂ ಸರ್ವ ಶ್ರೇಷ್ಠ. ಒಂದು....ಅವನು ಮಾತನಾಡುತ್ತಾನೆ. ಇನ್ನೊಂದು.... ಅವನು ನಗುತ್ತಾನೆ.

ಆಂಗ್ಲ ಸಾಹಿತಿ ವಿಲಿಯಮ್ ಹಾಜಲಿಟ್ಟನು "Man is the only animal that Laughs and weeps" ಎಂದಿದ್ದರೂ ಜಗತ್ತಿನ ಇತರ ಪ್ರಾಣಿಗಳೂ ನಗುತ್ತವೆ ಎಂದು ಅನೇಕ ತಜ್ಞರು ಆಧಾರಗಳಿಂದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇರಬಹುದು. ಆದರೆ ಅವುಗಳು ಮಾನವನಂತೆ ನಗುವುದಿಲ್ಲ ಎಂಬುದಂತೂ ಸತ್ಯ. ಅವುಗಳು ನಕ್ಕರೂ ಅದು ಮಾನವನ ನಗುವಿನಂತೆ ಸಂಪೂರ್ಣವಾಗಿ ಬೇರೆಯಾಗಿರುವುದರಿಂದಲೇ ಮಾನವನ ನಗುವಿಗೆ ಮಹತ್ವವಿದೆ.

ಮನುಷ್ಯ ವಿಕಾಸದ ಪ್ರಗತಿಗನುಗುಣವಾಗಿ ಸುಸಂಸ್ಕೃತನಾಗುತ್ತಾ ಬಂದಿರುವುದಲ್ಲದೆ ಸುಧಾರಣೆಯಿಂದ ಅತ್ಯುತ್ತಮ ಜೀವನ ನಡೆಸುತ್ತಿದ್ದಾನೆ. ಅವನ ಮಾನಸಿಕ, ನೈತಿಕ, ದೈಹಿಕ ಬೆಳವಣಿಗೆಯನ್ನನುಸರಿಸಿ ಮಾತು ಮತ್ತು ನಗು ಬಹಳಷ್ಟು ಪ್ರಗತಿ ಹೊಂದಿದೆ.

ಮಾನವನ ನಗುವಿನ ರೀತಿ ಮತ್ತು ಆಕರ್ಷಣೆ ಇತರ ಪ್ರಾಣಿಗಳಿಗಿಂತ ಪೂರ್ಣ ಭಿನ್ನವಾಗಿದೆ. ಪ್ರಾಣಿಗಳು ಯಾವ ಕಾರಣಕ್ಕಾಗಿ ನಗುತ್ತವೆ? ತಾವು ನಗುವುದಲ್ಲದೆ ಇನ್ನೊಂದು ಪ್ರಾಣಿಯನ್ನು ನಗಿಸುವ ಶಕ್ತಿ ಅದಕ್ಕಿದೆಯೇ? ಅದು ಕಣ್ಣಿಗೆ ಗೋಚರವೆ? ಪ್ರತಿಕ್ರಿಯೆ ವ್ಯಕ್ತವಾಗುತ್ತದೆಯೆ? ಎಂಬುದನ್ನು ಸಂಶೋಧಕರೇ

ಹೇಳಬೇಕು. ಆದರೆ ಮಾನವನದು ಹಾಗಲ್ಲ, ಅವನ ನಗುವಿಗೆ ಅರ್ಥವಿದೆ... ಉದ್ದೇಶವಿದೆ....ಇನ್ನೊಬ್ಬರಿಗದು ಗೋಚರವಾಗುತ್ತದೆ.

ಮನುಷ್ಯ ತಾನು ನಗುತ್ತಾನೆ. ತಾನು ನಕ್ಕು ಇನ್ನೊಬ್ಬರನ್ನು ನಗಿಸುತ್ತಾನೆ. ಇಬ್ಬರೂ ಸೇರಿ ಮೂರನೆಯವನನ್ನು ನಗಿಸುತ್ತಾರೆ. ನಗು ಅವನ ಸಹಜ ಸ್ವಭಾವ. ಅದೊಂದು ನೈಸರ್ಗಿಕ ಸಂಪತ್ತು. ಸ್ವಾಭಾವಿಕ ಕ್ರಿಯೆಯೊಂದಿಗೆ ಮಾನವ ನಗುವಿಗೆ ಅಂಟಿಕೊಂಡಿದ್ದಾನೆ. ನಗುವು ಮಾನಸಿಕ, ದೈಹಿಕ ಬೆಳವಣಿಗೆಗೆ ಸೃಷ್ಟಿಕರ್ತನು ಪ್ರಕೃತಿಯಾಗಿ ಕೊಟ್ಟ ದಿವ್ಯವಾದ ಔಷಧಿ. ಅದರ ಶಕ್ತಿ ಚಿರನೂತನ ಮತ್ತು ಸಚೇತನ. ಇಚ್ಛಾನುಸಾರ ಅದನ್ನು ಉಪಯೋಗಿಸಿಕೊಳ್ಳಬಹುದು. ನಗುವುದಕ್ಕೆ ಆರ್ಥಿಕ ಮುಗ್ಗಟ್ಟಿನ ಸಮಸ್ಯೆಯಿಲ್ಲ. ಸಂಕಟಪಡಬೇಕಾಗಿಲ್ಲ. ಶ್ರಮದ ವಾಸನೆಯೇ ಇಲ್ಲ. ನಗೆ ಹುಟ್ಟಿಸುವ ಉತ್ತಮ ಸನ್ನಿವೇಶ.... ಚೇತೋಹಾರಿ ಶಕ್ತಿ....ಹಾಸ್ಯ ರಸ ಪ್ರಚೋದನೆಯ ವಾತಾವರಣ ಇದ್ದರೆ ಮುಗಿಯಿತು. ಒಂದೇ ಒಂದು ಹಾಸ್ಯದ ನುಡಿಯಿಂದಲೂ ನಗಿಸುತ್ತಾರೆ. ಕ್ಷಣಕಾಲದ ಅಭಿನಯದಿಂದಲೂ ಅದು ಸಾಧ್ಯ. ವಿನೋದ ಪ್ರಸಂಗ, ವ್ಯಂಗ್ಯ, ಅಣಕ, ವಿಡಂಬನೆ, ಪರಿಹಾಸ್ಯ, ಕುಚೋದ್ಯಗಳಿಂದಲೂ ಮಾನವ ನಗುತ್ತಾನೆ. ನಗು ಯಾರಿಗೆ ಬೇಡ? ತಾನು ಸದಾಕಾಲ ನಗುತ್ತಿರಬೇಕೆಂದು ಮನುಷ್ಯ ಆಶಿಸುತ್ತಾನೆ. ನಗೆಯ ಶಕ್ತಿ ಅದ್ಭುತ. ನಗುತ್ತಿದ್ದರೆ ಮನದ ದುಃಖ ನರಳುತ್ತದೆ. ಬೇಸರ ತೆರಳುತ್ತದೆ. ದುಗುಡ ಕಡಿಮೆಯಾಗುತ್ತದೆ. ಹೊಸದೊಂದು ಚೇತನ ಕೆರಳುತ್ತದೆ. ಅಂತಹ ನಗು ಎಲ್ಲರಿಗೂ ಬೇಕಲ್ಲವೆ ? ಆ ನಗುವಿನ ಬಗೆ ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಶ್ರೀ ಡಿ. ವಿ. ಜಿ. ಯವರು ತಮ್ಮ ಅಮರ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ;

> ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ
> ನಗುವ ಕೇಳುತ ನಗುವುದತಿಶಯದ ಧರ್ಮ
> ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
> ಮಿಗೆ ನೀನು ಬೇಡಿಕೊಳೊ–ಮಂಕುತಿಮ್ಮ
> ಎಂದಿರುವಾಗ ನಗುವಿನ ಮಹತ್ವದ ಬಗ್ಗೆ ಬೇರೆ ವ್ಯಾಖ್ಯಾನವಾದರೂ ಏಕೆ?

ಮನುಷ್ಯನ ನಗು ಒಂದು ವಿಶಿಷ್ಟವಾದ ರೀತಿಯಲ್ಲಿ ಸಂಸ್ಕಾರಗೊಂಡಿದೆ. ದಿನ ಕಳೆದಂತೆ ಅವನ ವಿಚಾರ ಶಕ್ತಿ ಬೆಳೆಯಿತು. ವಿಚಾರ ಶಕ್ತಿ ಬೆಳೆದಂತೆ ಗ್ರಹಣಶಕ್ತಿಯೂ ವಿಕಾಸಗೊಂಡು ನಗುವಿನಲ್ಲೂ ಸುಧಾರಣೆಯ ಲಕ್ಷಣ ಕಾಣತೊಡಗಿತು. ಒಂದಲ್ಲ ಒಂದು ಕಾರಣಕ್ಕಾಗಿ ಅವನು ನಗುತ್ತಾನೆ. ಅದರಲ್ಲಿ ಸಾಹಿತ್ಯವೂ ಬಹಳವಾಗಿ

ಮಾನವನನ್ನು ನಗಿಸಿವೆ....ನಗಿಸುತ್ತಿವೆ. ಆಯಾ ಭಾಷೆಯ ಓದುಗರನ್ನು ನಗಿಸುವಂತಹ ಹಾಸ್ಯ ಸಾಹಿತ್ಯವನ್ನು ರಚಿಸಿದ್ದಾರೆ. ಅದು ಪದ್ಯವಾಗಿರಬಹುದು. ಗದ್ಯವಾಗಿರಬಹುದು. ಕಾದಂಬರಿ, ಪ್ರಬಂಧ, ಹರಟೆ, ನಾಟಕ ಮುಂತಾದ ಗದ್ಯಸಾಹಿತ್ಯದ ಪ್ರಭೇದದಲ್ಲೂ ರುಚಿಯಾದ....ಶುಚಿಯಾದ....ಓದುಗರನ್ನು ಬಹಳವಾಗಿ ಆಕರ್ಷಿಸಿದ ಹಾಸ್ಯರಸವಿದೆ. ಮಾನವನನ್ನು ನಗಿಸುವುದರಲ್ಲಿ ಹಾಸ್ಯ ಸಾಹಿತ್ಯವೂ ಬಹಳಷ್ಟು ಶ್ರಮಿಸಿದೆ ಎಂಬು ದನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮೊದಲು ಮೊದಲು ಸಾಹಿತ್ಯವೆಂದರೆ ಸಂಪೂರ್ಣ ಪದ್ಯ ಸಾಹಿತ್ಯ. ಆಗ ಸಾಹಿತ್ಯವು ಅರಮನೆ, ಗುರು ಮನೆಗಳಲ್ಲೇ ಹೆಚ್ಚಾಗಿ ತಮ್ಮ ಪ್ರತಿಭೆಯನ್ನು ಚೆಲ್ಲಿಕೊಂಡಿತ್ತು. ಜನಮನಕ್ಕೆ ಸಾಹಿತ್ಯದ ಸೋಂಕು ಅಷ್ಟಾಗಿ ಇರಲಿಲ್ಲ. ಅಂದಿನ ಸಾಹಿತ್ಯ ವಿದ್ವಾಂಸರಿಗೆ ಮತ್ತು ಪಾಂಡಿತ್ಯ ಇರುವವರಿಗೇ ಮೀಸಲು. ಅಂದಿನ ಕವಿಗಳು ಆಯ್ದುಕೊಂಡ ವಸ್ತು.... ಅವರ ಶಬ್ದಾಡಂಬರದ ಶೈಲಿ....ನಿರೂಪಣೆಯ ಗಾಂಭೀರ್ಯ ಜನಜೀವನವನ್ನು ಪ್ರತಿ ಬಿಂಬಿಸುವುದಕ್ಕಾಗಿ ಉಪಯೋಗವಾಗುತ್ತಿರಲಿಲ್ಲ. ಹಾಗಾಗಿ ಹಾಸ್ಯ, ವಿಡಂಬನೆಗೆ ಹೆಚ್ಚು ಆಸ್ಪದವಿದ್ದಿರಲಿಲ್ಲ. ಹಳೆಗನ್ನಡ ಸಾಹಿತ್ಯದಲ್ಲಿ ಹಾಸ್ಯಕ್ಕೆ ಅವಕಾಶವೇ ಇಲ್ಲ ಎಂಬ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ಪದ್ಯ ಸಾಹಿತ್ಯದಲ್ಲೂ ಅಲ್ಲಲ್ಲಿ ಹಾಸ್ಯ ಮಿಂಚಿದೆ. ನಗುವು ಮಾನವನ ಹುಟ್ಟಿನೊಂದಿಗೆ ಜೊತೆಯಾಗಿಯೇ ಬಂದಿರುವಾಗ ಇಂದು ನಗುವವನು ಅಂದೂ ನಕ್ಕಿರಲೇ ಬೇಕಲ್ಲವೆ? ಸರ್ವಜ್ಞನ ವಚನಗಳಲ್ಲಿ ಮತ್ತು ಜಾನಪದ ಸಾಹಿತ್ಯದಲ್ಲಿ ಸಾಕಷ್ಟು ಹಾಸ್ಯ ಹರಿದಿದೆ ಎಂಬುದನ್ನು ಮರೆಯ ಬಾರದು. ನಕ್ಕು ನಗಿಸುವಾ ನುಡಿ ಲೇಸು ಎಂದ ಸರ್ವಜ್ಞ ಇನ್ನೊಂದೆಡೆ ಕುಲರಸಿಕ ನಿರುವಲ್ಲಿ ಕಡುನಗೆಯ ಹುತ್ತ ಕಾಣಯ್ಯ ಎಂದಿದ್ದಾನೆ. ಸರ್ವಜ್ಞ ಜಾನಪದ ಕವಿ ಯಾದರೂ ಹಿಂದಿನ ಕವಿಗಳಷ್ಟೆ ಶ್ರೇಷ್ಠನು. ಆದರೆ ಅವನು ತನ್ನ ವಚನಗಳನ್ನು ರಚಿಸಿದ ರೀತಿಯೇ ಬೇರೆ. ಜನ ಜೀವನದ ನಿಕಟವರ್ತಿಯಾಗಿ....ಸಮಾಜದ ಜನ ಜೀವನದ ಅಂದಿನ ಸಮಸ್ಯೆಗಳನ್ನು....ಲೋಪದೋಷಗಳನ್ನು ಹಾಸ್ಯ ವಿಡಂಬನೆ ಗಳಿಂದಲೇ ಖಂಡಿಸಿ ವಚನಗಳನ್ನು ಬರೆದಿದ್ದಾನೆ. ಸರ್ವಜ್ಞನ ವಚನಗಳಲ್ಲಿ ಮನದ ಕಲ್ಮಷ........ಜೀವನದ ಅಂಕು ಡೊಂಕು....ಲೋಪದೋಷಗಳನ್ನು ತೊಳೆಯುವುದಕ್ಕೆ ಅನುಕೂಲವಾದ ಹಾಸ್ಯವಿದೆ--ವಿಡಂಬನೆಯಿದೆ. ಜನಪದ ಸಾಹಿತ್ಯದಲ್ಲೂ ಹಾಸ್ಯವಿದೆ. ಗದ್ಯ ಸಾಹಿತ್ಯ ಬೆಳೆದುದು....ಅದರಲ್ಲಿ ಪ್ರಕಾರಗಳು ಹುಟ್ಟಿದ್ದು ತೀರ ಇತ್ತೀಚೆಗೆ. ಹಿಂದಿನ ಪ್ರಭಾವಶಾಲೀ ಅತ್ಯುತ್ತಮ ಪದ್ಯ ಸಾಹಿತ್ಯ ಪ್ರಚಾರದಲ್ಲಿದ್ದಾಗಲೇ ಗದ್ಯ ಸಾಹಿತ್ಯದ ಯುಗ ಆರಂಭವಾಯ್ತು. ಹೊಸ ಹೊಸ ವಿಧಾನ....ಹೊಸ ಬಗೆಯ ತಂತ್ರ....ನವೀನ ನಿರೂಪಣೆ....ಸುಧಾರಿಸಿದ ಶೈಲಿ....ಆಡುಮಾತಿನ ಸಂಭಾಷಣೆಯಿಂದ

ಪ್ರಚಲಿತ ಸಮಸ್ಯೆಗಳ ವಿವಿಧ ಮುಖಗಳನ್ನೆ ವಸ್ತುವನ್ನಾಗಿ ಆಯ್ದುಕೊಂಡು ಸರಳ ಭಾಷೆಯಲ್ಲಿ ಬರೆಯತೊಡಗಿದಾಗಲೇ ಗದ್ಯಸಾಹಿತ್ಯದಲ್ಲಿ ಹಾಸ್ಯಕ್ಕೆಸರಿಯಾದ ಅವಕಾಶ ಸಿಕ್ಕಿತು. ಅದು ಓದುಗರಿಗೆ ರುಚಿಸಿತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗದ್ಯ ಸಾಹಿತ್ಯ ಬೆಳದಂತೆ....ಜನಪ್ರಿಯತೆಗಳಿಸಿದಂತೆ ಸಾಹಿತ್ಯ ನಿರ್ಮಾಪಕರೂ ಹೆಚ್ಚಿದರು. ಹಾಸ್ಯ ಸಾಹಿತ್ಯ ಬರೆಯುವವರು ತಮ್ಮದೇ ಆದ ಪಂಥವನ್ನು ಆರಂಭಿಸಿದರು. ಸಾಹಿತ್ಯದ ಸಿರಿ ಬೆಳೆ ಹೆಚ್ಚಿತು. ಜೀವಂತ ಸತ್ವಪೂರ್ಣ ಸಾಹಿತ್ಯ ರಚನೆಯಿಂದ ಓದುಗರ ಸಂಖ್ಯೆಯೂ ಬೆಳೆಯಿತು.

ಕನ್ನಡ ಸಾಹಿತ್ಯದ ಸಮಗ್ರ ವಿಹಂಗಮ ನೋಟವನ್ನು ವಿವರಿಸುವುದು ನನ್ನ ಉದ್ದೇಶವಲ್ಲ. ಕನ್ನಡ ಸಾಹಿತ್ಯದ ಸಿಂಹಾವಲೋಕನವೂ ಇದಲ್ಲ. ಹಾಸ್ಯ ಸಾಹಿತ್ಯವು ಕಾಲಾನುಕ್ರಮವಾಗಿ ಹೇಗೆ ಬೆಳೆಯಿತು, ಎಂಬುದನ್ನು ವಿವೇಚಿಸುವ ಸಾಹಸವನ್ನು ನಾನು ಮಾಡಿಲ್ಲ. "ಹೂಬಾಣಗಳ" ಹಾಸ್ಯ ಲೇಖನಗಳ ಈ ಸಂಕಲನಕ್ಕೆ ಒಂದೆರಡು ಮಾತು ಬರೆಯುವ ಮೊದಲು ಪೀಠಿಕೆಯಾಗಿ ನಾಲ್ಕು ಪಂಕ್ತಿ ಬರೆಯುವ ಅವಕಾಶವನ್ನು ಉಪಯೋಗಿಸಿಕೊಂಡಿದ್ದೇನೆ.

ಹಾಸ್ಯ ಲೇಖನಗಳನ್ನು ಓದಿ ನಗುವುದು ಹೆಚ್ಚು ಪ್ರಿಯವಾದ ಮತ್ತು ಸುಲಭವಾದ ಕಾರ್ಯ. ಆದರೆ ಹಾಸ್ಯ ಲೇಖನ ಬರೆಯುವುದು ಕಷ್ಟ. ಅದನ್ನು ಓದಿದಾಗ ನಕ್ಕರೆ ಮಾತ್ರ ಶ್ರಮ ಸಾರ್ಥಕ. ಕೆಲವರ ಹಾಸ್ಯ ಲೇಖನಗಳನ್ನು ಓದಿದಾಗ ಗಹಗಹಿಸಿ ನಗುತ್ತೇವೆ. ಚೇತರಿಸಿಕೊಳ್ಳಲು ಬಹಳಕಾಲ ಬೇಕಾಗುತ್ತದೆ. ಅಂತಹ ಅದ್ಭುತ ಶಕ್ತಿಯ ಹಾಸ್ಯ ಅವರ ಸಾಹಿತ್ಯದಲ್ಲಿರುತ್ತದೆ. ಕೆಲವರ ಬರಹಗಳನ್ನು ಓದಿದಾಗ ಹೊಟ್ಟೆ ಹುಣ್ಣಾಗುವಂತೆ ನಗದಿದ್ದರೂ ಮುಖದಲ್ಲಿ ಮುಗುಳುನಗೆಯನ್ನಾದರೂ ಹುಟ್ಟಿಸುತ್ತವೆ. ಅಂತೂ ನಗಿಸುವ ಕಾರ್ಯ ಬಹು ಕಷ್ಟ. ಪ್ರಯತ್ನ ಹಲವರದಾದರೆ ಸಿದ್ಧಿ ಕೆಲವರಿಗೆ ಮಾತ್ರ. ಎಲ್ಲಾ ಲೇಖಕರೂ ಹಾಸ್ಯರಸವನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸುವ ಪ್ರಯತ್ನ ಮಾಡಲಿಲ್ಲ. ಹಾಗೆ ಪ್ರಯತ್ನಿಸಿದವರಲ್ಲಿ ಕೆಲವರು ಅತ್ಯುತ್ತಮ ಹಾಸ್ಯ ಕೃತಿಗಳನ್ನು ರಚಿಸಿ ಅಗ್ರಗಣ್ಯರೆನಿಸಿದ್ದಾರೆ. ಅವರ ಲೇಖನಗಳು ಕಡು ನಗೆಯ ಹುತ್ತವನ್ನೆ ನಿರ್ಮಿಸಿವೆ. ನಕ್ಕು ನಗಿಸುವ ಅವರ ಹಾಸ್ಯ ಸಾಹಿತ್ಯದಿಂದ ಕನ್ನಡಿಗರು ನಗೆಯ ಕಡಲಲ್ಲಿ ತೇಲುತ್ತಿದ್ದಾರೆ.

ಪ. ರಮಾನಂದರಾಯರ " ಹೂಬಾಣಗಳು " ಕೃತಿಯ ಕುರಿತು ಪ್ರಾಮಾಣಿಕ ವಿಮರ್ಶೆ ಮಾಡುವಲ್ಲಿ ಇಷ್ಟೊಂದು ದೀರ್ಘ ಪ್ರಾಸ್ತಾವಿಕ ವಿವರಣೆ ಅವಶ್ಯಕ ಎಂದು ನನ್ನ ಅಭಿಪ್ರಾಯ. ಹಾಸ್ಯವು ದ್ವಿತೀಯ ವರ್ಗದ ಸಾಹಿತ್ಯ ಎಂಬ ಅನಿಸಿಕೆಯನ್ನು

ಬಹಿರಂಗವಾಗಿ ಹೇಳುತ್ತಿದ್ದ ಅನೇಕ ಹಿರಿಯ ವಿದ್ವಾಂಸರಿಗೆ ಸವಾಲಾಗಿ ಹಾಸ್ಯ ಸಾಹಿತ್ಯವೇ ಇಲ್ಲದ ಕಾಲದಲ್ಲಿ ಪ್ರಕಟವಾದ ಕೃತಿ ಈ ಹೂಬಾಣಗಳು ವಿದ್ವಾಂಸರ ಅಭಿಪ್ರಾಯವನ್ನೆ ಬದಲಾಯಿಸಿತು. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಹಾಸ್ಯವೂ ಒಂದು. ಅದೂ ಶ್ರೇಷ್ಠವೇ ಎಂದು ಸಾಬೀತು ಗೊಳಿಸಿದವರು ರಮಾನಂದರಾಯರು. ಅವರ ಕೃತಿಯನ್ನು ಒಮ್ಮೆ ಓದಿ ಒಂದೆಡೆ ತಳ್ಳಿಬಿಡುವಂತಹ ದ್ವಿತೀಯ ವರ್ಗದ್ದಲ್ಲ. ಎಷ್ಟು ಬಾರಿ ಓದಿದರೂ ಹೂ ಬಾಣಗಳು ಮತ್ತೆ ಮತ್ತೆ ಓದಬೇಕೆನಿಸುವಷ್ಟು ಉತ್ತಮವಾಗಿದೆ. ಬೇರೆ ನಗೆಗಾರರಿಗಿಂತ ರಮಾನಂದರಾಯರು ಭಿನ್ನವಾದ ನಗೆ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೇಲಿನವರ ಸಾಲಿನಲ್ಲಿ ನಿಂತರು ಪಂಡಿತರೂ ಮೆಚ್ಚಿಕೊಂಡರು. ಇಂತಹ ಕೃತಿ ನೂರಾರು ಬಂದರೆ ಕನ್ನಡ ಸಾಹಿತ್ಯ ಕ್ಷೇತ್ರ ಶ್ರೀಮಂತವಾಗುತ್ತದೆ ಎಂಬ ಅಭಿಪ್ರಾಯವನ್ನು ಹಿರಿಯ ಸಾಹಿತಿಗಳು ಬಹಿರಂಗವಾಗಿ ಹೇಳಿದಾಗ ಪ. ರಮಾನಂದರಾಯರ "ಹೂ ಬಾಣಗಳು" ಒಂದು ಮೇರು ಕೃತಿಯಾಗಿ ಇಂದಿಗೂ ಅದು ಚಿರನೂತನವಾಗಿಯೇ ಇದೆ. ಶುದ್ಧ ಹಾಸ್ಯದ-ಸವಿರಾದ ವಿಡಂಬನೆಯ- ವೈಚಾರಿಕ ವಿಷಯದ ವ್ಯಂಗ್ಯವೆನಿಸಿದ ಪರಿಪೂರ್ಣ ಪರಿಹಾಸ್ಯದ, ಚಮತ್ಕಾರದ ಚತುರೋಕ್ತಿಯ ಹೂ ಬಾಣಗಳು ಸರ್ವಕಾಲಿಕ ಶ್ರೇಷ್ಠ ಕೃತಿ ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಲೇಖಕರ ಬರವಣಿಗೆಯ ಸುಂದರ ಶೈಲಿ ತೀರ **ಆಕರ್ಷಕ.** ನಿರೂಪಣೆಯ ತಂತ್ರ ನವೀನ. ಎಲ್ಲಿಯೂ ಬೇಸರಬಾರದಂತೆ ಲೇಖಕರು ಸರಾಗವಾಗಿ ಹಾಸ್ಯದ ಹೊನಲನ್ನು ಹರಿಸಿದ್ದಾರೆ. ಈ ಎಲ್ಲ ಗುಣಗಳಿಂದ "ಹೂ ಬಾಣಗಳು" ಕನ್ನಡ ಸಾಹಿತ್ಯರಂಗದಲ್ಲಿ ಶಾಶ್ವತ ಕೃತಿಯಾಗಿ ನಿಲ್ಲುತ್ತದೆ.

•

ಹದಿನಾಲ್ಕು ಲೇಖನಗಳ ಅಥವಾ ಪ್ರಬಂಧಗಳ ಸಂಕಲನದಲ್ಲಿ ಒಂದೊಂದು ಲೇಖನವನ್ನು ಪ್ರಾಮಾಣಿಕವಾಗಿ ವಿಮರ್ಶಿಸಿದರೆ ಅದೇ ಒಂದು ಗ್ರಂಥವಾದೀತು. ಗ್ರಂಥದ ಪುಟ ಪರಿಮಿತಿಯಲ್ಲೇ ಸಂಕ್ಷಿಪ್ತ ವಿವರಣೆ ನೀಡುವುದು ಮಾತ್ರ ಸಾಧ್ಯ. ಅದರಲ್ಲೂ "ಕೊಡೆಗಳು", "ನನ್ನ ಭಾವ", "ಹರಿಕಮತನ ನೆನಪು", ಈ ಹಾಸ್ಯ ಲೇಖನಗಳನ್ನು ಗಣನೀಯವಾಗಿ ಪರಿಗಣಿಸಬೇಕಾಗುತ್ತದೆ. ಎಂತಹ ವ್ಯಕ್ತಿಯೂ ಈ ಲೇಖನಗಳನ್ನು ಓದಿದಾಗ ಲೇಖಕರ ಬಗ್ಗೆ ಗೌರವ ಭಾವನೆಯಿಂದ ಮನದಲ್ಲಿ ಸ್ಮರಿಸದಿರಲಾರ. ಕೆಲವೇ ಮಾತಿನಲ್ಲಿ ರಮಾನಂದರಾಯರು ಹೊಟ್ಟೆ ಬಿರಿಯುವಂತೆ ನಗಿಸಿಬಿಡುತ್ತಾರೆ. ನಗದವನ ಹಲ್ಲು ಕಾಣಿಸುತ್ತದೆ. ಬಿಗುಮುಖದವನೂ ಗೊಳ್ಳೆಂದು ನಕ್ಕುಬಿಡುತ್ತಾನೆ. ಅಳುವವನಲ್ಲಿ "ಅಳಬೇಡ....ನಿನ್ನನ್ನು ನಗಿಸುತ್ತೇನೆ. ನೋಡು, ರಮಾನಂದರಾಯರ ಹೂಬಾಣಗಳು ಪುಸ್ತಕದಲ್ಲಿ ಒಂದು ನಗೆ ಬರಹವಿದೆ. ಹೆಸರು ಶ್ರೀನಿವಾಸನ ಅಕೃತ್ಯ ಎಂದು. ಅದರಲ್ಲಿ ಅವನು ಮಾಡಿದ ಅಕೃತ್ಯ ಯಾವುದು ಎಂಬುದನ್ನು ಲೇಖಕರು ಎಷ್ಟು ಸ್ವಾರಸ್ಯವಾಗಿ ಹೇಳಿದ್ದಾರೆ ನೋಡು ..."ಓದುತ್ತೇನೆ" ಎಂದು ಹೇಳಿ ಅವನ

ಬರವಣಿಗೆಯ ಪರಿಚಯ ಮಾಡಿಕೊಟ್ಟರೆ ಆತ ಖಂಡಿತಾ ಅಳು ನಿಲ್ಲಿಸಿ ನಗಲು ಆರಂಭಿಸುತ್ತಾನೆ.

ಹಾಸ್ಯ ಲೇಖನಗಳನ್ನು ಓದಿ ನಗುವುದು ಹೆಚ್ಚು ಪ್ರಿಯವಾದ ಮತ್ತು ಸುಲಭವಾದ ಕಾರ್ಯ. ಆದರೆ ಹಾಸ್ಯ ಲೇಖನ ಬರೆಯುವುದು ಕಷ್ಟ. ಕೆಲವರ ಹಾಸ್ಯ ಲೇಖನ ಗಳನ್ನು ಓದಿದಾಗ ಗಹಗಹಿಸಿ ನಗುತ್ತೇವೆ. ಚೇತರಿಸಿಕೊಳ್ಳಲು ಬಹಳ ಕಾಲ ಬೇಕಾಗುತ್ತದೆ. ಅಂತಹ ನವಿರಾದ ಬರವಣಿಗೆ ಪ. ರಮಾನಂದರಾಯರದು. ನಾಲ್ಕು ದಶಕಗಳಷ್ಟು ಹಿಂದೆಯೇ ಅವರು ಬರೆದ ಹೂಬಾಣಗಳು ಹಾಸ್ಯ ಪ್ರಬಂಧದ ಕೆಲವು ಲೇಖನಗಳು ಇಂದಿಗೂ ಬೇರೆ ಯಾವುದೇ ಮಹಾ ಹಾಸ್ಯ ಸಾಹಿತ್ಯಕ್ಕಿಂತ ಏನೂ ಕಡಿಮೆಯಿಲ್ಲ. ಅದರಲ್ಲೂ ನನ್ನ ಭಾವ, ಕೊಡೆಗಳು, ಹರಿಕಮತನ ನೆನಪು, ಶ್ರೀನಿವಾಸನ ಅಕೃತ್ಯ ಮುಂತಾದ ಲೇಖನಗಳನ್ನು ಹತ್ತು ಬಾರಿ ಓದಿದರೂ ಮತ್ತೆ ಮತ್ತೆ ಓದಬೇಕೆನಿಸುವಷ್ಟು ಪ್ರಭಾವಶಾಲಿಯಾಗಿದೆ. ನಗಿಸುವ ಕಾರ್ಯ ಬಹು ಕಷ್ಟ. ಪ್ರಯತ್ನ ಹಲವರಾದರೆ ಸಿದ್ಧಿ ಕೆಲವರಿಗೆ ಮಾತ್ರ. ಎಲ್ಲಾ ಲೇಖಕರು ಹಾಸ್ಯ ರಸವನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸುವ ಪ್ರಯತ್ನ ಮಾಡಲಿಲ್ಲ. ಹಾಗೆ ಪ್ರಯತ್ನಿಸಿದವರಲ್ಲಿ ಪ. ರಮಾನಂದರು ಒಬ್ಬರು. ಅವರ ನಗೆ ಲೇಖನ ಬೇರೆಯವರ ಬರಹಗಳಿಂತ ತೀರಾ ಭಿನ್ನವಾದದ್ದು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರ ಸ್ಥಾನ ದೊಡ್ಡದು. ರಚಿಸಿದ ಕೃತಿಯೂ ಶ್ರೇಷ್ಠವೇ. ಅದರಲ್ಲೂ ಮರೆಯಬಾರದ ಕೃತಿ "ಹೂಬಾಣಗಳು." ನೋಯಿಸುವ ವ್ಯಂಗ್ಯ ಅವರದಲ್ಲ. ಎದೆ ಚುಚ್ಚುವ ವಿಡಂಬನೆಯೂ ಇಲ್ಲ. ಮನಸ್ಸಿಗೆ ಕಚುಗಳಿ ಇಡುವ ಹದವಾದ ಹಾಸ್ಯ. ಅದೂ ಸರಳವಾದ ಭಾಷೆಯ ಸುಲಭ ಶೈಲಿಯ ನಿರೂಪಣೆ. ಮಿದುಳಿಗೆ ಕಸರತ್ತು ಮಾಡಬೇಕಾದ ಪ್ರಮೇಯವೇ ಇಲ್ಲ. ಓದಿದ ನಂತರ ಬಹುಸಲ ಮತ್ತೆ ಮತ್ತೆ ನೆನಪಿಸಿಕೊಂಡು ನಗುವಂತಹ ಬರವಣಿಗೆ. ಆಯ್ದುಕೊಂಡ ವಿಷಯ ಏನೇ ಇರಲಿ, ಅವರ ನಿರೂಪಣೆಯ ಸೊಗಸೇ ಬಲುಚಂದ. ಎಷ್ಟೋ ಸಲ ತೀರಾ ಸಾಮಾನ್ಯವಾದ ವಿಷಯದ ಮೇಲೆ ಹರಟೆ ಹೊಡೆಯುತ್ತಾರೆ. ಆದರೆ ಅದರಲ್ಲೂ ಹಾಸ್ಯದ ಹೊಸತನವಿದೆ....ಹದವಾದ ನಗುವಿದೆ. ಆದ್ದರಿಂದ ಪ. ರಮಾನಂದರು ಕನ್ನಡದ ಹಿರಿಯ ನಗೆಗಾರರಾಗಿದ್ದಾರೆ.

ಹದಿನಾಲ್ಕು ಪ್ರಬಂಧಗಳಲ್ಲಿನ ಕೆಲವು ಹಾಸ್ಯ ಪ್ರಸಂಗಗಳನ್ನು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ. 'ಕೊಡೆಗಳು' ಮೊದಲ ಲೇಖನ. ಪ. ರಮಾನಂದರು "ಹೇಳುತ್ತಾರೆ." ಮಳೆಗಾಲ ಬಂತು. ಅವರಿಗೆ ಒಂದು ಕೊಡೆಯ ಅಗತ್ಯವಿದೆ. ಆದರೆ ಮಾಡುವುದೇನು? ನನಗೂ ಕೊಡೆಗೂ ದೀರ್ಘಕಾಲದ ದಾಂಪತ್ಯ ಸುಖವನ್ನು ವಿಧಾತನು ಬರೆಯಲೇ ಇಲ್ಲ. ನಾನು ಯಾವ ಕೊಡೆಯನ್ನು ಎಷ್ಟು ಶ್ರದ್ಧೆಯಿಂದ

ಹುಡುಕಿ ಇಟ್ಟುಕೊಂಡರೂ ನಮ್ಮಿಬ್ಬರ ಜಾತಕದಲ್ಲಿ ಮೇಳಾಮೇಳಿಯೇ ಬರುವುದಿಲ್ಲ ಕಳೆದ ಮಳೆಗಾಲದಲ್ಲಿ ನಾಲ್ಕು ವೀರಾಂಗನೆಗಳಾದ ಕೊಡೆಗಳು ನನ್ನ ಕೈಯನ್ನು ಹಿಡಿದು ನನ್ನನ್ನು ಗೌರವಿಸಿದ್ದುವು. ಮೊದಲ ಕೊಡೆ ಎರಡನೆಯ ಹೆಂಡತಿಯಂತೆ. ಅದಕ್ಕೆ ಶೃಂಗಾರ. ಸುಂದರವಾದ ಪಂಚರಂಗಿ ಸೀರೆಯನ್ನುಡಿಸಿದರು. ಸಾಧಾರಣ ಮಳೆ ಬಂದಾಗಲೂ ಕಂಕುಳಲ್ಲಿಯೇ ಇಟ್ಟುಕೊಂಡು ಜೋಪಾನ ಮಾಡಿದ್ದಾಯ್ತು. ಮೂರನೆ ದಿನ ಅದಕ್ಕೆ ಪ್ರಥಮ ಸ್ನಾನವಾಯಿತು. ಅದರೊಂದಿಗೆ ನನಗೂ ವಿಶೇಷ ಮಂಗಳ ಸ್ನಾನವಾಯಿತು. ಅಂದು ರಾತ್ರಿ ನಾನು ನನ್ನ ಕೊಡೆಗಾಗಿ ಪಟ್ಟ ವ್ಯಥೆ ಹೇಳತೀರದು. ಕಣ್ಣಿನಲ್ಲಿ ಗಾಢ ನಿದ್ರೆ ಹತ್ತಿದ್ದರೂ ಮೂರು ಸಲ ಎಚ್ಚತ್ತು ಅದರ ಮೈಯನ್ನು ಚೆನ್ನಾಗಿ ಮುಟ್ಟಿ ಶೀತವಾಗಿದೆಯೋ ಎಂದು ನೋಡಿದೆನು. ಏಕೆಂದರೆ ಇಂತಹ ಕೋಮಲವಾದ ಕೊಡೆಗಳಿಗೆ ಕೆಮ್ಮು ಉಬ್ಬಸ ರೋಗ, ಎಲುಬುಗಳ ಕ್ಷಯ ಹಿಡಿಯುತ್ತದೆ ಬಹುಬೇಗ. ಆಯ್ತು....ನಾಲ್ಕನೆಯ ದಿನ ಒಂದು ಮೀಟಿಂಗ್‌ನಲ್ಲಿ ಕುಳಿತಿದ್ದಾಗ ನನ್ನ ಮುದ್ದು ಕೊಡೆಯಿಂದ ಅಗಲಿರಬೇಕಾಯ್ತು. ಮೀಟಿಂಗ್ ಆದಮೇಲೆ ನೋಡಿದೆನು. ನನ್ನ ಪ್ರೇಮದ ಕೊಡೆ ಯಾರಸಂಗಡವೋ ಪಲಾಯನ ಮಾಡಿತ್ತು. ಇದರ ಬಗ್ಗೆ ಮರುಗಿದವಳು ನನ್ನ ಹೆಂಡತಿ. ಅವಳಿಗೆ ಸವತಿ ಮತ್ಸರವಿರಲಿಲ್ಲ. ನಾನು ಊಟ ಮಾಡುವಾಗ-ಆಟವಾಡುವಾಗ-ಮಲಗುವಾಗ. ಏಳುವಾಗ-ಮೈ ಕೈ ಮುರಿದುಕೊಳ್ಳುವಾಗ-ಆಕಳಿಸುವಾಗ ಅವಳು ನಾನು ಕಳೆದು ಕೊಂಡ ಕೊಡೆಯ ಧ್ಯಾನವನ್ನೇ ಮಾಡಲಾರಂಭಿಸಿದಳು. ಅದರಲ್ಲೂ ಮೌನವಾದ ಧ್ಯಾನವಲ್ಲ. ನನ್ನ ಕೊಡೆಯ ಸಕಲ ಸದ್ಗುಣಗಳ ಬಣ್ಣನೆಯಿಂದ ಕೂಡಿದ ಒಂದು ಅಮೋಘವಾದ ಸ್ತೋತ್ರ. ಅದು ನನ್ನ ಕಂಕುಳಲ್ಲಿಯೇ ಇತ್ತು ಎಂದು ಹೇಳಿದರೂ. ಅವಳ ವಾದ ಈಗಲೂ ನನ್ನ ಕಂಕುಳಲ್ಲಿರುವುದು ನನ್ನ ತಲೆ ಎಂದೇ ಹೇಳುತ್ತಾಳೆ, ನನ್ನ ಕೊಡೆ ಇನ್ನೊಬ್ಬರ ಜೊತೆ ಪಲಾಯನ ಮಾಡಿದ ಮೇಲೆ ಇನ್ನೊಬ್ಬರ ಅಪರಿಚಿತವಾದ ಕೊಡೆ ನನಗೆ ಹಸ್ತ ಲಾಘವ ಕೊಟ್ಟಿತು. ಆ ಅಪರಿಚಿತ ಕೊಡೆ ಎಷ್ಟು ಮಾತ್ರಕ್ಕೂ ಸುಮಂಗಲಿಯಾಗಿರಲಿಲ್ಲವೆಂದು ತಿಳಿದು ಅದಕ್ಕೊಂದು ಬಿಳಿ ಸೀರೆ ಉಡಿಸಿದೆನು. ಮರುದಿನವೇ ಅದಕ್ಕೆ ಶೀತ ಕೆಮ್ಮು ಆಗಿ ಬಹಳ ಕಷ್ಟಪಟ್ಟು ಮೂರನೆಯ ದಿನವೇ ಚಿಕ್ಕ ಬಿರುಗಾಳಿಗೆ ಪ್ರಾಣ ಬಿಟ್ಟಿತು. ನನ್ನ ಮಗ ಆ ಕೊಡೆಯ ಹೆಣಕ್ಕೆ ಹೆದರದೆ ಕೂಡಲೇ ಅದರ ಎಲುಬುಗಳಿಂದ ಬಿಲ್ಲು-ಬಾಣಗಳನ್ನು ಮಾಡಿ ಆಡಲು ಆರಂಭಿಸಿದನು.

ಪ. ರಮಾನಂದರಾಯರ ಕಲ್ಪನೆಯ ಶ್ರೀನಿವಾಸನ ಅಕೃತ್ಯದ ಪರಿಡಯ ವಾಗಲೇ ಬೇಕು. ಅವರು ಹೇಳುತ್ತಾರೆ "ನಾನು ಶ್ರೀನಿವಾಸನು ಮಾಡಿದುದನ್ನು ಅನುಮೋದಿಸುವುದಿಲ್ಲ. ಅವನ ಕಡೆಯಿಂದ ವಕಾಲತ್ತನ್ನು ವಹಿಸುವುದಿಲ್ಲ. ಆದರೆ ಅವನ ಅಕೃತ್ಯದಲ್ಲಿ ಕೆಲವು ವಿದ್ಯಮಾನಗಳಿದ್ದುವು. ಅವನ್ನು ಸೂಚಿಸುವುದೇ ನನ್ನ

ಈಗಿನ ಕರ್ತವ್ಯ. ಶ್ರೀನಿವಾಸ ಹನ್ನೆರಡನೇ ವಯಸ್ಸಿನಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ತೋರಿಸಿದ. ಮೊದಲು ಚಿಕ್ಕ ಕವಿತೆ...ಕ್ರಮೇಣ ಪುಟ್ಟ ಉಪನ್ಯಾಸ ಅನಂತರ ಸಣ್ಣ ಕಥೆಗಳ ರಚನೆ ಆರಂಭವಾಯ್ತು. ಕಾಲ ಕಳೆಯಿತು. ಒಂದು ಶಾಲೆಯ ಉಪಾಧ್ಯಾಯನಾದ. ಒಂದು ದಿನ ಟಪಾಲಿನಲ್ಲಿ ಒಂದು ಕಾಗದವೂ ಬಂತು. ಪತ್ರಿಕೆಯೂ ಬಂತು. ಪತ್ರಿಕೆಯಲ್ಲಿ ಅವನು ಬರೆದಿದ್ದ ಒಂದು ಕಥೆ ಅಚ್ಚಾಗಿತ್ತು. ಅದು ಅವನ ಮೊದಲ ಕಥೆ. ಜೊತೆಯಲ್ಲಿ ಸಂಪಾದಕರ ಪತ್ರ. ನೀವು ಇನ್ನೂ ಇದರಂತೆಯೇ ಹೆಚ್ಚು ಹೆಚ್ಚು ಕಥೆಗಳನ್ನು ಬರೆದು ನಮಗೆ ಕಳುಹಿಸುವಿರೆಂದು ನಂಬುತ್ತೇವೆ. ನಾವು ಅವುಗಳನ್ನು ಯಾವಾಗಲೂ ಸಂತೋಷದಿಂದ ವೀರಕೇಸರಿಯಲ್ಲಿ ಪ್ರಕಟಿಸುವೆವು. ಹಿರಿ ಹಿರಿ ಹಿಗ್ಗಿದ ಶ್ರೀನಿವಾಸ ತಲೆ ಎತ್ತಿ ನೋಡಿದ. ಸೌಭಾಗ್ಯ ಸುಂದರಿ ಗುಲಾಬಿ ನಿಂತಿದ್ದಳು. ಅಚ್ಚಾದ ಕಥೆಯ ಬಿಸಿಯಿಂದ ಮದ ತಲೆ ಏರಿತ್ತು. ತಟಕ್ಕನೆ ಗುಲಾಬಿ ಇದ್ದೆಡೆ ಹಾರಿ ಅವಳನ್ನು ಬಿಗಿಯಾಗಿ ಹಿಡಿದುಕೊಂಡು ಅವಳ ತುಟಿಗಳನ್ನು ದೀರ್ಘಕಾಲದವರೆಗೆ ಚುಂಬಿಸಿದನು. ಅವಳೇನೂ ಅಡ್ಡ ಬರಲಿಲ್ಲ. "ಏನಿದು ಲಜ್ಜೆ" ಎಂದು ಅವನಿಂದ ಬಿಡಿಸಿಕೊಂಡಳು. "ಗುಲಾಬಿ ಕ್ಷಮಿಸು.... ಯಾರಿಗೂ ಹೇಳಬೇಡ" ಎಂದ ಶ್ರೀನಿವಾಸ. "ಯಾರಿಗೆ ಯಾಕೆ ಹೇಳಬೇಕು; ಅದೇನೂ ದೊಡ್ಡದಲ್ಲ" ಎಂದು ಗುಲಾಬಿ ತುಟಿ ಒರೆಸಿಕೊಳ್ಳುತ್ತಾ ಪಿಸಿಪಿಸಿ ನಕ್ಕಳು. ಗುಲಾಬಿಗೆ ಶ್ರೀನಿವಾಸನ ಅಕೃತ್ಯ ದೊಡ್ಡದಲ್ಲ ವಾದುದಕ್ಕೆ ಕಾರಣವುಂಟು. ಅವಳನ್ನು ಚುಂಬಿಸಿದವರಲ್ಲಿ ಶ್ರೀನಿವಾಸನು ಮೊದಲನೆಯವನೇನಲ್ಲ. ಅವಳನ್ನು ನೋಡಿದ ಕೂಡಲೇ ಚುಂಬಿಸುವುದು ಜನರಿಗೆ ಒಂದು ರೂಢಿಯಾಗಿತ್ತು. ಆದರೆ ಇದು ಶ್ರೀನಿವಾಸನಿಗೆ ಹೇಗೆ ತಿಳಿಯಬೇಕು. ಇಷ್ಟೆಲ್ಲ ನಡೆಯುವಾಗ ಬಾಗಿಲು ತೆರದೇ ಇತ್ತು. ಬಾಗಿಲಿನಲ್ಲಿ ಶಾಲೆಯ ಪೇದೆ ಕಣ್ಣ ನಿಂತಿದ್ದವ ಇದನ್ನು ಕಂಡು "ನ್ಯಾಂನ್ ಕಂಡಿಟುಂಡು" ಎಂದು ಹೇಳಿಯೇ ಬಿಟ್ಟ. ಶ್ರೀನಿವಾಸ ಬೆಚ್ಚಿದ. ಕಣ್ಣನಿಗೆ ಗುಲಾಬಿಯನ್ನು ಚುಂಬಿಸುವ ಆಸೆ. ಆದರೆ ಇನ್ನೂ ಆಗಿರಲಿಲ್ಲ. ಅದೇ ಅವನಿಗ್ಗೆ ಮತ್ಸರ. ಅನಂತರ ಏನೇನೋ ನಡೆಯಿತು. ಕೊನೆಯಲ್ಲಿ ಲೇಖಕರು; ಶ್ರೀನಿವಾಸನ ಎಲ್ಲಾ ತಪ್ಪನ್ನು ಮನ್ನಿಸಿ ಹೀಗೆ ಹೇಳುತ್ತಾರೆ "ನಿಶ್ಚಯ ತಾಂಬೂಲದಂತಹ ತಿರುಳಿಲ್ಲದ ಕಥೆಯನ್ನು ವೀರಕೇಸರಿಯಲ್ಲಿ ಪ್ರಕಟವಾಗುವಂತೆ ಬರೆದು ನಮ್ಮ ಬಡವಾಚಕ ವೃಂದವನ್ನು ಪೀಡಿಸಿದುದೇ ಅವನ ಅತಿ ದೊಡ್ಡ ಅಕೃತ್ಯವೆಂದು ನನ್ನ ಮತ" ಎನ್ನುತ್ತಾರೆ.

ಚಿಕ್ಕರಾಮು ಅಜ್ಜಿಗೆ ಹೇಳಿದ ಕಥೆ ತೀರ ಸರಳ—ಲಘು ವಿಷಯದ ವಸ್ತುವಾದರೂ ತಿಳಿ ಹಾಸ್ಯದ ಸೊಗಸು ಗಮನಾರ್ಹ. ಚಿಕ್ಕರಾಮು ಅಜ್ಜಿಗೆ ಹೇಳುತ್ತಾನೆ, "ಅಜ್ಜೀ, ಕಥೆಯನ್ನು ಕೇಳುವಾಗ್ಗೆ ಮಧ್ಯ ಮಾತು ಬೆಳೆಯಿಸಬಾರದು. ಸುಮ್ಮನಿರಬೇಕು. ನೀನು ಕೊಟ್ಟ ಪಾವಾಣೆಯನ್ನು ತೆಗೆದುಕೊಂಡು ಹುಡಿಮಲ್ಯರ ಅಂಗಡಿಗೆ ಹೋಗುತ್ತಿದ್ದೆನು. ದಾರಿಯಲ್ಲಿ ನೆರೆಮನೆಯ ಲಕ್ಷ್ಮಮ್ಮ ಸಿಕ್ಕಿದರು. ಅವಳ ಹತ್ತಿರ

ಒಂದು ಚಿಲ್ಲೋದಾದ ಕೋಳಿ ಪೊಟ್ಟೆಯಿತ್ತು. ಆಗ ಅವಳು "ರಾಮು, ಈ ಕೋಳಿ ಪೊಟ್ಟೆಯನ್ನು ನಿನಗೆ ಕೊಡುತ್ತೇನೆ. ಅದನ್ನು ಭದ್ರವಾಗಿಡು. ಐದು ದಿವಸಗಳ ನಂತರ ಅದರಿಂದ ಚಿಲ್ಲೋದಾದ ಪಂಚವರ್ಣದ ಗಿಳಿ ಹೊರಗೆ ಬರುವುದು" ಎಂದು ತತ್ತಿಯನ್ನು ನನಗೆ ಕೊಟ್ಟಳು.

ಆಗ ಅಜ್ಜಿ ನಡುವೆ ಬಾಯಿ ಹಾಕುತ್ತಾಳೆ.

"ಹುಚ್ಚು ಮಗು! ಕೋಳಿ ಪೊಟ್ಟೆಯಿಂದ ಗಿಳಿ ಬರುವುದೆ?" ಎಂದು. ರಾಮು ಹೇಳುತ್ತಾನೆ.

"ಅಜ್ಜೀ....ನೀನು ಕಥೆಯನ್ನು ಹೇಳುವಾಗ್ಗೆ ನಾನು ಮಾತ್ರ ಮಾತನಾಡಬಾರದು, ಸದ್ದು ಮಾಡಬಾರದು, ಪ್ರಶ್ನೆ ಕೇಳಬಾರದು. ಬಂಡೆ ಕಲ್ಲಿನಿಂದ ಅಹಲ್ಯೆ ಬಂದಳೆಂದು ನೀನು ಹೇಳುವಾಗ್ಗೆ ನಾನು ಸುಮ್ಮನಿರಬೇಕು. ರಾವಣ ಸೀತೆಯನ್ನು ಕೊಂಡು ಹೋದ ಎಂದು ನೀನು ಹೇಳುವಾಗ ಅದು ನಿಜವಾಗಿದ್ದರೆ ರಾವಣ ಅಮ್ಮನನ್ನು ಏತಕ್ಕೆ ಕೊಂಡು ಹೋಗುವುದಿಲ್ಲ ಎಂದು ಕೇಳಬಾರದು. ನೀನು ಮಾತ್ರ...." ಎಂದಾಗ ಅಜ್ಜಿ "ಇಲ್ಲ ಮಗು....ಇನ್ನು ಮಾತನಾಡುವುದಿಲ್ಲ" ಎನ್ನುತ್ತಾರೆ. ಇದು ಪ. ರಮಾನಂದರ ಅತಿ ಸೂಕ್ಷ್ಮ ಸಂವೇದನೆಯ ಹಾಸ್ಯಕ್ಕೊಂದು ಮಾದರಿ.

ನನ್ನ ಭಾವ ಪ. ರಮಾನಂದರಾಯರ ಶ್ರೇಷ್ಟ ನಗೆ ಬರಹ. ಈ ಬಗೆಯ ಬರವಣಿಗೆ ಸರ್ವಕಾಲಿಕ ಚಿರನೂತನ. "ನನಗೊಬ್ಬ ಭಾವನಿರುವನು. ಮದುವೆಯಾದ ಪ್ರತಿ ಯೊಬ್ಬನಿಗೂ ಒಬ್ಬ ಭಾವನಿರಬೇಕಷ್ಟೆ" ಎಂದು ಆರಂಭಿಸುತ್ತಾರೆ. ಭಾವ ಒಳ್ಳೆಯ ವನೇ. ಆದರೆ ಅವನಿಗೊಂದು ಚಟ. ಅವನು ರಜಾದಲ್ಲಿ ಅಕ್ಕನ ಮನೆಗೆ ಬರುತ್ತಾನೆ. ಅವನ ಸ್ವಭಾವ ಇಷ್ಟೆ. ಅವನನ್ನು ಎದುರುಗೊಳ್ಳಲು ರೈಲ್ವೆ ಸ್ಟೇಷನ್ನಿಗೆ ಹೋದಾಗ ಭಾವನನ್ನು ಕಂಡು "ನೀವು ಬಂದಿದ್ದೀರಾ?" ಎಂದು ಕೇಳುತ್ತಾನೆ. ಕಾರಿನ ಬಳಿ ಬಂದಾಗ "ಭಾವಯ್ಯ....ಇದೇನೇನು ನಿಮ್ಮ ಕಾರು" ಎಂದು ಪ್ರಶ್ನಿಸುತ್ತಾನೆ. ಹೀಗೆ ಅವನ ಸ್ವಭಾವ. ಮನೆಯ ಹತ್ತಿರ ಬಂದಾಗ 'ಭಾವಯ್ಯ....ಇದೇನೋ ನಿಮ್ಮ ಮನೆ" ಎಂದು ಮತ್ತೆ ಕೇಳುತ್ತಾನೆ. ಇದೇ ರೀತಿ ಅವನ ಪ್ರಶ್ನೆ. ಊಟ ಮಾಡಿ ಹೊರಬಂದಾಗ "ಊಟ ಮಾಡಿಕೊಂಡು ಬಂದೆಯಾ ?" ಎಂದು ಕೇಳುತ್ತಾನೆ. ಮೊದಲೇ ಊಟಕ್ಕೆ ಕುಳಿತಿದ್ದಾಗ "ಊಟ ಮಾಡುತ್ತೀಯಾ ?" ಎಂದು ಕೇಳಿದ್ದಾಗಿತ್ತು. ಕೊನೆಗೆ ಒಂದು ದಿನ ಭಾವ ಗಡ್ಡ ಮಾಡಿಕೊಳ್ಳುತ್ತಿದ್ದಾಗ ಕೇಳುತ್ತಾನೆ: "ಏನು ಭಾವಯ್ಯ....ಕ್ಷೌರ ಮಾಡಿಕೊಳ್ಳುತ್ತೀಯಾ?" ಎಂದು ಕೇಳಿದಾಗ ಭಾವನ ಸಿಟ್ಟು ನೆತ್ತಿಗೇರಿ ಕ್ಷೌರದ ಕತ್ತಿಯನ್ನು ಹಿಡಿದು ಕೊಂಡೇ ಅವನ ಹತ್ತಿರ.

ಬಾನು ಸಿಟ್ಟನಿಂದ "ನೋಡಿದೆಯಾ ಈ ಕತ್ತಿಯನ್ನು ....ಅನವಶ್ಯಕ ಪ್ರಶ್ನೆಗಳನ್ನು ಕೇಳುವ ನಿನ್ನಂತಹ ಭಾವಂದಿರ ಕುತ್ತಿಗೆಯನ್ನು ಕಡಿಯುವಂತಹ ಕತ್ತಿ" ಎಂದು ಕೂಗಿದಾಗ ಭಾವ ನಿಧಾನವಾಗಿ ಏನೂ ಆಗಿಲ್ಲವೇಂಬಂತೆ "ಭಾನಯ್ಯಾ... ನಿನಗೆ ಸಿಟ್ಟು ಬಂದಿದೆಯೇ ?" ಎಂದು ಕೇಳಿ ಓದುಗರನ್ನು ಗಹಗಹಿಸಿ ಹೊಟ್ಟೆ ಬಿರಿಯುವಂತೆ ನಗಿಸಿ ಬಿಡುತ್ತಾರೆ ಪ. ರಮಾನಂದ ರಾಯರು ನನ್ನ ಭಾವ ಲೇಖನದಲ್ಲಿ. ಇದು ಅತ್ಯುತ್ತಮ ನಗೆ ಬರಹ.

"ಅಂಕು ಡೊಂಕು ಸಂಕಪಾಲ" ಒಗಟನ್ನು ಬಿಡಿಸುವ ಲೇಖಕರಿಗೆ ಅರ್ಥವಾಗದೆ.... ಆ ಒಗಟನ್ನು ಬಿಡಿಸಲಾರದೆ ಒದ್ದಾಡಿ ಕೊನೆಗೆ ಹರಿಕಮಠನಲ್ಲಿಗೆ ಹೋಗಿ ಆ ಒಗಟನ್ನು ಅವನಿಗೆ ವರ್ಗಾಯಿಸಿ 'ನನ್ನ ಪಿಶಾಚ ನನ್ನನ್ನು ತೊಲಗಿತು. ಈಗ ಅದು ಹರಿಕಮಠನನ್ನು ಹಿಡಿದಿದೆ' ಎಂದು ಸಮಾಧಾನಪಟ್ಟುಕೊಳ್ಳುವ ವಿನೋದದ ಸಂಗತಿ.

ನಾನು ನಾಗಣ್ಣ ವಿಚಿತ್ರ ದಂಪತಿಗಳ ಸ್ವಭಾವದ ಪರಿಚಯ ಮಾಡಿಕೊಡುತ್ತದೆ. ಗಂಡ ಹೆಂಡಿರು ಜಗಳ ಆಡುತ್ತಾರೆ. ಕೊನೆಗೆ ಈ ಜಗಳ ಅಧಿಕವಾಗಿ ಇಬ್ಬರೂ ಒಂದು ಒಪ್ಪಂದಕ್ಕೆ ಬರುತ್ತಾರೆ. ಅದನ್ನು ಲೇಖಕರಿಗೆ ಕೇಸರಿ ಹೇಳುತ್ತಾಳೆ. "ನನಗೆ ಸಿಟ್ಟು ಬಂದ ಕೂಡಲೇ ನಾನು ನನ್ನ ಎಡಕೈಯನ್ನು ಮುಷ್ಠಿ ಕಟ್ಟಿಕೊಂಡು ನನಗೆ ಸಿಟ್ಟು ಬಂದಿದೆಯೆಂದು ಸೂಚಿಸುತ್ತೇನೆ. ಇದನ್ನು ನೋಡಿದ ಕೂಡಲೇ ನಾನು ಮನೆಯೊಳಗೆ ಇಲ್ಲವೇ ಇಲ್ಲ ಎಂದು ಅವರು ತಿಳಿದುಕೊಳ್ಳುತ್ತಾರೆ. ನಾನು ಮನೆಯೊಳಗೆ ಇಲ್ಲವೇ ಇಲ್ಲವಾದರೆ ನನ್ನೊಡನೆ ಚರ್ಚೆ ಬೆಳೆಸಲಿಕ್ಕೆ ಅವರಿಗೆ ಹೇಗೆ ಸಾಧ್ಯ? ಹಾಗೆಯೇ ಅವರಿಗೂ ಸಿಟ್ಟು ಬಂದರೆ ಅವರೂ ತಮ್ಮ ಎಡಕೈಯನ್ನು ಮುಷ್ಠಿ ಕಟ್ಟಿಕೊಳ್ಳುತ್ತಾರೆ. ಅದನ್ನು ನೋಡಿದ ಕೂಡಲೇ ಅವರು ಮನೆಯಿಂದ ಹೊರ ಹೋಗಿರುತ್ತಾರೆಂದು ತಿಳಿದು ನಾನು ಸುಮ್ಮನಿರುತ್ತೇನೆ" ಎಂಬುದು ಸ್ಪಷ್ಟವಾದಾಗ ಲೇಖಕರು ಆ ದಂಪತಿಗಳಿಗೆ ಒಂದು ಉಪಾಯ ಹೇಳುತ್ತಾರೆ.

"ಕಲಹದ ಸೋಂಕು ಕೂಡಾ ನಿಮ್ಮ ಹತ್ತಿರ ಬಾರದಂತೆ ನೀವು ಮಾಡಬೇಕಾದಒಂದು ಉಪಾಯ ಹೇಳಬೇಕೆ ? ಅದು ಒಂದು ಮಗು....ಮತ್ತೇನು" ಎನ್ನುತ್ತಾರೆ. ಇದನ್ನು ಓದಿದಾಗ ಫಕ್ಕನೆ ನಗು ಬರುತ್ತದೆ.

ಪತ್ತೇದಾರನಾದ ಸೂಕ್ಷ್ಮಬುದ್ಧಿಯಲ್ಲಿ ಲೇಖಕರು ಸಾಕಷ್ಟು ಹಾಸ್ಯ....ವಿಡಂಬನೆಯನ್ನು ತುರುಕಿಸಿದ್ದಾರೆ. ಇಲ್ಲಿನ ಹಾಸ್ಯ ಪರಿಶುದ್ಧವಾದ ಹಾಸ್ಯ. ಒಂದೊಂದು ಕಡೆ ಕುಚೋದ್ಯ ಪರಿಹಾಸ್ಯವೂ ಇದೆ. ಆರಂಭದಲ್ಲೆ ಗ್ರಂಥಕರ್ತರು ಲೇವಡಿ

ಮಾಡಿದ್ದಾರೆ. "ಕನ್ನಡ ಭಾಷಾ ಸೇವೆಯನ್ನು ಮಾಡಬೇಕೆಂದು ಹಲವು ವರ್ಷಗಳಿಂದ ಆಲೋಚಿಸಿ ಈ ಚಿಕ್ಕ ಪತ್ತೇದಾರಿ ಕಾದಂಬರಿಯನ್ನು ಬರೆಯಲು ಉದ್ಯುಕ್ತನಾದೆನು. ಪ್ರಥಮ ಪ್ರಯತ್ನ, ದೋಷಗಳಿದ್ದರೆ ಇನ್ನೊಂದಾವೃತ್ತಿಯಲ್ಲಿ ತಿದ್ದಿಕೊಳ್ಳುವುದು. ಈ ಪತ್ತೇದಾರನ ಸೂಕ್ಷ್ಮ ಬುದ್ಧಿಯನ್ನು ಒಂದೇ ಒಂದು ಉದಾಹರಣೆಯಿಂದ ಪರಿಚಯಿಸುತ್ತೇನೆ. ಒಂದು ಕೊಲೆಯಾಗುತ್ತದೆ. ಸೂಕ್ಷ್ಮಬುದ್ಧಿ ಬರುತ್ತಾನೆ. ಕೊಲೆಯು ಪತ್ತೆ ಆಗಬೇಕಲ್ಲವೆ? ಮೃತ ಶರೀರ ಮೂವತ್ತಮೂರು ತುಂಡುಗಳಾಗಿರುತ್ತವೆ. ಪತ್ತೇದಾರ ಹೇಳುತ್ತಾನೆ "ಆಶ್ಚರ್ಯ....ಅತ್ಯಾಶ್ಚರ್ಯ....ಮೂವತ್ತೆರಡಲ್ಲ ....ಮೂವತ್ತನಾಲ್ಕೂ ಅಲ್ಲ....ಮೂವತ್ತಮೂರು ಸರಿಸಮಾನವಾದತುಂಡುಗಳು" ಎಂದು ತನ್ನಷ್ಟಕ್ಕೆ ಹೇಳಿಕೊಂಡನು. ಆ ಮೇಲೆ ತನ್ನ ಜೇಬಿನಿಂದ ಒಂದು ಅಳತೆಯ ಲಾಡಿಯನ್ನು ಹೊರಗೆ ತೆಗೆದು ಮೃತ ಶರೀರದಿಂದ ಕೋಣೆಯ ನಾಲ್ಕು ಗೋಡೆಗಳಿಗೂ ಇರುವ ಅಂತರವನ್ನು ಸರಿಯಾಗಿ ಕಂಡು ಹಿಡಿದನು. ಅಲ್ಲಿ ಬಿದ್ದಿರುವ ಎರಡು ಮೂರು ಬೀಡಿಗಳನ್ನು ಕೈಯಲ್ಲಿ ಎತ್ತಿಕೊಂಡು ಎರಡು ಮಿನಿಟುಗಳವರೆಗೆ ಮೂಸಿ ನೋಡಿದನು. ಇನ್ನೊಂದು ಜೇಬಿನಿಂದ ದೊಡ್ಡ ಸೂಕ್ಷ್ಮದರ್ಶನ ಕನ್ನಡಿಯನ್ನು ಹೊರತೆಗೆದು ಬೆಂಕಿಕಡ್ಡಿಯ ಅಳತೆಯನ್ನು ನೋಡಿ ಅನಂತರ ಮೃತ ಶರೀರವ ಬಿದ್ದಿರುವ ರಕ್ತದ ಪ್ರವಾಹವನ್ನು ಬಹಳ ಸೂಕ್ಷ್ಮವಾಗಿ ಹತ್ತು ಮಿನಿಟುಗಳವರೆಗೆ ಪರೀಕ್ಷಿಸಿ ನೋಡಿದನು. ಎದ್ದು ನಿಂತು "ನಾನು ನೆನಸಿದಂತೆಯೇ ಇದು ಮನುಷ್ಯ ರಕ್ತ....ಸಂದೇಹವಿಲ್ಲ" ಎಂದು ತನ್ನಷ್ಟಕ್ಕೆ ಹೇಳಿದನು....."ಇದು ಲೇಖಕರ ಹಾಸ್ಯ ಪ್ರಜ್ಞೆಗೆ ಒಂದು ಉತ್ತಮ ನಿದರ್ಶನ. ಆ ಮೇಲೆ ಬರೆಯುತ್ತಾರೆ "ಇದಾದ ಬಳಿಕ ಎರಡು ಮಿನಿಟುಗಳವರೆಗೆ ಕಿಟಕಿಯಿಂದ ಹೊರಗೆ ದೃಷ್ಟಿಸಿ ನೋಡುತ್ತಾ ನಿಂತನು. ಆ ಮೇಲೆ ಕೋಣೆಯೊಳಗೆ ಆರೇಳು ಸಲ ಸುತ್ತಾಡಿದನು. ಕೊನೆಗೆ ತನ್ನ ನೋಟು ಬುಕ್ಕನ್ನು ಹೊರತೆಗೆದು "ಇಲ್ಲಿ ನನಗೆ ಸಿಕ್ಕಬೇಕಾದ ಸಂಗತಿಗಳೆಲ್ಲವೂ ಸಿಕ್ಕಿವೆ. ಇನ್ನು ನಾನಿಲ್ಲದ್ದು ಪ್ರಯೋಜನವಿಲ್ಲ. ಕೊಲೆ ಮಾಡಿದವನನ್ನು ಹಿಡಿಯುವುದು ಸಾಧ್ಯವಿದೆಯೇ ಇಲ್ಲವೋ ಎಂದು ಈಗಾಗಲೇ ಹೇಳಲಾಗುವುದಿಲ್ಲ" ಎಂದು ಹೇಳುತ್ತಾನೆ. ಕೊನೆಗೂ ಕೊಲೆಗಾರನ ಪತ್ತೆಯಾಗುವುದಿಲ್ಲ.

ಹೀಗೆ ಪ. ರಮಾನಂದರ ಹಾಸ್ಯ ಲೇಖನದಿಂದ ಹಚ್ಚು ಬೆಳದಿಂಗಳಿನ ಹೂ ಬಾಣಗಳು ಶ್ರೇಷ್ಠ ಕೃತಿಯಾಗಿ ಇಂದಿಗೂ ಮಹತ್ವ ಉಳಿಸಿಕೊಂಡಿದೆ. ಒಟ್ಟು ಹದಿನಾಲ್ಕು ಪ್ರಬಂಧಗಳು. ಕೆಲವು ಕಥೆಯ ರೂಪದಲ್ಲಿದೆ. ಅದರಲ್ಲಿ ರಮೇಶ, ಚಿನ್ನದ ತೊಟ್ಟಿಲು, ವಿಮೋಚನೆ, ಆತ್ಮಹತ್ಯೆಯಲ್ಲಿ ಕೂಡಾ ತಿಳಿಯಾದ ಹಾಸ್ಯವಿದ್ದು ತನ್ನದೇ ಆದ ವಿನೂತನ ಶೈಲಿಯಿಂದ ಓದುಗರನ್ನು ಆಕರ್ಷಿಸುತ್ತದೆ. ಒಟ್ಟನಲ್ಲಿ ಪ. ರಮಾನಂದ ರಾಯರ ಈ ಕೃತಿ ಮರೆಯಬಾರದ ಕೃತಿ. ಸುಮಾರು ನಾಲ್ಕು ದಶಕಗಳ ಹಿಂದೆ ಹಾಸ್ಯ ಸಾಹಿತ್ಯದ ಕೊರತೆ ಇದ್ದಾಗ ಪ್ರಕಟವಾದ ಈ ಪುಸ್ತಕ ಇಂದಿನ ಪೀಳಿಗೆ

ಯುವರಿಗೆ ಪರಿಚಯವಾಗಬೇಕಾದ್ದು ಅತಿ ಅಗತ್ಯ. ಅಂದರೆ ಈ ಪುಸ್ತಕವನ್ನು ಮತ್ತೆ ಪ್ರಕಟಿಸಬೇಕಾಗಿದೆ. ವಿನೋದ ಶೂನ್ಯವಾದ ಕನ್ನಡ ಸಾಹಿತ್ಯದಲ್ಲಿ "ಹೂ [illegible]ಗಳು" ಎದ್ದು ಕಾಣುವ ಕೃತಿ ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಗ್ರಂಥದ ಪುಟ ಮಿತಿಯಲ್ಲಿ ಇನ್ನು ಹೆಚ್ಚಿಗೆ ಬರೆಯುವುದು ಆಗದ ಮಾತು. ಇಂದಿನ ಲೇಖಕರು ಗ್ರಂಥಾಲಯದಲ್ಲಿ ಈ ಕೃತಿ ಇದ್ದರೆ ಹುಡುಕಿ ತಂದು ಒಮ್ಮೆ ಓದಲೇಬೇಕಾದ್ದು ಅವರ ಕರ್ತವ್ಯ ಎಂದು ನನ್ನ ಅನಿಸಿಕೆ. ಪ್ರಕಾಶಕರು ಯಾರಾದರೂ ಇದರ ದ್ವಿತೀಯ ಮುದ್ರಣ ಪ್ರಕಟಿಸಿದರೆ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಸೇವೆಸಲ್ಲಿಸಿದಂತೆ.

'ನನಗೆ ಸಿಟ್ಟು ಬಂದ ಕೂಡಲೇ ನಾನು ನನ್ನ ಎಡಕೈಯನ್ನು ಮುಷ್ಟಿ ಕಟ್ಟಿಕೊಂಡು ನನಗೆ ಸಿಟ್ಟು ಬಂದಿದೆಯೆಂದು ಸೂಚಿಸುತ್ತೇನೆ. ಇದನ್ನು ನೋಡಿದ ಕೂಡಲೆ ನಾನು ಮನೆಯೊಳಗೆ ಇಲ್ಲವೇ ಇಲ್ಲವೆಂದು ಅವರು ತಿಳಿದುಕೊಳ್ಳುತ್ತಾರೆ. ನಾನು ಮನೆಯೊಳಗೆ ಇಲ್ಲವೇ ಇಲ್ಲವಾದರೆ ನನ್ನೊಡನೆ ಚರ್ಚೆ ಬೆಳೆಸಲಿಕ್ಕೆ ಅವರಿಗೆ ಹೇಗೆ ಸಾಧ್ಯ? ಹಾಗೆಯೇ ಅವರಿಗೂ ಸಿಟ್ಟು ಬಂದರೆ ಅವರೂ ತಮ್ಮ ಎಡಕೈಯನ್ನು ಮುಷ್ಟಿ ಕಟ್ಟಿಕೊಳ್ಳುತ್ತಾರೆ. ಅದನ್ನು ನೋಡಿದ ಕೂಡಲೇ ಅವರು ಮನೆಯಿಂದ ಹೊರಗೆ ಹೋಗಿರುತ್ತಾರೆಂದು ತಿಳಿದು ನಾನು ಸುಮ್ಮನಿರುತ್ತೇನೆ. ಅವರಿಲ್ಲದಿದ್ದರೆ ನಾನ್ಯಾರ ಹತ್ತಿರ ಚರ್ಚೆ ಬೆಳೆಸಲಿ?'

"ಇದರ ಅಂತ್ಯ ಹೇಗಾಗುವುದು ?" ಎಂದು ಕುತೂಹಲಪಟ್ಟೆನು.

"ಅಂತ್ಯವೇನು ? ಹತ್ತು ನಿಮಿಷಕ್ಕಾದರೂ ಮೂಕರಂತೆ ಕೂತುಕೊಳ್ಳುವುದಕ್ಕೆ ಯಾರಿಗೆ ತಾನೆ ಸಾಧ್ಯವಾಗುತ್ತದೆ ? ಹಾಗೆ ಕೂತುಕೊಂಡ ಕೆಲವು ಸಮಯದಲ್ಲಿಯೇ ನಮ್ಮಿಬ್ಬರಿಗೂ ಹಠಾತ್ತಾಗಿಯೂ ನಗು ಬರುತ್ತದೆ–ಆಮೇಲೆ ನಾವೇನು ಮಾಡುತ್ತೇವೆಂದು ಹೇಳಬೇಕಾದುದಿಲ್ಲವಷ್ಟೆ !"....

"ಆಹಹ! ಕಲಿಯುಗವೇ! ಜಾತಿಯಿಲ್ಲ! ಧರ್ಮವಿಲ್ಲ. ದೇವರಿಲ್ಲ"

—ವ. ರಮಾನಂದ

DEATH OF A DRAMATIST

Gurunandan Mulky

Prof. Padukone Ramanand Rao, noted educationist, dramatist and literary figure, passed away at Bombay on 13th February 1983 at the age of 86.

Born in 1896, Prof. Ramanand was educated at the Government College, Mangalore and the Presidency College, Madras from where he obtained the Master's degree in Chemistry. He joined the Madras Educational Service and served in various Government Colleges with distinction for over thirty years. Towards the end of his professional career he got the prestigious appointment as professor of Chemistry in the Presidency College, Madras. He retired from service as the Principal of the Government Training College, Mangalore.

Soen after this he was invited to take over as the first Prinicipal of the newly-founded Veerasaiva College at Bellary. Here he put to use his organisational capabilities and established the college along sound academic lines.

On completion of this assignment Prof. Ramanand came to Bangalore with the intention of setting down in the flat which he had already bought in the Anandashram Buildings. During his stay in Bangalore he took a very active part in the affairs of the Canara Union and the Sri Chitrapur Math, and served as the President of the Canara Union in the year 1956. After a stay of about five years in Bangalore, Prof. Ramanand migrated to Bombay where he lived for the rest of his life, paying occasional visits to Bangalore to stay with his daughter Chandrabhaga (Chandamma), the celebrated dancer.

Prof. Ramanand took a lead in literary and dramatic activities wherever he went. At the Government College, Mangalore, he was one of the luminaries on the staff of the Principal

G. K. Chettur, who had gathered round him a band of gifted and devoted men who helped him to bring up the standard of the College to the level of Oxford and Cambridge.

Even in the thirties Prof. Ramanand had advanced ideas on theatre. With gentle encourgement from Chettur he experimented with modernistic plays and innovative techniques of presentation. In those days it took great moral courage to presentation. In those days it took great moral courge to present such playes as an English rendering (In brilliant blank verse) of K. V. Puttappa's allegorical play in Kannada, 'Jalagaara'. Prop. Ramanand carried this quest for new types of expression and form even upto the very end, as is evidenced by his play 'Mirdad' which was amongst his best writings.

in his younger days prof. Ramanand and Shivarama Karanth were close associates in the field of literature and theatrs and between them there was a good deai of cross-fertilisation of culture. New vistas in English literature and Western music and ballet were opened to Karanth, while Prof. Ramanand learnt much from Karanth about Kannada literatur and Indian dance forms. Their friendship was an enduring one, although geographically they had drifted apart since the 'forties.'

Prof. Ramanand was a pioneer in humorous literature in Kannada. His lightly drawn sketches "Hucchu Beladingalina Hoobanagalu" have the pleasant flavour of the works of Jerome K. Jerome and W. W. Jacobs. His translations of the Tales of Tolstoy, plays of Chekov and Remarque's classic "All Quiet on the Western Front" bear ample testimony to his efforts to introduce the finer points of literature from the West to readers of Kannada.

Along with his wlfe Seeta Devi (Sushila Molahalli) Prof. Ramanand wrote and produced a large number of

Konkani skits and plays. In this field also he could be considered as a pioneer in the sense that Konkani dramas in those days were confined to mythological themes and were only adaptations of the Harikatha tradition to suit stage requirements. Seeta Devi's bold step of appearing on the stage with her husband in most of these plays cleared the way for others who took to the stage with less trepidation. Towards the latter part of his life Prof. Ramanand was a regular contributor to the theatre magazine "Enact" published from Delhi. His last play, "The Return of Shakuntala" was published in that magazine a few months before his death.

Prof. Ramanand was a deeply religious man at heart, althouah he made no great show of external forms of worship. From his uncle, Swami Ramdas, he had imbibed in abiding interest in Hindu philosophy. It was this whiche ,aed him to study the works of Michall Naomi, the Lebanes philosopherpoet and to present that great man's work "M rdad" in the form of a verse drama of serene beauty.
Prof. Ramanand (Mamu as I called him) took a paternal interest in me throughout our association-in school, college and in later life. His last letter to me was Written about a year before his death. It was a long one in which he expressed great delight at reading a review in "Enact" of a Tennessee Williams' play which I had directed and produced in Bangalore a few months earlier. He was happy that the seed wnich he had so carefully planted almost fifty years ago had at last sprouted and borne fruit.

A few weeks later when I heppened to go to Bombay I paid him my customary visit. Oblivious of what was happening around us we talked to each other for nearly three hours on the two subjects dearest to his heart—iterature and theatre. His grandson brought us coffee and we sipped slowly as we talked. when I rose to say good bye I thought his eyes were moist. Perhaps he some sort of a premonition that we would never meet again.

ನನ್ನ ಭಾವ

ನನಗೊಬ್ಬ ಭಾವನಿರುವನು. ಮದುವೆಯಾದ ಪ್ರತಿಯೊಬ್ಬನಿಗೆ ಒಬ್ಬ ಭಾವನಿರಬೇಕಷ್ಟೆ! ಮದುವೆಯ ಸಮಯದಲ್ಲಿ ಪುರೋಹಿತರಿಲ್ಲದಿದ್ದರೂ ಮದುವೆಯಾಗಬಹುದು. ಮದುಮಗಳಿಲ್ಲದಿದ್ದರೂ ಒಂದು ವೇಳೆ ಮದುವೆಯಾಗಬಹುದೋ ಏನೋ! ಆದರೆ ಭಾವನೆಂದು ಒಬ್ಬನಿಲ್ಲದಿದ್ದರೆ ಯಾವ ಮದುವೆಯೂ ಆಗಲಾರದೆಂಬುದೇ ನನ್ನ ಅಭಿಪ್ರಾಯ. ಮದುಮಗಳಿಗೆ ಖಾಸಾ ಅಣ್ಣನಾಗಲಿ ತಮ್ಮನಾಗಲಿ ಇಲ್ಲದೆ ಇದ್ದರೂ ಚಿಂತೆಯಿಲ್ಲ. ಮದುವೆಯ ಸಮಯದಲ್ಲಿ ಭಾವನೊಬ್ಬನು ಇದ್ದೇ ಇರುವನು. ಮದುವೆಯ ಸಮಾರಂಭಕ್ಕೆ ಅತ್ಯಗತ್ಯವಾದ ಸಾಮಗ್ರಿಗಳಲ್ಲಿ ಅವನೂ ಒಂದಾಗಿರುವನು. (ಅಥವಾ ಒಬ್ಬನಾಗಿರುವನು. ನಿಮಗೆ ಇಷ್ಟವಿದ್ದ ಹಾಗೆ ಓದಬಹುದು.)

ನನ್ನ ಮದುವೆಯ ವಿಷಯ ಬರೆಯಲಿಕ್ಕೆ ನಾನೀ ಲೇಖನಿಯನ್ನು ಹಿಡಿದುಕೊಳ್ಳಲಿಲ್ಲ ನನ್ನ ಮದುವೆ ಆಗಿ ಎಷ್ಟೋ ಕಾಲವಾಯಿತು. ಬೇಕಾದರೆ ಲೆಕ್ಕಮಾಡಿ ಹೇಳುವೆನು.... ಹೌದು, ಇಂದಿಗೆ ಹತ್ತು ವರ್ಷಗಳಾದುವು. ಈ ಹತ್ತು ವರ್ಷಗಳಲ್ಲಿ ನನಗೆ ಎಷ್ಟೋ ಸಂಗತಿಗಳು ಸಂಭವಿಸಿವೆ. ಎಷ್ಟೋ ತರದ ಅನುಭವವನ್ನು ಸಂಪಾದಿಸಿದ್ದೇನೆ. ಆದರೆ ಇದೆಲ್ಲವೂ ಸದ್ಯಕ್ಕೆ ಒಂದು ಬದಿಗಿರಲಿ. ನನ್ನ ವಿಷಯ ನನ್ನ ಸದ್ಯದ ಕಾರ್ಯಕ್ಕೆ ಬೇಕಾದುದಷ್ಟನ್ನೇ ನಿಮಗೆ ತಿಳಿಸುವೆನು ....ನಾನು ಮದ್ರಾಸು ವಿಶ್ವವಿದ್ಯಾಲಯದ ಎಂ. ಬಿ. ಬಿ. ಎಸ್. ಡಿಗ್ರಿ ಪಡೆದುಕೊಂಡು ಬೆಂಗಳೂರಿನಲ್ಲಿ ಒಬ್ಬ ಖಾಸಗಿ ಡಾಕ್ಟರನಾಗಿ, ಸಾಧಾರಣವಾದ ಒಂದು ಪ್ರೈವೇಟ್ ಪ್ರಾಕ್ಟಿಸನ್ನು ಬೆಳಸಿಕೊಂಡು ಇದ್ದು ಇಂದಿಗೆ ಐದು ವರ್ಷಗಳಾಗಿವೆ. ಕಳೆದ ಎರಡು ವರ್ಷಗಳಿಂದ ನನ್ನ ಹತ್ತಿರ ಒಂದು ಮೋಟಾರ್ ಕಾರೂ ಉಂಟು. ನನ್ನ ಮನೆಯಲ್ಲಿ ನಾವಿಬ್ಬರೇ. ನನ್ನ ಪ್ರಿಯತಮೆಯಾದ ಅಹಲ್ಯೆ, ಮತ್ತು ನಾನು. ನಾನು ಡಾಕ್ಟರನೆಂಬುದೇನೋ ನಿಜ, ಆದರೆ ನಮಗೆ

ಸುಮಾರು ನಲವತ್ತು ವರ್ಷಗಳ ಹಿಂದೆ ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ಕೊರತೆ ಇದ್ದು ಪಂಡಿತರು ಅದನ್ನು ದ್ವಿತೀಯ ವರ್ಗದ ಸಾಹಿತ್ಯ ಎಂದು ಪರಿಗಣಿಸಿದ್ದಾಗಲೇ ಪ. ರಮಾನಂದ ರಾಯರು ಹುಚ್ಚು ಬೆಳದಿಂಗಳಿನ ಹೂಬಾಣಗಳು ಎಂಬ ವಿನೂತನ ಶೈಲಿಯ ನವೀನ ದೃಷ್ಟಿಯ ಶ್ರೇಷ್ಠ ನಗೆ ಬರಹಗಳನ್ನು ಬರೆದು ಖ್ಯಾತರಾದರು. ಅವರ ನಗೆ ಬರಹದ ಪರಿಚಯ ಇಂದಿನ ಯುವ ಪೀಳಿಗೆಯ ಲೇಖಕರಿಗೆ ಆಗುವುದು ಅವಶ್ಯಕ ಎಂದೇ ಆ ಸಂಕಲನದಿಂದ "ನನ್ನ ಭಾವ" ಲೇಖನವನ್ನು ಇಲ್ಲಿ ಪ್ರಕಟಿಸಲಾಗಿದೆ.

ಇನ್ನೂ ಮಕ್ಕಳಾಗಿಲ್ಲ. ಅಹಲ್ಯೆಯಾದರೋ ತನಗೆ ಗೊತ್ತಿದ್ದ ದೇವತೆಗಳಿಗೆಲ್ಲ ಹರಕೆ ಹೇಳುವುದನ್ನೂ ಬಿಟ್ಟಿದ್ದಿಲ್ಲ... ....ನನ್ನ ವಿಷಯವಾಗಿ ಸದ್ಯಕ್ಕೆ ಇಷ್ಟೇ ಸಾಕು.

ಒಂದು ದಿನ ನಾನು ನನ್ನ ಬೆಳಗಿನ ಕಾರ್ಯವನ್ನು ಮುಗಿಸಿ ಮನೆಗೆ ಬಂದು ನನ್ನ ಉಡುಪನ್ನು ಬದಲಾಯಿಸುತ್ತಿದ್ದೆನು. ಅಹಲ್ಯೆ ನನ್ನ ಹತ್ತಿರ ಬಂದು, 'ನಮ್ಮ ರಮೇಶ ಬರುವ ತಿಂಗಳಲ್ಲಿ ಇಲ್ಲಿಗೆ ಬರುತ್ತಾನಂತೆ. ಕಾಗದ ಬಂದಿದೆ.' ಎಂದು ಹೇಳಿದಳು.

ನಾನು ದಿಗಿಲುಬಿದ್ದೆನು. ಆ ಕಾಗದವನ್ನು ಓದಲಿಕ್ಕೆ ವಿಶೇಷ ಕುತೂಹಲ ಪಡಲಿಲ್ಲ.

'ಅವನು ತನ್ನ 'ಸಮ್ಮರ್ ವೆಕೇಶನ್ನೆಲ್ಲ' ಇಲ್ಲಿಯೇ ಕಳೆಯುತ್ತಾನಂತೆ.'

'ಏನು ಮೂರು ತಿಂಗಳು!' ಎಂದು ನಾನು ಸ್ವಲ್ಪ ಭ್ರಾಂತನಾಗಿ ಅರಚಿಬಿಟ್ಟೆನು.

ಒಂದೆರಡು ದಿವಸಗಳಾದರೆ ಚಿಂತೆಯಿದ್ದಿಲ್ಲ. ಹೋಗಲಿ, ಒಂದು ವಾರಕ್ಕಾದರೂ ಚಿಂತೆ ಇದ್ದಿಲ್ಲ. ಆದರೆ ಮೂರು ತಿಂಗಳು! ನನಗೆ ಬೇರೆ ಮಾತೆತ್ತಲು ಸಾಧ್ಯವಾಗಲಿಲ್ಲ.

"ಇದೇನು? ರಮೇಶ ನಮ್ಮಲ್ಲಿಗೆ ಬಂದು ನಿಲ್ಲುವುದು ನಿಮಗೆ ಮನಸ್ಸಿಲ್ಲವೇ?"

"ಮನಸ್ಸು.. ಮನಸ್ಸು ...ಹುಂ... ಇರಲಿ:...ಉಂಟು, ಬರಲಿ: ಬಂದು ನಿಂತು ಕೊಳ್ಳಲಿ...." ಎಂದೆನು.

ಏಪ್ರಿಲ್ ತಿಂಗಳು ಬಂದಿತು. ಅದರೊಂದಿಗೆ ನನ್ನ ಭಾವನೂ ಬಂದನು. ಅವನನ್ನು ಎದುರುಗೊಳ್ಳಲಿಕ್ಕೆ ನಾವಿಬ್ಬರೂ ರೈಲ್ವೆ ಸ್ಟೇಷನ್ನಿಗೆ ಹೋಗಿದ್ದೆವು. ರೈಲುಗಾಡಿ ಬಂದು ನಿಂತಿತು. ನನ್ನ ಭಾವ ಗಾಡಿಯಿಂದ ಕೆಳಗಿಳಿದನು! ನಮ್ಮಿಬ್ಬರನ್ನು ನೋಡಿದನು. "ನೀವು ಬಂದಿದ್ದೀರಾ?" ಎಂದು ಕೇಳಿದನು.

"ಹೌದು, ನಿನ್ನ ಕಣ್ಣುಗಳು ನಿಜವಾಗಿಯೂ ಶುಭ್ರವಾಗಿವೆ." ಎಂದು ಉತ್ತರ ಕೊಡಬೇಕೆಂದಿದ್ದೆನು. ಆದರೆ ಅಹಲ್ಯೆ ಇದನ್ನು ತಿಳಿದುಕೊಂಡಳೋ ಏನೋ. ನಾನು ಮಾತೆತ್ತುವಷ್ಟರೊಳಗೆ ಅವನೊಡನೆ ಅವನ ಪ್ರಯಾಣದ ವಿಷಯವಾಗಿ ಮಾತು ಬೆಳೆಯಿಸಿದಳು.

ನಾವು ಮೂವರೂ-ಅಲ್ಲ, ನಾಲ್ವರೂ-ನನ್ನ ಭಾವನ ಸಾಮಾನನ್ನು ಹೆಗಲಮೇಲಿಟ್ಟು ಕೊಂಡ ಒಬ್ಬ ಪೋರ್ಟರನೂ ಇದ್ದನು-ಸ್ಟೇಷನ್ನಿನ ಹೊರಗೆ ಬಂದು, ನನ್ನ ಕಾರು ಇದ್ದೆಡೆಗೆ ಹೋದೆವು. ಕಾರಿನಲ್ಲಿ ಅಹಲ್ಯೆಯೂ ನನ್ನ ಭಾವನೂ ಮೊದಲು ಕುಳಿತು

ಕೊಂಡರು. ನಾನು ಕಾರನ್ನು ಹತ್ತುವುದರಲ್ಲಿದ್ದೆನು. ಆ ಕ್ಷಣ ನನ್ನ ಭಾವ, “ಭಾವಯ್ಯಾ, ಇದೇನಿದೇನೋ ನಿನ್ನ ಕಾರು ?” ಎಂದು ಕೇಳಿದನು. “ಅಲ್ಲ, ನನ್ನ ಕಾರು ಇದು ಅಲ್ಲ. ನಾನು ಬಾಡಿಗೆಗೆ ತೆಗೆದುಕೊಂಡು ಬಂದ ಎರೋಪ್ಲೇನು ಇದು,” ಎಂದು ಹೇಳಲಿಕ್ಕೆ ನಾನು ಬಾಯಿ ತೆರೆದೆನು. ಅಷ್ಟರೊಳಗೆ ಅಹಲ್ಯೆ ನನ್ನ ಇಂಗಿತವನ್ನು ತಿಳಿದುಕೊಂಡು, ನನ್ನ ನೋಡಿ ಒಂದು ಅರ್ಥಗರ್ಭಿತವಾದ ದೃಷ್ಟಿಯನ್ನು ಪಸರಿಸಿದಳು. ನನಗರ್ಥವಾಯಿತು. ನಾನು ಹೇಳಬೇಕೆಂದಿದ್ದ ಮಾತುಗಳು ಗರ್ಭದಲ್ಲಿಯೇ ನಾಶವಾದುವು. ನಾನು ಕಾರನ್ನು ಹತ್ತಿ ಮನೆಗೆ ಡ್ರೈವ್ ಮಾಡಿದೆನು.

ಸ್ವಲ್ಪ ಸಮಯದಲ್ಲಿಯೇ ಮನೆಯನ್ನು ಮುಟ್ಟಿದೆವು. ಕಾರಿನೊಳಗಿಂದ ಕೆಳಗಿಳಿದು ಮನೆಯನ್ನು ಪ್ರವೇಶಿಸಿದೆವು. ಕೂಡಲೇ ನನ್ನ ಭಾವ “ಭಾವಯ್ಯಾ ಇದೇನೋ ನಿಮ್ಮ ಮನೆ ?” ಎಂದು ಕೇಳಿದನು. ನನಗೆ ಮಾತು ತಡೆಯಲಿಕ್ಕಾಗಲಿಲ್ಲ. “ನಮ್ಮ ಮನೆ? ಇಲ್ಲ, ಅಪ್ಪ ಇದು, ನಮ್ಮ ಮನೆಯಲ್ಲ. ನಾವು ವಾಸಿಸುತ್ತಿರುವ ಒಂದು ಉಡುಪೀ ಹೊಟೇಲು ಇದು ” ಎಂದು ಅಹಲ್ಯೆಯನ್ನು ನೋಡದೆಯೇ ಬಾಯಿಬಿಟ್ಟು ಹೇಳಿದೆನು.

ಅಹಲ್ಯೆ ತನ್ನ ತಮ್ಮನನ್ನು ಕೈಕಾಲು ತೊಳೆಯಲಿಕ್ಕೆಂದು ಕಳುಹಿಸಿ ನನ್ನ ಬಳಿಗೆ ಬಂದಳು. ಬರುವುದೆಲ್ಲ ಬರಲಿ, ಗೋವಿಂದನ ದಯೆ ನನಗಿರಲಿ, ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸಿ ಅವಳ ಕಡೆಗೆ ತಿರುಗಿದನು.

“ನೀವೇಕೆ ಹಾಗೆ ಮಾಡುತ್ತೀರಿ ?” ಎಂದು ಕೇಳಿದಳು.

“ಅವನೇಕೆ ಹಾಗೆ ಅವಶ್ಯವಿಲ್ಲದ ಹುಚ್ಚು ಹುಚ್ಚಾದ ಪ್ರಶ್ನೆಗಳನ್ನು ಕೇಳುವುದು ?” ಎಂದೆನು.

“ಪಾಪ, ಅವನ ಸ್ವಭಾವ ಅದು,”

“ಸ್ವಭಾವ ? ಸ್ವಭಾವವಲ್ಲ, ಒಂದು ರೋಗ !”

“ರೋಗವಾದರೆ ಅದನ್ನು ಗುಣಪಡಿಸಬಹುದಲ್ಲವೆ ?”

“ಹೌದು, ಗುಣಪಡಿಸಬಹುದು. ಅದನ್ನೇ ನಾನು ಯತ್ನಿಸುತ್ತೇನೆ. ಆದರೆ ನೀನು ಸುಮ್ಮನೆ ಇರುವುದಿಲ್ಲ.”

ಹತ್ತು ನಿಮಿಷ ಕಳೆಯಿತು.

“ಎಷ್ಟಾದರೂ ಅವನು ಚಿಕ್ಕವನು—”

"ಚಿಕ್ಕವನು ? ನಾಲ್ಕು ವರ್ಷದ ಮುಂಚೆ ಅವನಿಗೆ ಮದುವೆ ಮಾಡಿದ್ದರೆ ಇಂದಿಗೆ ಅವನಿಗೆ ನಾಲ್ಕು ಮಕ್ಕಳಾಗುತ್ತಿದ್ದುವು."

"ನನಗೆ... ಆಗಿ.... ಇಂದಿಗೆ ... ಹತ್ತು ವರ್ಷಗಳಾದುವು...."
ನಾನು ಸುಮ್ಮಗಾದೆನು.

ನನ್ನ ಭಾವನ ಮೇಲೆ ನನಗೆ ದ್ವೇಷ ಇದೆ ಎಂತಲ್ಲ. ಅವನು ಇತರ ಸಂಗತಿಗಳಲ್ಲಿ ನಿಜವಾಗಿಯೂ ಚುರುಕಾಗಿರುವನು. ಹುಚ್ಚು ಹುಚ್ಚಾದ ಅಗತ್ಯವಿಲ್ಲದ ಪ್ರಶ್ನೆಗಳನ್ನು ಕೇಳುವ ದುರಭ್ಯಾಸವೊಂದು ಅವನಿಗೆ ಇರುವಂತಿಲ್ಲವಾಗಿದ್ದರೆ ಅವನು ನಮ್ಮೊಂದಿಗೆ ಇರುವುದು ನನಗೆ ನಿಜವಾಗಿಯೂ ಸಂತೋಷವಾಗುತ್ತಿತ್ತು. ಆದರೆ ಅವನ ಈ ಒಂದು ದುರಭ್ಯಾಸ ಮಾತ್ರ ಅವನ ಎಲ್ಲ ಒಳ್ಳೇಗುಣಗಳನ್ನು ನುಂಗುವ ಮಸಿಯಾಯಿತು.

ನನ್ನ ಭಾವ ನಮ್ಮಲ್ಲಿಗೆ ಬಂದು, ಒಂದು ವಾರ ಕಳೆಯಿತು. ದಣಿದು ಸಂಜೆಗೆ ಮನೆಗೆ ಬರುವ ನನಗೆ, ನನ್ನ ಪ್ರೀತಿಯ ಆರಾಮಕುರ್ಚಿ ಸಿಕ್ಕುವುದು ದುರ್ಲಭವಾಯಿತು. ನನ್ನ ಸಿಗಾರು ಪೆಟ್ಟಿಗೆಯಲ್ಲಿ ಸಿಗಾರುಗಳು ಒಂದೊಂದಾಗಿಯೇ ಮಾಯವಾಗಲಿಕ್ಕೆ ಪ್ರಾರಂಭಿಸಿದವು. ನಾನು ಬರೆಯುವ ಮೇಜಿನ ಮೇಲೆ, ರೈನಾಲ್ಡ್ಸನ ನಾವೆಲುಗಳೂ ಸೆಕ್ಸ್ಟನ್ ಬ್ಲೇಕನ ಪತ್ತೇದಾರಿ ಪುಸ್ತಕಗಳೂ ಬಿದ್ದುಕೊಂಡು ಮೇಜಿನ ಮೇಲೆ ನನಗೊಂದು ಕಾರ್ಡು ಬರೆಯುಲಿಕ್ಕೆ ಕೂಡ ಅನುಕೂಲವಾಗದೆ ಹೋಯಿತು. ನಾನು ಪ್ರತಿ ಸಂಜೆಯಲ್ಲಿ ಒಂದರ್ಧಗಂಟೆ ಬಾರಿಸುತ್ತಿರುವ ನನ್ನ ದಿಲ್‌ರುಬದ ತಂತಿಗಳು ನಾನು ದಿನಾಲೂ ಸರಿಮಾಡಿಟ್ಟಿದ್ದರೂ ಇಟ್ಟಹಾಗೆಯೇ ತುಂಡಾಗಿ ಹೋಗಲಿಕ್ಕೆ ಪ್ರಾರಂಭಿಸಿದುವು. ಚುಟುಕಾಗಿ ಹೇಳುವುದಾದರೆ, ಬರೀ ಒಂದು ವಾರದೊಳಗೆ ನನ್ನ ಭಾವ ನನ್ನ ಮನೆಯೊಳಗೆಲ್ಲ ಪಸರಿಸಿಕೊಂಡನು : ವಾಸನೆಯಂತೆ ಹಬ್ಬಿಕೊಂಡನು. ಹತ್ತಿಯಂತೆ ಹರಡಿಕೊಂಡನು : ವ್ಯಾಧಿಯಂತೆ ವ್ಯಾಪಿಸಿಕೊಂಡನು : ಮೊಗಲಾಯರಂತೆ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದನು.

ನನ್ನ ಭಾವನ ಉಪಟಳವನ್ನು ಕುರಿತು ನಾನು ಅಹಲ್ಯೆಯೊಡನೆ ಅನೇಕ ಸಲ ಏಕಾಂತದಲ್ಲಿ ಪ್ರಸ್ತಾಪಿಸಿದೆನು. "ಹೇಗಾದರೂ ಸಂತವಿಸಿಕೊಳ್ಳಬೇಕು. ಬರೀ ಮೂರು ತಿಂಗಳುಗಳಿಗಲ್ಲವೇ?" ಎಂಬುದೇ ಅವಳ ಉತ್ತರವಾಗಿತ್ತು. ಮೂರು ತಿಂಗಳು! ಒಂದು ಇಡೀ ಕಾಲು ವರ್ಷ! ನಾನು ಎಷ್ಟು ಪ್ರಯತ್ನಪಟ್ಟರೂ ಅಹಲ್ಯೆ ನನ್ನ ವಿಚಾರಪಥವನ್ನು ತಿಳಿಯಲಾರದೆ ಹೋದಳು.

ಒಂದು ದಿನ ಬೆಳಗಿನಲ್ಲಿ ನನಗೆ ಬೇಗನೆ ಊಟ ಮಾಡಿಕೊಂಡು ಹೊರಗೆ ಹೋಗಬೇಕಾಗಿತ್ತು. ಊಟ ಮಾಡಿಕೊಂಡು ಅಡಿಗೆ ಮನೆಯಿಂದ ಹೊರಗೆ ಬಂದೆನು.

“ಊಟ ಮಾಡಿಕೊಂಡು ಬಂದೆಯಾ?” ಎಂದು ನನ್ನ ಭಾವ ಹಠಾತ್ತಾಗಿ ಕೇಳಿಬಿಟ್ಟನು. ನಾನು ಊಟಮಾಡುವಾಗಲೂ ಅವನು ನೋಡಿದ್ದನು. “ಊಟ ಮಾಡುತ್ತೀಯಾ?” ಎಂದು ಅವನು ಆಗಲೇ ಕೇಳಿದ್ದನು. ಆದರೆ ಅಹಲ್ಯೆ ಆಗ ನನ್ನ ಹತ್ತಿರವಿದ್ದುದರಿಂದ ನಾನು ಸುಮ್ಮನಿದ್ದೆನು. ಆದರೆ “ಊಟಮಾಡಿಕೊಂಡು ಬಂದೆಯಾ?” ಎಂದು ಅವನು ಈಗ ಕೇಳಿದ ಕೂಡಲೇ ನನಗೆ ಥಕ್ಕನೆ ಏನೋ ಏನೋ ಸಂಭವಿಸಿತು. ನನ್ನ ತಾಳ್ಮೆಯ ಶಕ್ತಿ ಅಡಿಮೇಲಾಯಿತು. ಕೋಪದಿಂದ ಕಿಡಿಕಿಡಿಯಾದೆನು. ಅವನ ಎರಡೂ ಕಿವಿಗಳನ್ನೂ ಹಿಡಿದು ಅವನನ್ನು ಮೇಲಕ್ಕೆತ್ತಿ ಬಿಡೋಣವೇ ಎಂದು ಅವನಿದ್ದೆಡೆಗೆ ಹೋದೆನು. ಆದರೆ ಆ ಕ್ಷಣವೇ ಅಹಲ್ಯೆ ಕೊಠಡಿಯೊಳಗೆ ಬಂದು, ನನ್ನ ಬಳಿಗೆ ಸರಿದಳು. ನನ್ನ ಕೋಪದ ಪರಿಣಾಮ ಅವಳ ಮೇಲೆ ಮೊದಲು ಬಂದಿಳಿಯಿತು. ನನ್ನ ಚಾಚುವ ಕೈಗಳಿಂದ ಅವಳ ಎರಡು ಭುಜಗಳನ್ನೂ ಬಲವಾಗಿ ಹಿಡಿದುಕೊಂಡು ಅವಳನ್ನು ನೆಲದ ಮೇಲಿನಿಂದ ಎತ್ತಿ ಮೂಲೆಯಲ್ಲಿದ್ದ ಒಂದು ಕುರ್ಚಿಯ ಮೇಲೆ ಬಲಾತ್ಕಾರದಿಂದ ಕುಳ್ಳಿರಿಸಿದೆನು. ಮತ್ತು ನನ್ನ ಭಾವ ನಿದ್ದೆಡೆಗೆ ಹೋಗಿ ಅವನ ಎಡಗಿವಿಯನ್ನು ಹಿಡಿದು, ಕಿವಿಯ ಹತ್ತಿರ ನನ್ನ ಮುಖವನ್ನಿಟ್ಟು, “ಹೌದು, ಮುಂಡಾಸು ಮೂವತ್ತು ಮೊಳ” ಎಂದು ನನ್ನಿಂದ ಸಾಧ್ಯವಾದಷ್ಟು ಗಟ್ಟಿಯಾಗಿ ಕೂಗಿದೆನು. ಆಮೇಲೆ ಕೋಪದಿಂದ ಕಂಪಿಸುತ್ತಾ ನನ್ನ ಕೋಪ ಶಾಂತವಾಗುವ ವರೆಗೆ ಹಾಸಿಗೆಯ ಮೇಲೆ ಬಿದ್ದುಕೊಂಡೆನು.

ಅಂದಿನಿಂದ ನನಗೆ, ಏಳು ದಿನಗಳ ವರೆಗೆ ನನ್ನ ಭಾವನ ಪ್ರಶ್ನೆಗಳಿಂದ ಸ್ವಲ್ಪ ಬಿಡುಗಡೆ ಇದ್ದಿತು.

ಎಂಟನೆಯ ದಿನ ಆದಿತ್ಯವಾರವಾಗಿತ್ತು. ನಾನೊಬ್ಬ ಬರೀ ಖಾಸಗಿ ಡಾಕ್ಟರನಾಗಿದ್ದರೂ ನಾನು ಯಾವಾಗಲೂ ಆದಿತ್ಯವಾರ ಮಧ್ಯಾಹ್ನವನ್ನು ರಜಾ ಸಮಯವೆಂತಲೇ ತಿಳಿದು ಕೊಳ್ಳುತ್ತಿದ್ದೆನು.

“ಇಂದು ಮಧ್ಯಾಹ್ನ ನಾವು ಕಂಟೋನ್‌ಮೆಂಟಿಗೆ ಹೋಗಿ ತಿರುಗಾಡಿ ಬರೋಣವೇ?” ಎಂದು ಅಹಲ್ಯೆ ಕೇಳಿದಳು. ನನ್ನ ಭಾವನೂ ಅವಳ ಹತ್ತಿರವಿದ್ದನು.

“ಅಡ್ಡಿ ಏನು?” ಅಂದೆನು.

ಅಂದು ಮಧ್ಯಾಹ್ನ ನಮ್ಮ ಕಾಫಿ ಎರಡು ಗಂಟೆಗೇ ತೀರಿತು. ಡ್ರೆಸ್ಸು ಹಾಕಿಕೊಂಡು ಹೊರಟೆವು. ನನ್ನ ಕಾರನ್ನು ಗ್ಯಾರೇಜಿನಿಂದ ಹೊರಗೆ ತಂದಿರಿಸಿದೆನು. ಅಹಲ್ಯೆಯೂ ನನ್ನ ಭಾವನೂ ಕಾರನ್ನು ಹತ್ತಿ ಕೂತುಕೊಂಡರು. ನಾನೂ ಕಾರನ್ನು ಹತ್ತಿ ಕೂತು ಕೊಳ್ಳುತ್ತಿದ್ದೆನು.

“ಈಗ ಹೋಗೋದು ಕಂಟೋನ್‌ಮೆಂಟಿಗೆ ಅಲ್ಲವೇ?” ಎಂದು ನನ್ನ ಭಾವ ಹಠಾತ್ತಾಗಿ ಕೇಳಿಬಿಟ್ಟನು.

ನಾನು ಅಹಲ್ಯೆಯು ಕಂಪಿಸ ಗದರಿಕೆಯನ್ನು ಲಕ್ಷಿಸಲಿಲ್ಲ. “ಕಂಟೋನ್‌ಮೆಂಟಿಗೆ? ಹೋಗುತ್ತೇವೆಂದು ಯಾರು ಹೇಳಿದರು? ಈಗ ಹೋಗುವುದು ರೇಲ್ವೇ ಸ್ಟೇಷನಿಗೆ. ನಿನ್ನನ್ನು ಅಲ್ಲಿ ಬಿಡಲಿಕ್ಕೆ, ಮಂಗಳೂರಿಗೆ ಹೋಗುವ ಒಂದು ಟ್ರೈನು ಈಗ ಉಂಟಂತೆ.” ಎಂದು ಒತ್ತರದಿಂದ ಹೇಳಿ ನಾನೂ ಕಾರನ್ನು ಹತ್ತಿ ಸ್ಟಿಯರಿಂಗ ವ್ಹೀಲನ್ನು ಹಿಡಿದೆನು. ಕಾರು ನಮ್ಮ ಮನೆಯ ಬಾಗಿಲಿನಿಂದ ಮೂವತ್ತು ಹೆಜ್ಜೆಗಳಷ್ಟು ಮುಂದೆ ಹೋಗಿತ್ತೋ ಇಲ್ಲವೋ, ಫಕ್ಕನೆ ಅಲ್ಲಿಯೇ ನಿಂತುಬಿಟ್ಟಿತು.

“ಏನು ನಿಂತುಬಿಟ್ಟಿತೆ?”

ಪ್ರಶ್ನೆ ಕೇಳಿದವನು ನನ್ನ ಭಾವನೆಂದು ನಾನು ಪುನಃ ಹೇಳಬೇಕಾಗಿಲ್ಲ. ಒಂದು ಕಡೆಗೆ ಕಾರಿಗೆ ಏನು ಕೆಡುಕುಂಟಾಯಿತೋ ಎಂಬ ಭಯ. ಇನ್ನೊಂದು ಕಡೆಗೆ ನನ್ನ ಭಾವನ ಅರ್ಥವಿಲ್ಲದ ಪ್ರಶ್ನೆ. ಇವುಗಳ ಮಧ್ಯೆ ನಾನು ಹುಚ್ಚನಂತಾದೆ. ಅಹಲ್ಯೆಯ ಹತ್ತಿರ ಹೋಗಿ, “ನನಗೆ ನಿಜವಾಗಿ ಹೇಳು, ಈ ಕಾರು ನಿಂತುಬಿಟ್ಟಿದೆಯೇ?” ಎಂದು ಕೇಳಿದನು.

ಅಹಲ್ಯೆ ಉತ್ತರ ಕೊಡಲಿಲ್ಲ.

ನನ್ನ ಕ್ಲೀನರ ಬಾಯನ್ನು ಕರೆದು. ಅವನ ಕೂಡೆಯೂ ಇದೇ ಪ್ರಶ್ನೆಯನ್ನು ಕೇಳಿದೆನು. ಅವನೂ ಉತ್ತರಕೊಡಲಿಲ್ಲ.

ದಾರಿಯಲ್ಲಿ ಹೋಗುತ್ತಿದ್ದ ನನ್ನ ಸ್ನೇಹಿತನಾದ ವ್ಯಾಸರಾಯನನ್ನು ಕರೆದು “ನನ್ನ ಈ ಕಾರು ಈಗ ಇಲ್ಲಿ ನಿಂತಿದೆಯೋ ಅಥವಾ ಚಲಿಸುತ್ತಿದೆಯೋ? ಏನೂ ಮರೆಮಾಜದೆ ಹೇಳಿ” ಎಂದೆನು.

ವ್ಯಾಸರಾಯನು ನನ್ನನ್ನು ಒಂದು ನವೀನ ತರದ ದೃಷ್ಟಿಯಿಂದ ನೋಡಿ ಮಾತೆತ್ತದೆ ಅಲ್ಲಿಂದ ಬೇಗಬೇಗನೆ ಹೋದನು. ನಾನು ನನ್ನ ಭಾವನ ಕಡೆಗೆ ತಿರುಗಿದೆನು.

“ನೋಡಿದೆಯಾ ನನ್ನ ಮುದ್ದು ಅರಗಿಣೀ! ಈ ಕಾರು ನಿಂತಿದೆಯೋ ಇಲ್ಲವೋ ಎಂದು ನಾನು ಮೂರು ಜನರ ಹತ್ತಿರ ನಿನ್ನ ಎದುರಿಗೇ ಕೇಳಿದೆನು. ಒಬ್ಬರೂ ಅದು ನಿಂತಿದೆ ಎಂದು ಹೇಳುವುದಿಲ್ಲ. ಇಲ್ಲ, ಈ ಕಾರು ನಿಂತಿಲ್ಲ. ನಾಗಾಲೋಟದಿಂದ ಹೋಗುತ್ತದೆ. ಈಗಲಾದರೂ ತಿಳಿಯಿತೇ?”

ಅಹಲ್ಯೆ ತನ್ನ ಮುಖವನ್ನು ತನ್ನ ಎರಡೂ ಕೈಗಳೊಳಗೆ ಅಡಗಿಸಿಕೊಂಡಳು. ನಾನು ನನ್ನ ಕೋಟನ್ನು ತೆಗೆದಿಟ್ಟು, ಕಾರಿನ ಎಂಜಿನನ್ನು ಪರೀಕ್ಷಿಸಿದೆನು. ಅದನ್ನು

ಸರಿಪಡಿಸುವ ಉಪಕರಣಗಳನ್ನೆಲ್ಲ ಹೊರಗೆ ತೆಗೆದು ಎಲ್ಲಿ ಕೆಟ್ಟು ಹೋಗಿದೆ ಎಂದು ಅವರ ಸುತ್ತ ಮುತ್ತ ತಿರುಗಾಡಿ ನೋಡಿದೆನು. ಅದು ಎಲ್ಲಿ ಹಾಳಾಗಿದೆಯೆಂಬುದು ಕೂಡಲೆ ತಿಳಿದುಬಂದಿತು. ಅದನ್ನು ಸರಿಪಡಿಸಲಿಕ್ಕೆಂದು ಕಾರಿನ ಕೆಳಗೆ ಹೋಗಿ, ನೆಲದ ಮೇಲೆ ಬೆನ್ನು ಹಾಕಿ ಮಲಗಿಕೊಂಡೆನು. ಮಂಡಿಗೆಲ್ಲಿಂದ ಕಾಲುಗಂಟೆಯವರೆಗೆ ಕಾರನ್ನು ಸರಿಪಡಿಸುವ ಕೆಲಸದಲ್ಲಿ ಉದ್ಯುಕ್ತನಾದೆನು. ನಾನು ಉಟ್ಟುಕೊಂಡಿದ್ದ ವಸ್ತ್ರವೆಲ್ಲ ಧೂಳಿನಿಂದಲೂ ಮೊಬಿಲ್‌ಆಯಿಲಿನಿಂದಲೂ ಮಲಿನವಾಯಿತು. ಕಾರಿನ ಎಂಜಿನು ಸರಿಯಾಗುತ್ತ ಬಂದಿತು.

ಅಷ್ಟರೊಳಗೆ ಕಾರಿನಲ್ಲಿ ಕುಳಿತುಕೊಂಡಿದ್ದ ನನ್ನ ಭಾವ ಕೆಳಗೆ ದುಮುಕಿದನು. ಅಹಲ್ಯೆ ಅವನನ್ನು ತಡೆದಳೆಂದು ಕಾಣುತ್ತದೆ. ಆದರೆ ಅವನು ಕೇಳಲಿಲ್ಲ. ಕಾರಿನ ಬದಿಗೆ ಬಗ್ಗಿ ನಿಂತುಕೊಂಡು ನನ್ನನ್ನು ಒಂದು ಕ್ಷಣ ದೃಷ್ಟಿಸಿ ನೋಡಿ, "ಭಾವಯ್ಯ, ಏನಾದರೂ ಹಾಳಾಗಿದೆಯೋ?" ಎಂದು ಕೇಳಿಯೇಬಿಟ್ಟನು.

ಒಂದೇ ಮಧ್ಯಾಹ್ನ. ಒಬ್ಬನ ಮೇಲೆ ಮೂರು ಸಲ ರೇಗಿಬೀಳುವುದು ಯಾರಿಗೂ ಸಾಧ್ಯವಿಲ್ಲ. ನನ್ನ ಕೋಪಾಗ್ನಿ ಆಗಲೇ ನಂದಿಹೋಗಿದ್ದಿತು.

"ಛೀ, ಹಾಳಾಗುವುದು? ನನ್ನ ಕಾರು ಎಂದೂ ಹಾಳಾಗುವುದಿಲ್ಲ. ಮಹಾತ್ಮ ಗಾಂಧಿಯವರು ಆರೋಗ್ಯದ ವಿಷಯದಲ್ಲಿ ಬರೆದ ಪುಸ್ತಕವನ್ನು ಓದಿದ್ದೀಯೇನೋ? ಮಣ್ಣಿನ ಉಪಯುಕ್ತವಾದ ಲಕ್ಷಣಗಳನ್ನು ಅವರು ಎಷ್ಟೋ ವಿಸ್ತಾರವಾಗಿ ಅದರಲ್ಲಿ ಬರೆದಿರುತ್ತಾರೆ. ವಾತರೋಗಕ್ಕೆ ಮಣ್ಣು ದಿವ್ಯೌಷಧವು. ನನಗೆ ನಿನ್ನೆಯಿಂದ ಸ್ವಲ್ಪ ವಾತರೋಗದ ಸ್ಪರ್ಶವುಂಟಾಗಿದೆ. ಅದಕ್ಕಾಗಿಯೇ ನಾನು ಈಗ ಕಾಲುಗಂಟೆಯಿಂದ ಈ ಮಣ್ಣಿನಲ್ಲಿ ಹೊರಳಾಡುತ್ತಿದ್ದೇನೆ. ತಿಳಿಯಿತೇನು?....ಈಗ ಹೋಗು ಕಾರಿನೊಳಗೆ ಕುಳಿತುಕೊ. ಮಣ್ಣಿನ ಲೇಪನ ಸಾಕೆಂದಾದ ಕೂಡಲೆ ನಾನೂ ಬರುತ್ತೇನೆ" ಎಂದು ಹೇಳಿದೆನು.

ಇದಾದ ಐದು ನಿಮಿಷಗಳಲ್ಲಿಯೇ ಕಾರು ಸರಿಯಾಯಿತು. ಮನೆಗೆ ಹೋಗಿ ನನ್ನ ಉಡುಪನ್ನು ಬದಲಾಯಿಸಿಕೊಂಡು ಬಂದೆನು. ಕಾರು ಹತ್ತುವ ಮೊದಲು ನನ್ನ ಭಾವನ ಹತ್ತಿರ ಹೋಗಿ, "ಜಾಗ್ರತೆ! ಈಗ ಕಾರು ಸರಿಯಾಯಿತೇ? ಎಂದು ನೀನು ಕೇಳುವುದಾದರೆ ಕಾರು ಓಡುವಾಗಲೇ ನಿನ್ನ ಕುತ್ತಿಗೆಯನ್ನು ಹಿಡಿದು ಹೊರಗೆ ತಳ್ಳುವೆನು" ಎಂದೆನು. ಆಮೇಲೆ ನನ್ನ ಭಾವನ ಪ್ರಶ್ನೆಗಳಿಲ್ಲದೆ, ಕಾರು ಸರಿಯಾಗಿ ಮುಂದೆ ನಡೆಯಿತು.

ನಾವು ಕಂಟೋನ್‌ಮೆಂಟಿಗೆ ಹೋಗಿ ಮರಳಿ ಬರುವಾಗ ರಾತ್ರಿ ಎಂಟು ಘಂಟೆ ಆಗಿತ್ತು. ಮನೆಗೆ ಬಂದ ಕೂಡಲೆ ಅಹಲ್ಯೆ ತನ್ನ ತಮ್ಮನನ್ನು ತನ್ನ ಕೊಠಡಿಗೆ

ಕರೆದುಕೊಂಡು ಹೋದಳು. ಒಂದು ಅರ್ಧಘಂಟೆಯ ತನಕ ಅವನಿಗೆ ಅವನ ನಡತೆಯ ವಿಷಯ ಲೆಕ್ಚರು ಕೊಟ್ಟಳೆಂದು ಕಾಣುತ್ತದೆ. ಅದು ಹೇಗೂ ಇರಲಿ. ನಾಳಿನೆಯ ದಿನದಿಂದ ನನ್ನ ಭಾವನ ಅವಶ್ಯವಿಲ್ಲದ ಪ್ರಶ್ನೆಗಳು ಬಹಳ ಮಟ್ಟಿಗೆ ಕಡಿಮೆಯಾದುವು. ಹೀಗೆಯೇ ಎರಡು ವಾರಗಳು ಕಳೆದುವು. ನನ್ನ ಭಾವನ ಆ ಹುಚ್ಚು ಅಭ್ಯಾಸ ನಿಂತುಹೋಯಿತೆಂದು ಸಂತೋಷಪಟ್ಟೆನು. ಮನೆಯಲ್ಲಿ ಅವನ ಸಹವಾಸ ಮನೋರಂಜಕವಾಗಿ ಕಂಡುಬಂದಿತು. ಆದರೆ ನಾನು ಹಾಗೆ ನೆನೆದು ಕೊಂಡುದು ಸ್ವಲ್ಪ ಮುಂಗಡವಾಯಿತೆಂದು ನನಗೆ ಮರುದಿನವೇ ತಿಳಿದು ಬಂದಿತು.

ಬೆಳಗಿನ ಕಾಫಿ ತಿಂಡಿಯಾದ ಕೂಡಲೆ ನಾನು ನನ್ನ ಕೊಠಡಿಗೆ ಹೋಗಿ, ಗಡ್ಡ ಬೋಳಿಸಿಕೊಳ್ಳಬೇಕೆಂದು ಅದಕ್ಕೆ ಬೇಕಾದ ಉಪಕರಣಗಳನ್ನೆಲ್ಲ ಸಿದ್ಧಪಡಿಸಿದೆನು. ನಮ್ಮ ದೊಡ್ಡ ಕನ್ನಡಿಯನ್ನು ಮುಂದಿಟ್ಟುಕೊಂಡು ಮುಖಕ್ಕೆಲ್ಲ ಸಾಬೂನಿನ ನೊರೆಯನ್ನು ಹಚ್ಚಿಕೊಂಡೆನು. ಕ್ಷೌರದ ಕತ್ತಿಯನ್ನೂ ಅದರ ಗೂಡಿನಿಂದ ಹೊರಗೆ ತೆಗೆದು, ಮಸೆಯುವ ಚರ್ಮದ ಮೇಲೆ ಚೆನ್ನಾಗಿ ಹದಮಾಡಿದೆನು. ಎಲ್ಲವೂ ಸರಿಯಾಯಿತೆಂದು ತಿಳಿದು ಕುರ್ಚಿಯ ಮೇಲೆ ಕುಳಿತುಕೊಂಡು, ಕನ್ನಡಿಯೊಳಗೆ ನೋಡುತ್ತ ಗಡ್ಡ ಬೋಳಿಸಿಕೊಳ್ಳಲಿಕ್ಕೆಂದು ಕ್ಷೌರದ ಕತ್ತಿಯನ್ನು ಕೆನ್ನೆಯ ಮೇಲೆ ಇಟ್ಟುಕೊಂಡೆನು. ಆ ಕ್ಷಣವೇ ಕೊಠಡಿಯೊಳಗಿಂದ, "ಏನು ಭಾವಯ್ಯಾ, ಕ್ಷೌರ ಮಾಡಿಕೊಳ್ಳುತ್ತಿಯಾ?" ಎಂಬ ಪ್ರಶ್ನೆ ನನ್ನ ತಲೆಯ ಮೇಲೆ ಹಾರಿಯೇ ಬಂದು ಬಿಟ್ಟಿತು.

ನಾನು ದಿಗಿಲುಬಿದ್ದೆನು. ಕೆನ್ನೆಗೆ ದೊಡ್ಡದೊಂದು ಗಾಯವಾಗಿ ರಕ್ತ ಸುರಿಯಲಾರಂಭಿಸಿತು. ಕೂಡಲೇ ಎದ್ದು ನಿಂತೆನು; ಕೋಪದಿಂದ ಕಿಡಿಕಿಡಿಯಾದೆನು. ದೇಹವೆಲ್ಲವೂ ಕಂಪಿಸಲಿಕ್ಕೆ ಪ್ರಾರಂಭಿಸಿತು. ನನ್ನ ಬಲಗೈಯಲ್ಲಿ ರಕ್ತಧಾರೆಯಿಂದ ಕೆಂಪಾದ ಕ್ಷೌರ ಕತ್ತಿ ಇತ್ತು.

"ನೋಡಿದೆಯಾ ಈ ಕತ್ತಿಯನ್ನು?" ಎಂದು ನಾನು ಕೂಗಿದೆನು. "ಇದನ್ನು ಕ್ಷೌರ ಮಾಡಿಕೊಳ್ಳಬೇಕೆಂದು ಹದನ ಮಾಡಿದ್ದೇನೆಂದು ತಿಳಿದುಕೊಂಡಿದ್ದಿಯಾ? ತಪ್ಪು! ಶುದ್ಧ ತಪ್ಪು! ಇದು ಕ್ಷೌರಮಾಡಿಕೊಳ್ಳುವ ಕತ್ತಿಯಲ್ಲ; ಅನವಶ್ಯಕವಾದ ಪ್ರಶ್ನೆಗಳನ್ನು ಕೇಳುವ ನಿನ್ನಂತಹ ಭಾವಂದಿರ ಕುತ್ತಿಯನ್ನು ಕಡಿಯುವಂತಹ ಕತ್ತಿ! ತಿಳಿಯಿತೇನು?....ನನ್ನ ಕೆನ್ನೆಯ ಮೇಲಿರುವ ಈ ಗಾಯವನ್ನು ನೋಡು, ನಾನು ಅದನ್ನು ಬೇಕಂತಲೇ ಮಾಡಿಕೊಂಡದ್ದು! ತಿಳಿಯಿತೆ? ನನ್ನ ಕತ್ತಿಯ ಹದನ ಸಾಕಷ್ಟಾಗಿದೆಯೋ ಎಂದು ಪರೀಕ್ಷಿಸಿದುದು! ಈಗಲಾದರೂ ತಿಳಿಯಿತೇ?"

ನನ್ನ ಭಾವ ನನ್ನ ಆರ್ಭಟವನ್ನು ಎರಡು ನಿಮಿಷಗಳವರೆಗೆ ಬಾಯಿ ತೆರೆದು ಕೇಳಿದನು. ಆಮೇಲೆ ನಿಧಾನವಾಗಿ "ಭಾವಯ್ಯಾ, ನಿನಗೆ ಸಿಟ್ಟು ಬಂದಿದೆಯೋ?" ಎಂದು ಕೇಳಿದನು.

ನಾನು ಪೂರ್ಣ ಹುಚ್ಚನಾದೆನು. ಕೈಯಲ್ಲಿದ್ದ ಕತ್ತಿಯನ್ನು ನನ್ನ ಕುತ್ತಿಗೆಗೆ ತೆಗೆದು ಕೊಂಡು ಹೋದೆನು. ಥಕ್ಕನೆ ಏನೋ ಸಂಭವಿಸಿತು. ಅಹಲ್ಯೆಯ ಮುಖ ನನ್ನ ಎದು ರಿಗೆ ಒಂದು ಕ್ಷಣ ತೇಲಿದಂತೆ ತೋರಿತು. ಕೂಡಲೇ ಎಲ್ಲವೂ ಮಸುಕುಮಸುಕಾಯಿತು.

ಕಣ್ಣು ತೆರೆದು ನೋಡುವಾಗ್ಗೆ ನಾನು ನನ್ನ ಹಾಸಿಗೆಯ ಮೇಲೆ ಮಲಗಿದ್ದೆನು. ಹಾಸಿಗೆ ನೀರಿನಿಂದ ಒದ್ದೆಯಾಗಿದ್ದಿತು. ರಕ್ತದಿಂದ ಕೆಂಪಾಗಿದ್ದಿತು. ಅಹಲ್ಯೆ ಹಾಸಿಗೆಯ ಮೇಲೆ ನನ್ನ ಬಳಿಯಲ್ಲಿ ಕುಳಿತುಕೊಂಡು ನನ್ನ ಕುತ್ತಿಗೆಯನ್ನು ಸವರು ತ್ತಿದ್ದಳು. ನನ್ನ ಭಾವ ನನ್ನ ಕಾಲಡಿಯಲ್ಲಿ ಅಳುತ್ತಾ ನಿಂತಿದ್ದನು. ನನ್ನ ಕ್ಷೌರ ಕತ್ತಿ ನೆಲದ ಮೇಲೆ ತುಂಡಾಗಿ ಬಿದ್ದಿತ್ತು. ಅದರ ಒಂದು ತುಂಡು ನೆಲಕ್ಕೆ ಬಲವಾಗಿ ಕಚ್ಚಿಕೊಂಡಿತ್ತು.

ಇದೆಲ್ಲ ಕಳೆದ ಮೇ ತಿಂಗಳಲ್ಲಿ ಸಂಭವಿಸಿತು. ನಾವೀಗ ಡಿಸೆಂಬರಿನಲ್ಲಿದ್ದೇವೆ. "ಹಾಗಾದರೆ ನೀನು ಒಟ್ಟಾರೆ ಸಾಯಲಿಲ್ಲ?" ಎಂದು ನನ್ನ ಭಾವನ ಹಾಗೆ ದಯವಿಟ್ಟು ಕೇಳಬೇಡಿ!

ನಾವು ಸಂಸಾರದ ಸಾಗರದಲ್ಲಿ ವಿಚಾರ ಮಾಡಿದಾಗ ನಮಗೆ ಹಾಸ್ಯರಸದ ಮಹತ್ವ ಎಷ್ಟೆಂಬುದು ಗೋಚರವಾಗುತ್ತದೆ. ಈ ಲೋಕದ ಸಮಸ್ತ ಪ್ರಾಣಿಗಳಲ್ಲಿ ಮಾನವ ಶ್ರೇಷ್ಠ. ಮಾನವ ಜನ್ಮಕ್ಕೆ ಮಹತ್ವವಿದೆ. ಅದು ಏಕೆ ಗೊತ್ತೆ! ಆತ ನಗಬಲ್ಲವ ನಾಗಿದ್ದಾನೆ. ಈ ನಗೆಯಿಂದಲೇ ಮನುಷ್ಯ ಈ ಭೂಮಿಯ ಮೇಲೆ ವಾಸಿಸುವವರಲ್ಲಿ ಸರ್ವೋತ್ತಮನಾಗಿದ್ದಾನೆ. ನಾನು ನಗೆಗೆ ಇನ್ನೂ ಹೆಚ್ಚು ಮಹತ್ವಕೊಡುತ್ತೇನೆ. ಏಕೆಂದರೆ ನಮ್ಮ ಈ ಸಮಾಜ ಹಿಂದಿನ ಎರಡು ಸಾವಿರ ವರುಷಗಳಿಂದಲೂ ನಕ್ಕೇ ಇಲ್ಲ. ಆದ್ದರಿಂದ ಶಕ್ತಿ ಶಾಲಿ ರಾಷ್ಟ್ರ ಕಟ್ಟುವ ಉದ್ದೇಶವಿರಿಸಿಕೊಂಡಿದ್ದರೆ ನಾವು ಹೆಚ್ಚು ಹೆಚ್ಚು ನಗುವನ್ನು ಕಲಿಸಬೇಕು. ಸಮಸ್ಯೆಗಳನ್ನು ಧೈರ್ಯದಿಂದ ನಗುನಗುತ್ತ ಎದುರಿಸುವ ರೂಢಿಯೇ ನಮ್ಮಲ್ಲಿ ಬೆಳೆದು ಬಂದಿಲ್ಲ. ಮಾನವ ವಿನಾಕಾರಣ ಹೊಟ್ಟೆ ತುಂಬ ಹಾಗೂ ಮುಗ್ಧ ನಗುವನ್ನು ಎಂದು ನಗುವನೋ ಅಂದು ಈ ಪ್ರಪಂಚ ಸೃಷ್ಟಿಸಿದಾತನೂ ನಗುತ್ತಾನೆ. ಅಂದು ಈ ಸಮಸ್ತ ಸೃಷ್ಟಿ ಹಾಸ್ಯರಸದಲ್ಲಿ ಮಿಂದು ಎಂದೆಂದಿಗೂ ವಸಂತಋತುವಾಗಿ ಉಳಿಯಬಹುದು.

—**ಪದ್ಮಭೂಷಣ ಕೃಷ್ಣಚಂದರ್**

Swami Ramdas-A Glimpse into His Past and Present

Prof. P. Ramanand

Only a saint can understand a saint. When we, ordinary people, try to understand a saint, the picture that we get is vitiated by all the limitations of our false, self-asserting, ego-ridden selves. It is only at certain moments in our lives when our poor little ego happens to stand aside unknown to our-selves, that we are able to get glimpses of the saint as he really is. But such delicious moments are, by their very nature, rare-very rare Indeed.

Twenty-five years ago, my uncle vittal Rao suddenly renounced the world and left Mangalore for an unknown destination, leaving behind him his wife and child. This bewildered me not a little for I had grown very fond of his family, and I became sore in my heart for my helpless aunt and little cousin-sister. His renunciation reminded me of the other Great Renunciation, 2500 years ago, of Prince Siddhartha. He too had left behind him a wife and a child, and had walked the rough and thorny path alone. I envisaged in my mind all the terrors of this dreadful path-all the tribulations and agonies of body and soul, the harrowing trials and hardships, the rigorous self-discipline and relentless

---

ಪ. ರಮಾನಂದರಾಯರು ಆಂಗ್ಲ ಭಾಷೆಯಲ್ಲಿ ಉತ್ತಮ ಲೇಖಕರಾಗಿದ್ದರು. ಅನೇಕ ಶ್ರೇಷ್ಠ ಇಂಗ್ಲಿಷ್ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರು ಇಂಗ್ಲಿಷಿನಲ್ಲಿ 1947 ರಲ್ಲಿ ಬರೆದಿರುವ ಈ ಲೇಖನವನ್ನು ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಈ ಗ್ರಂಥದಲ್ಲಿ ಅಳವಡಿಸಲಾಗಿದೆ.

mortifications of the flesh, and the enormous cruelties and indignities which unthinking man heaps on those who choose this path. All these must have been the lot of the great Prince, and, undoubtedly, would be the lot of my uncle also in his quest of the Eternal. But Prince Siddnartha had triumphed over all his tribulations and had returned to the world as the Enlightened One. Would my uncle also do as He did, and return to us as one of the Shining Ones of the world ?

Or-dread thought-would he come back to us like so many people of puny stature, who, in a fit of cussedness leave their hearts and homes and take to the gerrua cloth, but, after a time, unable to bear the rigours of this fearful path, sneak back into the world and creep into our lieves humbled and crestfallen, the very shadows of their former selves? It was indeed a dread and disturbing thought to me

But not for long. For, more than 35 years ago, it had been given to me to sense a future greatness for him. But it was hardly the greatness which is his now !

Passion for English Literature

I was a stripling then studying in the High School classes at Mangalore. My uncle was then having a chequered life at various places- Quilon, Coimbatore, Madras, Gadag, etc. In between his one job and another he used to come to Mangalore anb stay with his father-in-law, sometimes for pretty long periods. And when he did so, I had the happiest days of my adolescence! I would cast aside all my legitimate studies and even games, and barely keeping to my attendance in class, I would snatch every opportunity to go to him and remain at his feet and listen to his magic words and discourses- not on Religion, but on Literature, and English Literature at that! While all the other grown-ups

about me were spending their leisure hours in devouring Charles Garvice, Guy Boothby, William Le Queux and other penny dreadfuls, as if fheir very lives depended upon their doing so, here was an uncle, not even a Matriculate. opening up to me the magic casements of English literature one after another, with a fervour and a passion that later on in my collegiate studies, I failed to detect even in Professors of English ! And some of these were Englishmen too !

One day he would discourse to me on the charm of Lamb's "Essays of Elia", the next day he would show to me the power and strength of Byron's verse in his 'Childe Harold' or his bitter sarcasm in his ' English Bards and Scotch Reviewers'. The third day he would bring to me the glory and grandeur of Shakespear's 'Hamlet' or the sombre magnificence of his 'Sonnets'. The fourth day he would introduce to me the gall and bitterness in the 'Letters of Junius' or the innocence and loveliness in the 'Letters of Cowper'. The fifth day he would discourse to me on Johnson and his circle of friends-Boswell, Goldsmith, Sheridan, Garrick. Reynolds, Burke, etc. with a special bias towards poor Goldsmith, or read to me Ben Johnson's 'The Alchemist'. The sixth day he would invite me te be one of the homely company in Burn's 'A Cottar's Saturday Night' or help me to make friends with the delightful Sir Roger de Coverley of Addison and Steele. On the seventh day he would bring out to me the fire from Shelley's 'Promethes Unbound' or let loose the flood of laughter from the stories of W. W. Jacobs and Jerome K. Jerome. And so on and on, according to the mood of the hour. And this went on during all those intermittent periods of his stay at Manglore ! No Master of English, great or small, was ever neglected. Poets and dramatists, essayists and story-writers, letter-writers and reviewers, humorists and satirists were all paraded by him before me, in all their greatness or littleness, and made to live again before me in flesh and

blood. And all this while I was only a High School lad! It was a wild, mad living in literature for both of us, and nothing else seemed to have any importance for either of us. For, had he not created for me and for himself an entirely new world, for more fascinating than the world around us, and peopled with such literary giants and fascinating figures like Shakespeare and Ben Johnson, Marlowe and Milton, Dryden and Pope, Addison and Steele, Keats and Shelley, Byron and Burns, Wordsworth and Coleridge, Johnson and Boswell, Cowper and Goldsmith, Garrick and Sheridan, and Fox and Burke- not to mention W. W. Jacobs and Jerome K. Jerome ? Who would not revel in such a fascinating world and who would want any other ?

But far more fascinating to me than all this was my uncle himself ! His glowing discourses on these literary giants and their spacious times, his irrepressible wit and humour, the vividness of his thoughts and feelings, the fervid words with which he gave shape to them, his wonderful gift of teliing a story, and marvellous facility and flow of his language, all these made me look upon him, in relation to the other grown-ups about me, as some thing of a superman, and created between himself and the adolescent me a far stronger bond than one of mere affection between an uncle and a nephew. In fact he had become to me in no time a Pied Piper of Hamelin-a Piper, who, I was certain, had fed on honey-dew and drunk the milk of paradise.

Play-Wright and Actor

i confess I have absolutely no idea as to how my uncle appeared then to my other relatives and friends. That one literary aspect of his life, coupled with his ever bubbling bumour, was the only aspect I knew, and that aspect had heen ail in all to me concerning him. I never bothered to find out the other sides of my uncle. Even at this distance

of time, when I think of my Vittu bappa- as I used to call him then, 'Vittu' being the shortened from of 'Vittal' and 'bappa' meaning 'uncle' in Konkani-it is only the picture of a fervid young man fired with an intense literary zeal and ever bubbling with humour and laughter that stands before me. I remember, however, that he was more like a big grown up child than a man of the world. 'A perfectly guileless person' would probably hit off the mark. He was so simple in his dress and manners that it was a standing joke among us that he did not know even to wear a dhoti properly That he would not know even if a portion of him was sliced off, was another tag with which we used to rag him. And then, alas, that remarkable faculty of absent-mindedness. with which our family as a whole seems to have been gifted, undoubtedly reached its peak in him and involved him in many a domestic disaster of the minor sort. And then also, remember, the Stage had its fascination for him and made him produce a number of amateur plays in his younger days, and in these plays he was not only the producer and an actor but the dress maker, curtains-painter and scene-shifter as well. Even later on, I remember his beautiful production of the Marathi play 'Santha Damaji' in Mangalore and his magnificent acting as a Mussulman General in it. He had drafted most of us to act in this production, and I remember also how I barely escaped with the skin of my teeth from wearing a blouse and saree in it. And then also, I cannot forget that incident in which he figured as hero-of the Wodehousian type. He was, like most of the members of our family, a very heavy sleeper in those days, not getting up usually before nine or ten in the morning ! One day one of his younger brothers-my Shina bappa, in fact (the late Sri Srinivasa Rao, Artist and Photographer at Udipi) was asked to wake him up and he did-with disastrous results to himself. My Vittu bappa was wild and furious at being awakened an hour earlier than his usual time, and he chased the culprit out of the house, mad with fury. Round

and round the house the two Brothers ran- the scene was in the best Wodehousian manner- until at last the gasping younger brother made a successful getaway. And the elder my Vittu bappa, nothing daunted, went back to his bed and slept soundly for three more hours !

Our mad living in literature, as I have called it, was carried on even after we became separated by the exigencies of our different spheres of activity, I still continuing to be a studuent. This took the shape of what seemed to be an interminable and weighty correspondence- weighty because each time we wrote to each other (and that was at least once a week, if not twice) our letters were usually not less than 24 to 36 pages long! (I do not remember ever having written such long letters even to my wife when we were newly married!) I have called them letters, but they were not. Each 'letter' was a Miscellany of humorous anecdotes and skits, serious poems and doggerels, light stories and sketches, observations and criticisms- all wild, care-free writing. Neither of us had the least desire to see this writing in print That is why we wrote to each other with such perfect abandon, out of the sheer joy of writing. We started this correspondence because that was the only way we could still commune with each other in spite of our scparation. My Vittu bappa's letters to me were, very often, so screamingly funny that I invariably fell into the habit of addressing him in my letters as 'Witty bappa'. (Pardon the poor pun, I was in my teens then.)

'The Song Eternal'

But the rosy dawn heralds thc sun. It was in one such 'letter' he sent to me, along with some uproariously funny stuff, a poem, which thrilled me to the core. It was 'THE SONG ETERNAL'.

Till then I had been familiar with his remarkable creativeness in the various forms of literature stories, sketches, essays, skits, satirical pieces, versification, play-writing, etc. Nothing he had written had ever astonished me, for whatever he had written had been so charactaristic of the man I had known so intimately. He had by then written a considerable number of poems, and many of them had shown a depth of feeling and artistry that was far, far above the average. But this poem, 'The Song Eternal,' completely lifted me off my feet and made me think. Here was an entirely new side to my erstwhile 'Witty bappa'. Obviously, a flash from the Divine had illuminated his soul for a moment. But what a poet is there, worth his salt, who does not get such glimpses of the Divine at least occasionally? I contented myself with this reflection, and carried on my correspondence with him as before-on the mundane plan.

Thus it can be seen why I was completely be-wildered when early in 1923 I learnt that my uncle had suddenly left his hearth and home and gone forth in quest of God, treading the rough and thorny path of renunciation. I could hardly reconcile the uncle I had known so intimately with the Sannyasi he had set himself to be. The greatness I had discovered for him in seed form, and had envisaged for him in the future, was hardly the greatness of an all-embracing spiritual life. I had eagerly looked forward to his bursting upon Indian literary scene as a great literary figure- as an editor of ability and genius of some Indian counter part of a journal like 'John O' London's Weekly' or the London 'Punch , as a teller of stories in the manner of W.W. Jacobs or Jerome K. Jerome, as a consummate artist in the field of the essay or humour, as an Indo-Anglian poet of no mean distinction, or as all these put together. Never for a moment in spite of his 'The Song Eternal', did I believe that he, who had loved this life of ours so well and so much, would renounce it so suddenly or so completely for someth-

ing, which, to me atleast, seemed then so intangible of attainment.

But renounce he did, and that so completely and thoroughly too.

In far-off Tellicherry I could hear occasionally the reverberations and rumblings caused by this great renunciation among our friends and the members of our family. I could hear angry voices raised, sense new hatreds born and catch the echoes of all sorts of wild and fantastice stories thrown about in the air. I thought of my helpless aunt and her child at Mangalore, and I became very sad. I thought of my old grand-father at Kasargod, and became more sad. I became dimly aware that the intimate bond that had existed between my uncle and myself might also have become just driftwood in this great renunciation, and I became still more sad and wistful. But I had settled in life just then. Other interests had begun to come into my life and engross me with their insistence. But some where, in the deep recesses of my heart, there was a vague unceasing pain that I had lost, once and for all, something which had been very precious in my life.

A year or so passed. I heard that my uncle had been discovered in Bombay and had been brought back to Mangalore by my aunt and her friends. I hurried to meet him but with considerably mixed feelings, for I did not know how he would receive me or in what shape I would see him. Would he be my uncle still? Would the old bond between usstill continue to exist?

It was about two o'clock in the afternoon, I think. I heard that he had come just then to the house of another uncle of mine, the late Sri Sitarama Rao, from his cave in the Kadri hill. I stood at the door of the hall

in which he was seated, and looked at him. When I saw him I could hardly move from where I stood. It was not my Vittu bappa I saw before me.

The Emaciated Buddha

Here, before me, was a thoroughly emaciated from with rib bones all sticking out, and cheeks all hollow, His bony legs and arms were like thin sticks. He was seated in the yogic posture with legs crossed and eyes closed. A piece of rough gerrua cloth was round his loins, and one end of it had been thrown carelessly over his left shoulder. Heaven's light seemed to play about him, and I saw before me a picture that was all holy and sublime, the very picture, in fact, of the Emaciated Buddha, the Enlightened One, in meditation.

With an effort I went in, prostrated myself before him and sat near him. After some time he opened his eyes-they were sparkling with a strange divine light. When he saw me near him, a smile immediately flashed across his emaciated face-but was it a smile of recognition? I did not know. There was some all embracing universality about that smile which I could not understand. For all my former intimacy with him, I had become just another 'Ram' to him. Tears welled into my eyes. A hundred questions leapt to my tongue, but I could hardly articulate them. I was so choked up with feelings. All that I could do was to sit there drinking him in with my tear-drenched eyes.

I was also conscious of the fact that I felt like a dog that had lost its Master.

And I did not make any conscious efforts to meet him for almost the next twenty years. This might seem rather strange behaviour in one, who has loved him and venerated

him as probably none else has done. But probably that was the very reason why I did not want to meet him! He had become one of the great Shining Ones of the world, while I had still remained of the earth earthy. How could there be communion in spirit between two such diversities? His all-embracing love must have embraced my little plane of mundane existence also; but, alas, in my ignorance I was not aware of it. He had become a Shining Light to the world, but in my heart there was darkness, and what was worse, I did not even feel the necessity to light a lamp in it! Try as I did, I could not superimpose Swami Ramdas on my Vittu bappa. I could have, of course, superimposed my Vittu bappa on Swami Ramdas. and probably got away with it but that would have been, even to my own eyes, a sacrglie-ge. it would be far, far batter for everybody concerned-so I thought -if I decided to stand aside and wipe out myself altogether from the scene,

But worst of all, I was seized with an obsession, especially in those early years-an obsession that has worn off in its entirety only recently. I Knew people were flocking to him in large numbers, ond I Knew also, alas, that many of them were doing so only out of idle curiosity, if not not worse, and I hated them for thot. I did not want this great Emancipated Soul to be an object of mere curosity and possible ridicule by the half-witted. I thought I knew human nature too well.

And then again, oll this glib and loose talk of religion. Unfortunately, tall words and highsounding phrase come easily to us when once we get the hang of them. It was so easy to dissimulate to look pious and mouth religion, while all the time the heart was in utter darkness as befoer and the ego was wallowing in its pig-sty of selfishness, gr-eed,hypocrisy, ostentation and sensual pleasures. If all these people were really so earnest about religion as they profe-

ssed to be, whynot they do as my uncle did-renounce, renounce and renounee? what was all this parrot talk of religion as long as it was not backed by the solid fact of renunciationi utter self-effacement and surrender to the will of the Divine? All the religions of the world were united in pointing out to us this one path for the attainment ofthe supreme Godhead. That was the only path taken by all the Shining Ones of the world-the Buddha, the Christ, Shankaracharya, Chaitanya, Ramakrishna Paramahamsa, Aurobindo Ramana Maharshi, Mahatma Gandhi, Swami Ramdas, and hundreds of saints and seers all over the world too innumerable to mention, that have attained Godhead from times immemorial. And as long as I too persisted in identifying myself with my self-asserting over-riding ego with all its limitation and imperfections, and was not prepared to shed even a tittle or jot of it, what was the point in my trying to decive myself and shine in a Light that I could not perceive in my own heart?

This was the other part of my obsession that had kept me from consciously basking in the immense Love and Light of Swami Ramadas during all those twenty years. Looking back, what colossal Ajnana of mine! Not that it has disappeared now, but by the grace of Swami Ramdas, I have been made aware at least of its ponderable existence.

It was due to my 'Ajnana that' I had Looked upon all those devotees of Swami Ramdas with a jaundiced eye. From the worldly point of view I am aware I have not made a single overstatement concerning them. But, what I was not aware of then, even from the wordly point of view was the fact that for every devotee of the weak heart or the weak-kneed or the turn-coat type, there were hnndreds of other devotees selfless and pure souls, whose hearts had deen transmuted into gold by the touch and contact of Swami Ramdas. And then, as result of my stupid obsession, I had failed to recognise the obvious truth that the Ashram of Swami Ramdas

was meant to be a place of 'ashraya' (shelter) to all-be they devotee of God or of Mammon, saints or sinners, Sadhaka, or sight-seers, people in distress or holiday-trippers, self-effacers or self-advertisers, knowledge-seekers or gossip-mongers, God's holy men or rogues and scoundrels all, all to be received with equal honour and love, and fed sheltered with absolutely no distinctions of not only caste, creed or religion, but also of their station in life or even their moral worth. For, in the vision of Swami Ramdas and Mother Krishnabai, they were all embodiments of that one Ram, Who is in the hearts of all men, all creatures, all things, Who has become this universe and everything in it, Who is the One without a second, Who is Name and Form yet is Formless, Who is Manifest and Unmanifest and yet has transcended both. No Wonder, in my colossal ignorances I could not even glimpse the true purpose of the mission of Swami Ramdas and his Ashram !

Even othewise, I ought to have realised that from times immemorial there has been no saint who has not had his quota of traducers and defamers, no Christ without his Judas or persecutors ever ready to crucify him. People of 'asuric' type are rampant everywhere. They have always existed. The very name of God, or of a saint, is anathema to them. In my obsession I was not aware of even this simple fact.

And renunciation- was it after all such a simple and strait-laced fact I took it to be ? What about the turmoils of the soul, the torments of the flesh, the doubts and fears that churn one's heart, the moments of anguish and despair and the blind groping for the one tangible support in life ? These are the precursors of a soul that is ready for renunciation, and not the big mouthings of religious scriptures. But these precursors will not come to us unless the Touch of God is upon us, and this Touch can come to us only

through His Grace, and the Grace of God can be ours only by our association with saints and God-realised souls. What wonder then that an endless stream of humanity, in all shapes and conditions, flocks to a saint wherever he is found? In my terrible Ajnana of those years I could not understand this great truth, and the result was, I denied myself the Light of Swami Ramdas during all those twenty years. The fault, dear Brutus, is not in our stars. but in ourselves that we are and just stupid, full of Ahankara and seething with an incorrigible sense of our own self-importa-ance.

It is true I did not consciously seek to meet Swami Ramdas during all these twenty years, but that does not mean I did not see him at all. The old love of a nephew for his uncle still burned in me strong as ever, and the desire to see him would occasionally draw me to his Ashram. But every time I did so- and such occasions were not more than half-a-dozen, I believe-I was only a passive witness to all that was going on there. My eyes would have their fill of Swami Ramdas, and I would be satisfied. I would make no attempt at closer communion with him for reasons I have already stated.

The very second time I met him after he had become Swami Ramdas was a few years after my first dumb inter-view with him at Mangalore. This was in his Ashram at Kasaragod, which had been built for him by another uncle of mine, the late Sri Ananda Rao. I believe I spent two days in this Ashram, and here I saw Ramdas in a different light altogether.

Throughout the first year of his wanderings, which he has described so graphically for us in his 'In Quest of God' he had utterly abandoned his ego-self in complete surrender

to the Divine Will. Ramnam, which was on his lips unceasingly, had been his only Sadhana. But his was not a mere parrot-like repetition of the Name. The name thrilled him as no other sound did. There was no music sweeter than the Name to him. He got ceaseless ecstasy by the mere repetition of the Name. In the course of his wanderings he had naturally come across innumerable Sadhus and saints. But he had no questions to ask of them, no doubts to be cleared, no eagerness whatever to know what other paths led to God-realisation The Name was his only Sustainer, and he did not want anything else. This, as he explains now, was only his first stage in God-realisation, the stage which helped him to destroy his ego-self entirely. in his telling language, illustrated by an apt story, the Name was the pole on which he made the demon of his ego dance up and down continuously; the demon getting disgusted with this unceasing monotonous performance ran away, and the pole, having served its purpose was kept aside. Hence forwards, there was no muttering of Ramnam for him, for as he exclaims : 'Where was the mutterer?'.

When he had reached this stage, Ram seems to have commanded His Das to dive within himself. Ramdas obeyed Him instantly. He dived within himself-and dived deep-and would not come up! He was last in the ineffable Bliss within. It was only with the greatest effort he could come out of himself and cognise the world about him. This was, as Swami Ramdas says now, the second stage in his God-realisation. He was obviously in this second stage when I had my first glimpse of my uncle as Swami Ramdas in my uncle Sitarama Rao's house at Mangalore.

A Dancing Dervish

But now, in this Ashram at Kasaragod, he was no more the serene, albeit the emaciated Buddha in meditation To

my ignorant eyes he seemed more like a dancing dervish ! The whole day and night he would jump about and dance in wild ecstasy to the shouts of 'Hari-bol !', 'Hari Om !', 'Hare Ram !', 'Hare Krishna', etc. A God-mad and God-filled soul ! A Child of God, wild and care-free ! God had covered him, and filled him through and through, sending him into uncontrollable ecstasies.

That was, as Swami Ramdas tells us now, the third stage in his God-realisation. He had by then tasted the nectar of the Bliss within, the Bliss of the Eternal Purusha residing in the heart of every-one, and he was for ever diving within to taste of this Bliss. But Ram then commanded him to open his eyes Wide and take in the outside Prakriti also as His own Blissful Form Ramdaa obediently did so, and came at once to realise that Purusha and Prakrit, though seemingly separate, were One in realty. His bliss then knew no bounds, for there was now for him bliss within and bliss without. In fact, for him now there was no outside or inside. The Outside and the Inside had become One for him. His frail, little body could hardly withstand the sudden onrush, in waves, of this exalted Ananda— the inexpressible Ananda of the Purusha and Prakriti sporting together. It filled every pore of his body, and the poor body could only express it through wild, ecstatic dance.

But my 'Ajnanic' eyes could not discern all this then. I was only dimly aware that a boundless ecstasy was residing in his heart, and I was happy to see him thus. Truly the 'unripe mango' had ripened. It was there for all who would still remain whole. But my disease was such that I had no taste for it, and I came away without tasting it. But I had the firm conviction that Ramdas, Quest of God was over. He was now truly in the Vision of God.

This visit to the Ashram made me happy in another sense also. My aunt also had come to live in the Ashram with her

child. She was, no doubt, ailing badly then, but Mother Krishna Bai, that Great Soul who had also joined him then was nursing her with indefatigable energy and boundless love and devotion.

The 'Papa' of All

Many years elapsed since then, and during these years I had an occasional glimpse of Swami Ramdas here and there. But when I first saw him in his new Ashram at Ramnagar—Anandashram— what a thrill passed through my frame! He was no more the dancing dervish I had seen at Kasaragod many years ago, neither was he the emaciated Buddha in meditation I had first seen at Mangalore. He had now shed his gerrua cloth, and was dressed like any of us in plain, simple, white cloth'. Crowds of devotees were round him, eagerly drinking in his words, and he was moving freely among them with his eyes ever twinkling in merriment and his face ever wreathed in bewitching smiles. A joke here, a humorous comment there, or a story or parable told in his inimitable humorous way, and the devotess would burst into roars of laughter. Truly the name of the Ashram—Anandashram—was fully justified. There seemed to be joy and bliss everywhere within its precincts.

When I saw Swami Ramdas thus—with all his old humour, his ever merry twinkling eyes and his face ever wreathed in soul-bewitching smiles—I got a glimpse of my old Vittu bappa again, and I got a new-born joy within me.My heart went out to him again as in the olden days.

But not quite. No doubt his incorrigible humour was there, and all his bubbling laughter, and all his wonderful art of telling a story, But he was still not my old Vittu bappa, for my old 'Vittu bappa' had now become

transmuted into a far higher Being, Who had become the 'Papa' of all. It was so very easy, for me now to obliterate the nephew in me and throw myself in the joyous fray in order to drink in his nectarine doses of wit and wisdom—as used to in days of old. But my obsessions that had made me a weakling of the heart gripped me again in their tentacles, and put up a barrier in me that would not let his in-effable Love and Light flood into my heart. The nearest approach I could then make to him was only by way of prostrating before him with tearful eyes. And I left the Ashram, conscious only of the utter confusion in my heart.

I did not know it then, but I know it now, that Swami Ramdas had, by then, reached the fourth stage in his God-realisation—the attainment of the utter ABSOLUTE. And is there any stage beyond It?

It is most difficult for ordinary folk like us to understand clearly this last stage of God-realisation. The gerrua cloth compels respect no doubt; the stage of Samadhi awe and veneration, and the ecstatic state makes us conscious of the presence of God in the Saint. But this last state—the state of Sahaja-samaphi, when the Saint to all outward appearances is justlike any of us, eating drinking,talking, laughing etc.,—something beyond the comprehension of most of us. It is only when we try to commune intimately with the Saint that we get a glimpse of the depth and height of his Realisation. We have only to recall how even to Arjuna, with all his life-long intimacy with Sri Krishna Bhagawan, the Lord appeared to be only an intimate Friend and Protector, and nothing more than that. It was only when circumstances compelled Arjuna to come into closer communion with the Lord, on the battle-field of Kurukshetra, that his eyes were really opened and he could get the vision of the utter ABSOLUTE in his erstwhile Friend and Protector! if that

was the case with Arjuna, how much worse it is with ordinary folk like us, when we come into contact with God-realised Souls !

For me the last barrier for communion with Swami Ramdas has now been broken down. The scales have fallen from my eyes. The old prejudices have given place to a new understanding – all due to his Grace. He alone knew when to reclaim his lost and wandering child. Those twenty years of my life may not have been entirely wasted, Unknown to me, his boundless Love must have been working its alchemy in my heart all those years, and, to my intense joy I am now aware of its divine touch in the outermost fringes of my heart. To-day I am proud to consider myself as one of his innumerable devotees, scattered all over Indian and elsewhere—the humblest and the least of them all.

It is not necessary for anybody to expound the teachings of Swami Ramdas, for he is own best exponent. His writings are so crystal clear that he who runs may literally read and understand them. The appeal of his two auto-biographical narratives, 'In Quest of God' and 'in the Vision of God, is irresistible even to the most irreligious persons. People in thousands, in India and elsewhere, Who have never set their eyes on Swami Ramdas, have become his ardent followers soley after reading these two remarkably human documents of the completest surrender to the Divine Will. And then, the monthly THE VISION brings his wisdom and constant guidance in the Spiritual Path to countless devotees. His innumerable poems are perfect gems of their kind, coming as they do, from an Englightened Soul. His letters to his disciples, who take to him all their little crosses in their worldly or spiritual life, are full of an understanding and spiritual guidance that brlng solace to their afflicted hearts.

That Swami Ramdas has no distions of caste, creed or religion goes without seying. He makes no distinctions of

nationalities even. For him all countries, all nationalities are one; for, is not every individual soul in this entire world but an embodiment of his own blissful Ram to him? No wonder his message to the world is one of Universal Love and Service. The radio and the Aeroplane have, no doubt, annihilated all distances and brought together the farthes, corners of the globe. But, alas, demonaic hatreds, dirstrust and unquenchable greeds and ambitions, have raised their ugly heads and shattered the world into a thousand fragments as never before. Never before was Swami Ramadas' message of Universal Love so badly needed by the world as now. It is only this religion of Universal Love and Service which he has been preaching to the world ever since he took to Sannyas twenty-five years ago and attained God-realisation, that can unite the broken fragments of the world into the One World again—the One World that is the dream of all thinking men. It is only this religion of Universal Love that can save our world for humanity now and for ever.

A Spiritual Power Station

The Anandashram at Ramnagar is at once an emblem and a power-station of this ideal of Universal Love and Service. Day in and day out, and during all the days in the year, a regular stream of devotees of Swami Ramdas pours into the Ashram. They stay in the Ashram for about three or four days at a time, and having partaken of the bliss therein, they go back to their homes, each having understood the Light in his or her own way, but all conscious of the living power of Universal Love and Service they have experienced in the Ashram during their stay there. Thereafter it is theirs to make this Light of Universal Love and Service burn in their own homes and in the spheres of their influence, unabated and strong. 'Come to the Ashram only to charge your batteries,' says Swami Ramdas half-humorously, to his disciples, 'but go back and light your lamps in your own homes and spheres of activity!'

I shall not attempt to describe these scenes of ineffable joy and bliss in which the devotees figure when they are with Swami Ramdas. Other pens, more graphic and more experienced than mine, may do so. To me the way of Swami Ramdas with his disciples is in itself the most fascinating thing in the life at the Ashram. Swami Ramdas never preaches in the set meaning of the word. He has no fixed hours in which to speak to his disciples. At all hours of the day or night-from six o'clock in the morning till ten o'clock in the night-any disciple can come to him and have him. He for himself has no solitude whatever, Clusters of disciples are always found around him at any given moment of the day or night. In spite of all this. never for a moment does he get flustered or annoyed either by their persistent attentions. On the other hand, his face is always wreathed in smiles-soul-cleansing smiles, that bring comfort, joy and peace to every heart. And when he begins to tell them a story or a parable in his wonderfully humorous manner, which he invariably does in their company, their joy knows no bounds, and soon they become convulsed in repeated outbursts of laughter. Hearing them, other disciples- men, women and children-who might be straying out in the Ashram grounds, rush inside and swell the crowd arround Swami Ramdas. There is now more demand for stories, and more stories follow, each funnier than its predecessor. And more laughter follows. 'Laugh, laugh as much as you can. he would tell them, 'it is only the ability to laugh that distinguishes man from the best!.' And then, in a more serious tone, he would add, 'God is sat-chit-ananda Swaroopa.' Ananda is his inherent quality. Our laughter is only a feeble expression of this inexpressible Ananda.'

Parables and stories, and told in such a joyous manner. Who would not love to hear them, and as told by such an Enlightened Soul? But the stories are not just stories. Each

story would have a point of its own, and all of us would know that the point would reach the innermost heart of that devotee who needed to be probed into most. And when we laugh at the denoucment of the story, we know we shall be laughing at ourselves! That is how Swami Ramdas cleanses the souls of his devotees. In fact, the parable or the story, with its point sterlised in humour, is the lancet by which he probes kindly and gently into our spiritual diseases in order to make us whole. Stories and parables was not that the way of Jesus Christ also with his disciples the way of Sri Ramakrishna Paramahansa also in recent times?

But it should not be understood that stories and parables are the only means by which Swami Ramdas guides his disciples on the spiritual path. The more serious or advanced aspirants can always come into closer contract with him whenever they want. It is well-known that very often a spirit of despair seizes a Sadhaka in the midst of his Sadhana. A Sadhaka in this mood of utter despair would often rush to Swami Ramdas, and with tears in his eyes demand of him that he should be shown a quick way of God-realisation or that he would end his life! It is a situation that requires delicate handling and Swami Ramdas handling of it is unique He would meet the Sadhaka's tear-stained expression of despair with nothing less than a gorgeous smile on his face! He would follow this with a humorous comment or two and a few cheerful but soothing words, and thus avert the immediate crisis in the devotece's heart. Later on, at a more convenient hour, he would closer himself with the Sadhaka, who would emerge out of the interview as an entirely new man, cheerful and happy again, with all his old confidence in himself completely restored.

ಸಮವಾಯ ಎಂದರೇನು ?–ಹಾಗೆಂದರೆ ಒಬ್ಬನು ಇನ್ನೊಬ್ಬರು ಮಾಡುವ ವಿಷಯ ಕೇಳಿ ತಿಳಿಯಬೇಕು. ತಿಳಿದು ಗೌರವಿಸಿ ಒಬ್ಬರ ಜೊತೆಗೊಬ್ಬರು ಹೊಂದಿಕೊಂಡು ಬಾಳಬೇಕು ಎಂದು ಅರ್ಥ.

ಕೊಟ್ಟಿದ್ದರು. ಅವರು ಉತ್ಸಾಹದಿಂದ, ಲವಲವಿಕೆಯಿಂದ ಅದನ್ನು ಬಿಡುಗಡೆ ಮಾಡಿದುದು ಎಲ್ಲರ ಕಣ್ಣಿಗೂ ಇಂದಿಗೂ ಕಟ್ಟಿದ ದೃಶ್ಯ. ವೇದಿಕೆಯ ಮೇಲೆ Governor ಜೊತೆಗೆ ಸನ್ಮಾನ ಪಡೆದುದು ಅವರ ಜೀವಮಾನದ ಇಳಿ ವಯಸ್ಸಿನಲ್ಲಿ ಹೆಮ್ಮೆಪಡುವ ವಿಷಯವಾಗಿತ್ತು. ವಯಸ್ಸನ್ನು ಗಂಭೀರವಾಗಿ ಪಡೆದ ಅಪ್ಪನು ಧೀಮಸಂತೆ ಕುಟುಂಬದವರಿಗೆಲ್ಲ ಒಂದು ಆಧಾರ ಶಕ್ತಿಯಂತಿದ್ದರು. ಪ್ರೀತಿಯ ಗಣಿಗಳಾಗಿದ್ದರು. ವಿವೇಕದ ನಿಧಿಯಾಗಿದ್ದರು.

ಒಂದು ಕಣ್ಣಿಗೆ Cataract ಬಂದಾಗ ಇನ್ನೊಂದು ಕಣ್ಣಿನಿಂದ ಓದುತ್ತಿದ್ದರು. ವಾರ್ತಾ ಪತ್ರಿಕೆಯನ್ನು ಮೊದಲಿನಿಂದ ಕೊನೆಯವರೆಗೆ ಭೂತ ಕನ್ನಡಿ ಹಿಡಿದು ಓದಿ ತಿಳಿದುಕೊಳ್ಳುತ್ತಿದ್ದರು. ಪತ್ರಿಕೆ ಸ್ವಲ್ಪ ತಡವಾಗಿ ಬಂದರೆ ಪೇಚಾಡುತ್ತಿದ್ದರು. ಅವರ ಇಳಿವಯಸ್ಸಿನಲ್ಲಿಯೂ ಯಾವುದಕ್ಕೂ ಪರಸ್ವಾಧೀನವಾಗಲಿಲ್ಲ. ಇತರರನ್ನು ಅವಲಂಬಿಸಿರಲಿಲ್ಲ. ಅವರಿಂದಾಗಿ ನಮಗೆಲ್ಲ ಸಹಾಯವಿತ್ತೇ ಹೊರತು ನಮ್ಮಿಂದ ಅವರು ಏನನ್ನೂ ಬಯಸುತ್ತಿರಲಿಲ್ಲ. T. V. ನಲ್ಲಿ Olympiad ನೋಡಿ ಉದ್ರೇಕಗೊಳ್ಳುತ್ತಿದ್ದರು. "Wimble Don Tennis Matches" ನೋಡುವ ಭಾಗ್ಯ ನನ್ನದಾಗುವುದು. ಎಂದು ನಾನು ಭಾವಿಸಿಯೇ ಇರಲಿಲ್ಲ!" ಎನ್ನುತ್ತಿದ್ದರು.

ಎರಡೂ ಕಣ್ಣುಗಳ Operation ಆದ ಮೇಲೆ ದೈವವಶಾತ್ ಅವರಿಗೆ ಮತ್ತೆ ದೃಷ್ಟಿಲಾಭ ಬಂತು. T. V, Radio ಅವರ ಬದುಕಿನಲ್ಲಿ ಸ್ನೇಹಿತರಾದರು. ಇಡೀ ದಿನ ಓದಲು ಸಾಕಷ್ಟು ಬೇಕಾದಷ್ಟು ಪುಸ್ತಕಗಳನ್ನು ಮಗ ಒದಗಿಸುತ್ತಿದ್ದ. T, V. ನಲ್ಲಿ Shakespeare ನಾಟಕಗಳು ಪ್ರಸಾರ ಆಗುವ ಮುಂಚೆ ಅವುಗಳ ಸಂಭಾಷಣೆ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಪುಸ್ತಕವನ್ನು ಓದುತ್ತಿದ್ದರು. ಆ ಗ್ರಂಥದ ಅಕ್ಷರ ತೀರಾ ಚಿಕ್ಕದಾಗಿದ್ದ ಕಾರಣ "ಅಪ್ಪಾ–ಓದಿ ಕಣ್ಣಿಗೆ ಶಿಕ್ಷೆ ಕೊಡಬೇಡ" ಎಂದರೂ ನಮ್ಮ ಮಾತನ್ನು ಉಲ್ಲಂಘಿಸಿ ಓದುತ್ತಿದ್ದರು. ಅವರಿಗೆ ಓದುವುದನ್ನು ನಿಷೇಧಿಸಿದರೆ ಮತ್ತೇನು ಅವರ ಜೀವನ? ಕಣ್ಣು ದೃಷ್ಟಿ ಅವರಿಗೆ ದೇವರು ಕೊಟ್ಟ ವರವೇ ಎನ್ನಬೇಕು.

ಅಪ್ಪ ಹೊಣೆಯುಳ್ಳ ಕಾಯಿಲೆಯಿಂದಾಗಿ ಹಾಸಿಗೆ ಹಿಡಿದವರಲ್ಲ. ಆದರೆ ಒಮ್ಮೆ ರಕ್ತ ಚಲನೆ ಕಟ್ಟಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಅಲ್ಲಿ ತಕ್ಕ ಶುಶ್ರೂಷೆ ಪಡೆದು ಚೇತರಿಸಿಕೊಂಡು ಮನೆ ಸೇರಿದರು. ಒಡನೆ ನನ್ನನ್ನು ನೋಡಲು ಆಸೆಪಟ್ಟರಂತೆ. ನಾನು ಕೂಡಲೇ ಬೊಂಬಾಯಿಗೆ ಹೋದೆ. ಅವರು ಅನುವಾದಿಸಿ ಮುಗಿಸಿದ "ಪಶ್ಚಿಮ ರಣ ರಂಗದಲ್ಲಿ ಎಲ್ಲವೂ ಶಾಂತ" ಎಂಬ ರಣ ಕಾದಂಬರಿಯನ್ನು ಕುರಿತು "ಚಂದವಾಗ್ತಾ

ಬೆಂಗಳೂರಿಗೆ ಹೋಗಿ ಈ ಹಸ್ತ ಪ್ರತಿಯನ್ನು ಪ್ರಕಟಿಸುವಂತೆ ಮಾಡು-ಇದು ನನ್ನ ಕೊನೆಯ ಆಸೆ" ಎಂದರು. ನಾನು ಬೆಂಗಳೂರಿಗೆ ಆ ಹಸ್ತ ಪ್ರತಿಯನ್ನು ತಂದು ಶ್ರೀ ಚಡಗರವರ ಸಹಾಯದಿಂದ ಪ್ರಕಟವಾಗುವಂತೆ ಮಾಡಿದ ಪ್ರಯತ್ನ ಸಫಲವಾಯಿತು. ಆದರೆ ಅದರೊಳಗಿನ ಮುದ್ರಾ ದೋಷಗಳು ಅಪ್ಪನನ್ನು ಹಿಂಡಿ ಹಾಕಿದವು. ಜನ್ಮವೆಲ್ಲ ಇತರರ ಲೇಖನಗಳ, ಕಾದಂಬರಿಗಳ ಕರಡು ಪ್ರತಿಗಳನು ತಿದ್ದಿ ಪ್ರಕಟಗೊಳಿಸುತ್ತಿದ್ದ ತಾನು ತನ್ನ ಪುಸ್ತಕದಲ್ಲೇ ಅಷ್ಟೊಂದು ಮುದ್ರಾದೋಷಗಳನ್ನು ಕಾಣಬೇಕೇ?" ಎಂದು ಮರುಗಿದರು. Proofs ತನಗೆ ಕಳುಹಿಸಿದ್ದರೆ ತಾನಾದರೂ ಶುದ್ಧೀಕರಿಸುತ್ತಿದ್ದೆ. ಈಗ ತನ್ನ ಆಪ್ತ ಸ್ನೇಹಿತರಿಗೂ ಪ್ರತಿ ಕಳುಹಿಸಲು ನಾಚಿಕೆ ಎಂದು ಕೊರಗಿದರು ಹಸ್ತಪ್ರತಿ ಇದ್ದದು ಮುದ್ರಿತವಾಯಿತು ಎಂಬಷ್ಟೇ ಸಮಾಧಾನವಾಯಿತು; ಆದರೆ ಅವರಿಗೆ ಆ ಪ್ರಕಾಶನ ಯಾವ ತೃಪ್ತಿಯನ್ನೂ ಕೊಟ್ಟಿಲ್ಲ....ಅವರೂ ಅವರ ಮನಸ್ಸು ಆಶಾವಾದಿಯಾಯಿತು. ಅಕಸ್ಮಾತ್ ಅದರ ದ್ವಿತೀಯ ಮುದ್ರಣವಾಗುವ ಸಂಭವವಿದ್ದರೆ, ಪಠ್ಯ ಪುಸ್ತಕವಾಗುವುದಿದ್ದರೆ-ಎಂದು ಎಲ್ಲ ತಪ್ಪುಗಳನ್ನೂ ತಿದ್ದಿ ತಾವೇ ಕೂತು ಪ್ರತಿಯೊಂದು ಸಾಲಿನಲ್ಲಿದ್ದ ತಪ್ಪುಗಳನ್ನು ಬರೆದು ತಿದ್ದಿ ಪಟ್ಟಿ ಮಾಡಿ ಶುದ್ಧೀಕರಿಸಿದರು. ತಪ್ಪು-ಒಪ್ಪುಗಳನ್ನು ಪುಟಗಳಲ್ಲಿ ಬರೆದು ಸಿದ್ಧಮಾಡುತ್ತಿದ್ದ ಅವರ ಶ್ರಮ ಕರುಣಾಜನಕವಾಗಿತ್ತು. ಪ್ರಕಟವಾದ ಆ ಪುಸ್ತಕದಲ್ಲಿ ಸುಮಾರು 1000ದ ಮೇಲೆ ತಪ್ಪುಗಳು ಇದ್ದುವು. ಪಠ್ಯಪುಸ್ತಕವಾಗಲಿ ಎಂದು ಅವರು ಹಾರೈಸಿ ತಮ್ಮ ಮಿತ್ರರ ಸಹಾಯ ಕೋರಿದುದು ತಮ್ಮ ಸ್ವಾರ್ಥಕ್ಕೆ ಅಲ್ಲ. ಮತ್ತೆ ಮುದ್ರಣವಾದರೆ ತಪ್ಪುಗಳನ್ನು ತಿದ್ದಿದ ಶುದ್ಧ ಪ್ರಕಟಣೆ ಪ್ರಕಾಶಕ್ಕೆ ಹೊರಬರಲು ಸಾಧ್ಯವಿದೆ ಎಂಬ ಆಸೆಯಿಂದ! ಜಗತ್ತಿನ 24 ಭಾಷೆಗಳಲ್ಲಿ ಅನುವಾದಗೊಂಡ ಈ ಜರ್ಮನ್ ಕಾದಂಬರಿ ಭಾರತೀಯ ಭಾಷೆಗಳಲ್ಲಿ ಮೊದಲಾಗಿ ಕನ್ನಡ ಭಾಷೆಯಲ್ಲಿ ಅಪ್ಪನಿಂದ ಅನುವಾದಿಸಲ್ಪಟ್ಟಿತ್ತು. ಜಗತ್ತಿನ ಬೇರೆ ಎಲ್ಲ ಭಾಷೆಗಳಲ್ಲಿ ಎಂಬಂತೆ ಅದು ಅನುವಾದಿಸಲ್ಪಟ್ಟಿದೆ. ಅಪ್ಪನ ಕೊನೆಯ ವರುಷಗಳಲ್ಲಿ ಅವರು ಇಂತಹ ಗಡುಸಾದ ಸಾಹಿತ್ಯದಲ್ಲಿ ಚಟುವಟಿಕೆ ಇಟ್ಟುಕೊಂಡುದು ನಮಗೆಲ್ಲ ಮಹದಾನಂದದ ವಿಷಯವಾಗಿತ್ತು.

ಅಪ್ಪನ ಜೀವಮಾನದ ಕೊನೆಯ ಆರು ತಿಂಗಳುಗಳು

1982ರಲ್ಲಿ ಜುಲೈನಲ್ಲಿ ನಾನೂ ಪತಿಯವರೂ ಲಂಡನ್-ಕೆನಡಾ, ಅಮೇರಿಕಾ ಪ್ರವಾಸಕ್ಕೆ ಹೋಗುವ ಮುಂಚೆ ಬೊಂಬಾಯಿಗೆ ಹೋಗಿ ಅಪ್ಪನೊಡನೆ ಒಂದು ವಾರವಿದ್ದೆ. ಅವರ ವಾತ್ಸಲ್ಯ ನನಗೆ ತವರು ಮನೆಯ ಪೂರ್ಣ ತೃಪ್ತಿ ತಂದಿತ್ತು. ಅವರ ಆರೋಗ್ಯ, ಲವಲವಿಕೆ ಕಂಡು ಮನಸ್ಸು ಆಹ್ಲಾದಕರವಾಯಿತು. ಅವರ ಚರಣಾರವಿಂದಗಳಿಗೆ ಮಣಿದು ಅವರನ್ನು ಬೀಳ್ಕೊಟ್ಟೆವು. ನಮ್ಮ 4 ತಿಂಗಳ ಪ್ರವಾಸ

ಅವಿರತ ಶ್ರಮದ ಫಲವಾಗಿ ಎಣಿಕೆಗಿಂತಲೂ ವಿಾರಿ ಯಶಸ್ವಿಯಾಯಿತು. ಆದರೆ ಇತ್ತ ಅಪ್ಪನಿಗೆ ನಾವು ಬೊಂಬಾಯಿ ಬಿಟ್ಟ 4 ತಿಂಗಳುಗಳಲ್ಲಿ ಅಗ್ನಿ ಸರ್ಪದ ಕಾಯಿಲೆ ಕಂಗಾಲು ಮಾಡಿತ್ತಂತೆ. ನಮ್ಮ ಚಟುವಟಿಕೆಗಳಿಗೆ ಹಾನಿ ಬಂದೀತು ಎಂಬ ಭೀತಿ ಯಿಂದ ನಮಗೆ ಅವರು ತಮ್ಮ ಪತ್ರಗಳಲ್ಲಿ ತಿಳಿಸಲೇ ಇಲ್ಲ; ಕೊನೆಗೆ ನಮ್ಮ ಪ್ರವಾಸದ ಅಂತ್ಯದ ಅವಧಿಯಲ್ಲಿ ನ್ಯೂಯಾರ್ಕಿಗೆ ಬಂದು ಭಾರತಕ್ಕೆ ಹೊರಡುವ ಹೊತ್ತಿಗೆ ನ್ಯೂಯಾರ್ಕಿನಲ್ಲಿದ್ದ ತಮ್ಮನ ಮಗ ಮೈತ್ರೇಯನಿಂದ ಅಪ್ಪನ ಅಗ್ನಿಸರ್ಪದ ಹಿಂಸೆಯ ಕುರಿತು ತಿಳಿಯಿತು. ಹೃದಯವು ಮಿಡಿಯಿತು. ಅಪ್ಪನಿಗೆ ವಯಸ್ಸಾಗಿದೆ. 86ನೆಯ ವಯಸ್ಸು ಎಂದು ಮನಸ್ಸು ಎಚ್ಚರಿಸಿತು—ಬೊಂಬಾಯಿ ಎಂದು ಸೇರುವೆವೋ ಎಂಬ ಆತಂಕವಾಯಿತು. ಅಂತೂ ಡಿಸೆಂಬರ್ ಒಂದನೇ ತಾರೀಖು ಬೊಂಬಾಯಿ ಸೇರಿ ಅವರ ಪಾದ ಮುಟ್ಟಿ ನಮಸ್ಕರಿಸಿದಾಗ "ನೀವು ಹಿಂತಿರುಗುವಾಗ ನಾನು ಬದುಕಿರುತ್ತೇನೋ ಇಲ್ಲವೋ ಎಂಬ ಅನುಮಾನವಿತ್ತು !" ಅಂದರು. ಅವರು ಔಷಧಿಗಾಗಿ ನುಂಗಿದ ಗುಳಿಗೆ ಗಳು ಅವರ ಹಸಿವನ್ನು, ಜೀರ್ಣ ಶಕ್ತಿಯನ್ನು ತೀರಾ ಕೆಡಿಸಿತ್ತು. ಆಹಾರ ಕಂಡರೆ ದೂರ ತಳ್ಳುತ್ತಿದ್ದರಂತೆ. ಒಂದು ತುತ್ತು ತಿಂದರೆ ವಾಂತಿ ಆಗುತ್ತಿತ್ತಂತೆ. ಅವರ ಮನಸ್ಸು ಬದಲಾಗಿತ್ತು. "ಜೀವನದಲ್ಲಿ ನಾನು ಇನ್ನು ಏನೂ ಅನುಭವಿಸುವಂತಿಲ್ಲ. ಮಗ ನನ್ನನ್ನು ಪುಂಡಲೀಕನಂತೆ ಶುಶ್ರೂಷೆ ಮಾಡಿದ್ದಾನೆ. ಸೊಸೆಯೂ ನನಗೆ ಪುಷ್ಟಿಕರ ಆಹಾರ ಕೊಟ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆ. ಇನ್ನು ಯಾರಿಗೂ ತೊಂದರೆ ಕೊಡದೆ ಇಹಲೋಕ ಬಿಡುವಂತಾಗಲಿ" ಎಂದು ಪದೇ ಪದೇ ಆಶಿಸು ತ್ತಿದ್ದರು. ಅವರ ಸ್ಥಿತಿ ಚಿಂತಾ ಜನಕವಾಗಿತ್ತು. ಆದರೂ ನಮ್ಮ ಬರುವಿಕೆ ಅವರಿಗೆ ಹರುಷ ತಂದಿತು. ನಮ್ಮ ಜೊತೆಯಲ್ಲಿ ಕೂತು ಎರಡು ಬಟ್ಟಲು ಆಹಾರ ಸೇವಿಸಿದರು. "ಎಂಟು ದಿನಗಳ ಮೇಲೆ ಈ ದಿನವೇ ಅವರು ಆಹಾರ ದೂರ ಮಾಡದೆ ಇದ್ದುದು" ಎಂದು ತಮ್ಮ ಸಂತೋಷಪಟ್ಟ. ನಾವು ಅವರೊಂದಿಗೆ ಒಂದುವಾರ ಇರುವುದೆಂದು ತೀರ್ಮಾನಿಸಿದೆವು. ಪ್ರತಿ ಊಟಕ್ಕೆ ನಮ್ಮ ಜೊತೆ ಕೂತು ಕೊಂಚ ಕೊಂಚ ಆಹಾರ ಸೇವಿಸಿ ಅವರ ಆರೋಗ್ಯ ಸುಧಾರಿಸುತ್ತ ಬಂತು. ಆಗ ಶಂಕು ಅಮೇರಿಕದಲ್ಲಿದ್ದ ಮಗನ ಮನೆಗೆ ಹೋಗುವವನಿದ್ದನು. "ಅವನು ಹೋದಾಗ ನಾನು ಬೆಂಗಳೂರಿಗೆ–ತಿರುವನಂತಪುರಕ್ಕೆ ಬಂದು ನಿಮ್ಮಲ್ಲಿ, ಯಶೋಧರೆಯ ಮನೆಯಲ್ಲಿ ಕೆಲ ತಿಂಗಳು ಪ್ರವಾಸ ಕೈಕೊಳ್ಳವೆ" ಎಂದರು. ನಾವು ಅವರನ್ನು ಆನಂದದಿಂದ ಆಹ್ವಾನಿಸಿದೆವು. ಬೆಂಗಳೂರಿಗೆ ಬಂದೆವು.

ಒಂದು ತಿಂಗಳು ಅವರು ಆಹಾರ ಸೇವಿಸುತ್ತ ಆರೋಗ್ಯವನ್ನು ಕಾಪಾಡಿಕೊಂಡು ಬಂದರು. ವಾರಕ್ಕೊಮ್ಮೆ ನಮಗೆ ತಪ್ಪದೆ ಉದ್ದದ ಕಾಗದ ಬರೆಯುತ್ತಲೇ ಇದ್ದರು. ನಮ್ಮಲ್ಲಿ ಬರುವುದು "ನನ್ನ ಮನಸ್ಸಿನ ಮುಂದಿಗೆ" ಎಂದೂ ತಿಳಿಸಿದರು.

ಅವರು ಬೆಂಗಳೂರಿಗೆ ಬರುವ ಯೋಜನೆಯನ್ನು ನಾವೂ ಪುಷ್ಟೀಕರಿಸಿದೆವು—ಆತುರ ದಿಂದ ಅವರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದೆವು.

ಅಪ್ಪನ ಅಂತ್ಯ !

ಆದರೆ ಅಂದು ಆ ದುರಂತದ ಸುದ್ದಿ ! ಫೆಬ್ರವರಿ 13 ರಂದು 1983 ಬೆಳಿಗ್ಗೆ $7\frac{1}{2}$ ಗಂಟೆಗೆ ಬೊಂಬಾಯಿಯಿಂದ ದೂರವಾಣಿಯ ಮೂಲಕ ಬಂದ ಆಘಾತದ ವಾರ್ತೆ !— ಅಪ್ಪನ ಮರಣ ! ! ನಂಬಲಾಗದ ಸತ್ಯ ! ಮನಸ್ಸನ್ನು ಎಷ್ಟೇ ಗಟ್ಟಿಮಾಡಿಕೆಂಡರೂ ಸನ್ನಿವೇಶ ಬಂದಾಗ ತಡೆದುಕೊಳ್ಳಲಾಗದ ದುಃಖ....ಕಣ್ಣಿಗೆ ಕಗ್ಗತ್ತಲೆ....ದೇಹಕ್ಕೆ ಕಂಪನ... ಏನಾಯಿತು ? ಹೇಗಾಯಿತು ? ಯಾಕಾಯಿತು ? ಬಿಡಿಸಲಾಗದ ಸಮಸ್ಯೆಗಳು–ಉತ್ತರಿಸಲಾಗದ ಪ್ರಶ್ನೆಗಳು.

ಬೊಂಬಾಯಿಗೆ ಧಾವಿಸಿದೆ–ರೈಲಿನಲ್ಲಿ ಹುಚ್ಚು ಕನಸುಗಳು–ಅರಳು–ಮರಳು. ಅಪ್ಪನೇ ಮನೆಗೆ ನನ್ನನ್ನು ಸ್ವಾಗತಿಸುವ ದೃಶ್ಯ ! "ಏಕೆ ಬಂದೆ ?" ಎಂಬ ಅವರ ಪ್ರಶ್ನೆ. ತಮ್ಮನ ಮನೆ ಸೇರಿದಾಗ ಅಪ್ಪನಿಲ್ಲದ ಆ ಮನೆ ಬರಿದಾಗಿತ್ತು ! ಅವರ ವ್ಯಕ್ತಿತ್ವ ಎಲ್ಲೆಲ್ಲೂ ಆವರಿಸಿದ್ದು ಮನಸ್ಸನ್ನು ಗೊಂದಲದಲ್ಲಿ ಹಾಕಿತ್ತು. ತಮ್ಮನೂ ಅವನ ಪತ್ನಿಯೂ ಅಪ್ಪನ ಅಂತ್ಯದ ನಿಮಿಷಗಳ ವಿವರ ತಿಳಿಸಿದರು.

ಫೆಬ್ರವರಿ 13 ರಂದು ಬೆಳಿಗ್ಗೆ 6 ಗಂಟೆಗೆ ಅಪ್ಪನ ನರಳುವಿಕೆಯ ಉದ್ಗಾರ ಕೇಳಿ ಸೊಸೆ ಪತಿಗೆ ಕರೆಕೊಟ್ಟಾಗ ಅಪ್ಪನಿಗೆ Massive Heart Attack ಬಂದಿತ್ತು. ಮನುಷ್ಯನ ಬಲಿಗೆ ಯಾವುದಾದರೂ ಕಾರಣ ಇರಲೇ ಬೇಕಲ್ಲವೇ ? ಅಪ್ಪನ ಪ್ರೀತಿಗೆ ಪಾತ್ರರಾದ–ಹತ್ತಿರವೇ ಇರುವ–ವೈದ್ಯರನ್ನು ಕರೆಸಿದರು. ಅಪ್ಪನನ್ನು ತತ್‌ಕ್ಷಣ ಆಸ್ಪತ್ರೆಗೆ ರವಾನಿಸಲು ಹೇಳಿದರು. ಇಂಜೆಕ್ಷನ್ ಕೊಟ್ಟರು. ನೋವು ಕಡಿಮೆಯಾಯಿತು. "ಶಂಕ್ರ್ಯಾ-ನನ್ನದು ಮುಗಿಯಿತು-ಇನ್ನು ನಾನು ಹೋಗುತ್ತೇನೆ" ಎಂದರಂತೆ. ಆಸ್ಪತ್ರೆಗಾಗಿ ಅಪ್ಪನ ಬಟ್ಟೆ ಬರೆ ಎತ್ತಿ ಇಡುವಾಗ ಅಪ್ಪ ಚೇತರಿಸಿ ಮಗನಿಗೆ "Cheque Book ತಾ !" ಅಂದರಂತೆ-ಅಂದರೆ ಆಸ್ಪತ್ರೆಗೆ ಹೋದರೆ ಖರ್ಚು. ಖರ್ಚಿಗೆ ಹಣ ಕೊಡಲು. "ಯಾಕಪ್ಪಾ Cheque Book. ನೀವು ವಿಶ್ರಾಂತಿ ತೆಗೆದುಕೊಳ್ಳಿ" ಎಂದಾಗ "ತರ್ತಿಯೋ ಇಲ್ಲೋ?" ಎಂದು ಗದರಿಸಿದಾಗ ಮಗ Cheque Book ಗಳನ್ನು ಕೊಟ್ಟನಂತೆ. ಎರಡು ನೂರು Cheque ಗಳ ಹಾಳೆಗಳಲ್ಲಿ ಸಹಿ ಹಾಕಿದರಂತೆ. ಆ ಸಮಯದಲ್ಲಿ ಅವರ ಕೈಗೆ ನಡುಕವೇ ಇರಲಿಲ್ಲವಂತೆ ! ಆಶ್ಚರ್ಯ ! ಮೊಮ್ಮಗ Taxi ತರಲು ಹೋದಾಗ ಅಪ್ಪ ಮಲಗಿ ಶಾಂತ

ಚಿತ್ತರಾಗಿದ್ದರಂತೆ. Taxi ಬಂದ ತತ್‌ಕ್ಷಣ ಮಗ-ಮೊಮ್ಮಗ ಅವರನ್ನು ಎತ್ತಲು ಹೋದಾಗ ಕಾಲುಗಳು ನಿರ್ಜೀವ-ಕೈಗಳು ನಿರ್ಜೀವ: ಮತ್ತೊಮ್ಮೆ ಪಕ್ಕದ ಮನೆಯಲ್ಲೇ ಇರುವ ಡಾಕ್ಟರನ್ನು ಕರೆಸಿದರು. ಅವರು Blood Pressure ತೆಗೆಯುವಾಗ ರಕ್ತದ ಒತ್ತಡ ಕಾಣಲಿಲ್ಲ. ಅವರು ತಮ್ಮ ಯಂತ್ರ ಕೆಟ್ಟು ಹೋಗಿರ ಬಹುದು ಎಂದು ತಿಳಿದುಕೊಂಡರಂತೆ. ಆದರೆ ಅಪ್ಪನ ದೇಹದ ಯಂತ್ರ ಕ್ರಮೇಣ ಹಾಳಾಗುತ್ತಿದ್ದುದು ದೈವ ಸಂಕಲ್ಪವಾಗಿತ್ತು. ನಾಡಿ ಪರೀಕ್ಷಿಸಿದರೆ ಪ್ರಾಣವು ನಿಧಾನ ಹೋಗುತ್ತಿದ್ದುದನ್ನು ಅರಿತು ಡಾಕ್ಟರು "ಏಕೆ ಈ ಪುಣ್ಯ ಜೀವಿಯನ್ನು ಆಸ್ಪತ್ರೆಗೆ ಕರಕೊಂಡು ಹೋಗುವಿರಿ? ಅವರು ನಿರಾಸವಾಗಿ ಶಾಂತವಾಗಿ-Gently ಹೋಗುತ್ತಿದ್ದಾರೆ. ಅವರನ್ನು ಹಾಗೆಯೇ ಭಗವಂತನಲ್ಲಿ ಐಕ್ಯವಾಗಲು ಸಹಕರಿಸಿ" ಎಂದು ಹೇಳಿ ಹೊರಟು ಹೋದರಂತೆ. ಪ್ರತಿಯೊಂದು ಶ್ವಾಸಕ್ಕೆ ಅಪ್ಪನು "ಹರೇ ರಾಮ್" ಎಂದು ಭಗವಂತನಸ್ಮರಣೆ ಮಾಡುತ್ತಿದ್ದರಂತೆ. ಮಗ ಶಂಕ್ರೂ ಅವರನ್ನು ಅಪ್ಪಿ ಹಿಡಿದು, ಅವರ ಕಿವಿಗಳಲ್ಲಿ ಅಪ್ಪ ಅಧ್ಯಯನ ಮಾಡುತ್ತಿದ್ದ-ಗುರುತು ಹಾಕಿ ಕೊಂಡಿದ್ದ "The Book of the Dead" ಮತ್ತು "The Art of Dying" ಪುಸ್ತಕದ ಟಿಪ್ಪಣಿಗಳನ್ನು ಉಸುರಿದನಂತೆ. ಅವರೇ ಬರೆದಿಟ್ಟದ್ದ ಆ ಪುಸ್ತಕದ ಮಾರ್ಗದರ್ಶನವನ್ನು ಅವರ ಕಿವಿಯಲ್ಲಿ ಎಚ್ಚರಿಕೆ ಕೊಡುತ್ತ ಭಗವಂತನಲ್ಲಿ ಸೇರುವ ದಾರಿಯ ಹಾದಿಯನ್ನು ಜಪಿಸಿದನಂತೆ. ಆ ಪುಸ್ತಕದ ಮುಖ್ಯ ವಾಕ್ಯಗಳನ್ನು ಮತ್ತೆ ಮತ್ತೆ ಕಿವಿಯಲ್ಲಿ ಉಸುರಿದನಂತೆ. ಕಲಾ ಪ್ರೇಮಿಯಾದ ಅಪ್ಪನಿಗೆ ಮರಣದ ಅರ್ಥ ಅರಿತು ವೈಕುಂಠಕ್ಕೆ ಸೇರುವ ದಾರಿ ಕಲಾತ್ಮಕವಾಗಲಿ ಎಂದು ಮನಗಂಡ ಮಗನ ಆ ಕ್ಷಣದ ವಿವೇಕ ಶ್ಲಾಘನೀಯವಾದುದು. ಸುಮಾರು ½ ಗಂಟೆ ¾ ಗಂಟೆ ಒಳಗೆ ಪ್ರಾಣವು ಮಂದಗತಿಯಿಂದ ದೇಹದಿಂದ ಹೊರಡುತ್ತ 7¼ ಗಂಟೆಗೆ ಪ್ರಾಣ ಪಕ್ಷಿಯು ಅವರ ಹೃದಯದಿಂದ ಹಾರಿ ಹೋಯಿತಂತೆ! ಅಂದು ಫಾಲ್ಗುಣ ಮಾಸದ ಶುದ್ಧ ಪಾಡ್ಯದ ತಿಥಿ.

ಪ್ರತಿಯೊಂದು ಉಸುರಿಗೆ "ಹರೇ ರಾಮ್" ಎಂದು ದೇವರ ನಾಮ ಸ್ಮರಣೆಯನ್ನು ಮಾಡುತ್ತ ದೇಹವನ್ನು ಬಿಟ್ಟ ಪುಣ್ಯ ಪುರುಷರಾದ ಅಪ್ಪ ಭಗವಂತನಲ್ಲಿ ಐಕ್ಯವಾದುದು ಖಂಡಿತ! ಎಷ್ಟು ಜನ್ಮಗಳ ಪುಣ್ಯವೋ ಈ ಚಂದದ ಅವಸಾನ ಪಡೆಯಲು ಅವರ ಇಚ್ಛೆಗೆ ತಕ್ಕ ಅವಸಾನ. ಅಪ್ಪನ ಕೊನೆಯ ಆಸೆಯನ್ನೂ ದೇವರು ಪೂರೈಸಿದರು. ಅವರ ಆತ್ಮಕ್ಕೆ ಶಾಂತಿ ಇರಲಿ.

ತನ್ನ 86 ನೆಯ ವಯಸ್ಸಿನಲ್ಲಿ ಜೀವನದ ಎಲ್ಲ ಸುಖಃ ದುಃಖಗಳನ್ನು ಅನುಭವಿಸಿ ಅಂತ್ಯದಲ್ಲಿ ಯಾವ ವಿಧದ ದೀರ್ಘ ನರಳುವಿಕೆ ಇಲ್ಲದೆ ಪರಮಾತ್ಮನಲ್ಲಿ ಸೇರಿದುದು ಸಮಾಧಾನಕರವಾದ ಸಂಗತಿ. ವೃದ್ಧಾಪ್ಯದಲ್ಲಿ ಪರಸ್ವಾಧೀನವಾಗಬಾರದು. ಇತರರಿಗೆ

ತೊಂದರೆ ಆಗಬಾರದು ಎಂದು ಎಲ್ಲ ಮಾನವರೂ ಭಗವಂತನಲ್ಲಿ ಮೊರೆ ಇಡುತ್ತಾರೆ. ಆದರೆ ಜನ್ಮವು ಹೇಗೆ ಅನಿಶ್ಚಿತವೋ ಮರಣವೂ ಹಾಗೆಯೇ ಅನಿಶ್ಚಿತ. ಈ ಎರಡು ಮುಖ್ಯವಾದ ಸೂತ್ರಗಳನ್ನು ಭಗವಂತನು ಇನ್ನೂ ತಾನೇ ಇಟ್ಟುಕೊಂಡು ಮಾನವ ಜನ್ಮಕ್ಕೆ ದೈವದ ಅಸ್ತಿತ್ವವನ್ನು ತಿಳಿಸುವಂತಿದೆ.

ಅಪ್ಪನ ಸಂಸ್ಕಾರವನ್ನು ಮಗ ಬಹಳ ಭಕ್ತಿಯಿಂದ, ಶ್ರದ್ಧೆಯಿಂದ ಆತ್ಮಪೂರ್ವಕವಾಗಿ ದೈಹಿಕ ದಂಡನೆಯಿಂದ ಆಚರಿಸಿದ. ಅಪ್ಪನನ್ನು-ಅವರೇ ನಮಗೆ ತಿಳಿಸಿದಂತೆ ಪಡುಕೋಣೆ ಕುಟುಂಬದ ಹಿರಿಯ ಮೃತರೊಂದಿಗೆ ಸೇರಿಸಿದುದು ಅಪ್ಪನ ಆತ್ಮಕ್ಕೆ ತೃಪ್ತಿ.

“ಮಹಾಲಯ ಅಮಾವಾಸ್ಯೆಯದಿನ ಸತ್ತವರ ನೆನಪು ಮಾಡಿ ಹಬ್ಬದ ಊಟದ ಅವರಿಗೆ ಇಡು” ಎಂದು ತಂಗಿ ಶಾಂತಿಯು ನನಗೆ ಉಪದೇಶಿಸಿದ್ದಳು. ಅವಳ ಮಾತಿನಂತೆ ನಾನು ಆಚರಿಸಲು ಆರಂಭಿಸಿದೆ. ಮರುವರ್ಷವೇ ಆ ತಿಥಿಗೆ ಅವಳನ್ನು ನೆನಪಿಸ ಬೇಕಾದುದು ನನ್ನ ದುರ್ದೈವ. ಪಾಯಸದ ಎಲೆಯನ್ನು ಹೊರಗೆ ಇಡುವಾಗ ಅಪ್ಪನೂ ನನ್ನೊಡನೆಯೇ ಬಂದು ಕುಟುಂಬದವರ ಸತ್ತವರನ್ನು ನೆನಪಿಸಿ ಅವರೆಲ್ಲರ ಆತ್ಮಗಳಿಗೆ ಶಾಂತಿ ಕೋರುತ್ತಿದ್ದರು. ಈ ವರ್ಷ ನಾನು ಮಹಾಲಯ ಅಮಾವಾಸ್ಯೆ ದಿವಸ ಅಪ್ಪನನ್ನು ನೆನಪಿಸಬೇಕಾದ ಸರದಿ ಬಂದುದು ದುಃಖಕರ ವಾಯಿತು.

ಅಪ್ಪನ ವೃದ್ಧಾಪ್ಯ ನಮಗೆ ಜೀವನ ಪಥದಲ್ಲಿ ಮಾರ್ಗದರ್ಶಕವಾಗಿತ್ತು-ದಾರಿ ದೀಪ ವಾಗಿತ್ತು. ಇಂದು ನಾವು ತಬ್ಬಲಿಗಳು. ಪಾಮರರಾದ ನಮಗೆ ಪ್ರೇಮಮೂರ್ತಿ ಯಾದ, ವಾತ್ಸಲ್ಯಮಯಿಯಾದ ಅಪ್ಪನನ್ನು ಕಳೆದುಕೊಂಡದ್ದು ಒಂದು ದುರಂತ. ಆದರೆ ಮಾನವಜನ್ಮ ಶಾಶ್ವತವೇ ? ಅವರ ನೆನಪಿನ ಶಕ್ತಿ ಇನ್ನು ನಮ್ಮನ್ನು ಕಾಪಾಡ ಬೇಕು. ಈಗ ಅವರೇ ನಮಗೆ ತಿಳಿಸಿದಂತೆ ಅವರ ಪ್ರಾಣಪಕ್ಷಿ ಎಲ್ಲಿ ಹಾರಾಡು ತ್ತದೋ-ಯಾರ ಗರ್ಭದಲ್ಲಿ ಬಂದು ಸೇರುತ್ತದೋ—ಆ ಭಗವಂತನಿಗೆ ಗೊತ್ತು.

ಕೆಲವರು ನೂರು ವರ್ಷ ಬದುಕುತ್ತಾರೆ. ಆದರೆ ಅವನನ್ನು ಮೂರು ಜನ ಮೂರು ಮೂರು ನಿಮಿಷ ಕೂಡಾ ಸ್ಮರಿಸುವುದಿಲ್ಲ. ಆದರೆ ಕೆಲವರು ನೂರು ವರ್ಷ ಬದುಕಿರು ವುದಿಲ್ಲ ಆದರೆ ಅಂತಹ ವ್ಯಕ್ತಿಗಳನ್ನು ನೂರು ಕಾಲ ನೋಡುವ ಭಾಗ್ಯ ನಮಗಿರಲಿ ಎಂದು ಹಾರೈಸುತ್ತೇವೆ. ಅಂತಹವರಲ್ಲಿ ಸಭ್ಯ-ಸದ್ಗುಣ ಸಂಪನ್ನ-ಶ್ರೀಮಂತ ಸೌಜನ್ಯದ ಸಾಹಿತಿ ಪ. ರಮಾನಂದರಾಯರು ಒಬ್ಬರು. ಆದರೆ ವಿಧಿ ಮುಂದೆ ಮಾನವನದೇನಿದೆ! ವ್ಯಕ್ತಿನಶ್ವರ. ಅವರ ಆದರ್ಶ ಅಮರ-ಸಾವು ಯಾರಿಗೂ ತಪ್ಪಿದಲ್ಲ ಎನ್ನುವ ಸೃಷ್ಟಿ ನಿಯಮವನ್ನು ನೆನಪಿಸಿಕೊಂಡು ತಾತ್ವಿಕ ವಿಚಾರಕ್ಕೆ ಅಂಟಿಕೊಳ್ಳುವುದಷ್ಟೆ-ನಮ್ಮ ಕರ್ತವ್ಯ—ಚಡಗ.

ಅನುವಾದದ ಸರಳ ಶೈಲಿಯ ಸೌಂದರ್ಯ

ಉತ್ತಮ ಅನುವಾದಕರಾದ ಪ. ರಮಾನಂದರಾಯರು ಅನೇಕ ಶ್ರೇಷ್ಠ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ ಅನುವಾದದ ಶೈಲಿಯ ಓದುಗರಿಗೆ ಪರಿಚಯವಾಗಲಿ ಎಂಬ ಉದ್ದೇಶದಿಂದ ಇತ್ತೀಚೆಗೆ ಪ್ರಕಟವಾದ 'ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ' ಎಂಬ ಸಾರ್ವಕಾಲಿಕ ಯುದ್ಧ ಕಾದಂಬರಿಯ ಒಂದು ಘಟನೆಯ ಸನ್ನಿವೇಶವನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಎರಿಕ್ ಮರಿಯಾ ರೇಮಾರ್ಕ್‌ನು ಜರ್ಮನ್ ಭಾಷೆಯಲ್ಲಿ ಬರೆದ ಈ ಕಾದಂಬರಿ ಪ್ರಪಂಚದ 24 ಭಾಷೆಗಳಿಗೆ ಅನುವಾದವಾಗಿದೆ. ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಇವರು ಕನ್ನಡದಲ್ಲಿ ಅನುವಾದಿಸಿದ್ದು ಬಾಪ್ಕೋ ಪ್ರಕಾಶನದವರು ಅದನ್ನು ಪ್ರಕಟಿಸಿ ರುವುದು ಕನ್ನಡಿಗರು ಹೆಮ್ಮೆ ಪಡಬೇಕಾದ ವಿಚಾರ. ಆಲ್ ಕ್ವೈಯಟ್ ಆನ್ ದಿ ವೆಸ್ಟರ್ನ್ ಫ್ರಂಟ್ ಕಾಂದಬರಿಯ ಅನುವಾದದ ಮಾದರಿ !

"ಸೂರ್ಯ ನೆತ್ತಿಯ ಮೇಲೆ ಮೇಲೆ ಬರುತ್ತಿದ್ದಾನೆ. ಧಗಧಗಿಸುವ ಬಿಸಿಲು. ಬೆವರಿನ ಹನಿಗಳು ನಮ್ಮ ಕಣ್ಣುಗಳನ್ನು ಕುಕ್ಕುತ್ತಿವೆ. ಅನೇಕಸಲ ಅವು ರಕ್ತದಿಂದಲೂ ಕೂಡಿರುತ್ತವೆ. ಆಗಾಗ್ಗೆ ಅವನ್ನು ನಮ್ಮ ತೋಳುಗಳಿಂದ ಒರಸುತ್ತೇವೆ. ಕೊನೆಗೆ ನಾವೊಂದು ಸಾಧಾರಣ ಒಳ್ಳೆಯ ಸ್ಥಿತಿಯಲ್ಲಿದ್ದ ಕಂದಕವಿರುವಲ್ಲಿ ಬಂದು ಸೇರುತ್ತೇವೆ. ಅದು ನಮ್ಮನ್ನು ಆದರದಿಂದ ಸ್ವೀಕರಿಸುತ್ತದೆ. ಅದರೊಳಗೆ ನಮ್ಮ ಸೈನಿಕರ ಸಂಖ್ಯೆ ಸಾಕಷ್ಟಿದ್ದು ನಾವೀಗ ಹೂಡುತ್ತಿರುವ ಆಕ್ರಮಣಕ್ಕೆ ಅಲ್ಲಿ ಎಲ್ಲವೂ ಸಿದ್ಧವಾಗಿದೆ. ನಮ್ಮ ಫಿರಂಗಿಗಳು ತಮ್ಮ ಕೆಲಸವನ್ನು ಬಿರುಸಿನಿಂದ ಮಾಡುತ್ತ ವೈರಿಯ ದಾಳಿಯನ್ನು ತಡೆಗಟ್ಟಿವೆ.

ನಮ್ಮನ್ನು ಹಿಮ್ಮೆಟ್ಟಿ ಬರುತ್ತಿದ್ದ ವೈರಿಯ ಸಾಲುಗಳು ಈಗ ಸ್ತಬ್ಧವಾಗಿವೆ. ಈಗ ಅವರಿಗೆ ಮುಂದೊತ್ತಿ ಬರಲು ಸಾಧ್ಯವಿಲ್ಲ. ನಮ್ಮ ಫಿರಂಗಿದಳವು ಅವರ ಮುಂಭಾಗ ವನ್ನು ಸದೆಬಡಿಸಿದೆ. ನಾವು ಹೊಂಚು ಹಾಕಿ ನೋಡುತ್ತೇವೆ. ನಮ್ಮ ಬೆಂಕಿ ಏರಿ ಕೊಂಡು ನೂರು ಗಜ ದೂರದಲ್ಲಿ ಬೀಳುತ್ತಿದ್ದಾಗ ನಾವು ಮುಂದೆ ನುಗ್ಗುತ್ತೇವೆ. ನನ್ನ ಬಳಿಯಲ್ಲಿದ್ದ ಒಬ್ಬ ಲ್ಯಾನ್ಸ್ ಕಾರ್ಪೊರಲ್‌ನ ತಲೆ ಸಿಗಿದು ಹೋಗುತ್ತದೆ. ಆದರೂ ಅವನು ಕೆಲವು ಹೆಜ್ಜೆಗಳನ್ನು ಮುಂದಿಡುತ್ತಾನೆ. ಅವನ ಕಂಠದಿಂದ ರಕ್ತವು ಕಾರಂಜಿಯಂತೆ ಹೊರಚಿಮ್ಮುತ್ತಿದೆ.

ವೈರಿಯನ್ನು ಹಿಂದಕ್ಕೆ ಓಡಿಸಲಾಗಿದೆ, ಆದ್ದರಿಂದ ಅವರೊಡನೆ ಕೈಕೈ ಜಗಳಕ್ಕೆ ಆಸ್ಪದ ವಿಲ್ಲ. ನಮ್ಮ ನುಗ್ಗಾಟದಲ್ಲಿ ನಮ್ಮ ಮೊದಲಿನ ಆಶ್ರಯ ಕಂದಕವನ್ನು ಮುಟ್ಟುತ್ತೇವೆ. ಅದು ನುಚ್ಚು ನೂರಾಗಿದೆ. ಅದನ್ನು ದಾಟಿ ನಾವಿನ್ನೂ ಮುಂದಕ್ಕೆ ನುಗ್ಗುತ್ತೇವೆ.

ನಾವೀಗ ನಮ್ಮ ಕೈಗಾಪಲಿನ ಆಶ್ರಯವನ್ನು ತಲುಪುತ್ತೇವೆ. ಇದರೊಳಗೆ ಮೆಲ್ಲಗೆ ಸೇರಿಕೊಳ್ಳುತ್ತೇವೆ. ಅಲ್ಲಿಂದಲೇ ಅದೃಶ್ಯವಾಗಲು ನಾವೆಷ್ಟು ಆಶಿಸುತ್ತೇವೆ! ಆದರೆ ಸಾಧ್ಯವಿಲ್ಲ! ಸ್ವಲ್ಪ ಸಮಯದಲ್ಲೇ ಸಾವು ಆ ಭಯಂಕರ ದಳ್ಳುರಿಯಲ್ಲಿ ಪುನಃ ನುಗ್ಗಿಕೊಂಡು ಕಾದಾಡಬೇಕಾಗಿದೆ. ನಾವೀಗ ಬರೇ ಯಾಂತ್ರಿಕಗೊಂಬೆಗಳಾಗಿದ್ದೇವೆ. ಇಲ್ಲದಿದ್ದರೆ ಇಲ್ಲೇ ಬಿದ್ದುಕೊಂಡು ಯಾವ ಯೋಚನೆಯೂ ಇಲ್ಲದೆ ನಮ್ಮ ಈ ಅಸಾಧಾರಣವಾದ ದಣುವನ್ನು ನೀಗಿಸಿಕೊಳ್ಳುತ್ತಿದ್ದೆವು. ಆದರೆ ನಾವೀಗ ಯಾಂತ್ರಿಕ ಗೊಂಬೆಗಳು. ನಮ್ಮ ರಣದೈವ ನಮ್ಮಲ್ಲಿ ಕ್ರೂರ, ಕಠೋರ ಉನ್ಮಾದದ ರೋಷ ವನ್ನುಂಟುಮಾಡಿ ನಮ್ಮನ್ನು ಹಠಾತ್ತಾಗಿಯೂ ರಣಾಗ್ರಕ್ಕೆ ಅಟ್ಟಿಕೊಂಡು ಹೋಗು ವುದು. ನಾವು ಒಂದಿಷ್ಟು ದಯೆ ತೋರಿಸದೆ ನಮ್ಮ ಶತ್ರುವನ್ನು ನಾಶಗೊಳಿಸುವೆವು. ಏಕೆಂದರೆ ಅವರು ನಮಗೆ ಮಾರಕ ದೆವ್ವಗಳು. ಅವರ ಕೋಪಿಗಳು, ಫಿರಂಗಿಗಳು ಎಲ್ಲ ನಮ್ಮ ಮೇಲೆ ಗುರಿಯಿಟ್ಟು ನಿಂತಿವೆ. ನಾವು ಅವರನ್ನು ನಾಶಗೊಳಿಸದಿದ್ದರೆ ಅವರು ನಮ್ಮನ್ನು ನಾಶಗೊಳಿಸುವರು.

ಸ್ಥಿಮಿತವಿಲ್ಲದೆ ಹಿಂದು ಮುಂದು ಚಲಿಸುತ್ತಿರುವ ನಮ್ಮಂತಹ ಯಾಂತ್ರಿಕ ಗೊಂಬೆ ಗಳಿಗೆ, ಸೂರ್ಯನ ಕಿರಣಗಳಲ್ಲಿ ಥಳಥಳಿಸುತ್ತಿರುವ ಕೊಬ್ಬು ಬಳಿದಂತಿರುವ ಈ ನೆಲ, ಹರಕುಮುರುಕಾಗಿ ಭಗ್ನಗೊಂಡಿರುವ ಈ ಭೂಮಿ, ಒಂದು ಮಂಕು ಕವಿದ ಹಿನ್ನೆಲೆ ಯಾಗಿದೆ. ನಮ್ಮ ಉಸಿರೆಳೆಯುವಿಕೆ–ಗಿರಿಲೇಖನಿಯ ಕೆರೆತದಂತೆ ಕೇಳಿಸುತ್ತದೆ. ನಮ್ಮ ತುಟಿಗಳು ಒಣಗಿಹೋಗಿವೆ, ತಲೆಗಳು ಮಂಪರದಿಂದ ದೂಷಿತವಾಗಿವೆ. ಈ ಸ್ಥಿತಿಯಲ್ಲಿಯೂ ನಾವು ತತ್ತರಿಸುತ್ತ ಮುಂದಕ್ಕೆ ನುಗ್ಗುತ್ತೇವೆ. ಹಾಗೆ ಮುಂದೊತ್ತಿ ಹೋಗುತ್ತಿರುವಾಗ ಸೂರ್ಯನ ಕಿರಣಗಳಲ್ಲಿ ಥಳಥಳಿಸುತ್ತಿರುವ ಕೊಬ್ಬು ಬಳಿದಂತಿ ರುವ ಈ ನೆಲದಲ್ಲಿ ಸತ್ತು ಹೋದ ಯೋಧರು ಮತ್ತು ಅವರ ಮಧ್ಯದಲ್ಲಿ ಮೃತ್ಯುವಿನ ಸೆಳವಿನಿಂದ ಕಂಪನಗೊಳ್ಳುತ್ತಿರುವ ಯೋಧರು ಬಿದ್ದಿರುವರು. ಈ ಕರಣಾ ಜನಕ ದೃಶ್ಯ ನಮ್ಮ ಭಗ್ನಗೊಂಡ ಆತ್ಮಗಳನ್ನು ಕ್ರೂರಯಾತನೆಯಿಂದ ಕೊರೆಯುತ್ತಿದೆ. ಆ ಮರಣೋನ್ಮುಖರಾದ ಯೋಧರ ಮೇಲಿಂದ ನಾವು ನೆಗೆದು ಹೋಗುತ್ತಿರುವಾಗ ಅವರು ಕೂಗುತ್ತ ನಮ್ಮ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾರೆ. ಆದರೆ ನಾವೇನು ಮಾಡಲಿ? ನಾವು ಯಾಂತ್ರಿಕಗೊಂಬೆಗಳು. ಅವರ ಹಿಡಿತದಿಂದ ಬಿಡಿಸಿ ಕೊಂಡು ನಾವು ಮುಂದಕ್ಕೆ ನುಗ್ಗಲೇ ಬೇಕಾಗಿದೆ.

ನಾವೀಗ ಒಬ್ಬರಿಗೊಬ್ಬರು ತೋರಿಸಬೇಕಾದ ಅನುಕಂಪ, ಸಹಾನುಭೂತಿ ಮೊದಲಾದ ಮನೋಭಾವನೆಗಳನ್ನೆಲ್ಲ ಪೂರ್ತಿ ಕಳೆದುಕೊಂಡಿದ್ದೇವೆ. ನಮ್ಮ ಬೆದರಿದ ದೃಷ್ಟಿ ಮತ್ತೊಬ್ಬ ವ್ಯಕ್ತಿಯ ಮೇಲೆ ಬಿದ್ದಾಗ ನಮ್ಮ ಕ್ರೂರತ್ವವನ್ನು ತಡೆದುಕೊಳ್ಳಲು ಬಹು ಕಷ್ಟವಾಗುತ್ತದೆ. ನಾವೀಗ ಕಲ್ಲೆದೆಯ ಮನುಷ್ಯರು, ಸತ್ತ ಮನುಷ್ಯರು, ಯಾವುದೋ

ಒಂದು ಕಪಟ ತಂತ್ರದಿಂದಾಗಿ, ಇಲ್ಲವೆ ಒಂದು ಭೀಕರ ಇಂದ್ರಜಾಲದ ಮಹಿಮೆಯಿಂದಾಗಿ, ನಾವೀಗ ಓಡಲು ಮತ್ತು ಕೊಲ್ಲಲು ಶಕ್ತರಾಗಿದ್ದೇವೆಯಷ್ಟೆ.

ಒಬ್ಬ ಫ್ರೆಂಚ್ ಯುವಕ ಸೈನಿಕ ಓಡಲಾಗದೆ ಹಿಂದೆ ಬಂದಿದ್ದಾನೆ. ಮುಂದೊತ್ತಿ ಬರುವ ನಮ್ಮನ್ನು ನೋಡಿದ ಕೂಡಲೇ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತುತ್ತಾನೆ. ಆದರೆ ಅವನ ಒಂದು ಕೈಯಲ್ಲಿ ಪಿಸ್ತೂಲು ಇದೆ. ಅವನು ಶರಣಾಗತನಾಗಿರುವನೋ ಇಲ್ಲವೆ ನಮ್ಮನ್ನು ಗುಂಡಿಕ್ಕಿ ಕೊಲ್ಲಲು ಅಣಿಮಾಡುತ್ತಿರುವನೊ ತಿಳಿಯದು. ವಿಚಾರಿಸಲು ಸಮಯವಿಲ್ಲ. ಕೂಡಲೇ ನಮ್ಮ ಎಲಿಗುದ್ದಲಿಯ ಏಟೊಂದು ಅವನ ಮುಖವನ್ನು ಸೀಳುತ್ತದೆ. ಇನ್ನೊಬ್ಬ ಫ್ರೆಂಚ್ ಸೈನಿಕನು ಹಿಂದಕ್ಕೆ ಓಡಿಹೋಗಲು ಯತ್ನಿಸುತ್ತಾನೆ. ನಮ್ಮದೊಂದು ಸನೀನು ಅವನ ಬೆನ್ನನ್ನು ತಿವಿಯುತ್ತಿದೆ. ತನ್ನ ತೋಳುಗಳನ್ನು ಉದ್ದಕ್ಕೆ ಚಾಚಿ ಮುಂದಕ್ಕೆ ನೆಗೆಯುತ್ತಾನೆ. ಬಾಯನ್ನು ಅಗಲವಾಗಿ ತೆರೆದು ಗಟ್ಟಿ ಕೂಗುತ್ತ ತೂರಾಡುತ್ತಾನೆ. ಅವನ ಬೆನ್ನಿಗೆ ಸಿಕ್ಕಿಕೊಂಡ ಸನೀನು ಕಂಪಿಸುತ್ತದೆ. ಅಲ್ಲಿದ್ದ ಮೂರನೆಯ ಫ್ರೆಂಚ್ ಸೈನಿಕ ತನ್ನ ಕೋವಿಯನ್ನು ಬಿಸುಟು, ಕಣ್ಣುಗಳನ್ನು ಕೈಯಿಂದ ಮುಚ್ಚಿಕೊಂಡು ನಮ್ಮ ಮುಂದೆ ಕಂಗಾಲಾಗಿ ಬಿದ್ದುಕೊಳ್ಳುತ್ತಾನೆ. ಗಾಯಗೊಂಡವರನ್ನು ಹೊತ್ತುಕೊಂಡು ಹೋಗಲೆಂದು ನಾವು ಹಿಡಿದಿದ್ದ ಯುದ್ಧ ಬಂದಿಗಳಲ್ಲಿ ಕೆಲವರನ್ನು ಅವನ ಜತೆಯಲ್ಲಿ ಬಿಟ್ಟು ನಾವು ಮುಂದಕ್ಕೆ ಹೋಗುತ್ತೇವೆ.

ಹಿಂದಕ್ಕೆ ಓಡಿ ಹೋಗುತ್ತಿರುವ ವೈರಿಯನ್ನು ಹಿಮ್ಮೆಟ್ಟಿಕೊಂಡು ಹೋಗುವ ಭರದಲ್ಲಿ ನಾವು ಅವರೊಂದಿಗೆ ಅವರ ಸೈನಿಕ ಸಾಲನ್ನೇ ಅನಿರೀಕ್ಷಿತವಾಗಿ ಸೇರುತ್ತೇವೆ. ಅಷ್ಟು ಹತ್ತಿರ ಹತ್ತಿರವಾಗಿ ನಾವು ಅವರ ಬೆನ್ನ ಹಿಂದೆ ಇದ್ದು ಅವರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದೆವು. ಇದರಿಂದಾಗಿ ನಾವು ಸ್ವಲ್ಪ ನಷ್ಟವನ್ನು ಪಡೆಯುತ್ತೇವೆ. ಅಲ್ಲದೆ ಅವರದೊಂದು ಯಂತ್ರ ಫಿರಂಗಿ ನಮ್ಮ ಮೇಲೆ ಗುಂಡು ಹಾರಿಸಲು ತೊಡಗಿದೆ. ಒಂದು ಕೈಸಿಡಿ ಗುಂಡಿನ ಎಸೆತದಿಂದ ಅದು ಸ್ತಬ್ಧವಾಗಿರುವಂತೆ ಮಾಡುತ್ತೇವೆ. ಆದರೂ ಈ ಒಂದೆರಡು ಸೆಕೆಂಡುಗಳ ಅಂತರದೊಳಗೆ ಅದರಿಂದಾಗಿ ನಮ್ಮಲ್ಲಿನ ಐವರು ಸೈನಿಕರು ಜಠರ ಗಾಯಗಳಿಗೆ ತುತ್ತಾಗುತ್ತಾರೆ. ನಮ್ಮ ಕೈಸಿಡಿಗುಂಡಿನಿಂದ ಗಾಯ ಪಡೆಯದೆ ಇದ್ದ ಒಬ್ಬ ಯಂತ್ರಫಿರಂಗಿಯವನ ಮುಖವನ್ನು ಕ್ಯಾಟ್ ತನ್ನ ಬಂದೂಕಿನ ದಪ್ಪಭಾಗದಿಂದ ಜಜ್ಜಿಬಿಡುತ್ತಾನೆ. ಅಲ್ಲಿದ್ದ ಇತರ ಕೆಲವು ಯಂತ್ರ ಫಿರಂಗಿಯವರು ತಮ್ಮ ಫಿರಂಗಿ ಗುಂಡುಗಳನ್ನು ಹೊರತೆಗೆಯುವ ಮೊದಲೇ ಅವರನ್ನು ನಮ್ಮ ಸನೀನುಗಳಿಂದ ತೀರಿಸಿಬಿಡುತ್ತೇವೆ. ಆಮೇಲೆ ನಾವು ಫಿರಂಗಿಗಳನ್ನು ಆಗಾಗ್ಗೆ ತಣ್ಣಗಿರಿಸಲು ಜೋಪಾನಾಗಿಟ್ಟ ನೀರನ್ನು ಆತ್ಯಾಸಕ್ತಿಯಿಂದ ಕುಡಿಯುತ್ತೇವೆ.

ಅಲ್ಲೆಲ್ಲ ಅವರು ಹರಡಿಸಿದ ಮುಳ್ಳುತಂತಿಗಳ ಬಲೆಗಳನ್ನು ನಮ್ಮವರು ಕತ್ತರಿಸುತ್ತಿದ್ದಾರೆ. ಅವು ತೀರಾ ಹೆಚ್ಚಾಗಿದ್ದಲ್ಲಿ ನಮಗೆ ಮುಂದೆ ಸಾಗಲು ಅನುಕೂಲವಾಗುವಂತೆ ಅವುಗಳ ಮೇಲೆ ಹಲಗೆಗಳನ್ನು ಹಾಸುತ್ತಿದ್ದಾರೆ. ವೈರಿಯ ಕಂದಕಗಳ ಇಕ್ಕಟ್ಟಿನ ದ್ವಾರದೊಳಗೆ ನುಗ್ಗಿಕೊಂಡು ಅವುಗಳೊಳಗೆ ಘುಮುಕುತ್ತೇವೆ. ಹಾಯ್ ಒಬ್ಬ ದೈತ್ಯಾಕಾರದ ಫ್ರೆಂಚ್ ಸೈನಿಕನ ಕುತ್ತಿಗೆಗೆ ತನ್ನ ಎಲೆಗುದ್ದಲಿಯಿಂದ ಏಟನ್ನು ಕೊಟ್ಟು ಕಂದಕದೊಳಗೆ ಮೊದಲನೇ ಕೈಸಿಡಿಗುಂಡನ್ನು ಎಸೆಯುತ್ತಾನೆ. ಒಂದು ಎದೆ ಮಟ್ಟಿನ ರಕ್ಷಣಾ ಗೋಡೆಯ ಹಿಂದುಗಡೆ ನಾವು ತಕ್ಷಣ ಬಗ್ಗಿಕೊಂಡು ಕೆಲವು ಸೆಕೆಂಡುಗಳ ತನಕ ಹಾಗೆಯೇ ಇರುತ್ತೇವೆ. ಕಂದಕದ ಮುಂದಿನ ಭಾಗ ಆ ಸಿಡಿಗುಂಡಿನ ಎಸೆತ ಓರೆಯಾಗಿ ಹೋಗಿ ಕಂದಕದ ಒಂದು ಮೂಲೆಯನ್ನು ಸಿಡಿದು ನಮಗೊಂದು ಹೊರದಾರಿಯನ್ನು ಗಿಟ್ಟಿಸುತ್ತದೆ. ಅಲ್ಲಿಂದ ಮುಂದಕ್ಕೆ ಓಡುತ್ತ, ನಮ್ಮ ಕಣ್ಣಿಗೆ ಬೀಳುವ ಆಶ್ರಯ ಕಂದಕದೊಳಗೆಲ್ಲ ಕೈಸಿಡಿ ಗುಂಡುಗಳನ್ನು ಎಸೆಯುತ್ತೇವೆ. ನೆಲವೆಲ್ಲ ನಡುಗುತ್ತದೆ. ಅನೇಕ ಕಡೆ ಪುಡಿಪುಡಿಯಾಗಿ ಕುಸಿದು ಬೀಳುತ್ತದೆ. ನಮಗೆಲ್ಲ ಉಸಿರುಕಟ್ಟಿದಂತಾಗಿ ನಾವು ಜಾರಿಕೆಯ ಮಾಂಸದ ತುಂಡುಗಳ ಮೇಲೂ ನಮ್ಮ ಭಾರಕ್ಕೆ ಸಗ್ಗುವ ಮೃತ ದೇಹಗಳ ಮೇಲೂ ಎಡವುತ್ತೇವೆ. ಅಂತಹದೊಂದು ದೇಹದ ತೆರೆದಿರುವ ಜಠರದ ಮೇಲೆ ನಾನೊಮ್ಮೆ ಬೀಳುತ್ತೇನೆ. ಒಬ್ಬ ಅಧಿಕಾರಿಯ ಹೊಸ ಟೊಪ್ಪಿಗೆ ಆ ದೇಹದ ಮೇಲಿರುವುದನ್ನು ನೋಡುತ್ತೇನೆ.

ಹೋರಾಟ ಮುಗಿದಿದೆ. ವೈರಿಯ ಹತ್ತಿರದ ಸಂಪರ್ಕ ಕಳೆದುಕೊಂಡಿದ್ದೇವೆ. ನಾವಿಲ್ಲಿ ಹೆಚ್ಚು ಹೊತ್ತು ನಿಲ್ಲಲು ಸಾಧ್ಯವಿಲ್ಲ. ನಮ್ಮ ಫಿರಂಗಿಗಳ ಬೆಂಕಿಯ ರಕ್ಷಣೆಯಲ್ಲಿ ನಾವು ನಮ್ಮ ಸ್ಥಾನಗಳಿಗೆ ಹಿಂತಿರುಗಬೇಕೆಂದು ಆಜ್ಞೆಯಾಗಿದೆ. ಇದನ್ನು ಕೇಳಿದೊಡನೆ ನಾವು ನಮಗೆ ಹತ್ತಿರವಿದ್ದ ಆಶ್ರಯ ಕಂದಕದೊಳಗೆ ನುಗ್ಗಿ ಅಲ್ಲಿ ನಮ್ಮ ಕೈಗೆ ಎಟಕುವ ಆಹಾರ ಸಾಮಗ್ರಿಗಳನ್ನೆಲ್ಲ ಅವಸರದಿಂದ ದೋಚಿಕೊಂಡು ಹೊರಗೆ ಬರುತ್ತೇವೆ. ಇವುಗಳಲ್ಲಿ ಮುಖ್ಯವಾದುವು ಉಪ್ಪು ಚಿಮುಕಿಸಿದ ಗೋಮಾಂಸದ ಮತ್ತು ಬೆಣ್ಣೆಯ ಡಬ್ಬಗಳು.

ವಿಶೇಷ ತೊಂದರೆಯಿಲ್ಲದೆ ನಾವು ನಮ್ಮ ಸ್ಥಾನವನ್ನು ಸೇರುತ್ತೇವೆ. ವೈರಿಯು ಮತ್ತೆ ನಮ್ಮ ಮೇಲೆ ಆಕ್ರಮಣ ನಡೆಸಲಿಲ್ಲ. ವಿಪರೀತ ಆಯಾಸದಿಂದ ಒಂದು ತಾಸಿನವರೆಗೆ ನಾವು ನಿಟ್ಟುಸಿರಿಡುತ್ತ ಒಂದು ಕಡೆಬಿದ್ದುಕೊಳ್ಳುತ್ತೇವೆ. ನಮ್ಮ ಹಸಿವು ತೀವ್ರವಿದ್ದರೂ ನಾವು ದೋಚಿಕೊಂಡು ತಂದ ಆಹಾರದ ಮೇಲೆ ಕೂಡ ನಮ್ಮ ಮನಸ್ಸು ಹರಿಯುತ್ತಿಲ್ಲ. ಅಷ್ಟು ದಣಿವಾಗಿದೆ ನಮಗೆ. ಕ್ರಮೇಣ ನಾವು ಸಹಜ ಸ್ಥಿತಿಗೆ ಬರುತ್ತೇವೆ.

ಸ್ನೇಹಜೀವಿ ಪ. ರಮಾನಂದರಾಯರ

ಸಾಹಿತಿ ಮಿತ್ರರ-ಅಭಿಮಾನಿಗಳ ಸ್ಮರಣೆ

ಪಡುಕೋಣೆ ರಮಾನಂದರಾಯರು

ಡಾ|| ಮಾಸ್ತಿ ವೆಂಕಟೇಶ್ ಅಯ್ಯಂಗಾರ್

ತಾಯಿ ಸೌಭಾಗ್ಯವತಿ ಚಂದ್ರಭಾಗದೇವಿ, ತನ್ನ ತಂದೆ ಶ್ರೀ ರಮಾನಂದರಾಯರ ನೆನಪಿಗಾಗಿ ಒಂದು ಗ್ರಂಥವನ್ನು ಪ್ರಕಟಿಸಲು ನಿಶ್ಚಯಿಸಿ ಅದಕ್ಕೆ ನನ್ನಿಂದ ಒಂದು ಲೇಖನವನ್ನು ಬಯಸಿದ್ದಾರೆ. ಆಕೆಯ ಯಜಮಾನರು ಶ್ರೀ ಕೃಷ್ಣರಾಯರು ಸಹ ಇದೇ ಬಯಕೆಯನ್ನು ತಿಳಿಸಿದ್ದಾರೆ. ಅವರ ಅಪೇಕ್ಷೆಯಂತೆ ನಾನು ಈ ನಾಲ್ಕು ಮಾತನ್ನು ಬರೆಯುತ್ತಿದ್ದೇನೆ.

ಶ್ರೀ ರಮಾನಂದರಾಯರು ನನಗೆ ಮೊದಲ ಪರಿಚಯಕ್ಕೆ ಬಂದದ್ದು 1933 ರಲ್ಲಿ. ಆ ವರುಷ ಸೋದರ ಲೇಖಕ ಶ್ರೀ ಕೋಟ ಶಿವರಾಮ ಕಾರಂತರು, ಶ್ರೀ ಮೊಳಹಳ್ಳಿ ಶಿವರಾಯರ ಸಹಾಯಕರಾಗಿ ಪುತ್ತೂರಿನಲ್ಲಿ ನಡೆಸುತ್ತಿದ್ದ ನವರಾತ್ರಿ ಉತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಲು ನನ್ನನ್ನು ಕರೆದರು. ಆ ಸಂದರ್ಭದ ಕೆಲವು ವಿವರವನ್ನು ನನ್ನ "ಭಾವ" ಪುಸ್ತಕದಲ್ಲಿ ತಿಳಿಸಿದ್ದೇನೆ. ಕಾರಂತರು ಕಾರ್ಯಕ್ರಮದಲ್ಲಿ ನಾಟಕವನ್ನು ಸೇರಿಸಿದ್ದರು. ಅವುಗಳಲ್ಲಿ ಹೆಣ್ಣಿನ ಮುಖ್ಯಪಾತ್ರವನ್ನು ಶ್ರೀ ಶಿವರಾಯರ ಮಗಳು ಶ್ರೀಮತಿ ಸೀತಾದೇವಿ ವಹಿಸುತ್ತಿದ್ದರು. ಪಡುಕೋಣೆ ರಮಾನಂದರಾಯರು ಇವರ ಯಜಮಾನರು. ಉತ್ಸವ ಎಷ್ಟು ಚೆನ್ನಾಗಿ ನಡೆಯಿತು, ಅದರಲ್ಲಿ ಈ ನಾಟಕದ ಭಾಗ ಎಷ್ಟು ಪ್ರಮುಖವಾಗಿತ್ತು, ನಾಟಕ ಯಶಸ್ವಿಯಾಗಿ ಆಗುವುದಕ್ಕೆ ಶ್ರೀಮತಿಯವರ ಪಾತ್ರ ನಿರ್ವಹಣೆ ಎಷ್ಟು ಮಟ್ಟಿಗೆ ಕಾರಣ ಆಗಿತ್ತು —ಇದೆಲ್ಲ ನನಗೆ ಒಂದು ಹೊಸ ಅನುಭವ.

ಆ ಮೇಲಿನ ದಿನಗಳಲ್ಲಿ ನನಗೆ ರಾಯರನ್ನು ಕುರಿತು ಹಲವು ಸಂತೋಷಕರವಾದ ಸಂಗತಿಗಳು ತಿಳಿದವು. ಸೀತಾದೇವಿ ಸ್ವತಃ ಲೇಖಕಿ. ರಮಾನಂದರಾಯರು ಲೇಖಕರು. ಮಡದಿಯ ಲೇಖನ ಕಾರ್ಯದಲ್ಲಿ ಉತ್ತೇಜಕರು ಆಗಿದ್ದರು. ಅವರ ಸೌಜನ್ಯ ಇಂಥದು. ಅವರನ್ನು ಕಂಡ ಯಾರೂ ಅದಕ್ಕೆ ಮನ ಸೋಲದಿರುವುದು ಸಾಧ್ಯವಲ್ಲ. ನಯವಾದ ನಡತೆ, ಮಾತಿನಲ್ಲಿ ಮಿತಿ, ಸರಳ ಸುಲಭ ಆದ ವರ್ತನೆ, ಜಂಭದ ಸೋಂಕು ಇಲ್ಲದ ವಿನಯ, ಇವು ಆ ಸೌಜನ್ಯದ ಅಂಗಗಳು. ಮಗುವಿನ ತರಹ ಅಚ್ಚವಾದ ಒಂದು ರೀತಿಯಿಂದ ರಾಯರು ಹತ್ತಿರದ ಜನರ ಮನಸ್ಸನ್ನು ಒಲಿಸುತ್ತಿದ್ದರು.

ಇವರು ಮದ್ರಾಸ್ ಪ್ರಾಂತದ ಸರ್ಕಾರದ ವಿದ್ಯಾ ವಿಭಾಗದಲ್ಲಿ ಒಬ್ಬ ಅಧಿಕಾರಿ. 1933ರಲ್ಲಿ ಬೆಂಗಳೂರಿನಲ್ಲಿ ಇದ್ದರೇನೋ. ಆಮೇಲೆ ಅವರು ಮದರಾಸ್ ನಗರದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ವಿಭಾಗದ ಅಧ್ಯಾಪಕರಾಗಿ ನಗರವನ್ನು ಸೇರಿದರು. ಆಗ ಒಂದು ವರುಷ ಮದರಾಸಿನ ಯಾವುದೋ ಸಂಸ್ಥೆಯ ಆಶ್ರಯದಲ್ಲಿ ಒಂದು ಕಾರ್ಯಕ್ರಮಕ್ಕೆ ಎಂದು ನಾನು ಅಲ್ಲಿಗೆ ಹೋದೆನು. ರಮಾನಂದರಾಯರು ತೀರ ಸಹಜವಾಗಿ ನನ್ನನ್ನು ಕಂಡು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಾವು ಅಧ್ಯಕ್ಷರಾಗಿ ನಡೆಸುತ್ತಿದ್ದ ಕರ್ನಾಟಕ ಸಂಘದಲ್ಲಿ ಒಂದು ಭಾಷಣ ಮಾಡಬೇಕೆಂದು ನನ್ನನ್ನು ಆಹ್ವಾನಿಸಿದರು. ನಾನು ಸಂತೋಷದಿಂದ ಒಪ್ಪಿ, ಸಂಘದ ಸಭೆಗೆ ಹೋಗಿ ಮಾತನಾಡಿದೆನು. ಸಭೆ ತಕ್ಕಷ್ಟು ದೊಡ್ಡದಾಗಿತ್ತು. ಸದಸ್ಯರು ಶ್ರದ್ಧಾವಂತ ವಿದ್ಯಾರ್ಥಿಗಳಾಗಿ ಕಂಡರು. ನಾನು ಆಗಿನ ದಿನಗಳಲ್ಲಿ ಭರತ ವರ್ಷದ ಸಂಸ್ಕೃತಿಯ ಮುನ್ನೋಟ ಎಂದು ಒಂದು ಭಾಷಣವನ್ನೂ ಮಾಡುತ್ತಿದ್ದೆನು. ಈ ಸಭೆಯಲ್ಲಿ ಅದೇ ವಿಷಯವನ್ನು ಕುರಿತು ವಾಡಿಕೆಯಂತೆ ಸುಮಾರು ಒಂದು ಗಂಟೆ ಮಾತನಾಡಿದೆನು.

ಆಗ ಅದೇ ಕಾಲೇಜಿನ ಸಂಸ್ಕೃತ ವಿಭಾಗದ ಅಧ್ಯಾಪಕರಲ್ಲಿ ಒಬ್ಬರಾಗಿದ್ದ ಶ್ರೀ. ವಿ. ರಾಘವನ್ ಅವರು ಕನ್ನಡವನ್ನು ಕಾಣದವರಾದರೂ ವಿಷಯ ಯಾವುದೆಂದು ತಿಳಿದು, ಮಾತನಾಡುವವನು ನಾನು ಎಂದು ಸಹ, ಸಭೆಗೆ ದಯಮಾಡಿಸಿದ್ದರು. ನನ್ನ ಮಾತು ಮುಗಿದಮೇಲೆ ಸಭೆಯ ಪ್ರಮುಖರು ಈ ಮಾತುಗಳಿಂದ ತುಂಬ ಸಂತೋಷವಾಯಿತು ಎಂದು ತಿಳಿಸಿದರು. ವಿಷಯದ ಬಹುಭಾಗ ಸಂಸ್ಕೃತವನ್ನು ಅವಲಂಬಿಸಿದ್ದ ಕಾರಣದಿಂದ ಶ್ರೀರಾಘವನ್‌ರವರಿಗೂ ಅದು ಬಹು ಪಾಲು ಅರ್ಥ ಆಗಿತ್ತು. ಅವರು 'ವಿಷಯ ಬಹುಮುಖ್ಯವಾದದ್ದು. ಅದನ್ನು ರುಚಿಸುವಂತೆ ಪ್ರತಿಪಾದಿಸುತ್ತಿದ್ದೀರಿ, ಸಾಧ್ಯಾವಾದಷ್ಟು ಕಡೆ ಇದೇ ಸಂಗತಿಯನ್ನು ನಮ್ಮ ಜನಕ್ಕೆ ತಿಳಿದು ಹೇಳಿದರೆ ಅದು ದೊಡ್ಡ ಸೇವೆ ಆಗುತ್ತದೆ" ಎಂದು ಅಪ್ಪಣೆ ಕೊಟ್ಟರು. ಭಾಷಣ ಯಶಸ್ವಿಯಾದುದು ರಮಾನಂದರಾಯರಿಗೆ ಎಷ್ಟು ಸಂತೋಷ—ಅದನ್ನು ಹೇಳತೀರದು.

ಆ ಬಳಿಕ ಎಷ್ಟೋ ವರ್ಷದ ಮೇಲೆ ನಾನು ನಮ್ಮ ಹಿರಿಯ ಅಳಿಯಂದಿರು ಆವಡಿಯಲ್ಲಿ ಕೆಲಸದಲ್ಲಿ ಇದ್ದು ನನ್ನ ಮಗಳು ಅಲ್ಲಿ ಇದ್ದ ದಿನಗಳಲ್ಲಿ ಅವರೊಂದಿಗೆ ಇರಲೆಂದು ಹದಿನೈದು ದಿನ ಪ್ರವಾಸ ಮಾಡಿದೆನು. ಆವಡಿಯಲ್ಲಿ ಕೆಲಸ ಇಲ್ಲ. ಮದರಾಸಿನ ಕನ್ನಡ ಮಿತ್ರರು ನಾನು ಅಷ್ಟು ಹತ್ತಿರ ಇರುವುದು ತಿಳಿದು ನನ್ನನ್ನು ನಾಲ್ಕು ಕಡೆಗೆ ಕರೆಸಿಕೊಂಡರು. ಆಗ ರಮಾನಂದರಾಯರು ನಗರದ "ಕಿಲ್ಪಾಕ್" ಎಂಬ ಭಾಗದಲ್ಲಿ ಸಂಸಾರ ನಡೆಸುತ್ತಿದ್ದರು. ನಾನು ಕಾರ್ಯಕ್ರಮ ಇದ್ದ ದಿನ ಬೆಳಗ್ಗೆ ನಗರಕ್ಕೆ ಹೋಗಿ ರಾಯರ ಮನೆಯಲ್ಲಿ ನಿಂತು, ತಂಗಿ ಸೀತಾದೇವಿ ಆದರದಿಂದ ನೀಡಿದ ಊಟವನ್ನು ಉಂಡು, ಮಧ್ಯಾಹ್ನ ನನ್ನ ಕೆಲಸವನ್ನು ಮುಗಿಸಿಕೊಂಡು ಸಂಜೆ ಆವಡಿಗೆ

ಕೇಳುತ್ತಿದ್ದೆನು. ಆ ದಿನಗಳ ಆ ಆತಿಥ್ಯದಿಂದ ನಮ್ಮ ಬಾಂಧವ್ಯ ತುಂಬ ಬೆಳೆಯಿತು; ಭದ್ರವಾಯಿತು. ಇದಾದ ಕೆಲವು ವರ್ಷಗಳ ಮೇಲೆ ರಾಯರು ವಿಶ್ರಾಂತಿ ಪಡೆದು ಬೆಂಗಳೂರಿಗೆ ಬಂದು ನೆಲೆಸಿದರು. ರಾಯರು, ಸೀತಾದೇವಿ ಯವರು ಆಗಾಗ ಪರಿಷತ್ತಿಗೆ ಬರುತ್ತಿದ್ದರು. ನಾನು ಆಗ ಅಲ್ಲಿ ಇರುತ್ತಿದ್ದೆ. ಆಗ ಈ ಬಾಂಧವ್ಯ ಮತ್ತಷ್ಟು ನಿಕಟವಾಯಿತು. ಈಚೆಗೆ ರಾಯರು ಬೆಂಗಳೂರನ್ನು ಬಿಟ್ಟು ಮುಂಬಯಿಗೆ ಹೋಗಿ ನಿಂತರು. ಮಧ್ಯೆ ಸೀತಾದೇವಿ ತೀರಿಕೊಂಡು ರಾಯರು ಖಿನ್ನರಾದರು; ಆದರೂ ಎಂದಿನಂತೆ ಕನ್ನಡದಲ್ಲಿ ತಕ್ಕಷ್ಟು ಬೆಲೆಯ ಬರಹವನ್ನು ಬರೆಯುತ್ತಲೇ ಸಾಗಿದರು. ತೀರ ಈಚೆಗೆ ಕಣ್ವಾಶ್ರಮಕ್ಕೆ ಶಕುಂತಲೆ ಮರಳಿ ಬಂದ ವಿಷಯವನ್ನು ಹಿಡಿದು ಇಂಗ್ಲಿಷಿನಲ್ಲಿ ಒಂದು ನಾಟಕವನ್ನು ರಚಿಸಿದರು. ಅದು ದೆಹಲಿ ನಗರದ ಆಂಗ್ಲ ಪತ್ರಿಕೆ ಒಂದರಲ್ಲಿ ಪ್ರಕಟವಾಯಿತು.

ಮಧ್ಯೆ ಒಮ್ಮೆ ಇವರು ಬೆಂಗಳೂರಿಗೆ ಬಂದಿದ್ದು, ಇಲ್ಲಿಯ ನಗರ ಭವನದಲ್ಲಿ ಏರ್ಪಟ್ಟಿದ್ದ ಒಂದು ಕಾರ್ಯಕ್ರಮದಲ್ಲಿ ನಾವು ಸಂಧಿಸಿದೆವು. ದೂರದಿಂದ ನನ್ನನ್ನು ನೋಡಿ ಅವರು ಬಳಿಗೆ ಬಂದು ಮುಖಕ್ಕೆ ತೀರ ಹತ್ತಿರವಾಗಿ ತಮ್ಮಮುಖ ಇಟ್ಟು ತನ್ನ ಜ್ಞಾಪಕ ಇದೆಯೇ ಎಂದು ಕೇಳಿದರು! ಇದು ವಿಚಿತ್ರ ಪ್ರಶ್ನೆ! ಅವರು ಘೊಳ್ಳೆಂದು ನಕ್ಕರು; ಹತ್ತಿರ ಇದ್ದ ಜನರೂ ನಕ್ಕರು.

ಮಗುವಿನಂಥ ಮನಸ್ಸು. ದಿನ ಕಳೆದಂತೆ ಪಡುಕೋಣೆ ರಮಾನಂದರಾಯರ ಮುಪ್ಪಿನ ಮನಸ್ಸು ಹೆಚ್ಚು ಹೆಚ್ಚಾಗಿ ಒಂದು ಮಗುವಿನ ಮನಸ್ಸಿನಂತೆ ಹಸನಾಯಿತು. ●

(ಪತ್ರಗಳಿಂದ ಆಯ್ದ ಭಾಗ)

ಹಾ. ಮಾ. ನಾಯಕ

ನಿಮ್ಮ ಕಾರ್ಡ್ ಬಂತು. ನಿಮ್ಮ ತಂದೆಯವರು ತೀರಿಕೊಂಡ ವಿಚಾರ ತಿಳಿದು ನನಗೆ ತುಂಬಾ ವ್ಯಥೆಯಾಯಿತು. ನಿಮ್ಮ ದುಃಖದಲ್ಲಿ ನಾನೂ ಭಾಗಿಯೆಂದು ನೀವು ತಿಳಿಯಬೇಕು. ನಾನು ಅವರನ್ನು ಕಂಡವನಲ್ಲ. ಆದರೆ ಅವರ 'ಹೂಬಾಣಗಳು' ನನ್ನ ಮನಸ್ಸಿನಲ್ಲಿದೆ. ಅವರ ಆತ್ಮಕ್ಕೆ ಶಾಂತಿ ಇರಲಿ ಎಂದು ನಾನು ಹೃದಯ ಪೂರ್ವಕ ಪ್ರಾರ್ಥಿಸುತ್ತೇನೆ. ●

ಡಾ|| ಎಚ್. ಕೆ. ರಂಗನಾಥ್

ಸನ್ಮಾನ್ಯ ರಮಾನಂದರಾಯರನ್ನು ನಾನು ಕಂಡದ್ದು ಮೂರು ಬಾರಿ-ಆದರೂ ಅವರ "ಸನ್ನಿ ಭಾವ" ವನ್ನೊಳಗೊಂಡ "ಹುಚ್ಚು ಬೆಳದಿಂಗಳಿನ ಹೂಬಾಣ" ನನ್ನನ್ನು ವಿನೋದಲಹರಿಯಲ್ಲಿ ತೇಲಿಸಿಬಿಟ್ಟಿತು. ಆ ಲೇಖನಗಳಿಂದ ಸ್ಫೂರ್ತಿಗೊಂಡು ನಾನು ಹತ್ತು ಹಲವು ನಗೆ ಲೇಖನಗಳನ್ನು ಬರೆದದ್ದು ವಾಸ್ತವ. ●

ಪುಣ್ಯ ಸ್ಮರಣೆ

ಡಾ|| ವಿನಾಯಕ ಕೃಷ್ಣ ಗೋಕಾಕ್

ಶ್ರೀ ಪಡುಕೋಣೆ ರಮಾನಂದರಾಯರನ್ನು ಈಗ ೪೩-೪೪ ವರ್ಷಗಳಿಂದ ನಾನು ಬಲ್ಲೆ. ಕನ್ನಡದಲ್ಲಿ ಆಧುನಿಕ ಹಾಸ್ಯಲಹರಿಗಳನ್ನು ಮೊದಲು ತರಂಗಿಸಿದ ಹಿರಿಯರಲ್ಲಿ ಅವರೂ ಒಬ್ಬರು. ಅವರ ಲೇಖನ ವ್ಯವಸಾಯ ಸಾಗಿಯೇ ಇತ್ತು.

ಕ್ರಮೇಣ ಆಂಗ್ಲ ಭಾಷೆಯಲ್ಲಿಯೂ ಅವರು ಬರೆಯಲು ಪ್ರಾರಂಭಿಸಿದರು. ಲೆಬನಾನ್ ದೇಶದಲ್ಲಿ ವಿಶ್ವವಿಖ್ಯಾತನಾದ ಖಾಲೀಲ್ ಜಿಬ್ರಾನ್‌ನಂತೆ ಅವರೂ ಆ ದೇಶದ ಇನ್ನೊಬ್ಬ ವಿಶ್ವಸಾಹಿತಿ ಎನ್ನಬಹುದು. ಅವರು ಬರೆದ ಒಂದು ಶ್ರೇಷ್ಠ ನಾಟಕವನ್ನು ಶ್ರೀ ರಮಾನಂದರಾಯರು ಇಂಗ್ಲಿಷಿಗೆ ಸಮರ್ಥವಾಗಿ ತಿರುಗಿಸಿದರು. ಅದನ್ನು ಓದಲು ಒಂದು ಹೆಚ್ಚಿನ ಸಂತೋಷವಾಗುತ್ತದೆ. ಮೂಲ ಕೃತಿಯ ಲೇಖಕರೂ ಸಹ ಶ್ರೀ ರಮಾನಂದರಾಯರ ಭಾಷಾಂತರವನ್ನು ಮೆಚ್ಚಿಕೊಂಡಿದ್ದಾರೆ ಆ ಭಾಷಾಂತರಕ್ಕೆ ಒಂದು ಮುನ್ನುಡಿಯನ್ನು ಬರೆಯಬೇಕೆಂದು ರಮಾನಂದರಾಯರು ನನ್ನನ್ನು ಕೇಳಿದ್ದರು. ಅದು ನನಗೊಂದು ಅಭಿಮಾನದ ಸಂಗತಿಯಾಯಿತು.

ನವೋದಯದ ಸಾಹಿತಿಗಳು ಕ್ರಮೇಣ ಮರೆಯಾಗುತ್ತಿದ್ದಾರೆ. ರಮಾನಂದರಾಯರು ತೆರಳುವ ಲೋಕ 'sunless' ಆಗಿರಲಾರದು. ರಮಾನಂದರಾಯರಂಥ ಲೇಖಕರು ಇಲ್ಲವಾದುದಕ್ಕೆ ದುಃಖವಾಗುವದು ಸಹಜ. ಆದರೆ ಕಾಲನ ಅಂಕಿತದಲ್ಲಿದ್ದ ಪ್ರಶ್ನೆಯ ಮುಂದೆ ನಾವೆಲ್ಲ ಬಾಗಲೇ ಬೇಕು. ●

(ಪತ್ರಗಳಿಂದ ಆಯ್ದ ಭಾಗ) **ಹಂಪ. ನಾಗರಾಜಯ್ಯ**

ಹಿರಿಯ ಜ್ಞಾನಿಗಳು ಲೇಖಕರೂ ಸಜ್ಜನರೂ ಆಗಿದ್ದ ಪಡುಕೋಣೆ ರಮಾನಂದ ರಾಯರು ಮುಂಬಯಿಯಲ್ಲಿ 13-2-83 ರಂದು ನಿಧನರಾದ ಸುದ್ದಿ ತಿಳಿದು ದುಃಖವಾಯಿತು. ಅವರ ಆತ್ಮಕ್ಕೆ ಚಿರ ಶಾಂತಿ ದೊರೆಯಲೆಂದು ಹಾರೈಸುತ್ತೇನೆ. ●

ಜಿ. ಬಿ. ಜೋಶಿ ಧಾರವಾಡ

ಆಘಾತದ ಸುದ್ದಿ ಬಂತು. ಏನೆಂದು ನಿಮಗೆ ಸಮಾಧಾನ ಮಾಡಲಿ? ರಮಾನಂದ ರಾಯರು ಸಫಲವಾದ ಜೀವನ ಮಾಡಿದರು. ಹೆಸರು ಉಳಿಸಿಕೊಂಡು ಹೋದರು. ನಮ್ಮದೇನು ?–ಇದ್ದವರದು ? ಅವರನ್ನು ನೆನೆಯುವುದು–ಅವರಿಗೆ ಸದ್ಗತಿಯಾಗಲಿ ಎನ್ನುವುದೊಂದೇ. ನಮ್ಮಿಂದಾಗುವಂಥಾದ್ದು-ಇದ್ದಾಗ ಎಷ್ಟೋ ಅಷ್ಟೇ ಶ್ರದ್ಧೆಯಿಂದ ಅದನ್ನೀಗ ಮಾಡುತ್ತಿದ್ದೇನೆ. ಮೃತರು ಅಮೃತರು.

ಪ. ರಮಾನಂದರಾಯರು-ನಾನು ಕಂಡಂತೆ

ಡಾ॥ ರಂ. ಶ್ರೀ. ಮುಗಳಿ

ದಿವಂಗತ ಪ. ರಮಾನಂದರಾಯರ ಪರಿಚಯವು ನನಗೆ ಆದುದು ಅನೇಕ ವರ್ಷಗಳ ಹಿಂದೆ. ಯಾವುದೋ ಸಾಹಿತ್ಯ ಸಮ್ಮೇಳನದಲ್ಲಿ ಅಥವಾ ನಾಡಹಬ್ಬದಲ್ಲಿ ನಾನು ಮೊದಲ ಸಲ ಅವರನ್ನು ಕಂಡಿರಬೇಕು. ಅದರ ನಿಚ್ಚಳವಾದ ನೆನಪು ಈಗಿಲ್ಲ. ಆದರೆ ಅವರ ಸೌಮ್ಯವಾದ ವ್ಯಕ್ತಿತ್ವ, ಮಿತವಾದ ಮಾತು, ಸ್ನೇಹವನ್ನು ಹೊರಸೂಸುವ ಮುಗುಳ್ನಗೆ ಈ ಚಿತ್ರ ಮಾತ್ರ ನನ್ನ ನೆನಪಿನಲ್ಲಿ ನೆಟ್ಟುಹೋಗಿದೆ. ನಾವು ಬಹಳ ಸಲ ಸೇರುವ ಅವಕಾಶಗಳು ದೊರೆಯಲಿಲ್ಲ. ಆದರೆ ಅವರ ವಿಷಯ ಆಸ್ಥೆಯಿಂದ ತಿಳಿದುಕೊಳ್ಳುತ್ತಿದ್ದೆ. ಅವರ ಬರಹಗಳನ್ನು ಓದಿ ಮೆಚ್ಚುತ್ತಿದ್ದೆ. ಕಳೆದ ಕೆಲವು ವರ್ಷಗಳಲ್ಲಿ ಮಾತ್ರ, ಅವರು ಬೆಂಗಳೂರಿಗೆ ತಮ್ಮ ಮಗಳಾದ ಶ್ರೀಮತಿಚಂದ್ರಭಾಗಾದೇವಿ ಮತ್ತು ಅಳಿಯಂದಿರಾದ ಶ್ರೀ ಕೃಷ್ಣರಾಯರು ಇವರ ಜೊತೆಯಲ್ಲಿ ಇರಲು ಬಂದಾಗ ನಾವು ಭೇಟಿಯಾಗಿ ಆತ್ಮೀಯತೆಯಿಂದ ಮಾತಾಡುತ್ತಿದ್ದೆವು. ಅವರು ಮುಂಬಯಿಗೆ ಹೋದ ಮೇಲೂ ನಮ್ಮ ಪತ್ರವ್ಯವಹಾರವು ನಡೆಯಿತು. ಅವರು ಇಂಗ್ಲಿಷಿನಲ್ಲಿ **Return of Sakuntala** ಎಂಬ ನಾಟಕವನ್ನು ಬರೆದು ನನಗೆ ಹಸ್ತಪ್ರತಿಯನ್ನು ಓದಲು ಕಳಿಸಿಕೊಟ್ಟರು. ಅದನ್ನು ಓದಿ ಅವರ ನಾಟಕೀಯ ಪ್ರತಿಭೆಯನ್ನೂ ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವವನ್ನೂ ತುಂಬ ಮೆಚ್ಚಿಕೊಂಡು ನಾನು ಅವರಿಗೆ ಕಾಗದ ಬರೆದೆ. ಒಂದೆರಡು ಸೂಚನೆಗಳನ್ನು ಮಾಡಿದೆ. ಸೂಚನೆಗಳನ್ನು ಅವರು ಸಂತೋಷದಿಂದ ಸ್ವೀಕರಿಸಿ ಅವಶ್ಯಕಂಡ ತಿದ್ದುಪಡಿಗಳನ್ನು ಮಾಡಿದರು. ಅದನ್ನು ಯಾರಾದರೂ ಪ್ರಕಟಿಸಬಹುದೇ ಎಂಬ ಯೋಚನೆ ಅವರನ್ನು ಕಾಡುತ್ತಿತ್ತು. ಸುದೈವದಿಂದ ಅವರ ಪರಿಚಯದವರೊಬ್ಬರು ಅದನ್ನು ದೊಡ್ಡ ಆಕೃತಿಯಲ್ಲಿ ಪ್ರಕಟಿಸಿದರು. ಅದರ ಒಂದು ಪ್ರತಿಯನ್ನು ನನಗೆ ಅವರು ಕಳಿಸಿಕೊಟ್ಟರು. ಅವರು ಇಳಿವಯಸ್ಸಿನಲ್ಲಿಯೂ ಎದೆಗುಂದದೆ ಮಾಡಿದ ಇನ್ನೊಂದು ದೊಡ್ಡ ಕೆಲಸವೆಂದರೆ 'All Quiet on the Western Front' ಎಂಬ ಸುಪ್ರಸಿದ್ಧ ಇಂಗ್ಲೀಷ್ ಕಾದಂಬರಿಯ ಕನ್ನಡ ಅನುವಾದ. ಅದನ್ನು ಪೂರ್ತಿಗೊಳಿಸಿದ ಮೇಲೆ ಯಾರಾದರೂ ಅದನ್ನು ಪ್ರಕಟಿಸಬಹುದೇ ಎಂದು ಕೇಳಿದರು. ನಾನು ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕನಾಗಿದ್ದೆ. ನಾನು ಸಾಧ್ಯವಿದ್ದ ಪ್ರಯತ್ನ ಮಾಡಿದೆ. ಆದರೆ ಅನುವಾದ ಕೃತಿಗಳನ್ನು ಪ್ರಕಟಿಸುವುದು ಪರಿಷತ್ತಿನ ಪ್ರಥೆಯಾಗಿಲ್ಲ ಎಂಬ ಕಾರಣದಿಂದ ಅದನ್ನು ಅಚ್ಚಿಗೆ ಎತ್ತಿಕೊಳ್ಳಲಿಲ್ಲ. ಹಾಗೆ ಸ್ಪಷ್ಟವಾಗಿ ತಿಳಿಸಿ ಅವರಿಗೆ ಹಸ್ತಪ್ರತಿಯನ್ನು ಹಿಂದಿರುಗಿಸುವಲ್ಲಿ ಸಾಕಷ್ಟು ವಿಳಂಬವಾಯಿತು. ನಾನು ಈ ಅವಧಿಯಲ್ಲಿ ಪ್ರಧಾನ ಸಂಪಾದಕ ಸ್ಥಾನ

ದಿಂದ ನಿವೃತ್ತನಾಗಿದ್ದೆ. ಆಮೇಲೆ ಶ್ರೀ ಸೂರ್ಯನಾರಾಯಣ ಚಡಗ ಅವರ ಸಹಾಯದಿಂದ ಬಾಪ್ಕೋ ಪ್ರಕಾಶನದವರು ಒಪ್ಪಿಕೊಂಡು ಅದನ್ನು ಮುದ್ರಿಸಿದರು. ಆದರೆ ಈ ಪ್ರಕಾಶನದ ಕಥೆಯೇ ಅವರಿಗೆ ವ್ಯಥೆಯಾಗಿ ಪರಿಣಮಿಸಿತು.

೧೯೮೩ ಫೆಬ್ರವರಿ ೧೧ ರಂದು ಅವರು ನನಗೆ ಬರೆದ ಕೊನೆಯ ಪತ್ರದಲ್ಲಿ ಈ ವ್ಯಥೆಯನ್ನು ತೋಡಿಕೊಂಡಿದ್ದಾರೆ. ಅನುವಾದಿತ ಕಾದಂಬರಿಯಲ್ಲಿ ೧೫೦೦ ಮುದ್ರಣ ದೋಷಗಳಿರುವವಂತೆ. ಅಲ್ಲದೆ ಹಲವಾರು ಕಡೆಗಳಲ್ಲಿ ವಾಕ್ಯಗಳಲ್ಲಿಯ ಶಬ್ದಗಳು ಲೋಪವಾಗಿದೆ, ವಾಕ್ಯಮಾಲೆ (ಪ್ಯಾರಾಗ್ರಾಫ್) ಗಳಲ್ಲಿ ವಾಕ್ಯಗಳು ಕಣ್ಮರೆಯಾಗಿವೆ ಸ್ವಲ್ಪ ಕಡೆ ವಾಕ್ಯಮಾಲೆಗಳೇ ಅದೃಶ್ಯವಾಗಿವೆ! ಇವಕ್ಕೆ ಕಾರಣವೆಂದರೆ ಕರಡಚ್ಚುಗಳನ್ನು ಸರಿಯಾಗಿ ನೋಡಿರಲಿಲ್ಲ. ಹಲವಾರು ಕಡೆಗಳಲ್ಲಿ ಗ್ಯಾಲಿಪ್ರೂಫ್‌ಗಳನ್ನು ನೋಡುತ್ತಿರುವಂತೆ ಅವರಿಗೆ ಅನಿಸಿತಂತೆ. ಇಷ್ಟೆಲ್ಲ ಅಚ್ಚಿನ ತಪ್ಪುಗಳಿದ್ದರೂ ಮೇಲ್ನೋಟಕ್ಕೆ ಪ್ರಕಟಣೆ ಒಳ್ಳೆಯದಾಗಿತ್ತು. ತಪ್ಪುತಪ್ಪಾದ ಮುದ್ರಿತ ಪ್ರತಿಯನ್ನು ನೋಡಿ ಅವರು ತುಂಬ ಬೇಸರಪಟ್ಟರು. ಆದ್ದರಿಂದ ನನಗೆ ಇಲ್ಲವೆ ಬೇರೆ ಸ್ನೇಹಿತರಿಗೆ ಪುಸ್ತಕವನ್ನು ಕಳಿಸಲು ಬಹಳ ನಾಚಿಕೆಯಾಯಿತಂತೆ. ದೋಷರಹಿತವಾದ ಮರುಮುದ್ರಣವನ್ನು ಕೈಗೊಳ್ಳುವುದು ತಮಗೆ ಸಾಧ್ಯವಿಲ್ಲ ಎಂದು ಬಾಪ್ಕೋ ಪ್ರಕಾಶನದವರು ತಿಳಿಸಿದರಂತೆ. ಹಾಗೂ ಯಾವುದಾದರೂ ವಿಶ್ವವಿದ್ಯಾಲಯದವರು ಅದನ್ನು ಪಠ್ಯಪುಸ್ತಕವಾಗಿ ನೇಮಕಮಾಡಿದರೆ ತಾವು ನಿರ್ದೋಷವಾದ ದ್ವಿತೀಯ ಆವೃತ್ತಿಯನ್ನು ಪ್ರಕಟಿಸಬಹುದು ಎಂದು ಹೇಳಿದರಂತೆ. ಅದು ಪಠ್ಯವಾಗುವ ವಿಷಯದಲ್ಲಿ ಅವರು ಯೋಚನೆಮಾಡುತ್ತಿರಲಿಲ್ಲ. ಆದರೆ ಲೇಖಕನ "ಇಜ್ಜತ್" ಅದನ್ನು ಅವಲಂಬಿಸಿದೆ. ಆದ್ದರಿಂದ ಮೈಸೂರು ಅಥವಾ ಬೆಂಗಳೂರು ವಿಶ್ವವಿದ್ಯಾಲಯವು ಅದನ್ನು ಪಠ್ಯಪುಸ್ತಕವಾಗಿ ನೇಮಿಸುವದೆಂಬ ಆಶಾಭಾವನೆಯನ್ನು ಅವರು ವ್ಯಕ್ತಮಾಡಿದ್ದಾರೆ. ಅವರ ಈ ಅಪೇಕ್ಷೆಯನ್ನು ನಾನು ಸಂಬಂಧಪಟ್ಟ ಮಿತ್ರರೊಬ್ಬರಿಗೆ ತಿಳಿಸಿದ್ದೇನೆ. ಹೆಚ್ಚೇನೂ ಮಾಡುವ ಸ್ಥಿತಿಯಲ್ಲಿ ನಾನೀಗ ಇಲ್ಲ ಎಂದು ವಿಷಾದಿಸಬೇಕಾಗಿದೆ. ಆದರೆ ಪ್ರಥಮ ಮುದ್ರಣದಲ್ಲಿ ತೋರಿ ಬಂದ ದಿವ್ಯ ನಿರ್ಲಕ್ಷ್ಯ ಶ್ರೇಯಸ್ಸು ತರುವಂಥದ್ದಲ್ಲ ಎಂದು ಮಾತ್ರ ಹೇಳಬಯಸುತ್ತೇನೆ. ಬಹು ಆಶ್ಚರ್ಯದ ಸಂಗತಿಯೆಂದರೆ ಪ. ರಮಾನಂದರಾಯರ ಪತ್ರದಲ್ಲಿ ತಿಳಿಸಿರುವಂತೆ ವಿಪರೀತವಾದ ಮುದ್ರಣದೋಷಗಳನ್ನು ಲೆಕ್ಕಿಸದೆ ಪತ್ರಿಕಾ ವಿಮರ್ಶಕರನೇಕರು ಅದನ್ನು ಹೊಗಳುವರಂತೆ. ಒಬ್ಬರಂತೂ ಯಾವುದೇ ವಿಮರ್ಶೆಗೆ ಒಳಗಾಗದೆ "ಸಮರ್ಥನೀಯವಾಗಿ ಅನುವಾದಿಸಿರುವ ಪಡುಕೋಣೆ ರಮಾನಂದರ ಈ ಕಾದಂಬರಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶೇಷ ಚಾರಿತ್ರಿಕದಾಖಲೆ ನಿರ್ಮಿಸುತ್ತದೆ" ಎಂದಿರುವರಂತೆ! ನಿಜವಾಗಿಯೂ ಈ ವಿಮರ್ಶಕರ ಔದಾರ್ಯವನ್ನು ಕೊಂಡಾಡಬೇಕು. ಇಷ್ಟಾದರೂ ಅವರ ವ್ಯಥೆಯ ತೀವ್ರತೆಯನ್ನು ಕಡಿಮೆಮಾಡಲು ಅವರು ನೆರವಾದರೆನ್ನಬೇಕು.

ನಾನು ಅವರ ನಿಧನದ ವಾರ್ತೆ ಕೇಳಿದೊಡನೆ ಮುಂಬಯಿಗೆ ಬರೆದ ಪತ್ರಕ್ಕೆ ಅವರ ಮಗನಿಂದ ಬಂದ ಪತ್ರದಲ್ಲಿ ಹೀಗೆ ಬರೆದಿದೆ. "ತೀರ್ಥರೂಪ ತಂದೆಯವರು ಬರೆದ ಕಡೆಯ ಪತ್ರವು ನಿಮ್ಮ ವಿಳಾಸಕ್ಕೆ ಬರೆದ ಪತ್ರವೇ. ೧೩ನೇ ಆದಿತ್ಯವಾರ ಬೆಳಗ್ಗೆ ೫-೪೫ಕ್ಕೆ ಅವರಿಗೆ ಅಕಸ್ಮಾತ್ತಾಗಿ ಹೃದಯವಿಕಾರವಾಗಿ ಅವರನ್ನು ಆಸ್ಪತ್ರೆಗೆ ಸಾಗಿಸುವ ಮುನ್ನವೇ ಅವರ ಪ್ರಾಣಪಕ್ಷಿಯು ಹಾರಿ ಹೋಯಿತು. ಅಂತಿಮಗಳಿಗೆಯಲ್ಲಿ ರಾಮನಾಮವನ್ನು ಜಪಿಸುತ್ತಿದ್ದರು. ಅವರ ಆಶೆ ಒಂದೇ ಇತ್ತು; ಯಾವ ತರದ ನರಳುವಿಕೆ, ನೋವಿಲ್ಲದೆ ಸಾಯಬೇಕು-ಮನೆಯಲ್ಲಿಯೆ–ಇತರರಿಗೆ ತನ್ನಿಂದ ತೊಂದರೆ ಆಗದಂತೆ. ಅವರ ಈ ಕಡೆಯ ಆಶೆಯನ್ನು ದೇವರು ತೀರಿಸಿದರು. ನೀವೆಂದಂತೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಗಬರಹಗಳನ್ನು ಬರೆಯುವ ಮೊದಲಿಗರಲ್ಲಿ ಅವರೂ ಒಬ್ಬರಾಗಿದ್ದರು."

ಈ ಪತ್ರವನ್ನು ಓದಿ ಅವರೆಂಥ ಪುಣ್ಯಾತ್ಮರು ಎಂದು ನಾನು ಅಂದುಕೊಂಡೆ. ದೈನ್ಯವಿಲ್ಲದ ಜೀವನ, ಅನಾಯಾಸವಾದ ಮರಣ ಇವರಿಂದ ಅವರ ಬಾಳು ಸಾರ್ಥಕವಾಯಿತು. ಹೊಸ ಕನ್ನಡ ಸಾಹಿತ್ಯ ರಸಿಕರ ಮೇಲೆ ಅವರು ಎಸೆದ "ಹುಚ್ಚು ಬೆಳದಿಂಗಳಿನ ಹೂ ಬಾಣಗಳು" ಯಾವಾಗಲೂ ತಿವಿದರೂ ನೋವು ಕೊಡದೆ ನಗೆಯ ಅಲೆಗಳನ್ನು ಹುಟ್ಟಿಸುತ್ತ ಚಿರಂತನವಾಗಿರುತ್ತವೆ. ಅವರ ಸೌಮ್ಯ ಸಂಸ್ಕೃತಿ ಮತ್ತು ಪ್ರತಿಭೆ ಅವರ ಹೆಣ್ಣುಮಕ್ಕಳಲ್ಲಿ ಸಾಹಿತ್ಯ, ಸಂಗೀತ, ನೃತ್ಯ ಈ ಕಲಾ ರೂಪಗಳಲ್ಲಿ ಉಳಿದುಕೊಂಡು, ಬೆಳೆದುಕೊಂಡು ಬರುತ್ತಿದೆ. ಹೀಗೆಯೆ ಅಲ್ಲವೇ ತುಂಬು ಬಾಳನ್ನು ಬಾಳಿದ ಸುಸಂಸ್ಕೃತವ್ಯಕ್ತಿ ಪರಂಪರೆಯಿಂದ ತಾನು ಬೆಳೆದು ತನ್ನ ಸಂತಾನಕ್ಕೆ ಹೊಸ ಪರಂಪರೆಯ ಸಂಸ್ಕಾರಗಳನ್ನು ನೀಡಿ ಮೃತ್ಯುವಶನಾದರೂ ಅಮರನಾಗುವುದು?

From Letter

JILL ROSENBLOOM NEWYORK

.... I was truly saddend to read your letter of April 16th of the passing away of your most beloved father. Though I know no words of sympathy can truly assuge the grief of you loss, I offer you my deepest condolensces. I am sure you will find as time passes that you dear father's guidance and encouragement will continue to be felt with unabated strength....someone whom we hold in such respect and, with such love will never abandon us though cannot have the pleasure of meeting them again in this life. Though it has been many years since I last saw him, the strength of his spiritual committment and moral rectitude have remained with me. Please accept my most sincere sympathy, and sincere love for you.

ಇನ್ನು ಅಂಥ ಇನ್ನೊಬ್ಬರು ವ್ಯಕ್ತಿಯನ್ನು ಕಾಣುವೆವೆ?

ನಿಟ್ಟೂರು ಶ್ರೀನಿವಾಸರಾಯರು

ಪಡುಕೋಣೆ ರಮಾನಂದರಾಯರ ಪರಿಚಯದ ಭಾಗ್ಯ ನನಗೆ ದೊರೆತದ್ದು ಈಗ್ಗೆ ಸುಮಾರು ಐವತ್ತು ವರ್ಷಗಳ ಹಿಂದೆ. ಆಗ ಅವರು ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನದ ಅಧ್ಯಾಪಕರಾಗಿದ್ದರು. ನನ್ನ ಮಾನ್ಯ ಮಿತ್ರರಾದ ಶಿವರಾಮ ಕಾರಂತರು ಆ ಕಾಲದಲ್ಲಿ ಮಂಗಳೂರಿಗೆ ಹೋದಾಗ ಅವರಲ್ಲಿಯೇ ತಂಗುತ್ತಿದ್ದರು. ರಮಾನಂದರಾಯರನ್ನು ಪ್ರತ್ಯಕ್ಷವಾಗಿ ಕಾಣುವುದಕ್ಕೆ ಮುಂಚೆಯೇ ನನಗೆ ಅವರ ವಿಷಯವೂ ಅವರ ಕುಟುಂಬ ಶ್ರೀಮತಿ ಪಡುಕೋಣೆ ಸೀತಾದೇವಿಯವರ ವಿಷಯವೂ ತಿಳಿದಿತ್ತು. ಆ ಹೊತ್ತಿಗಾಗಲೇ ಸೀತಾದೇವಿಯವರ ಹಲವಾರು ಸಣ್ಣ ಕಥೆಗಳು ಪ್ರಕಟವಾಗಿದ್ದುವು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಣ್ಣ ಕಥೆಗಳ ಬೆಳವಣಿಗೆಯ ಇತಿಹಾಸದಲ್ಲಿ ಸೀತಾದೇವಿಯವರ ಸ್ಥಾನ ಹಿರಿದು. ಶಿವರಾಮ ಕಾರಂತರ ಮೂಲಕ ನಾನು ಸಂಪರ್ಕ ಪಡೆದ ಇನ್ನೊಬ್ಬರು ಮರೆಯಲಾಗದ ವ್ಯಕ್ತಿಯೆಂದರೆ-ಪೊಳಲಿ ಶಿವರಾಯರು-ಸೀತಾದೇವಿಯವರ ತಂದೆ. ಅವರು ಸಹಕಾರ ಕ್ಷೇತ್ರದಲ್ಲಿ, ಅದರಲ್ಲೂ ಗ್ರಾಮಗಳ ಸೇವಾಭಿವೃದ್ಧಿಗಾಗಿ ಸಲ್ಲಿಸಿದ ಸೇವೆ ಇಂದೂ ಅವಿಸ್ಮರಣೀಯ. ಅವರು ನನಗೂ ಅನೇಕರಿಗೂ ಪ್ರಾತಃ ಸ್ಮರಣೀಯರು.

ಪಡುಕೋಣೆಯವರು ಮಂಗಳೂರಿನಲ್ಲಿರುವವರೆಗೂ ನಾನು ಅಲ್ಲಿಗೆ ಹೋದಾಗ ಅವರ ಮನೆಗೆ ಹೋಗುತ್ತಿದ್ದೆ. ಪ್ರಾರಂಭದಿಂದಲೇ ಆ ದಂಪತಿಗಳು ತಮ್ಮ ಆತ್ಮೀಯತೆಯಿಂದ ನನ್ನನ್ನು ತಮ್ಮವನನ್ನಾಗಿ ಮಾಡಿಕೊಂಡರು. ಅವರ ಮನೆಯದು ಆದರ್ಶ ಸುಸಂಸ್ಕೃತ ವಾತಾವರಣ. ಅವರ ಮಕ್ಕಳೆಲ್ಲಾ ಆಗ ಚಿಕ್ಕವರಾಗಿದ್ದರು. ಅವರುಗಳ ಮೇಲೆ ಹಿರಿತನದ ಅಧಿಕಾರದ ಒತ್ತಡವಿಲ್ಲದೆ ಅವರವರ ಪ್ರವೃತ್ತಿಗಳ ಬೆಳವಣಿಗೆಗೆ ಸ್ವಾತಂತ್ರ್ಯವನ್ನೂ, ಪೂರ್ಣ ಅವಕಾಶವನ್ನು ಅವರ ತಾಯಿ-ತಂದೆಗಳು ಕೊಡುತ್ತಿದ್ದರೆಂಬುದು ಕಾಣುತ್ತಿತ್ತು. ಆ ಸಂಸಾರದೊಡನೆ ಕಾಲ ಕಳೆಯುವುದೇ ಒಂದು ಆನಂದದ ಅನುಭವ.

ಅಲ್ಲಿಂದೀಚೆಗೆ ರಮಾನಂದರಾಯರನ್ನು ಅವರು ಬೆಂಗಳೂರಿಗೆ ಬಂದಾಗ ಕಂಡು ಸಂತೋಷಪಡುವ ಅವಕಾಶಗಳು ಆಗಾಗ ದೊರೆಯುತ್ತಿದ್ದವು. ಅವರು ತಮ್ಮ ಉದ್ಯೋಗದಿಂದ ನಿವೃತ್ತರಾದ ಕೆಲವು ಕಾಲದ ಮೇಲೆ ಬೆಂಗಳೂರಿನಲ್ಲೇ ನೆಲಸಿದ್ದರಿಂದ ಇಂಥ ಅವಕಾಶಗಳು ಹೆಚ್ಚಿದವು. ಈಚಿನ ವರ್ಷಗಳಲ್ಲಿ ಅವರು ಹೆಚ್ಚು ಮಟ್ಟಿಗೆ

ಅವರ ಮಗನೊಡನೆ ಬೊಂಬಾಯಿಯಲ್ಲಿರುತ್ತಿದ್ದರು. ಅವರು ಮಧ್ಯೆ ಇಲ್ಲಿಗೆ ಬಂದಾಗ ಅವರನ್ನು ಹಲವು ಬಾರಿ ಕಾಣುವ ಸುಸಂಪರ್ಭ ಒದಗಿತ್ತು. ಇಂಥಾ ಅವಕಾಶವು ಶ್ರೀಮತಿ ಚಂದ್ರಭಾಗ, ಶ್ರೀ ಯು. ಎಸ್. ಕೃಷ್ಣರಾವ್ ದಂಪತಿಗಳ ನಿವಾಸದಲ್ಲಿಯೂ ದೊರೆಯಿತು.

ಅವರು ತಾವು ಶಿಕ್ಷಕರಾಗಿದ್ದ ವಿಜ್ಞಾನ ಕ್ಷೇತ್ರದಲ್ಲಿಯೂಪರಿಣತರಾಗಿದ್ದರಲ್ಲದೆ ಸಾಹಿತ್ಯ ದಲ್ಲಿಯೂ, ಹಲವಾರು ಕಲೆಗಳಲ್ಲಿಯೂ ಆಸಕ್ತಿಯನ್ನು ಪಡೆದವರಾಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಅವರಲ್ಲಿ ಸ್ನೇಹಪರತೆ, ಉಕ್ಕುವ ಉತ್ಸಾಹ, ಪರಿಶುದ್ಧವಾದ ಮನಸ್ಸು, ಮಗುವಿನಂತಹ ನಿರ್ಮಲ ಹೃದಯ ಮೂರ್ತಿವೆತ್ತಿದ್ದುವು. ಅವರೊಡನಿದ್ದು ಬಂದರೆ ಮನಸ್ಸಿಗೆ ಆನಂದ-ಶಾಂತಿ.

ನನಗೆ ಅವರ ಕಟ್ಟಕಡೆಯ ಸಂದರ್ಶನ ದೊರೆತದ್ದು ನಾನು ಹೋದ ವರ್ಷ ಬೊಂಬಾಯಿಗೆ ಹೋಗಿದ್ದಾಗ. ನಾನು ಅವರನ್ನು ಕಂಡು ಹೆಚ್ಚುಕಾಲವಾಗಿತ್ತು. ಹೇಗಾದರೂ ಅವಕಾಶಮಾಡಿಕೊಂಡು ಅವರನ್ನು ಭೇಟಿ ಮಾಡಬೇಕೆಂದು ಮನಸ್ಸು ತವಕಿಸುತ್ತಿತ್ತು. ನನ್ನ ಮಾನ್ಯಮಿತ್ರ ಶ್ರೀ ಎ. ಶ್ರೀಪಾದರಾಯರ ನೆರವಿನಿಂದ ಆ ಭೇಟಿ ಸಾಧ್ಯವಾಯಿತು. ಅವರ ಆರೋಗ್ಯಸ್ಥಿತಿ ಸರಿಯಾಗಿಯೇ ಇತ್ತು. ಅವರ ಮಾತು-ಕಥೆಯು ಎಂದಿನಂತೆ ಉತ್ಸಾಹದಿಂದ ತುಂಬಿತ್ತು. ಹಿಂದಿನ ಅನುಭವಗಳು, ಪರಸ್ಪರ ಮಿತ್ರರುಗಳ-ಇರುವವರ, ಕಣ್ಮರೆಯಾಗಿರುವವರ-ನೆನಪುಗಳು, ಸಾಹಿತ್ಯ ವಿಚಾರಗಳು ಇವೆಲ್ಲವನ್ನು ಕುರಿತು ಮಾತು ಸಾಗಿತು. ಈ ರೀತಿ ನಿರೀಕ್ಷಿಸಿದುದಕ್ಕಿಂತ ಹೆಚ್ಚುಕಾಲ ಅತ್ಯಂತ ಆನಂದಮಯವಾಗಿ ಹರಿಯಿತು. ನಾನು ಅಲ್ಲಿಂದ ಹೊರಡುವಾಗ ಅವರೇ ಅನುವಾದಿಸಿದ ಚೆಕೋವ್ ಕೃತಿ "ಚೆರ್ರಿಹಣ್ಣಿನ ತೋಟ" ಮತ್ತು ಇನ್ನೊಂದು ಕೃತಿ "ವಿಮೋರ್‌ದಾದ್" ನನ್ನ ಕೈಗೆ ಅತ್ಯಂತ ಪ್ರೀತಿಯಿಂದ ಕೊಟ್ಟು ನನ್ನನ್ನೂ ತಬ್ಬಿಕೊಂಡು ಬೀಳ್ಕೊಟ್ಟರು. ಅದೇ ಅವರ ಕಡೆಯ ದರ್ಶನವಾಗುವುದೆಂದು ನಾನು ಹೇಗೆ ಊಹಿಸಲು ಸಾಧ್ಯ?

ಇನ್ನು ಅಂಥ ಇನ್ನೊಬ್ಬರು ವ್ಯಕ್ತಿಯನ್ನು ಕಾಣುವೆವೆ?

ಸಂಪಾದಕೀಯ **ಮಲ್ಲಿಗೆ ವಾರಪತ್ರಿಕೆ**

"ಕನ್ನಡ ಕಸ್ತೂರಿ" ಎಂಬ ಮಾತು ಗಮಗಮಿಸುತ್ತಿದ್ದ ಒಂದಾನೊಂದು ಕಾಲದಲ್ಲಿ ಬರೆಯ ಹೊರಟ ಪಡುಕೋಣೆ ರಮಾನಂದರು ಒಂದು ರೀತಿಯಲ್ಲಿ ಕನ್ನಡದಲ್ಲಿ ಹಾಸ್ಯ ಸಾಹಿತ್ಯಕ್ಕೆ ಹೊಸ ಮೆರುಗನ್ನಿತ್ತವರು. ಅವರ ಇತ್ತೀಚಿನ ಕೃತಿ ಜರ್ಮನಿಯಿಂದ ಕನ್ನಡಕ್ಕೆ ನೀಡಿದ ಮಹೋನ್ನತ ಯುದ್ಧಕಾದಂಬರಿ "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ!" ಶಾಂತವಾಗಿ ಐದುವರ್ಷ ಅಜ್ಞಾತವಾಸದಲ್ಲಿದ್ದ ಈ ಕೃತಿ ಹೊರಬಂದ ಸ್ವಲ್ಪ ಸಮಯದಲ್ಲೇ ಪಡುಕೋಣೆಯವರ ಉಸಿರೂ ಶಾಂತವಾದದ್ದು ದುಃಖದ ಸಂಗತಿಯೇ ನಿಜ. ಫೆಬ್ರವರಿ ೧೩ ರಂದು ಅವರ ಆತ್ಮ ಗೊಂದಲದ ಈ ಲೋಕದಿಂದ ಶಾಂತ ಲೋಕದತ್ತ ಪಯಣ ಬೆಳಸಿದ್ದು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟ.

ಪಡುಕೋಣೆ ರಮಾನಂದರಾಯರು

ಡಾ। ಶಿವರಾಮ ಕಾರಂತ

ಇವತ್ತಿಗೆ ಐವತ್ತು ವರ್ಷಗಳ ಪರಿಚಯ, ಸ್ನೇಹ ನನ್ನದು ಮತ್ತು ಪಡುಕೋಣೆ ರಮಾನಂದರಾಯರದು; ಅವರ ಸ್ವಂತ ಊರೆಂದು ಪಡುಕೋಣೆ, ಕುಂದಾಪುರ ತಾಲೂಕಿನ ಮರವಂತೆ ಪರಿಸರದ ಪಡುಕೋಣೆ. ಅದೇ ಅವರ ಹಿರಿಯರು ಎಂದು ಆ ಹಳ್ಳಿಯನ್ನು ಬಿಟ್ಟು ಮಂಗಳೂರನ್ನು ಸೇರಿದರೋ ನಾನು ತಿಳಿಯೆ. ನನಗೆ ಅವರ ಪರಿಚಯವಾದದ್ದು ನಾನು ಮಂಗಳೂರಲ್ಲಿ ಎರಡನೆಯ ಬಾರಿಗೆ (1928) ನನ್ನ "ವಸಂತ" ಮಾಸ ಪತ್ರಿಕೆಯನ್ನು ನಡೆಯಿಸುತ್ತಿದ್ದ ಕಾಲದಲ್ಲಿ. ಆಗ ಅವರು ಅಲ್ಲಿನ ಗವರ್ನಮೆಂಟು ಕಾಲೇಜಿನ ಕೆಮಿಸ್ಟ್ರಿ ಪ್ರಾಧ್ಯಾಪಕರಾಗಿದ್ದ ಕಾಲದಲ್ಲಿ. ಕೋರ್ಟು ರಸ್ತೆಯ ಒಂದು ಮನೆಯಲ್ಲಿ ವಾಸಿಸುತ್ತಿದ್ದರು. ಆಗಾಗ ಕೊಡಿಯಾಲ ಬೈಲಿನ ಬಾಲ ಸಾಹಿತ್ಯ ಮಂಡಲಿಗೆ ಬಂದು ಹೋಗುತ್ತಿದ್ದಾಗ ಅವರ ಪರಿಚಯವಾಯಿತು. ಬಿಳಿ ಕಾಯದ ಅವರು ಕಾಲೇಜಿಗೆ ಹೋಗಿ ಬರುವಾಗಲೂ ಇತರ ವೇಳೆಯಲ್ಲಾಗಲೀ, ಸಾದಾ ಉಡುಗೆಯಲ್ಲೇ ಕಾಣಿಸುತ್ತಿದ್ದುದರಿಂದ ಬಾಹ್ಯ ಆಕರ್ಷಣೆಯಿಂದ ನನ್ನ ಕಣ್ಣನ್ನು ಅವರು ಸೆಳೆದವರಲ್ಲ.

ಹೇಗೆ, ಯಾಕೆ, ನಾನು ಅವರನ್ನು ಪ್ರಥಮ ಬಾರಿ ಕಂಡೆನೋ ನೆನಪಾಗದು. ಆದರೆ, ಬಲು ಬೇಗ ಕ್ಷಿಪ್ರದಲ್ಲಿ ಅವರ ನನ್ನ ಸ್ನೇಹ ಬೆಳೆಯಿತು. ಸಂಜೆ ಅವರಲ್ಲೇ ಸಮಯ ಕಳೆಯ ತೊಡಗಿದೆ. ಅವರ ಬಂಧುಬಳಗದ ಪರಿಚಯವೂ ಆಯಿತು. ಅವರ ಮಾವಂದಿರಾದ ದಿ॥ ಮೊಳಹಳ್ಳಿ ಶಿವರಾಯರ ಪರಿಚಯ ನನಗಾದದ್ದು ಅವರ ಮನೆಯಲ್ಲೇ.

ಅವರಿಗೆ ಸಾಹಿತ್ಯ, ನಾಟಕ, ಸಿನೆಮಾಗಳ ಗೀಳು ಬಹಳ. ಕಾಲೇಜಿನ ವಾಚನಾಲಯದಿಂದ ಸದಾ ನಾಟಕ, ಕಾದಂಬರಿ ಸಾಹಿತ್ಯಗಳನ್ನು ತರುತ್ತಿದ್ದರು. ಅಂಥ ಒಂದು ಬರಹ 'Erehwon' ಎಂದರೆ 'nowhere' -ಆ ಗ್ರಂಥ ಬರಹದಿಂದ ಪ್ರೇರಿತನಾದ ನಾನು "ದೇವದೂತರು" ಬರೆಯಲು ಕಾರಣವಾಯಿತು. ಅವರು ಕೊಟ್ಟ ಸ್ಟೀಫನ್ ಲಿಕಾಕನ ಬರಹಗಳು-ನನ್ನ "ಗ್ನಾನ" ಪ್ರಬಂಧಗಳಿಗೆ ಪ್ರೇರಣೆಯಾದುವು. ಮುಂದೆ ಅವರ ಮನೆಯಲ್ಲಿಯೇ ಕಲೆತು, ಉತ್ಸಾಹಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ನನ್ನ 'ಸಿಡಿಲು ಮಿಂಚು' ಮತ್ತು "ಕರ್ಣಾರ್ಜುನ" ಎಂಬ ಎರಡು ನಾಟಕಗಳ ತಾಲೀಮು ಖಾನೆ ಅವರ ಮನೆಯಲ್ಲೇ ನಡೆಯಿತು. ಅವರ ಮಡದಿ ಸೀತಾದೇವಿ, ಆಗಿದ್ದ ಮೂವರು ಮಕ್ಕಳು-ಎಲ್ಲರೂ ನಾಟಕ, ಸಂಗೀತ, ಸಾಹಿತ್ಯ ಕಲಾ ಪ್ರಿಯರು.

ಅವರಿಂದಾಗಿ ನಾನು ಶೇಕ್ಸ್‌ಪಿಯರ್, ಪಿರಾಂಡೆಲ್ಲೊ, ಇಬ್ಸೆನ್, ಫ್ಲೆಚರ್ ಮೊದಲಾದ ಪಾಶ್ಚಾತ್ಯ ನಾಟಕಕಾರರನ್ನು ಕುರಿತು ಓದತೊಡಗಿದೆ. ವಿವಿಧ ನಾಟಕ ಮಾಧ್ಯಮಗಳ ಪ್ರಯೋಗಕ್ಕೆ ತೊಡಗಿದೆ.

ಕೈಲಾಸಂ

ನನ್ನ ನಾಟಕ 'ಸಿಡಿಲು ಮಿಂಚಿನ' ಪ್ರಥಮ ದೇಖಾವೆಗೆ ನಾವು ಬೆಂಗಳೂರಿನಿಂದ ಟಿ. ಪಿ. ಕೈಲಾಸಂರನ್ನು ಕರೆಯಿಸಿಕೊಂಡೆವು. ನನ್ನ ಈ ಎರಡೂ ನಾಟಕಗಳಲ್ಲಿ ರಮಾನಂದರಾಯರು ಪಾತ್ರವಹಿಸಿದ್ದರು. ಎಂದು ಶ್ರೀ ಕೈಲಾಸಂರವರು ಮಂಗೂರಿಗೆ ಬಂದರೋ, ಅವರು ಅಂದಿನಿಂದ ಅವರ ಮನೆಯಲ್ಲೇ ತಿಂಗಳು, ಎರಡು ತಿಂಗಳ ಕಾಲ ಠಾಣೆ ಹೂಡಿದರು. ಕೈಲಾಸಂರಿಗೆ ಹಗಲೇ ರಾತ್ರಿ; ರಾತ್ರಿಯೇ ಹಗಲು. ಹೀಗಾಗಿ ರಮಾನಂದರಾಯರ ನಾಟಕಗಳ ಆಸಕ್ತಿ ಒಳ್ಳೆಯ ಗೆಲುವಿನ ಆವರಣವನ್ನು ಪಡೆಯಿತು. ಅಲ್ಲಿಂದ ಮುಂದೆ ಪಡುಕೋಣೆ ದಂಪತಿಗಳಿಗೆ ಕನ್ನಡ ಸಾಹಿತಿಗಳ ಸ್ನೇಹ ವರ್ಧಿಸಿತು. ವಿ. ಸೀತಾರಾಮಯ್ಯ, ಮಾಸ್ತಿ, ರಾಜರತ್ನಂ ಮೊದಲಾದವರು ಅವರ ಅಚ್ಚುಮೆಚ್ಚಿನ ಮಿತ್ರರಾದರು.

ರಮಾನಂದರಾಯರ ಇನ್ನೊಂದು ಪ್ರವೃತ್ತಿ ಸಿನಿಮಾ. ಆ ಕಾಲದ ಮೂಕಿ ಚಲಚಿತ್ರಗಳಿಂದ ತೊಡಗಿ ಟಾಕೀ ಚಿತ್ರಗಳವರೆಗಿನ ದೀರ್ಘ ಇತಿಹಾಸವನ್ನು ಅವರು ಬಲ್ಲಷ್ಟು ಇನ್ನಾರೂ ತಿಳಿದಿರಲಾರರು. ಆ ದಂಪತಿಗಳು—ಮಂಗಳೂರಿಗೆ ಬಂದ ಒಂದೇ ಒಂದು ಪಾಶ್ಚಾತ್ಯ ಚಲಚಿತ್ರವನ್ನು ಬಿಟ್ಟವರಲ್ಲ. ಚಾರ್ಲಿ ಚಾಪ್ಲಿನ್, ಹೆರಲ್ಡ್ ಲಾಯಿಡ್ಸ್, ಬಸ್ಟರ್ ಕೀಟನ್, ಮೇರಿ ಡ್ರೆಸ್ಲರ್—ಅವರಿಗೆ ಎಷ್ಟು ಮೆಚ್ಚೋ, ಕ್ಯಾರೆಕ್ಟರ್ ನಟರಾದ, ಪಾಲ್ 'ಮುನಿ', ಬೋರಿಸ್ ಕಾರ್ಲಾಫ್ ಅಷ್ಟೇ ಮೆಚ್ಚು. ಅವರ ಈ ಗೀಳು ಒಂದು ದೀರ್ಘ ಅಧ್ಯಯನದ ಮಟ್ಟ ತಾಳಿತ್ತು. ಅಂಥ ವಿಷಯಗಳಲ್ಲಿ ಅವರ ನೆನಪೂ ಅಷ್ಟೇ ಗಾಢ: ಆಸಕ್ತಿ ಅಷ್ಟೇ ಅಧಿಕ. ಬಹಳ ವರ್ಷಗಳ ತನಕವೂ ಅದನ್ನು ಉಳಿಸಿ, ಬೆಳೆಯಿಸಿ ಬಂದಿದ್ದರು.

ಅವರ ಇಂಥ ಗೀಳುಗಳು—ಬರಿಯ ವಿಲಾಸದ ಮುಖವನ್ನು ತಾಳಿದ್ದಲ್ಲ; ಸಂಪೂರ್ಣ ಆಸಕ್ತಿಯನ್ನೇ ಸೆಳೆದವು; ಅವುಗಳ ಸೌಂದರ್ಯ ಪ್ರಜ್ಞೆಗೆ ಸಂಬಂಧಿಸಿದವು. ಅವರ ಕುಟುಂಬದ ಎರಡು ಸೆರಗುಗಳ ಪರಿಚಯ ಅವರಿಂದಾಗಿ ನನಗೆ ದೊರೆಯಿತೆಂದರೆ ತಪ್ಪಾಗದು.

ಮೊಳಹಳ್ಳಿ ಶಿವರಾವ್

ಅವರ ಮಾವಂದಿರಾದ ಮೋಳಹಳ್ಳಿ ಶಿವರಾಯರು ನನಗೆ ಆಸರೆ, ಪ್ರೇರಣೆಗಳನ್ನು ಕೊಟ್ಟ ಮಹಾ ವ್ಯಕ್ತಿ. ಅವರಿಂದಾಗಿ ಪುತ್ತೂರಿನಲ್ಲಿ ನನ್ನ ಚಟುವಟಿಕೆಗಳು

ಹೆಚ್ಚಿದುವು. ದಸರೆಯ ಕಾಲದಲ್ಲಿ ರಮಾನಂದ ದಂಪತಿಗಳು–ತಮ್ಮ ಮಕ್ಕಳೊಡನೆ ಪುತ್ತೂರಿಗೆ ಬಂದು ಠಾಣೆ ಹೂಡುವವರು. ಆ ದಂಪತಿಗಳು ಅವರ ಮಕ್ಕಳೂ ಸೇರಿ ವಿ. ಸೀ. ಯವರ "ಸೊಹ್ರಾಬ ಮತ್ತು ರುಸ್ತುಂ" ನಾಟಕವನ್ನು ಆಡಿದಂತೆ, ಇನ್ನಿತರ ನಾಟಕಗಳನ್ನೂ ಆಡಿದ್ದರು. ಸಿ. ಕೆ. ವೆಂಕಟರಾಮಯ್ಯನವರ "ಮಂಡೋದರಿ" ಅವರ ಆಸಕ್ತಿಯನ್ನು ಸೆಳೆದಿತ್ತು. ಕೈಲಾಸಂರಿಗೆ ಅಚ್ಚುಮೆಚ್ಚಿನ ಸ್ನೇಹಿತರಾದ ಅವರು "ಹೋಂ ರೂಲು" ಮೊದಲಾದ ಕನ್ನಡ ನಾಟಕಗಳನ್ನು, 'Bharata's Burden' ಮತ್ತು "ಏಕಲವ್ಯ" ನಾಟಕಗಳನ್ನೂ ಆಡಿದ್ದರು.

ಬರವಣಿಗೆ ಅವರ ಮತ್ತು ಅವರ ಮಡದಿಯ ಮತ್ತೊಂದು ಆಸಕ್ತಿಯಾಗಿತ್ತು. ನಾಲ್ಕನೆಯ ದಶಕದ ಹೊತ್ತಿಗೆ ಅವರ 'ಬೆಳದಿಂಗಳ ಹೂಬಾಣ'ಗಳೆಂಬ ಹೊಸ ಮಾದರಿಯ ಲಘು ಬರಹ ಪ್ರಕಟವಾಗಿತ್ತು. ಇತರರ ಕಣ್ಣಿಗೆ ಬೀಳದ ಅವರ ಇಂಗ್ಲಿಷನಲ್ಲೇ ಬರೆದ ನಾಟಕಗಳೂ ಇದ್ದುವು. 1938ರ ಸುಮಾರಿಗೆ ಅವರು ನನ 'ನಾಲ್ಕನೇ ಪಿಶಾಚಿ'ಯೆಂಬ ನಾಟಕವನ್ನು ಇಂಗ್ಲಿಷಿಗೆ ಅನುವಾದಿಸಿದರು. ಇದೇ ವರ್ಷ ಕೇವಲ ನಾಲ್ಕು ತಿಂಗಳ ಹಿಂದೆ 'ಅದರ Type-Script ಇದೆಯೆ?' ಎಂದು ಕೇಳಿ ನನಗೆ ಪತ್ರವನ್ನು ಬರೆದಿದ್ದರು. ಸ್ವೈವಕ್ಕೆ ಅದು ನನಲ್ಲಿದ್ದುದರಿಂದ ಅದರ ಪ್ರತಿಯನ್ನು ಅವರಿಗೆ ಕಳುಹಿಸಿದ್ದೆ. ಇದೆಂಥ? ಬರೆದ 45 ವರ್ಷಗಳ ತರುವಾಯ.

ಶಕುಂತಳೆ

ಕೇವಲ ಕಳೆದ ವರ್ಷ ಅವರು ಉತ್ತರ ಶಕುಂತಲಾ ಆಖ್ಯಾನವೆನ್ನಬಹುದಾದ ಒಂದು ನಾಟಕ ಬರೆದರು; ಅದು ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಅಚ್ಚಾಯಿತು. ಮರಳಿ ಪತಿಯನ್ನು ಸೇರಿದ ಶಕುಂತಳೆ ತನ್ನ ಭಾವೀ ಜೀವನವನ್ನು ಹೇಗೆ ಕಳೆದಿರಬಹುದೆಂಬ ಸ್ವಪ್ನವನ್ನು ಅವರು ಕಂಡಂತಿತ್ತು.

ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದ ಅವರು 1945ರ ಸುಮಾರಿಗೆ ಮಂಗಳೂರಿನಿಂದ ಪಾಲ್ಘಾಟಿಗೆ ವರ್ಗವಾಗಿ ಹೋದರು. ವೃತ್ತಿಯಿಂದ ನಿವೃತ್ತರಾದ ಬಳಿಕ ತಮ್ಮ ಬೆಳೆದ ಮಕ್ಕಳ ಜತೆಗೆ ವಾಸವಾಗತೊಡಗಿದರು. ಹಾಗೆ ಅವರ ವಸತಿ ಮದ್ರಾಸು, ಬೆಂಗಳೂರು, ಮುಂಬಯಿಗಳಿಂದ ದೂರವಾದ ನನ್ನ ಅವರ ಭೇಟಿ ತೀರಾ ವಿರಳವಾಯಿತು. ಅವರ ಬದುಕು–ಕಲಾವಿದರೊಡನೆ, ಸಾಹಿತ್ಯ ಪ್ರಿಯರೊಡನೆ, ಅವುಗಳ ಆಸಕ್ತಿಯಲ್ಲಿ ಕಳೆದ ಬದುಕು. ಅವರ ಮಗಳು ಚಂದ್ರಭಾಗಾ ನರ್ತನದಲ್ಲಿ ಹೆಸರಾದಳು. ಜಯಂತಿ ಹಾಡುಗಾರ್ತಿಯಾದಳು. ಅವರ ಮಡದಿ ಸಾಹಿತ್ಯ ವ್ಯಸನಿಯಾಯಿಯೇ ಆಗಿದ್ದಳು. ಮಗ ಪ್ರಭಾಶಂಕರ ಇವೆಲ್ಲ ಆಸಕ್ತಿಗಳಲ್ಲೂ ನಿರತನಾದ. ಬಹಿರಂಗದಲ್ಲಿ ಏನನ್ನೂ ತೋರಿಸಿಕೊಳ್ಳದ ಮುದ್ದು ಪ್ರಬುದ್ಧನಾಗಿದ್ದಾನೆ.

ಅವರ 'ಹುಚ್ಚು ಬೆಳದಿಂಗಳ ಹೂಬಾಣಗಳು' ಎಂಬ ಲಘು ಬರಹವನ್ನು ಮನೋಹರ ಗ್ರಂಥಮಾಲೆಯವರು ಪ್ರಕಟಿಸಿದರು (1938). ಆ್ಯಂಟನ್ ಚೆಕಾವ್ 'ಚೆರ್ರಿ ಆರ್ಚಾರ್ಡ್ಸ್' ಎಂಬ ನಾಟಕದ ಅನುವಾದ 'ಚೆರಿ ಹಣ್ಣಿನ ತೋಟ' ಎಂಬುದನ್ನು ಮೈಸೂರು ಗೀತಾ ಪ್ರಕಟಣಾಲಯದವರು 1971ರಲ್ಲಿ ಪ್ರಕಟಿಸಿದರು.

ಅವರ 'ಮಿರ್ದಾದ್' ಎಂಬ ಒಂದು ನಾಟಕ-ಲೆಬನೀಸ್ ಕವಿ ಮಿಖೈಲ್ ನಾಯಮಿ ಎಂಬವನ 'ಮಿರ್ದಾದ' ಎಂಬ ಕವನವನ್ನು ಆಧರಿಸಿದ, ಸರಳ ರಗಳೆಯ ಇಂಗ್ಲಿಷ್ ನಾಟಕವಾಗಿತ್ತು. ಅದನ್ನು ಭಾರತೀಯ ವಿದ್ಯಾ ಭವನದವರು ಪ್ರಕಟಿಸಿದ್ದರು.

ಹಾಗೆಯೇ "Return of Shakuntala" ಎಂಬುದು ಇಂಗ್ಲಿಷಿನಲ್ಲಿ ಅವರು ಬರೆದ ಸ್ವತಂತ್ರ ನಾಟಕವು Enact ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು.

ಮೊನ್ನೆ ಮೊನ್ನೆ ಎಂದರೆ 1983ರಲ್ಲಿ-ಬಲು ಹಿಂದೆ ಎಂದರೆ ಮೊದಲನೇ ಜಾಗತಿಕ ಯುದ್ಧಾನಂತರದಲ್ಲಿ ಎರಿಕ್ ಫಾನ್ ರಿಮಾರ್ಕನು ಬರೆದ "All quiet on the Western front" ಎಂಬ ಕಾದಂಬರಿಯನ್ನು ಅವರು "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ" ಎಂಬ ಆಖ್ಯೆಯಲ್ಲಿ ಅನುವಾದಿಸಿ ಪ್ರಕಟಿಸಿದರು (ಜಾಪ್ಯ ಪ್ರಕಾಶನ). ಹೀಗೆ ಅವರು ನಿಡುಗಾಲದ ಬಾಳ್ವೆಯಲ್ಲಿ ಮುಪ್ಪನ್ನು ಮೂಡಲಿಸಿ ಬೌದ್ಧಿಕ ಜೀವನವನ್ನೇ, ಸಾಹಿತ್ಯದ ಅಭಿರುಚಿಯನ್ನು ಉಳಿಸಿಕೊಂಡವರು.

ರಮಾನಂದರಾಯರು ನಿನ್ನೆ ಮೊನ್ನೆ ಎಂದರೆ, ತಮ್ಮ 87ನೇ ವಯಸ್ಸಿನಲ್ಲಿ ತೀರಿಕೊಂಡ ವಾರ್ತೆಯನ್ನು ಕೇಳಿದಾಗ, ಆ ಎಲ್ಲ ಹಳೆಯ ದಿನಗಳೆಲ್ಲವನ್ನು ಸ್ಮರಿಸಿಕೊಂಡೆ. ಅವರ ಹಿರಿಯರೂ ದೀರ್ಘಾಯುಗಳೇ.

ನಾಲ್ಕನೆಯ ದಶಕದಲ್ಲಿ-ಮಂಗಳೂರಿನ ಒಂದು ಸಾರಸ್ವತ ಗೃಹದಲ್ಲಿ (ಪ್ರಾಯಶಃ "ತ್ರಾಸಿ" ಕುಟುಂಬದ ಮನೆಯಲ್ಲಿ) ನಾನು ರಮಾನಂದರಾಯರ ತಂದೆ, ತಂದೆಯ ತಂದೆಯವರನ್ನು ಕಂಡ ಘಟನೆಯು ನೆನಪಾಗುತ್ತದೆ. ಆ ಹೊತ್ತಿಗೆ ಪಡುಕೋಣೆ ಕುಟುಂಬದ ಐದು ತಲೆಮಾರುಗಳ ಯೋಗ, ಒಂದೆಡೆ ಕೂಡಿ ಬಂದಿತ್ತು.

ಸ್ನೇಹ, ಆತಿಥ್ಯ, ಸಾಹಿತ್ಯ, ಸಂಗೀತ, ನಾಟಕ ಇಂಥವೆಲ್ಲವೂ ನಿತ್ಯದ ಅನ್ನಪಾನವಾಗಿ ರಂಜಿಸಿದ ಜೀವನ ಪಡುಕೋಣೆ ರಮಾನಂದರಾಯರದ್ದು.

(ಕೃಪೆ : ತರಂಗ)

ಪಡುಕೋಣೆ ದಂಪತಿಗಳು

ವಿ. ಸೀತಾರಾಮಯ್ಯ

ಸುಮಾರು 1929 ರಲ್ಲಿ ಕಾರಂತರ ಕರೆಯ ಮೇಲೆ ನಾನು ಪುತ್ತೂರಿಗೆ ಮೊದಲ ಬಾರಿಗೆ ಹೋದೆ. ಕಾರಂತರಿನ್ನೂ ಆಗ ಪೂರ್ತಿ ಕಾದಂಬರಿಕಾರರಾಗಿರಲಿಲ್ಲ. ಒಂದೆರಡು ನಾಟಕಗಳನ್ನು ಬರೆದಾಗಿತ್ತು. ಬೇಕಾದಷ್ಟು ಸಣ್ಣ ದೊಡ್ಡ ವ್ಯಕ್ತಿ ಚಿತ್ರಗಳನ್ನು ಬರೆದಿದ್ದರು. ಲೋಕ ವಿಮರ್ಶೆ, ಕಲಾವಿಮರ್ಶೆಗಳನ್ನು ಮಾಡಿದ್ದರು. “ವಸಂತ” ಪತ್ರಿಕೆಯನ್ನು ನಡೆಸಿದ್ದರು. ಭಾರತವನ್ನೆಲ್ಲ ಸುತ್ತಿ ಈ ದೇಶದ ಕಲೆ, ಮುಖ್ಯವಾಗಿ ಚಿತ್ರ, ಶಿಲ್ಪ, ವಾಸ್ತುಶಿಲ್ಪ ಪ್ರತಿಫಲಿಸುವಂಥ ಛಾಯಾಚಿತ್ರಗಳನ್ನು ತಂದಿದ್ದರು. ಅವುಗಳಲ್ಲಿ ಕಾಣುವುದಕ್ಕಿಂತ ಮೊನೆಯಲ್ಲಿ ಕಳೆಯಲ್ಲಿ ಅವು ಅವರ ಮನಸ್ಸಿನಲ್ಲಿ ಇದ್ದುವು. ಅವರ ಎರಡು ಲಕ್ಷಣಗಳು ಪರಸ್ಪರ ವಿರುದ್ಧವೆಂಬಂತೆ ಕಾಣುತ್ತಿದ್ದವು. ಮಾತಿನ ಚುರುಕಿನ ಜತೆಗೆ ಚುಚ್ಚು, ಎರಡರ್ಥ, ಮೂರರ್ಥ ಕೊಡುವಂತೆ ಮಾತಿಗೆ ಉತ್ತರವಾಗಿ ಮಾತು, ಅರ್ಥವತ್ತಾದ ಚೇಷ್ಟೆ, ಮಾತು ಸ್ವಲ್ಪ ಹೆಚ್ಚೇನೊ ಎನಿಸಿತ್ತು ಆ ಕಾಲದಲ್ಲಿ. ಇನ್ನೊಂದು: ಎಷ್ಟು ಹೊತ್ತೆಂದರೆ ಅಷ್ಟು ಹೊತ್ತು ಮೌನವಾಗಿ ದುಡಿವ, ಹತ್ತು ಜನರನ್ನು ಸೇರಿಸಿ ದುಡಿಸುವ ಪ್ರವೃತ್ತಿ. ಈ ಎರಡೂ ಗುಣಗಳು ಒಬ್ಬರಲ್ಲಿ ಸೇರುವುದು ಅಪರೂಪ. ಇನ್ನೂ ಎಷ್ಟೋ ಪದರಗಳು ಮಟ್ಟಗಳು ಅವರ ಜೀವದ ಆಳದಲ್ಲಿ ಹೊರಹೊಮ್ಮಬೇಕಾಗಿತ್ತು. ಈ ೪೦ ವರ್ಷಗಳು ಅದಕ್ಕೆ ಹೊಮ್ಮುಗೆ ಕೊಟ್ಟಿವೆ. ಬೆಂಗಳೂರಲ್ಲಿ ನಾನು ಅವರನ್ನು ಕಂಡು ಅವರ ಬಗೆಗೆ ಒಲಿದು ಅವರು ನನ್ನನ್ನು ಆಹ್ವಾನಿಸಿದರು. ಪುತ್ತೂರಿಂದ ಕೆಲವು ಮೈಲಿ ದೂರದ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿ ಬೆಳ್ಳಾರೆ ಎಂಬ ಸ್ಥಳದಲ್ಲಿ ಒಂದು ಸ್ವಯಂಸೇವಕ ತಂಡದ ಶಿಕ್ಷಣ ಶಿಬಿರವನ್ನು ನಡೆಸುತ್ತಿದ್ದರು. ಒಪ್ಪೊತ್ತು ಅಲ್ಲಿಗೆ ಬಂದು ಸಾಹಿತ್ಯವನ್ನು ಕುರಿತು ಒಂದು ಭಾಷಣ ಮಾಡಬೇಕೆಂದು ಕರೆದಿದ್ದರು. ಬೆಳಗ್ಗೆ ಮೈಸೂರಿಂದ ಬಸ್ಸಲ್ಲಿ ಹೊರಟವನು 3½—4ರ ಹೊತ್ತಿಗೆ ಪುತ್ತೂರನ್ನು ಸೇರಿದೆ. ಬಸ್‌ಸ್ಟ್ಯಾಂಡಲ್ಲಿ ಯಾರಾದರೂ ಬಂದಿರಬಹುದೆಂದು ಇಳಿದೆ. ಕೂಡಲೆ ಒಬ್ಬರು ಬಂದು “ನೀವು ಇಂಥವರಲ್ಲವೆ?” ಎಂದು ಕೇಳಿ ಪ್ರೆಸಿಡೆಂಟರು ನಿಮ್ಮನ್ನು ಕರೆತರಹೇಳಿದ್ದಾರೆ ಎಂದು ಹೇಳಿ, ನನ್ನ ಹಾಸಿಗೆ ಪೆಟ್ಟಿಗೆ ತೆಗೆದುಕೊಳ್ಳಲು ಇನ್ನೊಬ್ಬರಿಗೆ ಹೇಳಿ, ನನ್ನನ್ನು ಮೊಳಹಳ್ಳಿ ಶಿವರಾಯರ ಮನೆಗೆ ಒಯ್ದರು. ಅವರೇ ಆ ತಾಲೂಕು ಬೋರ್ಡ್ ಅಧ್ಯಕ್ಷರು ಎಂದು ನನಗೆ ತಿಳಿದಿರಲಿಲ್ಲ. ಅದರ ಸುಳಿವನ್ನು ಕಾರಂತರೂ ನನಗೆ ಕೊಟ್ಟಿರಲಿಲ್ಲ. ಅವರು ಕಾರ್ಯ ನಡೆಸುವ ರೀತಿಯೇ ಹಾಗೆ. ಅದು ನಡೆಯುತ್ತದೆಂದು ಗೊತ್ತಿರುವುದರಿಂದ ಅದರ ವ್ಯವಸ್ಥೆಯನ್ನು ಮಾಡಿಟ್ಟಿರುವುದು ಅವರ ರೀತಿ.

ರಸ್ತೆಯ ಎತ್ತರದ ಮನೆ. ಹೊರಗೆ ಒಂದು ಬಾಗಿಲು ಮಾತ್ರ. ಅದನ್ನು ಇಳಿದ ಕೂಡಲೆ ದೊಡ್ಡ ಅಂಗಳ. ಅಲ್ಲಿ ಎದುರಿಗೆ ಎಡಕ್ಕೆ ರಾಯರ ವಾಸದ ಮನೆ. ಬಲಭಾಗಕ್ಕೆ ರಾಯರ ಲಾಯರ್ ಆಫೀಸ್ ಇತ್ಯಾದಿ...ಬಾಗಿಲಲ್ಲಿ ನಿಂತಿದ್ದ ರಾಯರು ನನಗೆ ಸ್ವಾಗತ ಕೊಟ್ಟರು. "ಕಾರಂತರು ಇಲ್ಲಿಲ್ಲ. ಜಿಲ್ಹಾಕೆರೆಯಲ್ಲಿದ್ದಾರೆ. ಇಲ್ಲಿ ದಣಿವು ಆರಿಸಿಕೊಂಡು ಸಂಜೆ ಅಲ್ಲಿಗೆ ಹೋಗುವಿರಂತೆ. ಏರ್ಪಾಡು ಮಾಡಿದ್ದೇನೆ" ಎಂದರು. ಆ ಕಡೆಯ ಪದ್ಧತಿಯಂತೆ ಅರ್ಘ್ಯ ಪಾದ್ಯ ಮುಗಿದ ಮೇಲೆ ಮೂರು ನಾಲ್ಕು ಬಗೆಯ ತಿಂಡಿಯ ಸಾಮಾನನ್ನು ಕೊಟ್ಟು ಒಂದು ತಂಬಿಗೆಯ ತುಂಬ ಕಾಫಿಯಿಟ್ಟು ಕಪ್ಪು ಸಾಸರು ಮುಂದಿಟ್ಟರು. ರಾಯರ ಶ್ರೀಮತಿಯವರು ಕಾಯಿಲೆಯಲ್ಲಿದ್ದರು. ನನಗೆ ಉಪಚಾರ ನಡೆಸಿದವರು ಇಬ್ಬರು ಹೆಣ್ಣು ಮಕ್ಕಳು; ಅಕ್ಕ ತಂಗಿಯರು: ರಾಯರ ದೊಡ್ಡ ಮಗಳು. ಪಡುಕೋಣೆ ಸೀತಾದೇವಿ; ಮೂರನೆಯ ಅಥವಾ ಕಡೆಯ ಮಗಳು ಆಗ ಕುಮಾರಿ-ವರದಾಬಾಯಿ. ಸ್ವಲ್ಪ ಹೊತ್ತಿನಲ್ಲಿಯೇ ಸೀತಾದೇವಿಯವರ ಯಜಮಾನರು ಎಲ್ಲಿಯೊ ಹೋಗಿದ್ದವರು ಬಂದು ಸೇರಿಕೊಂಡರು. ಕೋಟು, ರುಮಾಲು ಸಂಸ್ಕಾರವುಳ್ಳ-ಎನ್ನಲೇ? ವೇಷದ-ಮೈಸೂರ ಪ್ರತಿನಿಧಿ ನಾನು; ಅರ್ಧ ತೋಳಿನ ಗಾಂಧೀ ಷರ್ಟ್ ಹಾಕಿ ಮೊಣಕಾಲಿಂದ ಸ್ವಲ್ಪ ಮಾತ್ರ ಕೆಳಕ್ಕೆ ಪಂಚೆ ಉಟ್ಟಿದ್ದವರು ಶಿವರಾಯರು. ಶಿವರಾಯರ ಅಳಿಯ ರಮಾನಂದರಾಯರು ಉದ್ದನಾದ ಷರ್ಟ್ ತೊಟ್ಟು ಮಿಲ್ ಪಂಚೆ ಉಟ್ಟಿದ್ದವರು. ಶಿವರಾಯರ ಉಡುಪು ಖಾದಿ. ರಮಾನಂದರಾಯರದು ನಮ್ಮ ಹಾಗೆ. ರಮಾನಂದರಾಯರ ಮುಖ ಪರಿಚಯ ಎಲ್ಲಿಯೊ ಇದ್ದ ಹಾಗೆ ಇತ್ತು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಗೊತ್ತಾಯಿತು: ಮಂಗಳೂರಲ್ಲಿ-1926 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ಎಂದು ಕಾಣತ್ತದೆ–ತೆಗೆದ ಒಂದು ಚಿತ್ರದಲ್ಲಿ ಅವರು ಪಟ್ಟೆ ಉತ್ತರೀಯವನ್ನು ಹಾಕಿಕೊಂಡು ಮುಂದೆ ಬೆತ್ತ ಇಟ್ಟುಕೊಂಡು ಕುಳಿತ ಒಂದು ಗುಂಪಿನಲ್ಲಿದ್ದರು ಎಂಬುದು. ಆಗ ನಮಗೆ ಪರಿಚಯ ಇರಲಿಲ್ಲ, ಅವರು ಹೆಚ್ಚು ಮಾತಿನವರಲ್ಲ. ಆಡಿದ ಮಾತು ಮನೆಯ ಮಾತಾಗದಿದ್ದರೂ ತಡೆ ತಡೆದು ಮಾತಾಡುವಂತಿದ್ದರೂ ಕನ್ನಡ ನುಡಿನ ಬಳಕೆಯಾದವರ ಮಾತು. ಅವರ ಮನೆಯ ಮಾತು ಕೊಂಕಣಿ. ಅವರು ಚಿತ್ರಾಪುರದ ಮಠಕ್ಕೆ ಸೇರಿದ ಸ್ಮಾರ್ತ ಸಾರಸ್ವತರು. ಸೀತಾದೇವಿ ತುಂಬ ಧಾರಾಳವಾಗಿ ಮಾತನಾಡಬಲ್ಲವರು. ಕನ್ನಡ ಆ ಜನರ ಬಾಯಲ್ಲಿ ಎಷ್ಟು ಸೊಗಸಾಗಿ ಬರಬಹುದೊ ಅಷ್ಟು ಸೊಗಸಾಗಿ ಬರುತ್ತಿತ್ತು. ಎಲ್ಲರೂ ಸ್ವಲ್ಪ ಮಾತುಗಳನ್ನು ಎಂದರೆ ಇತರ ಕನ್ನಡ ಭಾಗಗಳವರು ಬಳಸದ ಬೇರೆ ಬಗೆಯ ಸ್ವರಘಾತಗಳನ್ನು, ದೀರ್ಘಗಳನ್ನು ಬಳಸುವವರು. ತಾಯ್ನುಡಿಯಾದ ಕೊಂಕಣಿ ಆಡುವುದರಲ್ಲಿಯೂ ಹಾಗೇ ಗೌಡ ಸಾರಸ್ವತರು ನುಡಿವ ರೀತಿ ಸ್ವಲ್ಪ ಬೇರೆ. ಅವರ ವ್ಯವಹಾರ, ಲೇವಾದೇವಿ, ಪೇಟೆ ವ್ಯವಹಾರ-ಸಾಗಣೆ ಇತ್ಯಾದಿ. ವ್ಯವಹಾರ ವರ್ಗಕ್ಕೆ ತಕ್ಕಂತೆ ಇವರು ಸುಮಾರು Liberal Profession ಎಂಬಂತೆ ಸರ್ಕಾರಿ ನೌಕರಿ, ಲಾಯರು, ಎಂಜಿನೀ

ಯರು, ಡಾಕ್ಟರು, ಆಡಳಿತ, ಕಲೆ ಸಾಹಿತ್ಯಗಳಲ್ಲಿ ತೊಡಗಿದವರು. ಮಾತು ವಿಲಾಸವು, ಸೇವಣದಿಂದ ಒಲಿಸ ಸಂಘದ್ದು. ವರದಾಬಾಯಿ ಹೆಚ್ಚು ಮಾತನಾಡ ದವರಲ್ಲ. ಆಕೆ ಆ ಸುಮಾರಲ್ಲಿ ಮಂಗಳೂರಲ್ಲಿ ಇಂಟರ್ ಮೀಡಿಯೆಟ್ ವ್ಯಾಸಂಗ ಮಾಡುತ್ತಿದ್ದರಂತೆ; ಉತ್ತರ ಕಾಲದಲ್ಲಿ ಬಿ.ಎಸ್.ಸಿ. (ಆನರ್ಸ್) ಮಾಡಿಕೊಂಡು ಕಾಲೇಜ್ ಯೂನಿಯನ್‌ನ ಅಧ್ಯಕ್ಷರೂ ಕೂಡ ಆಗಿದ್ದರಂತೆ.

ಅದೂ ಇದೂ ಮಾತನಾಡುತ್ತಿದ್ದಾಗ ಇವರಿಗೆ ಕನ್ನಡ ಸಾಹಿತ್ಯದಲ್ಲಿ ತುಂಬಾ ಅಭಿರುಚಿ ಎಂದೂ ಇಂಗ್ಲಿಷ್-ಕನ್ನಡ ನಾಟಕ ಪ್ರಯೋಗದಲ್ಲಿ ಅನೇಕವನ್ನು ರಂಗ ಸ್ಥಳಕ್ಕೆ ತಂದಿದ್ದರೆಂದೂ ತಿಳಿಯಿತು. ಶಿವರಾಯರ ದೊಡ್ಡಮಗ ಗಣೇಶರಾಯರು ಮದರಾಸಲ್ಲಿಯೊ ಬೊಂಬಾಯಲ್ಲಿಯೊ ವಿದೇಶಿ ಸುಂಕ ಕಚೇರಿಯಲ್ಲಿ ಕೆಲಸ ಮಾಡು ತ್ತಿದ್ದರು. ಎರಡನೆಯವರು ಸಂಜೀವರಾಯರು, ರಸಾಯನ ಶಾಸ್ತ್ರದಲ್ಲಿ ಎಂ. ಎಸ್. ಸಿ ಮಾಡಿದ್ದರು. ಮಾತು ಎಂದರೆ ಮಾತು ಆಡುವವರು. ಅವರು ಮಾತನಾಡಲು ತೊಡಗಿದರೆ ಇನ್ನಾರೂ ಮಾತನಾಡಲ ಅವಕಾಶ ಇಲ್ಲದಂತೆ ಆಡಬಲ್ಲವರು; ಆದರೆ ಜಾಣವಾಗಿ, ವಿಷಯ ತಿಳಿದು ಇಂಗ್ಲಿಷ್ ಆಗಲಿ, ಕನ್ನಡವಾಗಲಿ ಹಾಗೇ. ಮೂರನೆ ಯವರು ಶ್ರೀ ಮುಕುಂದರಾವ್-ಈವರೆಗೂ ಭೀಷ್ಮರಂತೆ ಬ್ರಹ್ಮಚಾರಿಯಾಗಿಯೇ ಇರುವವರು. May & Baker ಅಲ್ಲಿ ಕೆಲಸ ಮಾಡಿ ಬಹುಶಃ ಈಗ ಉಲ್ಲಾಳ ದಲ್ಲಿದ್ದಾರೆ. ಹೆಚ್ಚು ಮಾತಿಲ್ಲ; ಆದರೆ ಕಲೆಯಲ್ಲಿ--ವಿಶೇಷವಾಗಿ ಸಂಗೀತ ವಿಶ್ವಾಸ ವುಳ್ಳವರು. ಉತ್ತರ ಕಾಲದಲ್ಲಿ ಮುಕುಂದರಾಯರು-ಪಂಜೆ ಮಂಗೇಶರಾಯರ ಕಡೆಯ ಮಗ ರಾಮರಾಯರು-ಇವರೂ ಎಂ. ಎಸ್. ಸಿ. ಮಾಡಿಕೊಂಡು ಲಕ್ನೊ ನಗರದಲ್ಲಿ Suger Technology ಇಲಾಖೆಯಲ್ಲಿ ಮುಖ್ಯ ನಿರ್ದೇಶಕರಾಗಿದ್ದು ವಿಶ್ರಾಂತರಾಗಿ ಈಗ್ಗೆ ಕೆಲವು ವರ್ಷಗಳ ಹಿಂದೆ ಬಸ್ ಅಪಘಾತ ಒಂದರಲ್ಲಿ ತೀರಿ ಕೊಂಡರು. ಇಬ್ಬರೂ ಅನೇಕ ಪಾಶ್ಚಿಮಾತ್ಯ ಹಾಡುಗಳನ್ನು ಹಾಡಬಲ್ಲವರು. ಇತ್ತ ಹೆಣ್ಣುಮಕ್ಕಳಲ್ಲಿ ಸೀತಾದೇವಿಯವರ ತಂಗಿ ಶಾರದಾಬಾಯಿ ಒಬ್ಬ ಇನ್‌ಷೂರೆನ್ಸ್ ಅಧಿಕಾರಿಯ ಮಡದಿಯಾಗಿ ಬಹುಶಃ ಬರ್ಮಾದಲ್ಲಿದ್ದು ಸ್ವಲ್ಪದರಲ್ಲಿಯೇ ಭಾರತಕ್ಕೆ ಹಿಂದಿರುಗುವವರಾಗಿದ್ದರು. ವರದಾಬಾಯಿಯವರಿಗೆ ಆಗ್ಗೆ ವಿವಾಹವಾಗಿರಲಿಲ್ಲ.

ರಮಾನಂದ-ಸೀತಾಬಾಯಿ ತುಂಬಾ ಪ್ರೀತಿಯ ದಂಪತಿಗಳು. ಆ ಮನೆಯಲ್ಲಿ ಎಲ್ಲರಿಗೂ ಇರುತ್ತಿದ್ದ ಧಾರಾಳ-ಅಪರಿಚಿತನಾಗಿ ಆಗ ತಾನೇ ಹೊರಗಿಂದ ಹೋಗಿದ್ದ, ಅಷ್ಟೇನೂ ದಾಕ್ಷಿಣ್ಯವಿಲ್ಲದ, ಸುಲಭವಾಗಿ ಸ್ನೇಹ ಸಂಬಂಧಗಳನ್ನು ಬೆಳಸಲಾರದವ ನೆಂದುಕೊಂಡಿದ್ದ ನನ್ನಂಥವನನ್ನು ಹತ್ತಾರು ವರ್ಷಗಳ ಸುಪರಿಚಿತ ಬಂಧುವಿನಂತೆ ಮಾಡಿಕೊಳ್ಳಬಲ್ಲವರು. ಒಂದು ಸಂಗತಿ ನನ್ನನ್ನು ಇನ್ನಷ್ಟು ಅವರ ಕಡೆಗೆಳೆಯಿತು ಗಂಡ ಹೆಂಡಿರಿಬ್ಬರೂ ಸಿ. ಕೆ. ವೆಂಕಟರಾಮಯ್ಯನವರ ಮಂಡೋದರಿ ನಾಟಕದಲ್ಲಿ

ರಾಯರು ರಾವಣನಾಗಿ, ಸೀತಾದೇವಿ ಮಂಡೋದರಿಯಾಗಿ, ವರದಾಬಾಯಿ ಸೀತೆಯಾಗಿ ಪಾತ್ರವಹಿಸಿದ್ದರಂತೆ. ಸ್ವಲ್ಪ ಕಷ್ಟದ ಪಾತ್ರಗಳೇ. ಹಾಗೆಯೇ ನನ್ನ 'ಸೊಹ್ರಾಬ್–ರುಸ್ತುಂ' ನಾಟಕವನ್ನಾಡಿ, ರಮಾನಂದರಾಯರು ರುಸ್ತುಂ ಆಗಿ, ಸೀತಾದೇವಿ ತಾಹಮೀನೆ ಆಗಿ, ಇನ್ನೊಂದು ಸಣ್ಣ ಪಾತ್ರವನ್ನು ವರದಾಬಾಯಿ ಮಾಡಿದ್ದರಿಂದೂ ಗೊತ್ತಾಯಿತು. ಮಮತೆಯ ಸೆಲೆಗಳು ಸುಲಭವಾಗಿ ಆರಂಭವಾಗಿ ವಿಶ್ವಾಸವನು ಸ್ನೇಹದ, ಪ್ರೀತಿಯ ಗೌರವದ ಕಟ್ಟುಗಳಾಗಿ ಮುಂದಿನ ಕಾಲದಲ್ಲಿ ಗಾಢವಾಗಿ ಬೆಳೆಸಿದವು. ಆ ಪ್ರೀತಿಗೆ ಕಾಣಿಕೆ ಸಲ್ಲಿಸುವುದಾದರೂ ಹೇಗೆ?

ಆ ದಿನ ಸಂಜೆ ನನ್ನನ್ನು ಬೆಳ್ಳಾರೆಗೆ ಕಳಿಸಿದರು. ಅಲ್ಲಿ ಕಾರಂತರು ನಡೆಸುತ್ತಿದ್ದ ಶಿಕ್ಷಣ ಶಿಬಿರದಲ್ಲಿ ಎಲ್ಲಾ ಶಿಸ್ತು. ಅಲ್ಲಿ ತಯಾರಾಗುವವರೆಲ್ಲ ಭಾರತ ಸ್ವಾತಂತ್ರ್ಯವನ್ನು ಸಾಧಿಸುವ ಎಷ್ಟೆಷ್ಟೊ ಕಾರ್ಯರಂಗಗಳಿಗೆ ಸಿದ್ಧವಾಗುವವರಂತೆ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಕಟ್ಟುಪಾಡುಗಳಿಗೊಳಪಟ್ಟು ತಯಾರಾಗುತ್ತಿದ್ದರು. ಆ ಶಿಬಿರದಲ್ಲಿದ್ದ ಅನೇಕರು, ಆ ಮೇಲೆ ಕಾರಂತರೂ ಅವರ ಸ್ನೇಹಿತರೂ ಪುತ್ತೂರಲ್ಲಿ ನಡಸಿದ 10-12 ವರ್ಷಕಾಲದ 'ದಸರಾ' ಮಹೋತ್ಸವದಲ್ಲಿ ಅವರ ನೆರವಿಗೆ ನಿಂತು ದುಡಿದರು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿಶೇಷ ಯೋಗ್ಯತೆ ಗುಣ ಇದ್ದವರು. ಕಾರಂತರ ಅಪ್ಪಣೆ ಕಟ್ಟಪ್ಪಣೆ. ಅದನ್ನು ಮೀರದಂತೆ ಇವರು ಪ್ರೀತಿಯಿಂದ ಭಕ್ತಿಯಿಂದ ನಡೆಸಿಕೊಳ್ಳುತ್ತಿದ್ದರು ಒಂದು ನಿಮಿಷದಲ್ಲಿ ಎಂಥ ಮಗುವನ್ನೂ ನಗಿಸಿ, ಆಡಿಸಿ ಬಳಕೆ ಮಾಡಿಕೊಳ್ಳಬಲ್ಲ ಸ್ವಭಾವವುಳ್ಳ ಕಾರಂತರ ಈ ನಿಯಮ ಶಾಸನ ಅವರ ಇನ್ನೊಂದು ಮುಖವನ್ನು ಕಾಣಿಸುತ್ತಿತ್ತು. ನಾಲ್ಕು ದಿವಸ ಊಟಕ್ಕೆ ಉಪ್ಪಿಲ್ಲ. ಎರಡು ದಿವಸ ತುಪ್ಪವಿಲ್ಲ. ಅಥವಾ ತರಕಾರಿಯಿಲ್ಲ. ಮಜ್ಜಿಗೆಯಿಲ್ಲ. ಹೀಗೆ ಭರತ ಖಂಡದ ಸೇವೆಗೆ ಅಗತ್ಯವಾಗುವಂಥ ಅನೇಕ ತ್ಯಾಗ, ಲೋಪ ಅಭಾವಗಳ-ಇದು ನನ್ನ ನಾಡಿನ ಭಾಗ್ಯ !–ಅಭ್ಯಾಸವೇ ಇಲ್ಲಿ ಆಗುತ್ತಿತ್ತು. ಹಿಂದೆ ಪ್ರೀತಿ ಗೌರವಗಳಿದ್ದವಾಗಿ ಈ ಬಂಧ ಅನುರಾಗದ್ದು ; ಪ್ರಿಯ. ಆ ಸಂಜೆ ನಾನು ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಸೀತೆಯನ್ನು ರಾಮನು ಕಾಡಿಗಟ್ಟಿದ ಪ್ರಕರಣವನ್ನು ಕುರಿತು ಭಾಷಣ ಮಾಡಿ, ಅದರ ಮುಖ್ಯ ಭಾಗಗಳನ್ನು ಓದಿದೆ. ಅದಕ್ಕೂ ಶಿಬಿರಕ್ಕೂ ಏನು ಸಂಬಂಧವೊ ದೇವರಿಗೇ ಬ್ಯಂಬೆಳಗು. ಎರಡನೆಯ ಸಂಜೆ ಶಿವರಾಯರಿಂದ ಸುದ್ದಿ ಬಂತು. ನಾನು ಯಕ್ಷಗಾನದ ಆಟವನ್ನು ನೋಡುವ ಕುತೂಹಲವನ್ನು ತಿಳಿದು ಇಷ್ಟವಿದ್ದರೆ-ಮುಂದಿನ ರಾತ್ರಿಯೋ ಆ ರಾತ್ರಿಯೋ ನೆನಪಿಲ್ಲ–ಇಂಥ ಕಡೆ ಅದನ್ನು ನೋಡಬಹುದು, ಬೇಕೆನ್ನಿಸಿದರೆ ಅಲ್ಲಿಗೆ ಒಯ್ಯುವ ಏರ್ಪಾಡು ಮಾಡುತ್ತೇನೆ ಎಂದು ಹೇಳಿ ಕಳಿಸಿದರು. ಮಾರನೆಯ ಬೆಳಿಗ್ಗೆ ಪುತ್ತೂರಿಗೆ ಹಿಂದಿರುಗಿ ರಾಯರ ಆತಿಥ್ಯವನು ಇನ್ನಷ್ಟು ಪಡೆದೆ. "ನಿಮಗೆ ಶಿಬಿರದಲ್ಲಿ ಗಾಸಿಯಾಗಿರಬೇಕು. ಅವರ ವ್ರತ, ನೇಮ ನಿಮಗೆ ಎಲ್ಲಕ್ಕೂ ಸೊನ್ನೆ ಹಾಕಿರಬೇಕು. ಒಪ್ಪತ್ತು

ನೆಮ್ಮದಿಯಾಗಿರಿ" ಎಂದು ತುಂಬಾ ಉಪಚಾರ ಮಾಡಿದರು. ಹೆಚ್ಚು ಪ್ರಾತಿನಿಧಿ ಮನೆಯ ಏರ್ಪಾಡು ಸಮಗ್ರವಾಗಿ ನಡೆಯುತ್ತಿತ್ತು. ಅವರಿಗೆ ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿ ತುಂಬಿದ ಆಸಕ್ತಿ. ಸಹಕಾರ ಪ್ರಪಂಚದಲ್ಲಿ ಅವರ ಕೈವಾಡ, ಪ್ರಭಾವ ದೊಡ್ಡದು. ಪುತ್ತೂರು ತಾಲೂಕಿನಲ್ಲಿಯೂ, ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರದ ಬೆಳವಣಿಗೆಯ ದೃಷ್ಟಿಯಿಂದಲೂ ಅವರ ನಿಃಸ್ವಾರ್ಥ ಸೇವೆ, ಕ್ರಿಯಾಪಿಚ ಕ್ಷಣೆ, ಅತಿಶಯವಾದ್ದು. ಆ ದಿನ ರಾತ್ರಿ ನಾನು ಪುತ್ತೂರಿನಿಂದ ಒಳಪೂರಾದ ಮಿತ್ತೆನಡಕ ಎಂಬುದೊ ಏನೊ ಹೆಸರಾಗಿದ್ದ ಬಳಿಗೆ ಒಂದು ಲಾರಿಯ ಮುಂಭಾಗದ ಪೀಠವಲ್ಲಿ (ಕಸ್ತೂರಿಯವರ ಶೀಠ!) ಕುಳಿತು ಹೊರಟೆ. ಆ ದಿನ ಮಧ್ಯಾಹ್ನ ನನಗೆ ನಡೆದ ಉಪಚಾರದಲ್ಲಿ ಒಂದು ವಿಶೇಷ ನೆನಪಿಗೆ ಬರುತ್ತದೆ. ಬೆಳಗ್ಗೆ ಮಾತನಾಡು ತ್ತಿದ್ದ ಹಾಗೆಯೇ ಕಾರಂತರು ಬೆಳ್ಳಾರೆಯ ಒಂದು ಕಡೆ ಎತ್ತರವಾಗಿ ಬೆಳೆದಿದ್ದ ಗೇರು ಹಣ್ಣನ್ನು ಕಲ್ಲು ಹೊಡೆದು ಉದುರಿಸಿದ್ದು. ಎತ್ತರದಲ್ಲಿದ್ದ ಅದು ಇವರು ಕಲ್ಲು ಎಸೆದದ್ದಕ್ಕೇ ಕೆಳಗೆ ಬಿತ್ತು. ಈ ಅಮೋಘ ಲಕ್ಷ್ಯಭೇದನವೂ ನನಗೆ ಕಾರಂತರಲ್ಲಿ ಮೆಚ್ಚುಗೆಯನ್ನುಂಟು ಮಾಡಿತ್ತು. ಅದನ್ನು ಬೇರೆಡೆ ಹೇಳಿದ್ದೇನೆ. ಮಧ್ಯಾಹ್ನ ಮೂರು ಗಂಟೆಯ ಕಾಫೀ ಕುಡಿಯುವ ಹೊತ್ತಿಗೆ ರಮಾನಂದರಾಯರು 20 ಹಸಿಯ ಗೇರು ಬಿತ್ತವನ್ನು ತಂದು ಒಂದು ತಟ್ಟೆಯ ನೀರಿನಲ್ಲಿ ಹಾಕಿದ್ದ ಅವುಗಳನ್ನು ಒಂದೊಂದಾಗಿ ಸಿಪ್ಪೆ ಸುಲಿದು ತಿನ್ನಲು ಕೊಟ್ಟರು. ನನಗೆ ಮೊದಲು ಹೇಗೊ ಏನೊ ಎಂದಿತ್ತು. ಆದರೆ ಬಾಯಲ್ಲಿ ಹಾಕಿದ್ದು ತುಂಬ ರುಚಿಯಾಗಿದ್ದುದರಿಂದ ಸಂಕೋಚಗಳನ್ನು ನುಂಗಿಕೊಂಡು ಅವನ್ನು ತಿಂದು ಮುಗಿಸಿದೆ. ಆ ರುಚಿ ಇನ್ನೂ ನಾಲಿಗೆಯ ಮೇಲಿದೆ.

ರಾತ್ರಿ ನಿಮಗೆ ಅಲ್ಲೇ ಊಟ" ಎಂದು ಶಿವರಾಯರು ಮಿತ್ತೆನಡಕಕ್ಕೆ ಹೋಗುವಾಗ ಹೇಳಿದ್ದರು. ಅಲ್ಲಿಗೆ ಸುಮಾರು 9 ಗಂಟೆಯ ಹೊತ್ತಿಗೆ ಹೋದೆವು. ವೆಂಕಟರಮಣ ಭಟ್ಟ ಎಂಬುವವರ ಅಡಿಕೆ ತೋಟದ ಮನೆಯಲ್ಲಿ ನನ್ನನ್ನು ಇಳಿಸಿಕೊಂಡರು. ನನಗ ಹೊಸದಾಗಿ ಪುತ್ತೂರಿನಲ್ಲಿ ಕಾರಂತರ ಗೆಳೆಯರಾಗಿದ್ದ ಶ್ರೀ ಸಿ. ಎಸ್. ಶಾಸ್ತ್ರಿ ಅವರೂ ಅಲ್ಲಿಗೆ ಬಂದಿದ್ದರು. ಶಾಸ್ತ್ರಿಯವರ ತಂಗಿಯ ಗಂಡನೊ ಅಕ್ಕನ ಗಂಡನೊ ಭಟ್ಟರು. ಶಾಸ್ತ್ರಿಯವರೂ ಬೆಳ್ಳಿ ರಾಮಚಂದ್ರರಾಯರೂ ಸದಾಶಿವರಾಯರೂ ಎಲ್ಲರೂ ಪುತ್ತೂರಿನ ಗಣ್ಯ ಲಾಯರುಗಳು. ತುಂಬಾ ಬುದ್ಧಿವಂತರು. ಕೈತುಂಬ ಸಂಪಾದಿಸುತ್ತಿದ್ದರು. ಸದಾಶಿವರಾಯರು ಕಾರಂತರ ತಂಗಿಯ ಗಂಡ. ಬಹುದೊಡ್ಡ ಮಿತ್ರವರ್ಗ ಪುತ್ತೂರಿನದು. ಶಾಸ್ತ್ರಿಗಳು ಮಾತಿಗೆ ಮಾತು ಬಂದು ಶಿವರಾಯರ ಪ್ರಶಂಸೆ ಮಾಡಿದರು. "ಒಂದು ಸಾವಿರ ಫೀ ಕೊಟ್ಟು ಒಂದು ಕೇಸನ್ನು ತೆಗೆದುಕೊಳ್ಳುವ ಅವಕಾಶವಿದ್ದರೂ ಶಿವರಾಯರು ಅದಕ್ಕೆ ಒಪ್ಪಿಗೆ ಇಲ್ಲದವರಾದರೆ ಅಂಥ ಕೇಸನ್ನು ತಾನು ಮುಟ್ಟುವುದಿಲ್ಲ; ನಮಗೆ ಅವರ ದೊಡ್ಡತನದಲ್ಲಿ ಅಷ್ಟು ವಿಶ್ವಾಸ" ಎಂದರು

ಆ ದಿನ ರಾತ್ರಿ ದೊಡ್ಡ ಮಳೆ ಬಂದುದರಿಂದ ಸುಮಾರು ಹತ್ತು ಹತ್ತೂವರೆಗೆ ಆರಂಭವಾಗಬೇಕೆಂದಿದ್ದ ಯಕ್ಷಗಾನದ ಆಟ ನಡೆಯಲಿಲ್ಲ. ಮುಂದಿನ ವಾರಕ್ಕೆ ಮುಂದುವರಿಸಿದ್ದರು. ಬಹು ಪ್ರಖ್ಯಾತರಾದ ಪಾತ್ರಧಾರಿಗಳು ಅಲ್ಲಿ ಭಾಗವಹಿಸುವವರಾಗಿದ್ದುದರಿಂದ ಶಿವರಾಯರು ನನಗೆ ಅದನ್ನು ಸಿಫಾರಸು ಮಾಡಿಕಳಿಸಿದ್ದರು. ದೊಡ್ಡ ಪಾತ್ರವನ್ನು ವಹಿಸುವವರು ಎಂದು ಕಾಣುತ್ತದೆ, ಬಾಳಿಗ ಎಂಬುವರು ಭಟ್ಟರ ಮನೆಗೆ ಬಂದು ನನಗೆ ಈ ಸಂಗತಿಯನ್ನು ತಿಳಿಸುವುದಕ್ಕೆ ತುಂಬ ಸಂಕೋಚಪಟ್ಟುಕೊಂಡರು. ಶಿವರಾಯರು ತಮ್ಮನ್ನು ಇಲ್ಲಿಗೆ ಕಳಿಸಿದ ದಿವಸ ನಮಗೆ ಇದನ್ನು ಕೇಳಿಸಲು ಅವಕಾಶವಾಗದೆ ಹೋದುದಕ್ಕೆ ವಿಷಾದವಾಗಿದೆ ಎಂಬಂತೆ ನುಡಿದರು. ನನ್ನ ಮಾತು ಹಾಗಿರಲಿ, ಶಿವರಾಯರ ಪರವಾಗಿ ಆಡಿದ ಮಾತು ಎಷ್ಟು ಭಕ್ತಿಗೌರವಗಳಿಂದ ಕೂಡಿತ್ತು ಎಂಬುದರ ಅರಿವು ನನಗುಂಟಾಯಿತು. ಯಕ್ಷಗಾನದ ಆಟ ತಪ್ಪಿದರೇನು ? ಬೆಂಗಳೂರಿಂದ ಬಂದ ಅತಿಥಿ, ತಮ್ಮ ಮಾನ್ಯ ಸ್ನೇಹಿತ ಶಿವರಾಯರು ಕಳಿಸಿದ ಜನ ಎಂದು ಆ ರಾತ್ರಿ ಯಕ್ಷಗಾನಕ್ಕೆ ಬದಲಾಗಿ ಪುತ್ತೂರು ಹವ್ಯಕರಿಗೇ ವಿಶೇಷವಾದ ಕಾಯಿಹುಳಿಯನ್ನು ಬಿಸಿಬಿಸಿಯಾಗಿ ಮಾಡಿ ಒಂದು 'ಪದಾರ್ಥ'ವಾಗಿ ಬಡಿಸಿದರು. ಒಂದೊಂದು ಕಡೆ ಅದಕ್ಕೆ ಒಂದೊಂದು ಹೆಸರಿದೆ. ಉತ್ತರ ಕನ್ನಡದಲ್ಲಿ ಪದಾರ್ಥ ಎನ್ನುವರು. ಇನ್ನೊಂದರಲ್ಲಿ ಮೇಲೋಗರ ಎನ್ನುವರು. ಅಲ್ಲಿನವರು ಅದನ್ನು ಮಾಡಿಸುವ ವಿಧಾನ ಅದರ ರುಚಿ ಬೇರೆ ಬೇರೆ. ಮನೆ, ಕೈ ಬೇರೆಯಾದ್ದರಿಂದ. ಮಾತ್ರವಲ್ಲ, ಪ್ರಾದೇಶಿಕ ಲಕ್ಷಣವೂ ಸೇರುತ್ತದಾದೀತು. ಮಲೆಯಾಳದ ತಮಿಳುನಾಡಿನ ಅವಿಯಲ್ ಇದ್ದ ಹಾಗೆ. ಉಳಿದ ಮೂರು ನಾಲ್ಕು ಪದಾರ್ಥಗಳು ಎಲ್ಲವೂ ರುಚಿಯೇ. ಆದರೆ ತೆಂಗಿನಕಾಯಿ, ಹಸಿಮೆಣಸು ಇನ್ನೇನೇನೊ ಸಂಭಾರ ಪದಾರ್ಥಗಳು ಹಾಕಿ ಹಸುವಿನ ಹಾಲಿನ ಮೊಸರು ಕಡೆದು ಮಾಡಿದ್ದು ಆ ರಾತ್ರಿ ತಿಂದ ಕಾಯಿ ಹುಳಿ ಅಡಿಗೆಯ ಪದಾರ್ಥಗಳಲ್ಲಿ ಅತ್ಯುತ್ತಮವೆಂದು ನಾನು ಎಣಿಸುವಂತೆ ಭೋಜನ ಮಾಡಿಸಿದರು. ಭಗವಂತನ ಕೃಪೆ ಎಲ್ಲೆಲ್ಲಿ ಹೇಗೆ ಹೇಗೆ ರೂಪಿಸಿಕೊಳ್ಳುತ್ತದೆಯೋ ಅವನೊಬ್ಬನಿಗೆ ಮಾತ್ರ ಗೊತ್ತು. ಅವನಿಗೆ Providence ಎಂಬ ಹೆಸರಿದೆಯಲ್ಲವೆ ? ಭಟ್ಟರಿಗೆ ಆ ದಿನ ಯಾವುದೊ ನೇಮವಿದ್ದುದರಿಂದ ಅವರು ಊಟ ಮಾಡಲಿಲ್ಲ. ಸಜ್ಜಿಗೆ ಹಾಲು ಸೇವಿಸಿ ಜೊತೆಯಲ್ಲಿಯೇ ಈ ಪದಾರ್ಥ ಹೇಗೆ, ಈ ಮಿಡಿ ಮಾವಿನ ಉಪ್ಪಿನಕಾಯಿ ನೋಡಿ ; ಈ ಪಲ್ಲೆ ನಿಮ್ಮ ಕಡೆ ಸಿಕ್ಕುವುದಿಲ್ಲ, ಇದರ ರುಚಿ ನೋಡಬಹುದು ; ಈ ಪಾಯಸ ಹಲಸಿನ ಹಣ್ಣಿಂದ ಮಾಡಿದ್ದು, ಇದೂ ನಿಮ್ಮ ಕಡೆ ಇಲ್ಲ-ಎಂದು ಬಗೆ ಬಗೆಯಾಗಿ ವರ್ಣಿಸಿ ಸಾಮಾನ್ಯವಾಗಿ ರಾತ್ರಿ ಚೆನ್ನಾಗಿ ನಿದ್ರೆ ಮಾಡುತ್ತಿದ್ದ ನನಗೆ ನಿದ್ರೆಯ ಭೀತಿ ಉಂಟುಮಾಡಿದ್ದರು. ಜೀರ್ಣ ಶಕ್ತಿಯಲ್ಲಿ ಅಷ್ಟೇನೂ ದಕ್ಷನಲ್ಲದವನಾದರೂ ನಾಲಗೆ ಚಪಲದಲ್ಲಿ ಇನ್ನಾರಿಗೂ ಕೀಳಲ್ಲದವನು. ನನಗೇ ಸುಸ್ತಾಗುವಷ್ಟು ಊಟಮಾಡಿದ ಮೇಲೆ ಇನ್ನೆಷ್ಟೊ ಉಪಚಾರ. ಅವರು ತಂಬಾಕು ಸೇವಿಸುವವರು. ಸುಮಾರು 12–1 ಗಂಟೆಯವರೆಗೂ ಮಾತನಾಡುತ್ತ

ಕುಳಿತಿದ್ದೆವು. ಎರಡನೆಯ ಬಾರಿಗೆ ಪುತ್ತೂರಿಗೆ ಬಂದ ಅಲ್ಲಿಂದ ಪ್ರಯಾಣ ಬೆಳೆಸಿದೆ. ಶಿವರಾಯರ ಸ್ನೇಹ, ಪಡುಕೋಣೆ ದಂಪತಿಗಳ ಪರಿಚಯ ಹೀಗೆ ಆರಂಭವಾಯಿತು. ಇದು ಪೂರ್ವರಂಗ.

ಸೀತಾದೇವಿಯವರು ಕೆಲವು ಸಣ್ಣ ಕತೆಗಳನ್ನು ಬರೆದಿದ್ದಾರೆ. ಲಘು ಪ್ರಬಂಧಗಳನ್ನು ಬರೆದಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ ಏನೇನೊ ಭಾಷಾಂತರ ಮಾಡಿದ್ದಾರೆ. ಅವರಿದ್ದ ಕಡೆ ಹೆಣ್ಣುಮಕ್ಕಳೂ ಗಂಡಸರೂ ತುಂಬಿಕೊಂಡು ಅವರ ಮಾತಿನ ಮತ್ತು ಉಪಚಾರದ ಸವಿಯನು ಅನುಭವಿಸಿದ್ದಾರೆ. ಅವರೂ ಬೀಳೆಯ ಆಗಿಯುವವರೇ. ಆಮೇಲೆ ಎಷ್ಟೊ ಸಲ ರಾಯರು ಕಾಲೇಜು ಪ್ರಾಚಾರ್ಯ, ಪ್ರಿನ್ಸಿಪಲ್ ಆಗಿ ಕೆಲಸ ಮಾಡಿದ್ದ ರಾಜಮಹೇಂದ್ರಿ, ಪಾಲಘಾಟ್ ಬಿಟ್ಟು-ಮಂಗಳೂರು ಮದರಾಸ್ ಬಳ್ಳಾರಿ ಮುಂತಾದಲ್ಲಿ, ಬೊಂಬಾಯಿ ಕಡೆಯ ಮಜಲು, ಬೆಂಗಳೂರು ಮುಂತಾದ ಊರುಗಳಲ್ಲಿ ಅವರ ಅತಿಥಿಯಾಗಿ ಹೋಗಿ ಅವರ ಸ್ನೇಹವನ್ನು ಕಂಡಿದ್ದೇನೆ. ಸಿರಾಳ ಮನಸ್ಸಿನಿಂದ ಬೆನ್ನಲ್ಲಿ ಬಿದ್ದ ಸ್ವಂತ ಅಣ್ಣತಮ್ಮಂದಿರಂತೆ ಇತರರನ್ನು ಕಂಡುಕೊಳ್ಳುವ ಅವರ ಪ್ರೀತಿಯನ್ನು ಕಂಡಿದ್ದೇನೆ. ಅವರ ಮಕ್ಕಳು ಮೊಮ್ಮಕ್ಕಳ ಪ್ರೀತಿ ಕೂಡ ಕಂಡಿದ್ದೇನೆ. ನಾನಾ ಬಗೆಯ ಅಡುಗೆಗಳನ್ನು ಮಾಡಿ ಮನೆಯವರನ್ನೂ ಮಕ್ಕಳನ್ನೂ ಕೂಡಿಸಿ, ಹೋದ ನನ್ನನ್ನು ಜೊತೆಗೆ ಕೂಡಿಸಿಕೊಂಡು ಬಡಿಸುವ ಅವರ ಉಪಚಾರ ನಮ್ಮ ಕಡೆಗೆ ಬಳಕೆಯಲ್ಲಿಲ್ಲದ್ದು. ವಿಶೇಷವಾಗಿ ಸಾರಸ್ವತರ ಮನೆಗಳಲ್ಲಿ ಅದರಲ್ಲೂ ಶಿವರಾಯರು, ಪಂಜೆ ಕುಟುಂಬಗಳಲ್ಲಿ ಮಾತ್ರ-ನಾನು ಕಂಡದ್ದು. ಊಟ, ಮಾತು ಅವರ ಬಡೀಸಾದರೆ ಆದರಲ್ಲಿ ಉತ್ಸಾಹಿತರಾಗಿ ನಡುವೆ ಒಂದೊ ಎರಡೊ ಮಾತನಾಡುತ್ತ ಯಾವುದೊ ಇಂಗ್ಲಿಷ್ ಅಮೆರಿಕನ್ ನಾಟಕಕಾರ, ಕಾದಂಬರಿಕಾರ, ಕವಿ ಇವರ ಮಾತನ್ನು ಸೇರಿಸುತ್ತದೆ. ದೇವಿಯವರ ಟೀಕೆ, ವಿಮರ್ಶೆಯಂತೂ ತುಂಬಾ ಜಾಣು. ಈಗ ಆಕೆ ತೀರಿಕೊಂಡಿದ್ದಾರೆ. ಆಕೆಯ ನೆನಪು ಮಾತ್ರ ನನ್ನ ಮನೋರಂಗ ಹೃದ್ರಂಗಗಳ ಆಳದಲ್ಲಿ ಸ್ನಿಗ್ಧವಾಗಿ ನಿಂತಿದೆ.

ಪುತ್ತೂರಿನ ದಸರಾ ಉತ್ಸವಗಳಲ್ಲಿ ಮೊದಲೆರಡು ವರ್ಷ ಶಿವರಾಯರ ಮನೆಯಲ್ಲಿಯೇ ಇದ್ದು ಆಮೇಲೆ ಊರಿಂದ ೭-3 ಮೈಲಿ ಹೊರಗೆ ಕಾರಂತರು ಕಟ್ಟಿಸಿದ ಮನೆಯಲ್ಲಿ ನಾವು ಅತಿಥಿಗಳಾಗುತ್ತಿದ್ದೆವು. ಆದರೂ ಒಪ್ಪತ್ತು ರಾಯರ ಮನೆಯಲ್ಲಿ ಆದರ ಪಡೆದೇ ಹಿಂತಿರುಗುವುದು ವಾಡಿಕೆ. ರಮಾನಂದರಾಯರ ಮಲತಮ್ಮ ಪ್ರಭಾಕರ ರಾಯರು ಚೆನ್ನಾಗಿ ಹಾರ್ಮೋನಿಯಂ ನುಡಿಸುತ್ತಿದ್ದವರು. ರಮಾನಂದರಾಯರ ಮಗಳು ಚಂದ್ರಭಾಗಾ-ಕಾರಂತರ ಮಕ್ಕಳ ನಾಟಕಗಳಲ್ಲಿ, ಅವರು ಏರ್ಪಡಿಸಿದ ನೃತ್ಯಗಳಲ್ಲಿ ನೃತ್ಯವನ್ನು ಪ್ರಕಾಶಿಸುತ್ತಿದ್ದರು. ಆಕೆಗೆ ನೃತ್ಯದಲ್ಲಿ ಮೊದಲಿಂದಲೂ ಪ್ರೀತಿ. ಹಿಂದಿನಿಂದ ಹಾಡುವ ಪ್ರಸಂಗ ಬಂದಾಗ ಸೀತಾದೇವಿ ಹಾಡುವರು. ದಕ್ಷಿಣ ಕನ್ನಡ

ಜಿಲ್ಲೆಯಲ್ಲಿ ಯಕ್ಷಗಾನದ ಕಾರಣದಿಂದಾಗಿ ದಕ್ಷಿಣಾದಿ ಸಂಗೀತವೇ ಅಲ್ಲಿ ಬಳಕೆಯದು. ದಕ್ಷಿಣ ಕನ್ನಡ ಜಿಲ್ಲೆ ಮದರಾಸ್ ಆಧಿಪತ್ಯದ ಭಾಗವಾದ್ದರಿಂದ ಇಲ್ಲಿನವರೆಲ್ಲ ಮದರಾಸ್ ಕಡೆಗೇ ಎಲ್ಲಕ್ಕೂ ಹೋಗಬೇಕಾದ್ದುದರಿಂದ ಮದರಾಸ್ ಸಂಪರ್ಕ, ಮಲಯಾಳದ ಸಂಪರ್ಕಗಳಿಂದಾಗಿ ದಕ್ಷಿಣಾದಿ ಸಂಗೀತ ಅವರಿಗೆ ತಿಳಿದಿತ್ತು. ಆದರೂ ಸಾರಸ್ವತರ ಗುಂಪುಗಳಲ್ಲಿ ಉತ್ತರಾದಿ, ಎಂದರೆ ಮಹಾರಾಷ್ಟ್ರ ಛಾಯೆಯ ಹಿಂದೂಸ್ತಾನಿ ಸಂಪ್ರದಾಯದ ಹಾಡಗಾರಿಕೆಯೇ ಹೆಚ್ಚು ಬಳಕೆ. ಧಾಟಿ–ತಾಳ, ಹಾಡುಗಾರಿಕೆ ಅಲ್ಲಿನವು. ಕಾರಂತರ 'ಮುಕ್ತದ್ವಾರ' ನೃತ್ಯ ನಾಟಕದ ಪ್ರದರ್ಶನವನ್ನು ನಾನು ಮೊದಲು ಕಂಡು ಆಕರ್ಷಿತನಾಗಿ, 1933ರಲ್ಲಿ 'ಶ್ರೀ' ಅವರನ್ನು ಪುತ್ತೂರಿಗೆ ಕರೆದುಕೊಂಡು ಹೋಗಿ ಅದರ ಆಟವನ್ನು ನೋಡಲು ಬೇಡಿಕೊಂಡೆ. ಅವರಿಗೂ ಅದರ ರಚನೆ ಭಾವ ಆಕಾಂಕ್ಷೆ, ಕವಿಯ ಆಳವಾದ ಸತ್ಯ ಶ್ರದ್ಧೆ ಮನಸ್ಸಿಗೆ ಬಂದವು. ಮೊದಲಿಂದಲೂ 'ಶ್ರೀ' ಯವರ ಬಹುಮೆಚ್ಚಿನ ಭಾಷಣವೆಂದರೆ 'The Burden of the Prophets'-ಪ್ರವಾದಿಗಳ ಪ್ರಧಾನ ಸಂದೇಶ. ಇದೇ ಈ ನಾಟಕದ ಸಾರಾರ್ಥ. ಇದು, ಅವರಿಗೆ ಒಪ್ಪಿಗೆಯಾಗಿ ಮುಂದಿನ ವರ್ಷ ರಾಯಚೂರಲ್ಲಿ ಪಂಜೆಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವಾಗ ಅಲ್ಲಿ ಅದನ್ನು ಪ್ರದರ್ಶಿಸಬೇಕೆಂದು ಪ್ರಾರ್ಥಿಸಿಕೊಂಡರು. ಮೊದಲಿಂದಲೂ ಅಲ್ಲಿನ ಮೇಳಗೀತಗಳನ್ನು ಹಾಡಿದವರು ಸೀತಾದೇವಿಯವರು. 'ಕುಣಿಯುತಾನೆ' ಎಂದು ಮುಗಿಯುವ ಗೀತವನ್ನು, ಮುಕ್ತಾಯ ಗೀತವನ್ನು, ಅಲ್ಲಿನ ಪ್ರವೇಶಗಳನ್ನು ಅವರು ಎಷ್ಟು ಸ್ವಾರಸ್ಯವಾಗಿ, ಹೊಂದಿಕೆಯಾಗಿ ಹಾಡುತ್ತಿದ್ದರು ಎಂಬುದನ್ನು ಕೇಳಿದವರೆಲ್ಲರೂ ಬಲ್ಲರು. ಉತ್ತರ ಕಾಲದಲ್ಲಿ ನಾನು ಬರೆದ 'ಕಾಲ ನಟ' ಎಂಬ ಕವಿತೆಯಲ್ಲಿ–ಕಾರಂತರಿಗೆ ಆ ವಿಳಾಸ, ಅದರ ಮೊದಲ ಸಾಲುಗಳು ಪ್ರಿಯವೋ ಅಲ್ಲವೋ ಕಾಣೆ ಕಡೆಯ ಪಂಕ್ತಿಗಳಲ್ಲಿ ಬರುವ ತಂಗಿ ಆಕೆ ಎಂದು ನನ್ನ ನೆನಪಿನ ಕಾಣಿಕೆ ಸಲ್ಲಿಸುತ್ತಿದ್ದೇನೆ.

ಮನೆಯ ಮಕ್ಕಳಿಗೆಲ್ಲ ಒಂದೊಂದು ಕಲೆಯ ಆಸಕ್ತಿ, ಪಕ್ಷಪಾತ ಒಲವು ಉಂಟಾಗುವಂತೆ ಆ ಮನೆಯ ಜೀವನ. ಅವರ ಒಬ್ಬನೇ ಮಗ ಪ್ರಭಾಶಂಕರರಾವ್ Wireless Engineering ನಲ್ಲಿ ಪದವೀಧರನಾಗಿ Overseas Communications ನಲ್ಲಿ ಬೊಂಬಾಯಲ್ಲಿ ಮದರಾಸಲ್ಲಿ ಕೆಲಸ ಮಾಡಿದ್ದರೂ ಅಭಿರುಚಿಗಳಲ್ಲಿ ನಾಟ್ಯಕ್ಕೆ ಒಲಿದವರು. ನಾಟ್ಯದ ಹೆಜ್ಜೆಗಳನ್ನು ಆತ ಅಭ್ಯಾಸ ಮಾಡಿದ್ದಾನೆ. ಆತನು ಮದುವೆಯಾದ ಮಗು ಚಿತ್ರಕಲೆಯಲ್ಲಿ ಅಭಿರುಚಿ ಪರಿಣತಿ ಉಳ್ಳವರು. ಚಂದ್ರಭಾಗಾದೇವಿ, ಶಾಂತಾ, ಜಯವಂತಿ, ಯಶೋಧರಾ ಎಂಬ ಅವರ ನಾಲ್ಕು ಹೆಣ್ಣುಮಕ್ಕಳಲ್ಲಿ ಚಂದ್ರಭಾಗಾದೇವಿ ಬೆಂಗಳೂರಿನ ಸುಪ್ರಸಿದ್ಧ ನೃತ್ಯ ನಿಪುಣರೂ ನಾಟ್ಯಾಚಾರ್ಯರೂ ಆದ ಪ್ರೊ.ಯು.ಎಸ್. ಕೃಷ್ಣರಾಯರ ಪತ್ನಿ. ಅವರ

ಜೊತೆಗೆ ದೇಶವಿದೇಶಗಳಲ್ಲಿ ನರ್ತನ ಪ್ರಖ್ಯಾತಿ ಪಡೆದಿದ್ದಾರೆ. ತಮ್ಮ ಮನೆಯಲ್ಲಿ ನಾಟ್ಯ ಶಿಕ್ಷಣದ ಕಾರ್ಯಗಳಲ್ಲಿ ಪತಿಗೆ ನೆರವಾಗಿದ್ದಾರೆ. ಜೊತೆ ಪಾತ್ರವಹಿಸಿ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಎರಡನೆಯ ಮಗಳು ಶಾಂತ ಚಿತ್ರ ಕಲೆಯಲ್ಲಿ ವಿಶೇಷವಾದ ಆಸಕ್ತಿ ಇರುವವರು. ಜಯವಂತೀದೇವಿ ಹಾಡುಗಾರಿಕೆಯಲ್ಲಿ ನಿಪುಣತೆ ಪಡೆದವರು. ಎಚ್. ಎಂ. ವಿ. ಕಂಪೆನಿಗೆ ಅನೇಕ ಕನ್ನಡ ಭಾವಗೀತೆ ಗಳನ್ನು ಹಾಡಿರುವುದರ ಜೊತೆಗೆ 'ಭಾಗ್ಯದ ಲಕ್ಷ್ಮಿ ಬಾರಮ್ಮ', 'ಹುವ್ವ ತರುವರ ಮನೆಗೆ ಹುಲ್ಲು ತರುವ' ಮುಂತಾದ ಗೀತೆಗಳನ್ನು ಹಾಡಿ ಪ್ರಸಿದ್ಧರಾಗಿರುವವರು. ಯಶೋಧರ ಒಂದೆರಡು ಕಲೆಗಳಲ್ಲಿ ತುಂಬಾ ಪ್ರೀತಿ ಉಳ್ಳವರಾಗಿದ್ದರೂ ದೇಹದ ಅನಾರೋಗ್ಯ ದಿಂದಾಗಿ ಹೆಚ್ಚಾಗಿ ಹೊರಗೆ ಹೆಸರು ಪಡೆಯಲಾರದವಳು. ಆದರೆ ಅನೇಕ ಸಮಾಜ ಕ್ರಿಯೆಗಳಲ್ಲಿ ಸಂಸ್ಥೆಗಳಲ್ಲಿ ಭಾಗವಹಿಸಿರುವವರು. ಬೊಂಬಾಯಿ ಆಕಾಶವಾಣಿಗೆ ಕಿರುನಾಟಕಗಳನ್ನು ಬರೆದಿರುವವರು. ಮಾಸ್ತಿಯವರು 'ಯಶೋಧರಾ' ನಾಟಕ ವನ್ನು ಬರೆದ ವರ್ಷ ಆಕೆ ಹುಟ್ಟಿದ್ದಾದ್ದರಿಂದ ಆಕೆಗೆ "ಯಶೋಧರಾ" ಎಂದು ಹೆಸರಿಟ್ಟರು. ಸಾಹಿತ್ಯದ ಸಾಹಚರ್ಯ ಅವರ ಮನೆಯಲ್ಲಿ ಎಷ್ಟು ಹತ್ತಿರದ್ದು ಎಂಬುದನ್ನು ಇದು ತಿಳಿಸುತ್ತದೆ. ಹೀಗೆ ಸಂಗೀತ, ಸಾಹಿತ್ಯ, ಚಿತ್ರಕಲೆ, ನೃತ್ಯ, ನಾಟಕ ಇವಕ್ಕೆ ಮೊದಲಿಂದ ಒಲಿದ ಮನೆ ಪಡುಕೋಣೆಯವರದು.

ಸೀತಾದೇವಿಯವರು ರಷ್ಯನ್ ನಾಟಕಕಾರ ಆಂಟನ್ ಚೆಕೋವನ ನಾಟಕಗಳಲ್ಲಿ ಒಂದಾದ "ಅಂಕಲ್ ವಾನ್ಯ" ಎಂಬುದನ್ನು ಕನ್ನಡಿಸಿದ್ದಾರೆ. ಅದನ್ನು ಸುಮಾರು 1946ರಲ್ಲಿ ಮನೋಹರ ಗ್ರಂಥ ಮಾಲೆಯವರು ಪ್ರಕಟಿಸಿದರು. ರಷ್ಯನ್ ಹೆಸರು ಗಳಿಗೆ ಬದಲಿಗೆ "ವೇಣುಮಾವ" ಎಂಬ ಹೆಸರಲ್ಲಿ ಅಲ್ಪಸ್ವಲ್ಪ ಇಲ್ಲಿನ ಸನ್ನಿವೇಶಕ್ಕೆ ಹೊಂದುವಂತೆ ಸವರಿಸಿ ಪ್ರಕಟಿಸಿದರು. ಮೂಲ ನಾಟಕದಂತೆಯೇ ಈ ನಾಟಕವೂ ಚೆನ್ನಾಗಿದೆ. ಕಡೆ ಕಡೆಯ ದಿವಸಗಳಲ್ಲಿ ಅವರ ಮನಸ್ಸು ಭಕ್ತಿಯ ಕಡೆ, ಭಜನೆ ಮಹಾರಾಷ್ಟ್ರ ಕೊಂಕಣಿ ಮಂಡಲಿಗಳಲ್ಲಿ ನಡೆಯುತ್ತಿದ್ದ ಪೂಜೆ ಆರಾಧನೆಗಳ ಕಡೆಗೆ ತಿರುಗಿತು. ಅವರ ಮನೆಗಳಲ್ಲಿ ಗಾಯನಕ್ಕೆ ಭಕ್ತಿಗೆ ವಿಶೇಷ ಒಲವು. ಮನೆಯ ಮಕ್ಕಳು ಯಾವ ಸಂಸಾರಗಳಲ್ಲಿ ಹೇಗೆ ಜೀವನ ನಡೆಸಬೇಕಾಗಿದ್ದರೂ ಒಳ್ಳೆಯ ಗೃಹಿಣಿಯರಾಗಿ ಗೃಹಸ್ಥರಾಗಿ ನಡೆಯುವಂತೆ ತಯಾರು ಮಾಡಿ ನೋಡಿಕೊಂಡರು. ಈ 40-42 ವರ್ಷಗಳಲ್ಲಿ ನಾನು ಕಂಡಂತೆ ಆ ಮನೆಯವರ ಮನೋಭಾವ ವಿಶ್ವಾಸ ಒಂದೇ ಹದದಲ್ಲಿ, ಸ್ನಿಗ್ಧತೆಯಲ್ಲಿ ನಡೆದುಕೊಂಡು ಬಂದಿದೆ. ತಾಯಿ, ಅಜ್ಜಿ, ತಾತ, ಇವರ ಪೋಷಣೆಯಲ್ಲಿ, ಉದಾರ ಅಂತಃಕರಣದಲ್ಲಿ ಬಹುಮಟ್ಟಿನ ಸ್ವಾತಂತ್ರ್ಯ ವಿದ್ದರೂ ದೊಡ್ಡ ಆದರ್ಶಗಳಿಗೆ ಒಳಗುಮಾಡಿಕೊಂಡ ಸಂಸಾರಗಳಲ್ಲಿ ಜೀವನ ಎಷ್ಟು ಸುಖವಾಗಿ ನಡೆಯಬಹುದು, ಸುಂದರವಾಗಿ, ನೆಮ್ಮದಿಯಾಗಿ ಎಂಬುದಕ್ಕೆ ನಿದರ್ಶನ ವಾಗಿದ್ದಾರೆ.

ರಾಯರು ಕೆಮಿಸ್ಟ್ರಿ ಪಂಡಿತರು. ನನಗಿಂತ ನಾಲ್ಕು ವರ್ಷ ವಯಸ್ಸಿನಲ್ಲಿ ಹಿರಿಯರು. ಅವರು ಅವರ ತಂದೆಯ ಮೊದಲ ಹೆಂಡತಿಯ ಒಬ್ಬನೇ ಮಗನಾಗಿ ಹುಟ್ಟಿದರು. ಮಗು ಹುಟ್ಟಿದ ಒಂದು-ಒಂದೂವರೆ ವರ್ಷದಲ್ಲಿಯೇ ತಾಯಿ ತೀರಿಕೊಂಡು, ಮಂಗಳೂರಲ್ಲಿ ಸೋದರ ಮಾವನ ಮನೆಯಲ್ಲಿ ಬೆಳೆದರಂತೆ. ತಂದೆಯನ್ನು ಕಂಡರೆ ಅತೀವ ಪ್ರೀತಿ ಗೌರವಗಳಿದ್ದರೂ ಅವರ ಮಲತಾಯಿ, ಮಲಸೋದರ ಸೋದರಿಯರ ಜೊತೆ ಬೆಳೆಯುವ ಅವಕಾಶ ದೊರೆಯಲಿಲ್ಲ. ಆ ತಮ್ಮಂದಿರೂ ಅವರನ್ನು ಕಂಡರೆ ವಿಶ್ವಾಸದಿಂದ ಇದ್ದಾರೆ. ತಂದೆಯ ತಮ್ಮಂದಿರು ಕಾಂಚನ್‌ಗಡ್ ಎಂಬ ಕಾಸರಗೋಡಿನ ಹತ್ತಿರ ಒಂದು ಕಡೆ ಶ್ರೀ ಸ್ವಾಮಿ ರಾಮದಾಸರಾಗಿ ಒಂದು ಆಶ್ರಮವನ್ನು ಸ್ಥಾಪಿಸಿ, ಸಾಧು ಸನ್ಯಾಸಿಗಳಿಗಾಗಿ ಬದುಕಿದವರು. ರಮಾನಂದರಾಯರು, ಮಂಗಳೂರು ಗೌರ್ನಮೆಂಟ್ ಕಾಲೇಜುಗಳಲ್ಲಿಯೂ ಮದರಾಸು ಪ್ರೆಸಿಡೆನ್ಸಿ ಕಾಲೇಜಲ್ಲಿಯೂ ಓದಿ ಎಂ. ಎ. ಪಾಸ್ ಮಾಡಿದರು. ಆ ಕಾಲದಲ್ಲಿ ಸೈನ್ಸ್ ಓದಿದವರಿಗೆ ಎ. ಎಸ್. ಸಿ. ಪದವಿಗಳಿರಲಿಲ್ಲ. ಅವರು ವಿಶ್ವವಿದ್ಯಾನಿಲಯದ ಸಂಸ್ಥೆಗಳಲ್ಲಿ ಕೆಲಸಮಾಡಿ ರಾಜಮಹೇಂದ್ರಿ, ಪಾಲ್‌ಘಾಟ್, ಮಂಗಳೂರು ಕಾಲೇಜುಗಳಲ್ಲಿ ಕೆಮಿಸ್ಟ್ರಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಮದರಾಸ್ ಪ್ರೆಸಿಡೆನ್ಸಿ ಕಾಲೇಜಲ್ಲಿ ಕೆಮಿಸ್ಟ್ರಿ ಪ್ರಾಚಾರ್ಯರಾಗಿ, ಬಳಿಕ ಒಂದು ಮುಸ್ಲಿಂ ಕಾಲೇಜಲ್ಲಿ ಪ್ರಿನ್ಸಿಪಾಲರಾಗಿ ಕೆಲಸಮಾಡಿ ನಿವೃತ್ತರಾದರು. ತರುವಾಯ ಬಳ್ಳಾರಿಯಲ್ಲಿ ಖಾಸಗಿ ಕಾಲೇಜೊಂದು ನಿರ್ಮಾಣವಾದಾಗ ಅದರ ಪ್ರಿನ್ಸಿಪಾಲರಾಗಿಯೂ ಕೆಲಸ ಮಾಡಿದರು. ಅವರಿಗೆ ಇಂಗ್ಲಿಸ್-ಕನ್ನಡ ಸಾಹಿತ್ಯಗಳಲ್ಲಿ ತುಂಬಾ ವಿಶ್ವಾಸ. ಮುಖಚರ್ಯೆಯಲ್ಲಾಗಲಿ, ಮಾತಿನಲ್ಲಾಗಲಿ ಹೆಚ್ಚು ಅನುಮಾನಿಸಲಾಗದಂತೆ ಒಂದು ನಗೆ ಸಾಹಿತ್ಯದಲ್ಲಿ ಅವರಿಗೆ ಪ್ರೀತಿ ಹೆಚ್ಚು. ಅವರು ಮನೆ ಮಾಡಿಕೊಂಡ ಕಡೆ ದೊಡ್ಡ ಮನೆ ಮಾಡುವರ. ಅಲ್ಲಿಗೆ ಹತ್ತಾರ ಜನ ಬರುವರು. ಮಂಗಳೂರು-ಹಂಪನಕಟ್ಟೆಯಲ್ಲಿನ ಅವರಿದ್ದ ಮನೆಯಲ್ಲಿ ಎಷ್ಟೋ ಬಗೆಯ ನಟರು, ನೃತ್ಯಾಭಿಜ್ಞರು, ಸಂಗೀತಾಭಿಮಾನಿಗಳು, ಸಂಗೀತಗಾರರು ಇರುತ್ತಿದ್ದರು; ಅವರಲ್ಲಿಗೆ ಬಂದು ಹೋಗುತ್ತಿದ್ದರು ಎಂಬುದನ್ನು ಯಾರೂ ಕಾಣಬಹುದಿತ್ತು. ಇಂಗ್ಲಿಷ್ ನಾಟಕಗಳನ್ನಾಗಲಿ, ಕನ್ನಡ ನಾಟಕವನ್ನಾಗಲಿ, ಒಂದೇ ಪ್ರೀತಿಯಿಂದ ಓದಿ ಸಂತೋಷಪಟ್ಟು ಅನೇಕ ನಾಟಕಗಳನ್ನು-ಉದಾ: ಆಸ್ಕರ್ ವೈಲ್ಡರ On the Importance of Being Earnest ಅನ್ನು "ಷಾ" ಅವರ ನಾಟಕಗಳನ್ನು ಆಡಿಸಿ ರಂಗ ಪ್ರವೇಶ ಮಾಡಿಸಿದ್ದಾರೆ. ತಾವೇ ಪಾತ್ರವಹಿಸಿ ಅಭಿನಯಿಸಿದ್ದಾರೆ. ಕೈಲಾಸಂ ಅವರ ನಾಲ್ಕಾರು ನಾಟಕಗಳನ್ನು ಪ್ರದರ್ಶಿಸಿದ್ದಾರೆ. ನಿರ್ದೇಶಿಸಿದ್ದಾರೆ. ಬೆಂಗಳೂರಲ್ಲಿ ಕೆ. ವಿ. ಅಯ್ಯರ್, ರಾಜರತ್ನಂ, ಶಿವರಾಂ ಇಂಥವರು, ಗುಂಡಪ್ಪನವರು, ಮಾಸ್ತಿಯವರು ಅವರಿಗೂ ಅವರ ಮನೆಯವರಿಗೂ ತುಂಬಾ ಬೇಕಾದವರು. ಒಮ್ಮೆ ಕನ್ನಡದಲ್ಲಿ ಏನಾದರೂ ಬರೆಯಬೇಕೆಂದು ಅವರನ್ನು ಸ್ನೇಹಿತರು ಒತ್ತಾಯ ಮಾಡಿದಾಗ ಕೆಲವು ಪ್ರಬಂಧ

ಗಳನ್ನು ಬರೆದರು. ಒಂದೆರಡು ನಾಟಕಗಳನ್ನು ಪ್ರಕಟಿಸಿದರು. "ಸನ್ನ ಭಾವ", "ಛತ್ರಿ" ಮುಂತಾದ ಹರಟೆಗಳು ಮನೋಜ್ಞವಾಗಿವೆ. "ಹುಚ್ಚು ಬೆಳದಿಂಗಳಿನ ಹೂಬಾಣಗಳು" ಎಂಬುದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಅದರಲ್ಲಿ ಸ್ಟೀಫನ್ ಲೀಕಾಕ್ ಬರೆದ "Moonbeams from the Larger Lunacy" ಎಂಬ ಬರವಣಿಗೆಯ ಪ್ರಭಾವವನ್ನು ಕಾಣಬಹುದಾದರೂ ಕನ್ನಡದಲ್ಲಿ ಆ ಬಗೆಯ ಬರವಣಿಗೆ ವಿಶಿಷ್ಟವಾದ್ದು.

ಏಳೆಂಟು ವರ್ಷಗಳ ಹಿಂದೆ ಒಂದು ಸಂದರ್ಭದಲ್ಲಿ ಮಾತು ಬಂದು, "ನಿಮಗೆ ಹೇಗಿದ್ದರೂ ಉದ್ಯೋಗದಿಂದ ನಿವೃತ್ತಿ, ವಿಶ್ರಾಂತಿ ದೊರೆತಿದೆ. ನಾಟಕದಲ್ಲಿ ನಿಮಗೆ ಪ್ರೀತಿ ಹೆಚ್ಚು. ಶ್ರೀಮತಿಯವರು "ಅಂಕಲ್ ವಾನ್ಯ" ಭಾಷಾಂತರ ಮಾಡಿದರು. ಚೆಕೋವ್ ಬರೆದ ಇನ್ನು ಮೂರೊ ನಾಲ್ಕೊ ನಾಟಕಗಳನ್ನು ನೀವು ಮಾಡಿದ್ದರೆ ಒಂದು ಕೆಲಸ ಪೂರ್ತಿ ಆಗುತ್ತಿತ್ತು" ಎಂದು ಹೇಳಿದೆ. ಏನೇನೊ ನೆಪಗಳನ್ನು ಹೇಳಿ ನನಗೆ ಸಾಧ್ಯವಾಗುತ್ತದೆಯೊ ಇಲ್ಲವೊ ಎಂದಿದ್ದವರು ಚೆಕೋವನ ಮೂರು ನಾಟಕವನ್ನು ಭಾಷಾಂತರ ಮಾಡಿದರು. ಕಡಲಕಾಗೆ, ಚೆರ್ರಿ ಹಣ್ಣಿನ ತೋಟ, ಮೂವರು ಅಕ್ಕತಂಗಿಯರು ಎಂಬವು ಆ ನಾಟಕಗಳು. ರಷ್ಯನ್ ನಾಟಕ ಕರ್ತೃಗಳಲ್ಲಿ ತನ್ನದೇ ಆದ ಒಂದು ವಿಶೇಷ ನಾಟಕ ತಂತ್ರವನ್ನು ಪ್ರಪಂಚವನ್ನು ನಿರ್ಮಾಣ ಮಾಡಿದವನು ಚೆಕೋವ್. ಯೂರೋಪಿನಲ್ಲೆಲ್ಲ ಅವನ ಕಲೆಗಾರಿಕೆಗೆ ಪ್ರೀತಿ ಗೌರವ ಇದೆ. ಅಲ್ಲಿನ ನಯ, ಸೂಕ್ಷ್ಮ, ಅಂತರಂಗದ ಪ್ರಕಾಶನ, ನಗೆ, ಜೀವನ ವಿಲಾಸ ವಿಮರ್ಶೆ ಯೂರೋಪಿನ ಬೇರೆ ನಾಟಕಕಾರರಲ್ಲಿ ಕಾಣದ್ದು. ಒಂದೊಂದು ಮನೆಗೆ ಸಂಬಂಧಿಸಿದಂತೆ ಸಮಷ್ಟಿ ಚಿತ್ರಗಳನ್ನೂ ಜೀವನ ವಿಲಾಸವನ್ನೂ ಆಪ್ತವಾಗಿ ಕಾಣಬಲ್ಲ ಕುಶಲತೆ ಆತನದು. ಯಾವುದನ್ನೂ ಅತಿಮಾಡಿ ಗಟ್ಟಿದನಿಯಲ್ಲಿ ಹೇಳದೆ, ಅತಿಯಾಗಿ ಬಣ್ಣ ಹಚ್ಚದೆ ದೊಡ್ಡ ಗಂಟಲ ಕೂಗು ಕೇಳಿಸದೆ, ಹೊಕ್ಕು ನೋಡಿದಷ್ಟು ಹೃದ್ಭಾವಗಳ ನಡವಳಿಕೆ ಹೆಚ್ಚು ಸೂಕ್ಷ್ಮವಾಗಿ ಮುಂದಟ್ಟಾಗುವಂತೆ ಬರೆವ ಚಾತುರ್ಯ ಚೆಕೋವನದು. ಬರೆಯುವವರು ಕಷ್ಟಪಟ್ಟು ಬರೆಯಬಹುದು. ಅದನ್ನು ಪ್ರಕಟಿಸುವ ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ ದುರ್ಲಭ. ರಷ್ಯ-ಇಂಡಿಯಾ ಸಂಬಂಧಗಳ ಕೆಲವು ಜನ, ಸಂಸ್ಥೆಗಳವರು ಇವುಗಳ ಪ್ರಕಟನೆಗೆ ನೆರವಾಗುವರೆಂಬ ಭರವಸೆ ಇತ್ತು. ನಮ್ಮ ನಾಡಿನಲ್ಲಿ ಸಾಹಿತ್ಯ ಪ್ರಕಾಶಕರ ಸಂಖ್ಯೆ ಕಡಮೆ. ಅದರಲ್ಲೂ ಪದ್ಯ, ನಾಟಕ, ವಿಮರ್ಶೆಗಳನ್ನು ಪ್ರಕಾಶಿಸುವವರ ಸಂಖ್ಯೆ ಇನ್ನೂ ವಿರಳ. ಎಂಟು-ಒಂಬತ್ತು ವರ್ಷಗಳಿಂದ ಈ ಮೂರರಲ್ಲಿ ಒಂದೂ ಹೊರಗೆ ಬರುವ ಆಸೆ ತೋರಲಿಲ್ಲ. ಕಡೆಗೆ ಮೈಸೂರಿನ 'ಗೀತಾ ಪುಸ್ತಕಾಲಯ'ದ ಗೆಳೆಯರಾದ ಶ್ರೀ ಸತ್ಯನಾರಾಯಣರಾಯರು ದೊಡ್ಡ ಮನಸ್ಸು ಮಾಡಲಾಗಿ 'ಚೆರ್ರಿ ಹಣ್ಣಿನ ತೋಟ' ಎಂಬ ಚೆಕೋವನ ಅತ್ಯಂತ ಪ್ರಖ್ಯಾತ ನಾಟಕವಾದರೂ ಹೊರಕ್ಕೆ ಬಂದಿದೆ.

ನನಗೆ ಅನೇಕ ವೇಳೆ ಅನ್ನಿಸಿದೆ: ಕನ್ನಡದಲ್ಲಿ ಸುಮಾರು ಈ ಶತಮಾನದ ಆರಂಭದ ಕಾಲದವರೆಗೂ ಸ್ವತಂತ್ರವಾದ ನಾಟಕಗಳಿರಲಿಲ್ಲ. ಈ ಶತಕದ 20-25 ವರ್ಷ ಕಾಲಕಳೆದ ಮೇಲೆ ಕೆಲವು ಬಂದವು. ಈಚೆಗೆ ನಾಲ್ಕಾರು ಮಂದಿ ನಾಡ ಮೇಲೆ ನಾಟಕ ಕಲೆಯ ವಿಶೇಷಗಳನ್ನು ಪ್ರಚಾರಮಾಡಿದ್ದಾರೆ. ಹೊಸ ಕಾಲದ ರೀತಿಗಳನ್ನೂ, ಸಜ್ಜುಗಳನ್ನೂ ಬೆರಗುಗಾಣಿಸುತ್ತ ನಿರ್ದೇಶನ ಪ್ರದರ್ಶನ ನಡೆಯುತ್ತಿದೆ. ಜನಕ್ಕೆ ನಾಟಕದಲ್ಲಿ ಅಭಿರುಚಿ ಹೆಚ್ಚಾಗುತ್ತಿದೆ. ಇಬ್ಸೆನ್ ಬಗೆಯ ಮೂರು ನಾಲ್ಕು ನಾಟಕಗಳು ಕನ್ನಡಕ್ಕೆ ಬಂದಿವೆ. ಮೇಟರ್ ಲಿಂಕನದು ಒಂದು, "ಷಾ"ದು ಎರಡು. ಪ್ರೀಸ್ಟ್ಲಿ, ಗಾಲ್ಸ್‌ವರ್ದಿ ಈಚಿನವರವು, ಪರ್ಯಾಯವಾಗಿ ಮೂರು ನಾಲ್ಕು ಬಂದಿವೆ. ಸ್ವಲ್ಪ ಹೆಚ್ಚು ಕಡಿಮೆ ಇಬ್ಸೆನ್ ತರುವಾಯ ಎಂದರೆ, ಈ ಶತಮಾನದಲ್ಲಿ ಇಂಗ್ಲಿಷ್, ಅಮೆರಿಕನ್, ಯೂರೋಪಿಯನ್ ಜನವರ್ಗಗಳಲಿ ಪ್ರಖ್ಯಾತಿಗೊಂಡಿರುವ ಇಪ್ಪತ್ತು ನೂರವತ್ತು ಮಂದಿ ನಾಟಕಕಾರರ ಒಂದೊ ಎರಡೊ ಪ್ರಾತಿನಿಧಿಕ ನಾಟಕಗಳನ್ನು ಆಯ್ದು ಕನ್ನಡಿಸಿ ಆಡಿದರೆ ನಮ್ಮ ರಂಗಮಂಟಪಕ್ಕೆ ವಿವಿಧ ನಾಟ್ಯಾನುಭವ ಬಂದೀತು. ಎಂಥೆಂಥ ವಿಷಯಗಳನ್ನು ಅವರು ಆಯುತ್ತಾರೆ? ರಚನಾರೀತಿ ವಿಶೇಷ ಯಾವುದು? ಯಾವ ಗುರಿಗಳನ್ನು ಸಾಧಿಸಲು ತೊಡಗಿದ್ದಾರೆ?-ಎಂಬುದು ತಿಳಿಯು ತ್ತದೆ. ಇವೆಲ್ಲವೂ ರಂಗದ ಮೇಲೆ ಕೀರ್ತಿ ಪಡೆದವಾದ್ದರಿಂದ ರಂಗನಿರ್ಮಾಣ, ಪ್ರದರ್ಶನ ಕೌಶಲ, ನಿರ್ದೇಶನ, ಬೆಳಕು ಬಣ್ಣ, ವೇಷಗಳ ಸಜ್ಜು ಇವಕ್ಕೆ ಸಂಬಂಧಿಸಿ ದಂತೆ ತಿಳಿವಳಿಕೆ ದೊರಕುವುವಾದ್ದರಿಂದ ನಮ್ಮಲ್ಲಿ ಇವುಗಳ ಪ್ರದರ್ಶನ ಕಷ್ಟವಾಗ ಬಾರದು. ಭಾರತದ ಎಲ್ಲ ಭಾಷೆಗಳಲ್ಲಿಯೂ ಏಕೊ ಏನೊ ನಾಟಕದ ಭಾಗ ಅಷ್ಟೇನೂ ಹೇಳಿಕೊಳ್ಳುವಂಥದ್ದಲ್ಲ. ಮರಾಠಿ, ಉರ್ದು, ಬಂಗಾಳಿ ಭಾಷೆಗಳಲ್ಲಿ ಕೆಲವು ಪ್ರಸಿದ್ಧಿ ಪಡೆದಿವೆ. ಅವುಗಳ ಪ್ರಪಂಚವೂ ಅಷ್ಟೇನೂ ಮೌಲಿಕ ಸತ್ಯದವಲ್ಲ ನಾಟಕವೇ ಮಾಡಿ ರೂಪಿಸಬೇಕಾದ ನಮ್ಮ ಜನಜೀವನದ ಚಿತ್ರಣ ಸರ್ವ ಸಮರ್ಪಕ ವಾಗುವಂತೆ ನಡೆದಿಲ್ಲ. ಈ ಜನಕ್ಕೆ ನಾಟಕ ನಿರ್ಮಾಣಶಕ್ತಿ ಬೆಳೆದು ಬರುವಂತೆ ಈ ನಾಟಕದ ಯತ್ನ ನೆರವಾದೀತು. ಈಚೆಗೆ ಬಂಗಾಳಿ, ಮರಾಠಿ, ಉರ್ದು, ಗುಜರಾತಿ ಗಳಿಂದ ಭಾಷಾಂತರವಾಗಿ ನಾಟಕಗಳು ಬಂದಿವೆ. ನಮ್ಮಲ್ಲಿಯೂ ಹೊಸ ಬಗೆಯ ಕಥಾ ಗರ್ಭ, ರಂಗ ತಂತ್ರ, ಕಲ್ಪನಾ ವಿಲಾಸ, ಸಂಕೇತವುಳ್ಳ ನಾಟಕಗಳು ಬರುತ್ತಿವೆ. ಚಾಪೆಕ್, ಸಾರ್ತ್ರೆ, ಪಿರಂಡೆಲ್ಲೋ, ಇವೊನೆಸ್ಕೊ, ಬ್ರೆಕ್ಟ್ ಮುಂತಾದ ವರನ್ನು ಆದರ್ಶವಾಗಿಟ್ಟುಕೊಂಡು ನಾಟಕಗಳು ಬರುತ್ತಿರುವುದು, ವಿಲಾಸೀ ನಾಟಕ ಸಭೆಗಳು ಅವನ್ನು ಆಡಿ, ನಾಟಕಾಭಿನಯವನ್ನು ಜನಪ್ರಿಯವನ್ನಾಗಿ ಮಾಡುತ್ತಿರು ವುದು ತುಂಬಾ ಉತ್ಸಾಹಕ ಲಕ್ಷಣ. ನಮ್ಮ ಜನತೆಯ ಜಾಯಮಾನ, ಜೀವ ಲಕ್ಷಣಗಳನ್ನು ಕಾಣಿಸುತ್ತ ದಿನಜೀವನದ ಆಳದಲ್ಲಿನ ಸಂಗತಿಗಳನ್ನು ಪ್ರತಿನಿಧಿಸಿ ಎಲ್ಲ ವರ್ಗದ ಎಲ್ಲ ಮಟ್ಟದ ಜನರಿಗೂ ಆಹ್ಲಾದ ತರುವ ಮೂರು ನಾಲ್ಕು ಗಂಟೆಗಳ

ಕಾಲ ನಡೆಯುವ ನಾಟಕಗಳು ಬೇಗ ಹುಟ್ಟಿಬರಲಿ ಎನ್ನಿಸುತ್ತದೆ. ಭಾಷಾಂತರಿಸುವವರು ಭಾಷಾಂತರಿಸಬೇಕು ; ಪ್ರಕಟನಕಾರರು ಪ್ರಕಟಿಸಬೇಕು ; ಆಡುವವರು ಪ್ರೀತಿಯಿಂದ ಆಡಬೇಕು. ಸ್ವಂತ ಪ್ರತಿಭೆಗಳ ಆಳದಿಂದ, ಪ್ರತಿಭೆಯ ಸಾಹಸಗಳಿಂದ ನಿರ್ಮಾಣ ಮಾಡಬಲ್ಲವರು ಮಾಡಲಿ. ಲೋಕವೆಲ್ಲ, ಇಂದಿನ ಜೀವನವೆಲ್ಲ ಅವರ ಕಲ್ಪನೆಗೆ ತೆರೆದಿದೆ. ನಾನಾ ದೇಶಗಳವರು ಈ ಕೃತಿ ಕಲೆ ಪ್ರಕಾರಗಳನ್ನು ಲೋಕದಲ್ಲಿ ಹೇಗೆ ಮಾಡಿ ಸಾಹಿತ್ಯವನ್ನು ಬೆಳಗಿದ್ದಾರೆ ಎಂಬುದು ಅರಿವು ನಮ್ಮವರ ಮನಸ್ಸನ್ನು ತೆರೆಯಬಲ್ಲದು, ವಿಶಾಲಗೊಳಿಸಬಲ್ಲದು. ಅಂಥ ನಾಟಕದ ಪ್ರಕಾಶವಾಗಿಯೇ ನಮ್ಮ ಸಾಹಿತ್ಯದಲ್ಲಿ ರಸವಿಕಾಸವಾಗಬೇಕು. ಅದರ ಸಂತೋಷ ಸಾಹಿತ್ಯದ ಬೇರಾವ ಪ್ರಕಾರಕ್ಕೂ ಬರಲಾರದು.

ಜೊತೆಗೆ, ಸಾಹಿತ್ಯದ ಅಂಗವಾಗಿಯೂ ಪ್ರಯೋಗದ ಅಂಗವಾಗಿಯೂ ನಾಟಕವನ್ನು ಕುರಿತ ವಿಮರ್ಶೆ ನಮ್ಮ ನಾಡಿನಲ್ಲಿ ಬೆಳೆಯಬೇಕಾಗಿದೆ. ವಿದೇಶಗಳಲ್ಲಿ ಈ ಸಂಪತ್ತು ಅತಿಶಯವಾಗಿ ಪಾಣಿಗೊಂಡಿದೆ. ಹೊಸ ಕಾಲದ ನಾಟಕಕ್ಕೆ ಸಂಬಂಧಿಸಿದ ಲಕ್ಷಣ ನಿರೂಪಣೆ, ತಂತ್ರ ಸ್ವರೂಪ ಮುಂತಾದುವುಗಳನ್ನು ನಮ್ಮ ಜನ ಅರಿಯಬೇಕಾದರೆ ಲಕ್ಷ್ಯಗಳಾಗಿ ಒಂದು ನೂರು ನಾಟಕಗಳು ಬೇಕು. ಸಾವಿರ ವರ್ಷ ಜೀವಂತವಾಗಿ ಬೆಳೆದ ಸಂಸ್ಕೃತ ಸಾಹಿತ್ಯದಲ್ಲಿಯೇ ತಲೆಮಣಿಗಳೆಂದು ಎಣಿಕೆ ಮಾಡಬಲ್ಲ ನಾಟಕಗಳು ಇಪ್ಪತ್ತಕ್ಕೆ ಹೆಚ್ಚಾಗಿಲ್ಲ. ಕಾಳಿದಾಸನವು ಮೂರು ; ಭವಭೂತಿಯವು ಮೂರು, ಶ್ರೀ ಹರ್ಷನವು ಮೂರು ; ಭಾಸನವು ಬಹುಶಃ ನಾಲ್ಕು-ಐದು ; ವೇಣೀ ಸಂಹಾರ, ಮುದ್ರಾರಾಕ್ಷಸ, ಮೃಚ್ಛಕಟಿಕ, ಜಾನಕೀಹರಣ, ಕೌಮುದೀ ಮಹೋತ್ಸವ, ವಿಸ್ವ ಗುಣಾದರ್ಶಾದಿಗಳನ್ನು ಸೇರಿಸೋಣವೆ? ಇದನ್ನು ಬಿಟ್ಟರೆ ನಮ್ಮ ನಾಟಕ ಸಂಖ್ಯೆ ಸುಮಾರು ಮುಗಿದಂತೆ ಆಯಿತು. 700-800 ಸಂಖ್ಯೆಯ ನಾಟಕಗಳನ್ನು ಪಟ್ಟಿಗಳಲ್ಲಿ ಕಾಣಬಹುದು ; ಆದರೆ ಲೆಕ್ಕಕ್ಕೆ ಬರುವ ಸಂಖ್ಯೆಯೆಲ್ಲ ಇಷ್ಟೇ. ಆಟಕ್ಕೆ, ಸಂತೋಷಕ್ಕೆ ಸ್ವೀಕಾರಕ್ಕೆ ಒದಗದಿರುವವೇ ಹೆಚ್ಚು. ಭರತ ಖಂಡದ ನಾಟಕ ನಿರ್ಮಾಣದ ಶಕ್ತಿಗೇ ಯಾವುದೊ ಅಂಶ ಊನ. ಸ್ವತಂತ್ರವಾಗಿ ಬರೆಯುವವರ ಸಾಹಸದ ಮಾರ್ನುಡಿ ಆದರೂ ಭಾಷಾಂತರ ಮಾಡಬಲ್ಲ ಶಕ್ತಿ, ಪ್ರೀತಿ, ಭಕ್ತಿ ಇರುವ ಜನ ಭಾಷಾಂತರದ ಕಾರ್ಯವನ್ನು ಶ್ರದ್ಧೆಯಿಂದ ಮಾಡಬಹುದಲ್ಲವೆ? The more the merrier ಎನ್ನುವುದು ಜನದ ಗೋಷ್ಠಿಗೆ ಸಂಬಂಧಿಸಿದ್ದು ಮಾತ್ರವೇ ಅಲ್ಲ; ಇಂಥ ಪ್ರಕರಣಗಳಿಗೂ ಹೊಂದುವಂಥ ಮಾತು : ಭೂತಾಯಿಗೆ ವಸುಂಧರಾ ಎಂಬಂತೆ. ಈ ಕಲೆ ವಸುಂಧರೆ ಆಗಬಹುದು. ರಾಯರು ಅವರ ಪ್ರೀತಿಯ ಇನ್ನು ಕೆಲವು ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲಿ. "ಸರ್ವಂ ಕಾಲಂ ಅಪೇಕ್ಷತೆ" ಎನ್ನುತ್ತಾರೆ. ಆ ಕಾಲ ಬಂದಾಗ ಪ್ರಕಟವಾಗಲಿ. ರಾಯರ ಶಕ್ತಿ ಉತ್ಸಾಹಗಳು ಇಂದೂ ಹಿಂದಿನಂತೆಯೇ ಇವೆ. ಮುಂದಿನ ವರ್ಷಗಳಲ್ಲಿ, ಈವರೆಗಿನ

ವರಂತೆ ಪ್ರೀತಿ ವಿಶ್ವಾಸ ಭಕ್ತಿಗಳಿಂದ ಹೊರದೇಶಗಳ ನಾಟಕಗಳನ್ನೂ ಅವುಗಳ ಹೃದಯವನ್ನು ಹೆಚ್ಚು ಭಾಷಾಂತರ ಮಾಡಬಲ್ಲವರ ಸಂಖ್ಯೆ ಕಡಿಮೆಯಾದೀತೆಂಬ ಭಯದ ಮುಂಗಾಣ್ಕೆಗಳಿಗೆ ಈಡಾಗದಿರಲಿ.

ಯೋಗ ಕ್ಷೇಮ ಎಂಬ ಮಾತು ನನ್ನ ಜನಜೀವನದಲ್ಲಿ ರೂಢವಾದದ್ದು. ಉತ್ತರ ಭಾಗದ ಮಾತು ಇರವು; ಇರುವುದೆಲ್ಲ ಸುಖವಾಗಿ ನೆಮ್ಮದಿಯಾಗಿದೆ ಎಂಬುದು ಕ್ಷೇಮದ ಭಾಗ. ಹೊಸದಾಗಿ ಬರುವುದು ಯೋಗಭಾಗ. ಹೊರಗಿಂದ ಹೊಸತಾಗಿ ಬಂದುದೂ ಭಾಗ್ಯವೇ. ನಾಡಿನ ಸಾರಸ್ವತ ಭೋಗ ಭಾಗ್ಯ ಮುಂದಿನ ಕಾಲದಲ್ಲಿ ಇತೋಪ್ಯತಿಶಯವಾಗಿ ಬೆಳೆಯುವಂತಾಗಲಿ.

ದಕ್ಷಿಣ ಕನ್ನಡಿಗರ ಸಂಘ, ಬೆಂಗಳೂರು **ರಾಧಾಕೃಷ್ಣ ಕಲ್ಯಾಣಪುರ್**

197 ನೇ ಇಸವಿ ಇರಬೇಕು. ಸೂರ್ಯನಾರಾಯಣ ಚಡಗರ ಜೊತೆ ಮಲ್ಲೇಶ್ವರದಲ್ಲಿರುವ ಆನಂದಾಶ್ರಮಕ್ಕೆ ಹ ರಮಾನಂದರಾಯರನ್ನು ನೋಡುವ ಭಾಗ್ಯ ನನಗೆ ಲಭಿಸಿತು. ಚಡಗರು ಪ್ರಕಟಿಸಬೇಕೆಂದಿದ್ದ "ಸುಹಾಸ" ಗ್ರಂಥಕ್ಕೆ ಅವರ ಹೂ ಬಾಣಗಳು ಕೃತಿಯ ಒಂದು ಲೇಖನ ಅಳವಡಿಸಲು ಅನುಮತಿ ಕೇಳಲು ಹೋದ ನಮಗೆ, ಅವರು ತೋರಿದ ಪ್ರೀತಿ ವಿಶ್ವಾಸ ಇಂದಿಗೂ ಮನಸ್ಸಿನಲ್ಲಿದೆ. "ಸುಹಾಸ ಬೃಹತ್ ಗ್ರಂಥ ಪ್ರಕಟಣೆ. ದೊಡ್ಡ ಸಾಹಸ. ಬೇಕಾದ ಲೇಖನವನ್ನು ಉಪಯೋಗಿಸಿಕೊಳ್ಳಿರಿ. ಇಂತಹ ಸಂಕಲನದಲ್ಲಿ ನನ್ನ ಲೇಖನವಿದ್ದರೆ ನನಗೆ ಪ್ರೋತ್ಸಾಹಸಿಕ್ಕಿದಂತೆ. ನಾವು ಪ್ರೋತ್ಸಾಹಿಸಿದರೆ ಮಾತ್ರ ನಿಮ್ಮ ಉತ್ಸಾಹ ಹೆಚ್ಚುವುದಲ್ಲವೆ? ದೇವರು ಒಳ್ಳೆಯದನ್ನು ಮಾಡಲಿ" ಎಂದ ಹೇಳಿದ ಅವರ ಮಾತನ್ನು ಎಂದೂ ಮರೆಯಲಾರೆ. ಅವರೀಗ ಇಲ್ಲ. ಆದರೆ ಅವರು ನನ್ನ ಹೃದಯದಲ್ಲಿದ್ದಾರೆ. ದಕ್ಷಿಣ ಕನ್ನಡಿಗರ ಸಂಘದ ಕಾರ್ಯದರ್ಶಿಯಾಗಿ ಸಂಘದ ಎಲ್ಲಾ ಸದಸ್ಯರ ಪರವಾಗಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯ ಲಿ ಎಂದು ಹಾರೈಸುತ್ತೇನೆ.

ಶ್ರೀಪತಿ ರಾವ್ ಪಲಿಮಾರ್ಕಾರ್, ಉಡುಪಿ

ಹುಚ್ಚು ಬೆಳದಿಂಗಳಿನ ಹೂಬಾಣಗಳು' ಎಂಬ ಹಾಸ್ಯರಸಾಯನವನ್ನು ಕನ್ನಡಿಗರಿಗೆ ಉಣಿಸಿ ಶಿಕ್ಷಣ ಕ್ಷೇತ್ರದಲ್ಲಿ ಹಲಕಾಲ ಸೇವೆ ಸಲ್ಲಿಸಿ ದಿವಂಗತರಾದ ಪಡುಕೋಣೆ ರಮಾನಂದರಿಗೆ "ಮಲ್ಲಿಗೆ" ಮೊದಲ ಪುಟದಲ್ಲೇ 'ಶ್ರದ್ಧಾಂಜಲಿ" ಅರ್ಪಿಸಿರುವುದು ತುಂಬ ಸೂಕ್ತವಾದುದು. ಅವರೊಬ್ಬ ಅಜಾತಶತ್ರು. ರಸಾಯನಶಾಸ್ತ್ರದ ಉಪನ್ಯಾಸಕರಾಗಿದ್ದರೂ ಕಲಾಕ್ಷೇತ್ರಕ್ಕೆ ಅವರಿಂದ ಸಂದ ಸೇವೆ ಅಪಾರ.

ಪ. ರಮಾನಂದರ ಆತಿಥ್ಯದಲ್ಲಿ ನನ್ನ ಸಾಹಿತ್ಯ —

ಜಿ. ಪಿ. ರಾಜರತ್ನಂ

ಮೂವತ್ತು ಮೂವತ್ತೈದು ಪಾಲೀ ಸೂತ್ರಗಳನ್ನು ಅನುವಾದ ಮಾಡಿಯಾಗಿತ್ತು. ಮನಸ್ಸು ಹುಚ್ಚಾಬಟ್ಟೆ ಹೋಗದಂತೆ ತಡೆಗಟ್ಟುವುದಕ್ಕೂ, ರಾತ್ರಿ ಚೆನ್ನಾಗಿ ನಿದ್ದೆ ಪಡೆಯುವುದಕ್ಕೂ ಒಂದು ದಾರಿ ಹುಡುಕಿದ್ದಾಯ್ತು. ಇನ್ನು ಪ್ರಕಟಣೆಯ ವಿಷಯ. "ಶಾಕ್ಯ ಸಾಹಿತ್ಯ ಮಂಟಪ" ಪ್ರಕಟಣ ಮಂದಿರವನ್ನು ಪ್ರಾರಂಭಿಸಿದ್ದಾಯ್ತು. ಮನೆಯಲ್ಲಿ ಕುಳಿತು ತೊಡಗಿದರೆ ಮನಸ್ಸಿನ ಹುಚ್ಚು ಕುಂಠಿತ ನೋವಲಾಗುವುದು. ಪುಸ್ತಕ ಪ್ರಕಟಿಸದಿದ್ದರೆ ಸಮಾಧಾನವಿಲ್ಲ. ಆದ್ದರಿಂದ ಕೆಲಸ ಸಾಗಬೇಕಾದರೆ ಬೆಂಗಳೂರಿನಿಂದ ದೂರ ಹೋಗಬೇಕೆಂದು ಮನೆಯವರನ್ನು ತವರು ಮನೆಗೆ ಕಳುಹಿಸಿ, ಅಣ್ಣನ ಮನೆಯವರನ್ನು ಅವರ ಸಂಬಂಧಿಕರ ಬಳಿ ಬಿಟ್ಟು ಮೂರು ತಿಂಗಳ ಕಾಲ ಮೈಸೂರಿನಲ್ಲಿ ನಿಂತು ಹಸ್ತ ಪ್ರತಿ ಪೂರ್ಣಗೊಳಿಸಿದ್ದಾಯ್ತು ರಾಜರತ್ನಂ ಅವರು.

ಈ ವೇಳೆಗೆ ಹಿಂದೆಯೇ ಮಂಗಳೂರಿನಲ್ಲಿ ಗುರುತಾಗಿದ್ದ ಶ್ರೀ ಪಡುಕೋಣೆ ರಮಾನಂದ ರಾಯರ ಮನೆಯವರು ತಮ್ಮನ್ನು ತಮ್ಮ ಅಥಿತಿಯಾಗಿ ನಿಲ್ಲಲು ಆಗಾಗ್ಗೆ ಕರೆಯುತ್ತಿದ್ದರು. ಅವರ ಆತಿಥ್ಯವನ್ನು ಒಪ್ಪಿ ಕೊಂಡಂತೆಯೂ ಆಯಿತು ಎಂದು ರಾಜರತ್ನಂ ಮಂಗಳೂರಿಗೆ ಹೊರಟರು. ಅವರಲ್ಲಿ ನಾಲ್ಕಾರು ತಿಂಗಳು ಇದ್ದು ಅಲ್ಲಿಯ ಧರ್ಮ ಪ್ರಕಾಶನ ಮುದ್ರಣಾಲಯದಲ್ಲಿ ತಮ್ಮ ಪುಸ್ತಕವನ್ನು ಅಚ್ಚು ಮಾಡಿಸಿದರು. ಅದು ಮುಗಿಯುವ ಒಂದು ತಿಂಗಳು ಮುಂಚೆ ಅವರ ಮನೆಯಲ್ಲಿ ಪಟ್ಟಾಗಿ ಹಾಸಿಗೆ ಹಿಡಿದು ಬಿಟ್ಟರು. ಅನಾರೋಗ್ಯದಲ್ಲೂ ಪಡುಕೋಣೆ ದಂಪತಿಗಳವರ ಆತ್ಮೀಯ ಆದರದ ಆರೈಕೆಯಿಂದ ಉಸಿರುಳಿಸಿಕೊಂಡು ಮೇಲೆದ್ದು, ತಮ್ಮ ಕಾರ್ಯವನ್ನು ಮುಂದುವರಿಸಿ ಮುಗಿಸಿದ್ದಾಯ್ತು.

ರಾಜರತ್ನಂ ಅವರ ಕನ್ನಡದ ಕೈಂಕರ್ಯ ಕಾರಣವಾಗಿ ಗುರುತಾದ ಹಲವಾರು ಪೋಷಣೆಯಿಂದ ಉಳಿದು ಬೆಳೆದ ಜೀವ. ಬೌದ್ಧ ಸಾಹಿತ್ಯ ಪ್ರಕಟಣೆಯಲ್ಲಿ ಪ. ರಮಾನಂದರಾಯರ ಸಹಕಾರ-ಉಪಕಾರವನ್ನು ಮರೆಯುವಂತಿಲ್ಲ.

(ಹತ್ತು ವರುಷ)

Dr. Wasant Kawali A.I.R. Bangalore

Your father will ever be remembered as a kind and gentle man with a kind and gentle humour. He would not miss any of my stage productions while in Bombay.

ನಗುನಗುತ ಹಗುರವಾಗುವ ವರವ ಬೇಡು.

ರಮಾನಂದರಾಯರ ಸೌಜನ್ಯ

ಎಸ್. ಎನ್. ಶಿವಸ್ವಾಮಿ

ಪಡುಕೋಣೆ ರಮಾನಂದರಾಯರನ್ನು ನಾನು ಮೊದಮೊದಲು ಕಂಡದ್ದು ಸುಮಾರು ನಲವತ್ತು ವರ್ಷಗಳ ಹಿಂದೆ. ಆಗ ನಾನಿನ್ನೂ ಹುಡುಗ ಅಂತಲೇ ಹೇಳಬೇಕು. ಮದರಾಸು ರೇಡಿಯೋದಲ್ಲಿ ಪ್ರೋಗ್ರಾಂ ಅಸಿಸ್ಟೆಂಟಾಗಿ ಕೆಲಸಕ್ಕೆ ಸೇರಿದ್ದೆ. ಬೇರೆ ಕಾರ್ಯಕ್ರಮವನ್ನೂ ನಡೆಸುವುದು ನನ್ನ ಜವಾಬ್ದಾರಿಯಾಗಿತ್ತು. ಮದರಾಸು ನಗರದಲ್ಲಿ ಕನ್ನಡ ಮಾತನಾಡುವ ಜನ ಬೇಕಾದಷ್ಟಿದ್ದರೂ ಚೆನ್ನಾಗಿ ಕನ್ನಡ ಬರೆದು, ಓದಿ. ಕನ್ನಡದಲ್ಲಿ ಹಾಡಿ, ಅಭಿನಯಿಸುವ ಸಾಮರ್ಥ್ಯವಿದ್ದವರು ಹಲವರು ಮಾತ್ರ. ಇಂಥ ಪರಿಸ್ಥಿತಿಯಲ್ಲಿ ರಮಾನಂದರಾಯರು, ಅವರ ಕುಟುಂಬ ಅಲ್ಲಿದ್ದದ್ದು ನನಗೊಂದು ಚಿನ್ನದಗಣಿ ಸಿಕ್ಕಿದಹಾಗಾಯ್ತು. ಸ್ವತಹ ಕಲಾಭಿರುಚಿ ತುಂಬಿ ಕನ್ನಡ ಬರೆಹ, ಕನ್ನಡ ಹಾಡು, ನಾಟಕಗಳಲ್ಲಿ ಆಸಕ್ತಿ ಹೊಮ್ಮಿಸುತ್ತಿದ್ದ ರಮಾನಂದರಾಯರ ಮನೆಯನ್ನೊಂದು ಕನ್ನಡ ಕಣಜದ ಹಾಗೆ ನಾನು ಭಾವಿಸಿದೆ. ರಾಯರು, ಅವರ ಪತ್ನಿ ಸೀತಾದೇವಿಯವರು, ಮಗ ಪ್ರಭಾಶಂಕರ, ಮಗಳು ಜಯವಂತಿ, ಕಿರಿಯ ಮಗಳು ಯಶೋಧರಾ, ಎಲ್ಲರೂ ನನ್ನ ಕರೆಗೆ ಸದಾ ಸಿದ್ಧರಾಗಿ ಬಂದು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. (ದೊಡ್ಡ ಮಗಳು ಚಂದ್ರಭಾಗಾದೇವಿ ಮದುವೆಯಾಗಿ ಬೆಂಗಳೂರಿಗೆ ಹೊರಟು ಹೋಗಿದ್ದರು) ಆಗಲೆಲ್ಲ ನಾವು ಕಲಾವಿದರಿಗೆ ಕೊಡುತ್ತಿದ್ದ ಸಂಭಾವನೆ ಬಹಳ ಅಲ್ಪ. ಲೆಕ್ಕ ಕೇಳಿ ತೆಗೆದುಕೊಳ್ಳುವಂತಿರಲಿಲ್ಲ. ಆದರೆ ರಮಾನಂದರಾಯರ ಕಣ್ಣು ಕಲೆಯ ಕಡೆಗಿರುತ್ತಿತ್ತಲ್ಲದೆ ಸಂಭಾವನೆ ಎಷ್ಟೆಂಬುದು ಅವರ ಗಮನಕ್ಕೆ ಬಂದಂತಿರಲಿಲ್ಲ. ಎಲ್ಲಕ್ಕಿಂತ ಮೇಲಾಗಿ ಕನ್ನಡ ಪ್ರಸಾರದ ಆ ದಿನಗಳಲ್ಲಿ ನಾನು ಕೈ ಹಾಕುತ್ತಿದ್ದ ಹೊಸ ಹೊಸ ಪ್ರಯೋಗಗಳಿಗೆ ಅವರು ತೋರುತ್ತಿದ್ದ ಉತ್ತೇಜನಾ ಪೂರ್ವಕ ಪ್ರತಿಕ್ರಿಯೆ ನನಗೆ ಮುಖ್ಯವಾಗಿತ್ತು. ನಾನು ಬರೆದು ಪ್ರಸಾರ ಮಾಡುತ್ತಿದ್ದ ಪ್ರತಿಯೊಂದು ಕಾರ್ಯಕ್ರಮವನ್ನು ತಪ್ಪದೆ ಕೇಳಿ ಸಲಹೆ ಕೊಡುತ್ತಿದ್ದ ಹಿರಿಯರಲ್ಲಿ ರಮಾನಂದರಾಯರು ಮೊದಲಾಗುತ್ತಿದ್ದರು. ಅವರ ಮೆಚ್ಚುಗೆಯಾದರೆ ನನ್ನ ಕಾರ್ಯಕ್ರಮಕ್ಕೆ ಶ್ರೇಷ್ಠತೆಯ ಮೊಹರು ಬಿದ್ದ ಹಾಗೆ ನನಗೆ ಭಾಸವಾಗುತ್ತಿತ್ತು.

ಕನ್ನಡ ಬೆಳೆಸುವ ಇತರ ಚಟುವಟಿಕೆಗಳ ಮಾತು ಬಂದಾಗಲೂ ಹಾಗೆ. 1945ರ ಸಾಹಿತ್ಯ ಸಮ್ಮೇಳನದ ಮನರಂಜನೆಯ ವಿಭಾಗದಲ್ಲಿ ನಾವೆಲ್ಲ ಸೇರಿ ಕೈಲಾಸಂ ಅವರ "ಬಂಡ್ವಾಳ್ವಿಲ್ಲದ ಬಡಾಯಿ" ನಾಟಕವನ್ನಾಡಲು ನಿಶ್ಚಯಿಸಿದೆವು. ನಾಟಕದ

ರಿಹರ್ಸಲ್ ಎಲ್ಲಿಂದರೆ ಅಲ್ಲೀ. ಒಂದೊಂದು ಸಲ ರಮಾನಂದರಾಯರ ಮನೆಯಲ್ಲೀ. ಆ ದಿನ ನಮ್ಮೆಲ್ಲರ ತಿಂಡಿ ತೀರ್ಥಗಳು ಅವರ ಮನೆಯಲ್ಲೇ!

ತಿಂಡಿ ತೀರ್ಥವೆಂದರೆ ರಮಾನಂದರಾಯರ ಮನೆಯ ಊಟದ ಆನಂದ ನೆನಪಿಗೆ ಬರುತ್ತದೆ. ಅಚ್ಚ ಕನ್ನಡದ ಮನೆಯ ಊಟ. ಅದನ್ನು ಬಡಿಸುವಾಗಿನ ಅಚ್ಚುಕಟ್ಟು, ಊಟದುದ್ದಕ್ಕೂ ಲಘು ಮಾತುಗಳ ಲಹರಿ. ಒಂದು ಸಲ ಏನೋ ಕೆಲಸಕ್ಕೆ ಹೋದ ನನ್ನನ್ನು ಅಲ್ಲಿ ಊಟಕ್ಕೆ ನಿಲ್ಲಿಸಿಕೊಂಡರು. ಅಪೂರ್ವದ ಅವರ ಕಾಯಿ ಹಾಲು, ಅಪ್ಪಟ ದಕ್ಷಿಣ ಕನ್ನಡ ಜಿಲ್ಲೆಯ ಭೋಜನ; ಸಹ ಭೋಜನಕ್ಕೆ ಯಾರಿದ್ದರ್ರೀ? ಆಶ್ಚರ್ಯವೋ ಆಶ್ಚರ್ಯ! ಮಾಸ್ತಿ, ಬೇಂದ್ರೆ, ಇಬ್ಬರೂ! ಚಲನಚಿತ್ರ ನಿರ್ಮಾಪಕ ವೈ. ವಿ. ರಾವ್ ಕೂಡ ಜತೆಗಿದ್ದ ನೆನಪು.

ನಾನು ಈಚೆಗೆ ರಾಯರನ್ನು ನೋಡಿ ಏಳೆಂಟು ವರ್ಷಗಳಾಗಿರಬೇಕು. ಆಗಲೇ ಅವರ ವಯಸ್ಸು ಎಂಭತ್ತಕ್ಕೆ ಮೀರಿತ್ತು. ಆ ವಯಸ್ಸಿನಲ್ಲೂ ಅದೇ ಹಳೆಯ ಶರೀರ ಸೌಷ್ಠವ, ಅದೇ ಮಂದಹಾಸ ಚೆಲ್ಲುವ ಮುಖ, ಆದರದ ಮಾತು, ಬಾಹ್ಯ ಆಡಂಬರವೇ ಇಲ್ಲದ ಅದೇ ಸರಳತೆ. ಮೂವತ್ತು ವರ್ಷಗಳ ಹಿಂದೆ ಮದರಾಸಿನಲ್ಲಿ ಕಂಡ ರಮಾನಂದ ರಾಯರನ್ನೇ ಆಗಲೂ ಕಂಡ ಹಾಗಾಯ್ತು. ಜೀವನದುದ್ದಕ್ಕೂ ಅವರು ಬದಲಾಗದೆ ಸೌಜನ್ಯ ಮೂರ್ತಿಯಾಗಿಯೇ ನಮಗೆಲ್ಲ ಮಾರ್ಗದರ್ಶಕರಾಗಿ ನಿಂತಿದ್ದಾರೆ. ಕುಟುಂಬ ನಿರ್ವಹಣೆಯಲ್ಲಿ ಎಲ್ಲ ಸದ್ಗೃಹಸ್ಥರೂ ಎದುರಿಸಲೇ ಬೇಕಾದ ಕಷ್ಟ ಕಾರ್ಪಣ್ಯಗಳನ್ನು ರಾಯರು ಎದುರಿಸಿದ್ದರೂ ಅವರೆಂದೂ ಅದರ ಸುಳಿವು ತೋರಿಸಿದವ ರಲ್ಲ. ಎಂದಿಗೂ ನಾವು ಅವರಲ್ಲಿ ಕಂಡಿರುವುದು ಅವರ ಹಾಸ್ಯ ಪ್ರಿಯತೆ, ಪ್ರಾಮಾಣಿಕತೆ, ಸ್ನೇಹಪರತೆ, ಸದಭಿರುಚಿ, ಶುಭ್ರ ಸರಳತೆ, ಇಂಥ ಹಲವಾರು ಮಾನವೀಯ ಸದ್ಗುಣ ಗಳನ್ನೇ. ನಿಜವಾಗಿ ರಮಾನಂದರಾಯರೊಬ್ಬ ಅಪರೂಪದ ವ್ಯಕ್ತಿ. ಅನುಕರಣೀಯ ವ್ಯಕ್ತಿ–ನನ್ನ ಹಾಗೆ ಇಂಥವರನ್ನು ಹತ್ತಿರದಿಂದ ನೋಡಿ ತಿಳಿದು ಇವರಿಂದ ಪ್ರೇರಣೆ ಸಂಪಾದಿಸಿದವರೆಲ್ಲ ಧನ್ಯರೇ ಸರಿ!

Nittoor Srinivasa Rao

Your revered and dear father has left behind not only the bereaved members of the family mourning his loss but numerous friends and students all over the country and abroad.... Personally, I have lost a life-long friend whose warm affection and enlightened guidance was a constant blessing. When I visited Bombay a few months ago, I availed myself of the opportunity of spending a happv hour with him. It is an event I shall always treasure.

ಶ್ರೀ ಪಡುಕೋಣೆ ರಮಾನಂದರಾಯರು

ಶ್ರೀ ಸಂತ ಕೇಶವದಾಸರು.

"ಸಂಸಾರವೆಂಬಂಥ ಭಾಗ್ಯ ವಿರಲಿ! ಕಂಸಾರಿ ನೆನೆಪೆಂಬ ಸೌಭಾಗ್ಯವಿರಲಿ" ಎಂಬುದಾಗಿ ದಾಸಶ್ರೇಷ್ಠರಾದ ಪುರಂದರದಾಸರು ಹಾಡಿದ್ದಾರೆ. ದಿವಂಗತ ಶ್ರೀ ಪಡುಕೋಣೆ ರಮಾನಂದರಾಯರಿಗೆ ಮೇಲೆ ವಿವರಿಸಿರುವ ಸಂಸಾರದ ಭಾಗ್ಯವನ್ನು ಪರಮಾತ್ಮನ ಅಹರ್ನಿಶಿ ಧ್ಯಾನದ ಸೌಭಾಗ್ಯವನ್ನೂ ದೇವರು ಸಂಪೂರ್ಣ ಕರುಣಿಸಿದ್ದನು. ಅವರ ಬಾಳೇ ಒಂದು ಯೋಗ; ಅವರ ಸಾಧನೆಯೇ ತಪಸ್ಸು; ಸಂಸ್ಕಾರವುಳ್ಳವರು. ಅವರ ಸೇವೆಯೇ ಅವರ ಭಕ್ತಿಗೆ ದ್ಯೋತಕ. ಈ ಮಟ್ಟದಲ್ಲಿ ದೇವರು ಅವರ ಮೇಲೆ ಅನುಗ್ರಹ ಮಾಡಿದ್ದನು. ಇತ್ತೀಚೆಗೆ ಅವರು ದೇಹ ಬಿಡುವ ಸಮಯದಲ್ಲಿ ಕೂಡಾ ಶ್ರೀರಾಮನ ದಿವ್ಯನಾಮವನ್ನು ನೆನೆಯುತ್ತಾ, ಜಪಿಸುತ್ತಾ, ಅವರು ಶಾಂತರಾದರೆಂದಾಗ ಗೀತೋಕ್ತಿಯಂತೆ ಅವರು ದೇವರ ಪರಂಧಾಮವನ್ನು ಸೇರಿ ಮುಕ್ತರಾದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

"ಅಂತಕಾಲೇಚ ಮಾಮೇವ। ಸ್ಮರನ್ಮುಕ್ತ್ವಾ ಕಲೇವರಂ। ಯಃ ಪ್ರಯಾತಿಸ ಮದ್ಭಾವಂ। ಯಾತಿ ನಾಸ್ತ್ಯತ್ರ ಸಂಶಯಃ".

"ಅಂತ್ಯಕಾಲದಲ್ಲಿ ನನ್ನನ್ನು ಸ್ಮರಿಸುತ್ತಾ ದೇಹತ್ಯಜಿಸಿದವರು ನನ್ನ ದಿವ್ಯ ಧಾಮುವನ್ನೇ ಸೇರುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ" ವೆಂಬುದಾಗಿ ಶ್ರೀಕೃಷ್ಣನು ಗೀತೆಯ ಎಂಟನೆಯ ಅಧ್ಯಾಯದಲ್ಲಿ ಅಪ್ಪಣೆಕೊಟ್ಟಿರುತ್ತಾನೆ.

ಶ್ರೀ ರಮಾನಂದರಾಯರು ಬದುಕಿದ್ದಾಗ ಭಕ್ತರಾಗಿದ್ದರು; ಈಗ ಮುಕ್ತರಾಗಿದ್ದಾರೆ.

ಶ್ರೀರಮಾನಂದರಾಯರ ಇಡೀ ಕುಟುಂಬ ಮಕ್ಕಳು ಎಲ್ಲರೂ ಕಲೆಗಾಗಿ ಸಂಸ್ಕೃತಿಗಾಗಿ, ಜ್ಞಾನ-ಭಕ್ತಿ-ವೈರಾಗ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡವರು. ಶ್ರೀ ರಮಾನಂದರ ಪತ್ನಿಯವರಂತೂ "ಜ್ಞಾನೇಶ್ವರಿ" ಯಂತಹ ಉದ್ಗ್ರಂಥವನ್ನು ಜನರಿಗೆ ಬೋಧಿಸುವ ಸಾಮರ್ಥ್ಯ ಉಳ್ಳವರಾಗಿದ್ದರು. ಅವರ ಮಕ್ಕಳು ಸರಸ್ವತಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದು ಸಂಗೀತ, ಭಾವಗೀತೆ, ಶಾಸ್ತ್ರೀಯ ನೃತ್ಯಕಲೆ ಮುಂತಾದ ಕಾರ್ಯಕ್ರಮಗಳಲ್ಲಿ ಪೂರ್ಣತೆಯನ್ನು ಮುಟ್ಟಿದವರಾಗಿದ್ದಾರೆ. ಮಾತೃ ಪಿತೃಗಳಲ್ಲಿ ಅವರಿಗಿದ್ದ ಭಕ್ತಿ ಅವರ ಸರ್ವ ಅಭ್ಯುದಯಕ್ಕೆ ಕಾರಣವಾಗಿದೆ. ಆ ತಾಯಿ-ತಂದೆಯವರ ಆಶೀರ್ವಾದವು ಅಕ್ಷಯವಾಗಿ ಅವರ ಕುಟುಂಬವನ್ನು ವೃದ್ಧಿ ಮಾಡಿ ನಡೆಸುವಂತಹುದಾಗಿದೆ.

ನನ್ನನ್ನು ಮೊಟ್ಟಮೊದಲು ಬೆಂಗಳೂರಿನ ಜನರಿಗೆ ಪರಿಚಯ ಮಾಡಿಕೊಟ್ಟವರೇ ಶ್ರೀ ಪಡುಕೋಣೆ ರಮಾನಂದರಾಯರು. ಅವರ ನೆಚ್ಚಿನ ಶಿಷ್ಯರಾಗಿದ್ದ ದಿವಂಗತ ಶ್ರೀ ಎಚ್. ಸುಂದರರಾಯರು ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಲಾ ಶಾಲೆಯ ಪ್ರಾಧ್ಯಾಪಕರಾಗಿದ್ದರು. ನಾನು ಅದೇ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಶ್ರೀ ಸುಂದರರಾಯರು ನನ್ನಿಂದ ತಿಂಗಳಿಗೊಮ್ಮೆ ಕಾಲೇಜಿನಲ್ಲಿ ಹರಿಕಥೆ ಹೇಳಿಸುತ್ತಿದ್ದರು.

ನಾನು ಬೆಂಗಳೂರಿಗೆ ಹೋಗುವ ಆಶಯ ವ್ಯಕ್ತಪಡಿಸಿದಾಗ ಶ್ರೀ ಸುಂದರರಾಯರು ಶ್ರೀ ಪಡುಕೋಣೆ ರಮಾನಂದರಾಯರಿಗೆ ಒಂದು ಪತ್ರ ಬರೆದು ನನ್ನ ಕೈಯಲ್ಲಿ ಕೊಟ್ಟರು. ನಾನು ಬೆಂಗಳೂರಿಗೆ ಹೋಗಿ ಅವರನ್ನು ಕಂಡು ಪತ್ರವನ್ನು ಕೊಟ್ಟೆ. ಅವರು ಅದನ್ನು ಓದಿ, ಸಂತಸಪಟ್ಟು ಕೆನರಾ ಯೂನಿಯನ್ ಸಭಾ ಭವನದಲ್ಲಿ ನನ್ನ ಕೀರ್ತನ ಕಾರ್ಯಕ್ರಮವನ್ನು ಏರ್ಪಡಿಸಿ ಬೆಂಗಳೂರಿನ ಮಹಾಜನರಿಗೆ ನನ್ನ ಪರಿಚಯ ಮಾಡಿಕೊಟ್ಟರು. ಅಂದಿನಿಂದ ಕಲ್ಯಾಣ ನಗರಿಯ ಹಾಲ್ ಮಾರ್ಲೆಕ್ಸ್‌ನಿಂದ ನಮ್ಮ ಹರಿಕೀರ್ತನೆಯ ಪ್ರಚಾರಕಾರ್ಯವು ನಡೆದು, ಶ್ರೀ ದೇವರನಾಮಯುಕ್ತ ದಾಸಾಶ್ರಮ, ಶ್ರೀ ಪುರಂದರ ವಿಠಲಮಂದಿರ ಮುಂತಾದ ಧರ್ಮಸಂಸ್ಥೆಗಳ ಸ್ಥಾಪನೆಯಾಯಿತು. ಶ್ರೀ ರಮಾನಂದರಾಯರ ಮಗಳು ಶ್ರೀಮತಿ ಚಂದ್ರಭಾಗಾದೇವಿ ಮತ್ತು ಶ್ರೀ ಕೃಷ್ಣರಾಯರು ನನ್ನ ಪ್ರಥಮ.ವಿದೇಶ ಯಾತ್ರೆಯಲ್ಲಿ ಲಂಡನ್ನಿನಲ್ಲಿ ತುಂಬಾ ಸಹಾಯಕರಾಗಿ, ವಿದೇಶದಲ್ಲಿ ಹರಿಕೀರ್ತನೆ ನಡೆಸಲು ತುಂಬಾ ಸ್ಫೂರ್ತಿ ಇತ್ತರು. ದೇಶಪ್ರೇಮ, ದೇಶ ವಿದೇಶದ ಜನರಿಗೆ ನೃತ್ಯಕಲೆ, ಭಾರತೀಯ ಸಂಸ್ಕೃತಿಯನ್ನು ಈ ದಂಪತಿಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಸಿ ನಾಡಿಗೆ ಕೀರ್ತಿ ತಂದಿದ್ದಾರೆ.

ಶ್ರೀ ಪಡುಕೋಣೆ ರಮಾನಂದರಾಯರಿಗೆ ನನ್ನಲ್ಲಿ ಅಪಾರ ಪ್ರೇಮವಿತ್ತು. ಅವರು ಕೀರ್ತನೆಯನ್ನು ಶ್ರವಣಿಸಿ ಹಾಗೆಯೇ ಮುಗ್ಧರಾಗುತ್ತಿದ್ದರು; ತನ್ಮಯರಾಗುತ್ತಿದ್ದರು. ವೇದನುಡಿಯಂತೆ ಪೂರ್ಣಾಯುಷ್ಯ ಹೊಂದಿ, ಆರೋಗ್ಯ ಕಾಪಾಡಿಕೊಂಡು, ಉತ್ತಮ ಗೃಹಸ್ಥರಾಗಿ, ಪ್ರಾಧ್ಯಾಪಕರಾಗಿ, ದೇಶಭಕ್ತರಾಗಿ, ಉತ್ತಮ ಮಕ್ಕಳು ಅಳಿಯಂದಿರು, ಮೊಮ್ಮಕ್ಕಳನ್ನು ಹೊಂದಿದವರಿದ್ದು ಶ್ರೀ ರಮಾನಂದರಾಯರು ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾದರು. ಈಗ ದೇವರ ಪಾದಾರವಿಂದವನ್ನು ಸೇರಿ ಅಮರರಾದರು. ಧನ್ಯ ಭಾರತ ಮಾತೆ! ಶ್ರೀ ರಮಾನಂದರಾಯರ ಆದರ್ಶ ಜೀವನವು ಸರ್ವರಿಗೂ ಸ್ಫೂರ್ತಿದಾಯಕವಾಗಲಿ.

ದೇವನೊಬ್ಬ, ನಾಮ ನೂರೆಂಟು ಎನ್ನುತ್ತಾರೆ. ಇದು ಸರಿಯಲ್ಲ ನಾನೊಬ್ಬ—ದೇವರು ಸಾವಿರದೆಂಟು ಎನ್ನುತ್ತೇನೆ—ಚಡಗ.

ಪಡುಕೋಣೆ ರಮಾನಂದರಾಯರು

ಗುಲ್ವಾಡಿ

ನವೋದಯ ಕನ್ನಡ ಸಾಹಿತ್ಯದ ಹಾಸ್ಯ ಪ್ರವರ್ತಕರಲ್ಲಿ ಒಬ್ಬರಾದ ಪಡುಕೋಣೆ ರಮಾನಂದರಾಯರು ಇದೇ ಫೆಬ್ರವರಿ 13 ರಂದು ಮುಂಬಯಿಯಲ್ಲಿ ತಮ್ಮ ಮಗ ಶ್ರೀ ಪ್ರಭಾಶಂಕರ್ ಅವರ ಮನೆಯಲ್ಲಿ ತೀರಿಕೊಂಡರು.

ಪಂಜೆ ಮಂಗೇಶರಾಯರು ಎಂ. ಎನ್. ಕಾಮತರು ಮೊದಲು ಮಾಡಿದ ಹಾಸ್ಯ ರಸಾಯನವನ್ನು ರಮಾನಂದರಾಯರು ಮುಂದುವರಿಸಿದ್ದರು. ಅವರ "ಹುಚ್ಚು ಬೆಳದಿಂಗಳಿನ ಹೂಬಾಣಗಳು" ಕನ್ನಡದ ಹಾಸ್ಯ ಸಾಹಿತ್ಯದಲ್ಲಿ ಮರೆಯಲಾಗದ ಒಂದು ಮಹತ್ವದ ಕೃತಿ. (ಪ್ರಕಟಣೆ–1950–ಮನೋಹರ ಗ್ರಂಥಮಾಲೆ) "ಜೀವ್ಸ್" ಮಾದರಿಯಲ್ಲಿ ಇದರಲ್ಲಿ ಬರುವ ಹರಿ ಕಮತ್ತಿಯ ಚಿತ್ರಣ ವಿಮರ್ಶಕ ಹಾಗೂ ಓದುಗರಿಂದ ಮೆಚ್ಚಿಕೆ ಪಡೆದಿತ್ತು.

ರಮಾನಂದರಾಯರು ಹಾಗೂ ಅವರ ಪತ್ನಿ ಸೀತಾಬಾಯಿ ನಾಟಕ ಪ್ರೇಮಿಗಳು. ಕೆಲವು ವರ್ಷಗಳ ಹಿಂದೆನಿಧನರಾದ ಸೀತಾಬಾಯಿ "ಕಟುಕರೋಹಿಣಿ ಸಂವತ್ಸರದಲ್ಲಿ" ಮೊದಲಾದ ಮಾರ್ಮಿಕ ಪ್ರಹಸನಗಳನ್ನು ಬರೆದಿದ್ದರು. ರಮಾನಂದರಾಯರು ಇತ್ತೀಚೆಗೆ ಅಂತಾನ್ ಚೆಕಾವ್ ಅವರ "ಚೆರ್ರಿ ಹಣ್ಣುಗಳು" ನಾಟಕವನ್ನೂ ಕನ್ನಡಕ್ಕೆ ಅನುವಾದಿಸಿದ್ದರು.

ಡಾ. ಶಿವರಾಮ ಕಾರಂತರು ತಮ್ಮ ಊರು ಕೋಟವನ್ನು ಬಿಟ್ಟು ಪುತ್ತೂರನ್ನು ಸೇರಲು ಮುಖ್ಯ ಪ್ರಚೋದನೆ ಕೊಟ್ಟವರು ರಮಾನಂದರಾಯರು, ಅವರ ಮಾವ ಮೊಳಹಳ್ಳಿ ಶಿವರಾಯರು. ಕಾರಂತರು ತಮ್ಮ "ಸ್ಮೃತಿ ಪಟಲದಿಂದ"(ಸಂಪುಟ 3) ದಲ್ಲಿ ಬರೆದಂತೆ ಅವರಲ್ಲಿ ರಂಗಭೂಮಿ ಕುರಿತು ಉತ್ಸಾಹ ತುಂಬಿದವರು ರಮಾನಂದ ರಾಯರು, ಅವರ ಪತ್ನಿ. ಅವರ ಮನೆಯಲ್ಲೇ ಕೂತು ಕಾರಂತರು ತಮ್ಮ ಆರಂಭದ ಅನೇಕ ಕೃತಿಗಳನ್ನು ರಚಿಸಿದರು. ಕಾರಂತರಿಗೆ ಇಂಗ್ಲಿಷ್ ನಾಟಕಕಾರರನ್ನು ಪರಿಚಯಿಸಿದವರು, ಕೈಲಾಸಂ ಅವರನ್ನು ಕಾರಂತರಿಗೆ ಭೇಟಿ ಮಾಡಿಸಿದವರು ರಮಾನಂದರಾಯರೇ. ಕಾರಂತರು ಮೊದಲಿನ ಎರಡು ಮೂಕ ಚಿತ್ರ ತೆಗೆಯಲಿಕ್ಕೂ ರಮಾನಂದರಾಯರದ್ದೇ ಪ್ರೇರಣೆ.

ರಮಾನಂದರಾಯರ ಒಬ್ಬ ಮಗಳು ಚಂದ್ರಭಾಗಾದೇವಿ ಮತ್ತು ಅಳಿಯ ಯು. ಎಸ್. ಕೃಷ್ಣರಾವ್ ಖ್ಯಾತ ನೃತ್ಯ ಜೋಡಿ. ಇನ್ನೊಬ್ಬರು "ಭಾಗ್ಯದಾ ಲಕ್ಷ್ಮೀ ಬಾರಮ್ಮಾ" ರೆಕಾರ್ಡನ್ನು ಮೊದಲಾಗಿ ಹಾಡಿದವರು.

ಸಾಹಿತ್ಯ, ರಂಗಭೂಮಿ, ಸಿನಿಮಾ, ನೃತ್ಯ, ಕಲೆ ಇವುಗಳಲ್ಲಿ ಉತ್ಕಟ ಆಸಕ್ತಿಯಿದ್ದು, ಆಳ ಅಧ್ಯಯನ ಮಾಡಿದ್ದ ರಮಾನಂದರಾಯರು ಮೂಲತಃ ಮಂಗಳೂರು ಸರಕಾರಿ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ಪ್ರಾಧ್ಯಾಪಕರು. ಅನಂತರ ಟ್ರೈನಿಂಗ್ ಕಾಲೇಜಿನಲ್ಲಿ ಪ್ರಾಂಶುಪಾಲರು.

"ತರಂಗ" ಆರಂಭವಾದೊಡನೆ ಸ್ವಯಂ ಪ್ರೇರಣೆಯಿಂದ ಅವರೇ ಪತ್ರ ಬರೆದು ನಮ್ಮನ್ನು ಆಶೀರ್ವದಿಸಿ, ಅಭಿನಂದಿಸಿ "ತರಂಗ"ವನ್ನು ಓದುವ ತಮ್ಮ ಆಸೆ ವ್ಯಕ್ತ ಮಾಡಿದರು. ಅವರು "ತರಂಗ"ಕ್ಕೆ ಲೇಖನ ಬರೆಯುವ ಉತ್ಸಾಹದಲ್ಲೂ ಇದ್ದರು. ಆದರೆ ಅಷ್ಟರಲ್ಲೆ ಹೃದಯಾಘಾತದಿಂದ ನಿಧನರಾದರು.

ಅವರದ್ದು ಉತ್ತಮ ಅಭಿರುಚಿ, ಹಾಸ್ಯ ಸಾಹಿತ್ಯದಲ್ಲಿ ಅಪರೂಪವಾದ ಶುಚಿ-ರುಚಿ. ಇವತ್ತಿನವರೆಗೂ ಕಾಣಸಿಗದ ಬಹಳ ಅಪರೂಪದ ಹಾಸ್ಯದ ಮಿರುಗು ಅವರ ಬರವಣಿಗೆಯಲ್ಲಿದೆ. ಸಹೃದಯ ಸ್ನೇಹಿತರ ಮೈತ್ರಿ, ಕಲಾವಿದರ ಸಾನ್ನಿಧ್ಯದಲ್ಲಿ ತನ್ನನ್ನೆ ಮರೆಯುತ್ತಿದ್ದ ರಮಾನಂದರಾಯರ ಅನೇಕ ಬರವಣಿಗೆಗಳು ಅವರ ಸ್ನೇಹದಂತೆ ಅವರ ಆತ್ಮೀಯತೆಯಂತೆ ಚಿರಸ್ಮರಣೀಯ.

ಕೃಪೆ: ತರಂಗ

President Canara Union — B. S. Benegal

He was a past President of the Canara Union and took a good deal of interest in its activities. As a man of letters and dramatist he was a source of pride to our community. We pray to the Almighty to give 'sadgati' to the departed soul.

P. Mahalinga

He was to me more than my father and was responsible for my education ete. Please console yourself ; everyone has to leave this world one day or the other.

Mrs. J. S. Whitcut, London

"I am sincerely grateful for the chance to read this beautiful play, or perhaps, should I say poem? I find the versification delightful and I particularly like the subtle shift between verse and prose rhythms as each is more appropriate to its sontext............"

Prof. V. K. Gokak

"P. Ramananda Rao, who has prepared a dramatic version of Mikhail Naimy's famous Book of Mirdad, has himself been a distinguished litterateur in Kannada. He says that this adaptation of this great book for the stage, his role has been only that of a "Scene Shifter" it is greatiy to his credit that he has produced a really dramatic version of the book of Mirdad. Thé festival scenes have good drama in them and the other also are so arranged that their dramatic interest is sustained I think all readers of this play will feel deeply grateful to P. Ramanand for having fashioned out of his own sufferings this fascinating version of Mirdad.

The Vision, Apr. 83

Prof. P. Ramanand, one of the oldest devotees of Beloved Papa, was called by Beloved Papa to eternal rest on 13-2-1983. With the name of God on his lips, he had a peaceful end at his son's house in Bandra, Bombay, at the age of 86. A nephew of Beloved Papa by the old relationship, Prof. Ramanand had close and intimate realation with Beloved Papa from his youth, as both shared the same joy in and passion for English literature. in fact, Beloved Papa's famous poem 'The Song Eternal' was first penned in course of a long letter written by Beloved Papa in his purvashram days to Prof. P. Ramanand. Prof. Ramanand continued to maintain his connection with Beloved Papa and the Ashram to his last days. He had also contributed a moving tribute to Beloved Papa in the "Sannyas Silver Jubilee souvenir" published in 1947 giving rare glimpses of Beloved Papa's early life, and subsequently republished in "The Vision."

Mr. Mikhail Naimy *(in a letter)*

''.................... To Dramastise 'MIRDAD' for the stage is not at all an easy task. Yet, Judging from your letter, I am led to suppose that you have done a creditable piece of work. Only one whose soul Readily Responds to the words of 'MIRDAD' as does your soul, can undertake the Task. I add to that your command of English and the clarity of thought as Displayed in your letter. More important is the fact that your work appears to me as a work of pure Love........

Dr. B. R. Pai, Madras

'............... I had Repeatedly turned down the idea of writing about my dearest and respected. 'MASTARU' (ಮಾಸ್ತರು) I realised I could not portray him in words. I also myself do not know why our Relationships were so deep and so abiding; the love bound him to me and me to him and this is byt he GRACE OF THE MOTHER. I cannot further Elaborate.

Enclosed please find a Cheque (Rs. 350/-) which you are free to use as you like towards the cost of printing or anything else. I am happy the Book is Ready, I am waiting to Read it........''

Mr. Girish Karnad

''I enjoyed reading it (the play) and your versification is really first-rate. Please accept my heartiest congratulations I hope it is published soon and am sure it will meet with an enthusiastic reception.

ಪ್ರೇಮಕ್ಕೆ ಕಣ್ಣಿಲ್ಲ ಎನ್ನುತ್ತಾರೆ. ನಾನು ಒಪ್ಪುವುದಿಲ್ಲ. ಪ್ರೇಮಿಸುವವರಿಗೆ ದೇವರು ಎರಡು ಕಣ್ಣು ಕೊಟ್ಟಿಲ್ಲವೆ? ಅದನ್ನು ಯೋಚಿಸಬೇಕು. ಯೋಚಿಸಿದಾಗಲೇ ಈ ಪ್ರೇಮದ ಕುರಿತು ವಿವೇಚನಾ ಶಕ್ತಿ ಬರುತ್ತದೆ.

– ಚಪಗ

ಆತ್ಮೀಯ ನೆನಪು

ಡಾ|| ಎಸ್. ಎಂ. ವೃಷಭೇಂದ್ರಸ್ವಾಮಿ

ನನ್ನ ಪೂಜ್ಯ ಹಿರಿಯರೂ, ಪ್ರಿನ್ಸಿಪಾಲರೂ ಆಗಿದ್ದ ಶ್ರೀ ಪಡುಕೋಣೆ ರಮಾನಂದ ರಾಯರು ಈಚೆಗೆ ವೈಕುಂಠವಾಸಿಗಳಾದರೆಂಬ ಸುದ್ದಿ ನನಗೆ ಮಿತ್ರರಿಂದ ತಿಳಿದು ಆಘಾತವಾಯಿತು. ಇತ್ತೀಚೆಗೆ ಅವರು ನನಗೆ ಬರೆದ ಪತ್ರಕ್ಕೆ ಉತ್ತರ ಬರೆದಿದ್ದೆ. ಅದರ ಪ್ರತಿ ನಿಮಗೂ ಕಳಿಸಿದ್ದೆ. ಆದರೆ, ಅವರು ನನ್ನ 'ಉತ್ತರ' ನೋಡಿದರೋ ಇಲ್ಲವೋ ತಿಳಿಯದು. ಏನೇ ಆಗಲೀ, ಪೂಜ್ಯರ ನೆನಪು ನನಗೆ ವೈಯಕ್ತಿಕವಾಗಿ ಬಾಳಿನ ಬುತ್ತಿ. ಅವರ ಸೌಜನ್ಯ ಶೀಲವಾದ ನಡೆ, ಎಲ್ಲರಲ್ಲಿ ತೋರುತ್ತಿದ್ದ ಆತ್ಮೀಯತೆ ಶಿಸ್ತು-ಈ ಎಲ್ಲ ಗುಣಗಳು ಕಿರಿಯರಿಗೆ ಮಾರ್ಗದರ್ಶನವಾದುದು. ಪೂಜ್ಯರಿಗೆ ಶ್ರೀ ದೇವರು ಮಂಗಳ ಪರಂಧಾಮವನ್ನು ಕರುಣಿಸಲೆಂದು ಹಾರೈಸುವೆ.

ಇನ್ನೊಂದು ಸೂಚನೆ: ಬಳ್ಳಾರಿಯ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ ಪ್ರತಿವರ್ಷ ಹೊರಡುತ್ತಿದ್ದ 'ಪ್ರಸಾದ' ಎಂಬ ವಾರ್ಷಿಕ ಪತ್ರಿಕೆಯಲ್ಲಿ ಶ್ರೀಯುತರ ಕೆಲವು ಬರಹಗಳಿವೆ ಎಂಬ ನೆನಪು ಇದೆ. ಒಮ್ಮೆ ಅವರು ಒಂದು ವಿಜ್ಞಾನ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಅಲ್ಲಿ ಮಾಡಿದ ಇಂಗ್ಲಿಷ್ ಭಾಷಣವನ್ನು ನಾನೇ ಕನ್ನಡಕ್ಕೆ ಅನವಾದ ಮಾಡಿ, ಪ್ರಿನ್ಸಿಪಾಲರ ಒಪ್ಪಿಗೆಯಂತೆ ಆ 'ಪ್ರಸಾದ' ದಲ್ಲಿ ಪ್ರಕಟಿಸಿದ ನೆನಪು ಇದೆ. ಆ ಕಾಲೇಜಿನ ಹಿಂದಿನ ಪ್ರಿನ್ಸಿಪಾಲರಾದ ಶ್ರೀ ಡಿ. ಮರಿಯಪ್ಪ. ಎಂ. ಎ. ಬಿ. ಟಿ., ಕಪ್ಪಗಲ್ಲು ರಸ್ತೆ, ಬಳ್ಳಾರಿ ಅಥವಾ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಿಗೆ ಬರೆದು ತರಿಸಿಕೊಳ್ಳಿ. ಅದು ಅತ್ಯಂತ ಉಪಯುಕ್ತ ದಾಖಲೆ ಎಂದು ನನಗನ್ನಿಸುತ್ತಿದೆ

(ಈ ಕಾರ್ಯ ಸಾಧ್ಯವಾಗಲಿಲ್ಲ. ಕ್ಷಮೆ ಇರಲಿ)

K. V. Padmanabha Rau Madras

It was with great pain that we read about the demise of Ajja, Kshama and I felt very sad that we cannot see him any more....We could only recall the happy days when all of you were in Madras and we took the leberty of going over to your house too often to share food with you. What a wonderful company Ajja gave us. He mingled with us with the spirit of a young friend. The only consolation is that Ajja has lived a full life happily with you and God had given him the gift that he had asked for.

ಅವರ ಸಂಬಂಧ-ನನ್ನ ಪುಣ್ಯ ವಿಶೇಷ

ಮುಡಿಯಾಳ ಮದನಪ್ಪ ಭಂಡಾರಿ

ರಾಯರಿಗೂ ನನಗೂ ಇದ್ದ ಸಂಬಂಧ ಸುಮಾರು ಅರ್ಧ ಶತಮಾನಕ್ಕಿಂತಲೂ ಹೆಚ್ಚು. ಇವರ ವಿಷಯದಲ್ಲಿ ಬರೆಯುವ ಭಾಗ್ಯವು ಲಭಿಸಿದ್ದು ಇವರು ನನ್ನ ಮೇಲಿಟ್ಟ ವರದಾನದ ದೆಸೆಯಿಂದೇ ಹೇಳಬೇಕಾಗಿದೆ. ಇವರು ಜೀವನದ ಉದ್ದಕ್ಕೂ ಭಾವನಾ ಜೀವಿಯಾಗಿದ್ದು, ಉತ್ತಮ ಆದರ್ಶಗಳನ್ನು ಮುಂದಿಟ್ಟು, ಇವರ ಪರಿಸರದವರಿಗೆಲ್ಲಾ ಆದರ್ಶ ಜೀವಿಯಾಗಿಯೇ ಬಾಳನ್ನು ಮುಡಿಪಾಗಿಟ್ಟವರು. ಅವರ ಬಾಳಿನ ನೆರಳಲ್ಲಿ ಅದೆಷ್ಟೋ ಮಂದಿ ತಂಪನ್ನು ಪಡೆದು, ತಮ್ಮ ಜೀವನದ ಬಾಗಿಲು ತೆರದಂತಾದ ಭಾಗ್ಯ ಪಡೆದಿದ್ದಾರೆ. ಅಂದು ಪುತ್ತೂರಲ್ಲಿ, ಇವರ ಮಾವಂದಿರು-ಮೊಳಹಳ್ಳಿ ಶಿವರಾಯರ ಮನೆಯಲ್ಲಿ ಇವರ ಪರಿಚಯವಾದ ಕಾಲವು-1926ನೇ ಇಸವಿ. ಅಂದಿನಿಂದೀಚೆಗೆ ಅವರ ಚಟುವಟಿಕೆಯ ಜೀವನ ಚಿತ್ರವು ಸದಾ ನನ್ನ ಕಣ್ಣ ಮುಂದೆ ಕುಣಿಯುವಂತಾಯಿತು; ಇವರ ಕಲಾತ್ಮಕ ದೃಷ್ಟಿಯನ್ನು ನೋಡಿದ ನನಗೆ ಅವರ ಜತೆಯಲ್ಲೇ ಇರೋಣ ಎಂಬ ಆಸೆ ಬಲವಾಯಿತು. ಅದಕ್ಕನುಗುಣವಾಗಿ "ಹೋಮ್-ರೂಲ್" ಎಂಬ ನಾಟಕದಲ್ಲಿ ರಾಯರು-ಪತ್ನಿ ಸಮೇತರಾಗಿ ಪಾತ್ರವಹಿಸಿದಾಗ ಅವರ ಕೆಲಸದವನಾದ ಬೋರನ ಪಾತ್ರಮಾಡುವ ಅವಕಾಶ ನನಗೆ ದೊರಕಿದ್ದು ನನ್ನ ಪುಣ್ಯವಾಗಿತ್ತು. ಇನ್ನೊಂದು ಪ್ರಸಂಗ ನನ್ನ ಜೀವನವನ್ನೇ ಬದಲಾಯಿಸಿತು. ಮೊಳಹಳ್ಳಿ ಶಿವರಾಯರು ನನ್ನನ್ನು ಹತ್ತಿರ ಕರೆದು "ಮದನಪ್ಪ-ನಿನಗೆ ಮುಂದೆ ಏನ ಮಾಡಬೇಕೆಂಬ ಆಸೆ ಇದೆ ? ನೀನು ಏನೂ ದಾರಿಕಾಣದೆ ಕಂಗಾಲಾಗುವುದು ಬೇಡ. ನೀನು ರಮಾನಂದನ ಜತೆಗೆ ಮಂಗಳೂರಿಗೆ ಹೋಗಿ ಅಲ್ಲಿಯೇ ಇದ್ದು, ಇದೇ ಬರುವ ಜೂನ್ ತಿಂಗಳಲ್ಲಿ ಸರ್ಕಾರಿ ಟ್ರೇಡ್ ಸ್ಕೂಲಿಗೆ ಸೇರಿ ಅಲ್ಲಿ ನಿನಗೆ ಇಷ್ಟವಾದ ಅಂದರೆ ಮೋಟಾರ್ ಮೆಕ್ಯಾನಿಕ್ ವಿಷಯ ಅಭ್ಯಾಸಮಾಡಿ ಎರಡು ವರ್ಷಗಳ ಕಾಲ ಅಧ್ಯಯನ ಮಾಡು. ಆಮೇಲೆ ನೀನು ಸ್ವತಂತ್ರವಾಗಿ ನಿನ್ನ ಕಾಲ ಮೇಲೆ ನೀನು ನಿಂತು ಜೀವನ ಸಾಗಿಸುವೆ" ಎಂದು ಕಟ್ಟಪ್ಪಣೆ ಮಾಡಿದರು. ಆಮೇಲೆ ನಾನು ಮಂಗಳೂರಿಗೆ ಹೋಗಿ C.P.C.-ಮೋಟಾರ್ ಕಂಪೆನಿಯಲ್ಲಿ ಎಪ್ರೆಂಟೀಸ್ ಆಗಿ ಕೆಲಸಮಾಡಿದೆ: ರಮಾನಂದರಾಯರ ಅನುಕಂಪ-ಸಹಾಯ-ನೆರವಿನಿಂದಾಗಿ ನನ್ನ ಜೀವನ ಒಂದು ಸ್ಥಿತಿ-ಗತಿಗೆ ಬಂತು. ಸಾಂಸಾರಿಕನಾಗಿ K.S.R.T.C.ಯಲ್ಲಿ ಸೇರುವಂತಾಗಿ ಅಲ್ಲಿ 22 ವರ್ಷ ಸರ್ವೀಸು ಮಾಡಿ, 1972ನೇ ಇಸವಿಯಲ್ಲಿ ನಿವೃತ್ತಿ ಪಡೆದೆ. ಈಗ ನಾನು ಮಂಗಳೂರಿನಲ್ಲಿ ಸ್ವಂತ ಮನೆ ಮಾಡಿಕೊಂಡಿದ್ದೇನೆ.

ರಮಾನಂದರಾಯರು ಮತ್ತು ಅವರ ಪತ್ನಿ ಸೀತಾದೇವಿ ನನ್ನ ಪಾಲಿಗೆ ಮಾತಾಪಿತೃಗಳಂತೆ ಇದ್ದರು. ಅಮ್ಮ ಸೀತಾದೇವಿ ಮುತ್ತೈದೆ ಭಾಗ್ಯ ಪಡೆದು ಕೆಲವರುಷಗಳ ಹಿಂದೆಯೇ ದೈವಾಧೀನರಾದರು, ಈ ದಂಪತಿಗಳ ಔದಾರ್ಯದ ಗುಣ ಸಾಗರದಲ್ಲಿಯ ಸವಿನೆನಪಿನಿಂದಾಗಿ ಇವರ ಅನನ್ಯಭಕ್ತನಾಗಿ ಅತಿ ಹತ್ತಿರದ ಸಂಬಂಧದ ಮಮತಾ ವ್ಯಕ್ತಿಯಾಗಿ, ನನ್ನ ಬಾಳ ಬೆಳಗಿದ ದಿವ್ಯಜ್ಯೋತಿಗಳಾಗಿ, ನನ್ನ ಕಣ್ಮಣಿಗಳಾಗಿದ್ದ ಇವರು ಬಿಟ್ಟುಹೋಗಿರುವ ಇವರ ನಂತರದ ಭಾಗ್ಯ ಸಂಪತ್ತೆಂದರೆ ಇವರು ಜವಾಬ್ದಾರಿ ಹೊತ್ತು ಎಲ್ಲರಲ್ಲಿಯೂ ಕಲೆತು ಎಲ್ಲರನ್ನೂ ಪ್ರೀತಿಯಿಂದ ಸಲಹಿ ಸತ್ಕಾರ್ಯಗಳಿಗೆ ಅನುಮಾಡಿಕೊಟ್ಟ ವ್ಯಕ್ತಿತ್ವ. ಅತಿ ಎತ್ತರ ಏರಿದ-ಮೆರೆದ ಇವರ ಜೀವನವು ಅದೆಷ್ಟು ಸೊಗಸು ಎಂಬುದನ್ನು ನನ್ನಿಂದ ವರ್ಣಿಸಲು ಸಾಧ್ಯವಾಗದೆ ಹೋಗಿದೆ. ಇವರ ಹೆಚ್ಚಿನ ಸೇವೆಯನ್ನು ಮಾಡತಕ್ಕ ಭಾಗ್ಯವು ನನಗೆ ದೊರೆಯದೆ ಇದ್ದರೂ ಅವರ ಬಗ್ಗೆ ನನ್ನ ಮನಸ್ಸಿಗೆ ಬೇನೆ ಆಗಿದ್ದರೂ ಅವರ ಆದರ್ಶಗಳ ಬಗ್ಗೆ ಯೋಚಿಸಿ ಇವರಿಗೆ ನಿತ್ಯ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಅವರ ಬಗ್ಗೆ ಏನು ಬರೆದರೂ ಎಷ್ಟು ಬರೆದರೂ ಮುಗಿಯದ ಜೀವನ ಕಥೆ ಆಗಿದೆ. ಆದರೂ ಅಳಿಲಿಸಿಂದ ಮಳಲು ಸೇವೆ ಎಂಬಂತೆ ನನ್ನ ಈ ಸ್ಮರಣೆಯಾಗಿದೆ. ಈ ದಂಪತಿಗಳು ನಡೆದ ದಾರಿ-ಹಾಕಿಕೊಟ್ಟ ಮೇಲು ಪಂಕ್ತಿ-ಜೀವನದ ಆದರ್ಶಗಳು ನನಗೆ ಈಗ ದಿನ ನಿತ್ಯದ ರಕ್ಷೆ ಮತ್ತು ರಕ್ಷಣೆ ಆಗಿದೆ. ಎಂದೆಂದೂ ಅವರವನಾಗಿಯೇ ಉಳಿಯುವೆ.

Leela Ramanathan

I was deeply grieved to hear of your father's death. I know how close you were to him and how proud he was of you. One of the hardest things in life, is the passing away of a loved one, but mustering the courage that one has. one has to go on with the process of living.

Sharanappa Gorur

As a friend of your son, I wish to express to you and the entire family members my deepest sympathy in the death of your fgther. He was a great educationist. I know a bitter loss you have suffered,

---

Cherkal Gurudutt Secretary Canara Union

Our Saraswat Community lost s 'GEM'. Vacuum created by his departure cannot be filled up for time to come.

ಕೋ. ಚೆನ್ನಬಸಪ್ಪ, ಬೆಂಗಳೂರು

ತಾ॥ 6-3-1983 ರ "ತರಂಗ" ದಲ್ಲಿ ಶ್ರೀ ಪಡುಕೋಣೆ ರಮಾನಂದರಾಯರ ನಿಧನದ ವಾರ್ತೆಯನ್ನು ಓದಿ ವಿಷಾದವಾಯಿತು. ಅವರು ತುಂಬು ಜೀವನವನು ಜೀವಿಸಿ ಬಹು ದೀರ್ಘಕಾಲ ಬದುಕಿದ್ದರೆಂದರೂ ಅವರನ್ನು ಬಲ್ಲವರಿಗೆಲ್ಲ ಈ ಸುದ್ದಿಯಿಂದ ಆಘಾತವಾಗಿರುವುದು ಸಹಜ.

"ಹುಚ್ಚು ಬೆಳದಿಂಗಳಿನ" ನಂಥ ತಿಳಿಯಾದ ಹಾಸ್ಯ ಬರಹವನ್ನು ಕನ್ನಡದಲ್ಲಿ ಮತ್ತೆ ಯಾರೂ ಬರೆದಿಲ್ಲ. ಅವರು ಬರೆದದ್ದು ಅಂಥ ಒಂದೇ ಗ್ರಂಥವಾದರೂ ಅದು ಅಜರಾಮರವಾದ ಅದ್ವಿತೀಯ ಕೃತಿ, ಇದರಲ್ಲಿ ಒಂದಕ್ಷರವೂ ಉತ್ಪ್ರೇಕ್ಷೆ ಇಲ್ಲ. ಅವರನ್ನು ಲೇಖಕರಾಗಿ ಮಾತ್ರ ಅರಿತದ್ದಲ್ಲದೆ, ಬಳ್ಳಾರಿಯಲ್ಲಿ ಅವರು ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗ ಬಹು ಹತ್ತಿರದಿಂದ ಕಂಡಿದ್ದೆ. ನಾನಾಗ ಆ ಕಾಲೇಜಿನ ಆಡಳಿತ ಮಂಡಳಿಯಲ್ಲಿ ಸದಸ್ಯನಾಗಿದ್ದೆ. ಅವರ ನಿರಾಡಂಬರ, ಸರಳ, ಸಜ್ಜನಿಕೆ ಅನ್ಯಾದೃಶ.
ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

ದಿ. ಪಿ. ಕೆ. ನಾರಾಯಣ

ಪ. ರಮಾನಂದರಾಯರ ಕುರಿತು ಸಂಸ್ಮರಣ ಗ್ರಂಥ ಪ್ರಕಟಿಸುವ ಯೋಜನೆ ಇಟ್ಟುಕೊಂಡಿದ್ದ ಚಂದ್ರಭಾಗಾದೇವಿ ಅವರು ಖ್ಯಾತ ಸಾಹಿತಿ ಪಿ. ಕೆ. ನಾರಾಯಣರಲ್ಲಿ ಒಂದು ಲೇಖನ ಬರೆಯುವಂತೆ ವಿನಂತಿಸಿಕೊಂಡು ಬರೆದ ಪತ್ರಕ್ಕೆ ಅವರು ಬರೆದ ಪತ್ರ ಇದು. ಸಂಸ್ಮರಣ ಗ್ರಂಥಕ್ಕೆ ಪ. ರಾಮನಂದರಾಯರ ನಾಟಕಗಳ ಕುರಿತು ವಿಮರ್ಶಾತ್ಮಕ ಲೇಖನ ಬರೆದು ಕಳುಹಿಸುತ್ತೇನೆ ಎಂದು ಬರೆದಿದ್ದರು. ಆದರೆ ಆ ಗ್ರಂಥ ಮುದ್ರಣಕ್ಕೆ ಹೋಗುವ ಮೊದಲೇ ಪಿ. ಕೆ. ನಾರಾಯಣರು ನಿಧನರಾದರು. ಅವರ ಲೇಖನ ಇಲ್ಲದಿರುವುದು ಒಂದು ಲೋಪವೇ. ಅವರ ಅಕಾಲ ನಿಧನಕ್ಕಾಗಿ ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ. ರಮಾನಂದರಾಯರ ಸಂಸ್ಮರಣ ಗ್ರಂಥವನ್ನು ಹೇಗೆ ಪ್ರಕಟಿಸಬೇಕೆಂದು ಅವರು ಸಲಹೆ, ಸೂಚನೆ ನೀಡಿ ಬರೆದ ಪತ್ರವನ್ನು ಇಲ್ಲಿ ಮುದ್ರಿಸಲಾಗಿದೆ.

—ಸಂಪಾದಕ

ಪೂಜ್ಯ ರಮಾನಂದರಾಯರ ವಿಚಾರದಲ್ಲಿ ಒಂದು ಗ್ರಂಥ ಪ್ರಕಟಿಸುವುದು ಯೋಗ್ಯವೆ ಆಗಿದೆ. ಆ ವಿಚಾರದಲ್ಲಿ ನನ್ನ ಅನಿಸಿಕೆಗಳನ್ನು ಈ ಕೆಳಗೆ ತಿಳಿಸಿರುತ್ತೇನೆ.
ಗ್ರಂಥದ ಹೆಸರು: "ಶ್ರೀ ಪಡುಕೋಣೆ ರಮಾನಂದರಾವ್ ಜೀವನ ದರ್ಶನ" ಎಂದಿರಬೇಕು.

ಗ್ರಂಥದಲ್ಲಿರುವ ಮುಖ್ಯ ವಿಭಾಗಗಳು:

1. ಸಂಸಾರಿಕ ಜೀವನ: ಅವರ ಹಿರಿಯರು. ಅವರ ಸಾಂಸಾರಿಕ ಜೀವನದ ವಿವಿಧ ಘಟನೆಗಳು. ಮಕ್ಕಳು ಅಳಿಯಂದಿರು-ಸೊಸೆ-ಇತ್ಯಾದಿ ಬಂಧುಗಳ ಸಮಗ್ರ ಪರಿಚಯ.

2. ಶಿಕ್ಷಣ ಶಿಕ್ಷಕ-ಅವರ ವಿದ್ಯಾಭ್ಯಾಸ, ಅವರು ರಾಸಾಯನಿಕ ಉಪನ್ಯಾಸಕರಾಗಿ ಮತ್ತು ಬಿ. ಎಸ. ಕಾಲೇಜಿನ ಪ್ರಿನ್ಸಿಪಾಲರಾಗಿ ಸಲ್ಲಿಸಿದ ಸೇವೆ.

3. ಸಾಹಿತ್ಯ ಕೃತಿಗಳ ಸವಿಮರ್ಶೆ; ಅವರ ಒಂದೊಂದು ಕೃತಿಯ ಕುರಿತು ಒಬ್ಬೊಬ್ಬರಿಂದ ವಿವರವಾದ ಸವಿಮರ್ಶೆ.

4. ರಮಾನಂದರಾಯರ ಒಲವು-ನಲಿವುಗಳು. ಸಿನೆಮಾ–ನಾಟಕ ಇತ್ಯಾದಿಗಳಲ್ಲಿ ಅವರಿಗಿದ್ದ ಒಲವಿನ ಕುರಿತು ಬಲ್ಲವರಿಂದ ಲೇಖನಗಳು.

5. ರಮಾನಂದರಾವ್–ವ್ಯಕ್ತಿತ್ವ. ಈ ಭಾಗದಲ್ಲಿ ಶ್ರೀ. ಮಾಸ್ತಿ, ಶ್ರೀ ವಿ. ಸೀ ಶ್ರೀ ಕಾರಂತ, ಮುಂತಾಗಿ ಅವರನ್ನು ಬಲ್ಲವರಿಂದ ಲೇಖನಗಳು.

ಪೂಜ್ಯ ರಮಾನಂದರಾಯರ ನಿಧನದ ಕುರಿತು ಶ್ರೀ ಪ್ರಭಾಶಂಕರರಾಯರು ತಿಳಿಸಿದ್ದರು. ಆ ಸುದ್ದಿಯನ್ನು ಮಹಾಲಿಂಗನಿಗೂ ಮದನಪ್ಪರಿಗೂ ತಿಳಿಸಿದ್ದೇನೆ. ಇಲ್ಲಿನ ನವಭಾರತ ದೈನಿಕದಲ್ಲಿ ನಾನು ಕೊಟ್ಟ ವಾರ್ತೆಯೂ ಉದಯವಾಣಿಯಲ್ಲಿ ಮುಂಬಾಯಿ ಸುದ್ದಿಗಾರರು ಕಳುಹಿಸಿದ ಸುದ್ದಿಯೂ, ಪ್ರಕಟವಾಗಿದೆ. ತರಂಗ ಪತ್ರಿಕೆಯಲ್ಲಿ ಗುಲ್ವಾಡಿಯವರು ಬರೆದ ಪರಿಚಯವೂ ಕಾರಂತರು ಬರೆದ ಲೇಖನವೂ ಬಂದಿದ್ದುವು.

ಪೂಜ್ಯ ರಮಾನಂದರಾಯರಿಗೆ ನಾಟಕದಲ್ಲಿದ್ದ ಒಲವಿನ ಕುರಿತು ನಾನು ಲೇಖನ ಬರೆಯುತ್ತೇನೆ. ಅವರಲ್ಲಿ ಸೋಹ್ರಾಬ್–ರುಸ್ತುಂ ಮತ್ತು ಮಂಡೋದರಿ ನಾಟಕಗಳಲ್ಲಿ ಅವರು ರುಸ್ತುಂ ಮತ್ತು ರಾವಣನ ಪಾತ್ರವಹಿಸಿದ ವಿಚಾರವನ್ನೂ ಇತರ ಪಾತ್ರಧಾರಿಗಳ ಕುರಿತೂ ಬರೆಯುವ ಪ್ರಯತ್ನ ಮಾಡುತ್ತೇನೆ. ಈ ಲೇಖನ ಯಾವಾಗ ನಿಮ್ಮ ಕೈ ಸೇರಬೇಕೆಂಬುದನ್ನು ದಯವಿಟ್ಟು ತಿಳಿಸಿರಿ.

(ಕೆಲವು ಸಲಹೆಗಳನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲ)

Konkani Sahitya Samiti Bombay

In his death, the Saraswat Community in particular has lost a great Scholar and educational luminary and such a loss is in fact irreparable. Ramanand Mam was intimately connected with our activities and he used to attend our drama festivals whenever he was in Bombay.

ಬಂಧು-ಬಳಗದವರ ಭಕ್ತಿ ಭಾವ

ಪ್ರಾಧ್ಯಾಪಕ-ಲೇಖಕ-ಅನುವಾದಕ ಪ. ರಮಾನಂದರಾಯರು

ವಾಸಂತಿ ಪಡುಕೋಣೆ

ದಿವಂಗತ ಶ್ರೀ ರಮಾನಂದ ಪಡುಕೋಣೆಯವರು ಹೆಸರುವಾಸಿಯಾದ ಕನ್ನಡ ಲೇಖಕರಾಗಿದ್ದರೆಂಬುದು ಎಲ್ಲರಿಗೂ ಗೊತ್ತು. ಅವರ ಬಗ್ಗೆ ಬರೆಯುವಷ್ಟು ಜ್ಞಾನ ನನ್ನಲ್ಲಿಲ್ಲ. ಅವರು ನನಗಿಂತ ಹಿರಿಯರು. ಆದರೆ, ತಕ್ಕಮಟ್ಟಿಗೆ ಅವರ ಸಹವಾಸದ ವಿಷಯವನ್ನು ಕುರಿತು ನಾಲ್ಕು ಮಾತು ಬರೆಯೋಣವೆಂದು ಧೈರ್ಯಗೊಂಡು ಬರೆಯುತ್ತಿರುವೆನು. ಅವರ ನಿಧನದಿಂದ ತುಂಬ ದುಃಖವಾಗುತ್ತಿದೆ.

1933 ರಲ್ಲಿ ಶ್ರೀ ರಮಾನಂದರಾಯರು ಪತ್ನಿ ಸುಶೀಲಾ ಮತ್ತು ಕಿರಿಯ ಮಗಳಾದ ಚಂದಮ್ಮನವರ ಕೂಡ ಮಂಗಳೂರಿಂದ ತಲಚೇರಿಗೆ ವರ್ಗವಾಗಿ ಹೋಗುತ್ತಿರುವಾಗ ನನ್ನ ಪತಿಯವರು ಅವರೆಲ್ಲರನ್ನು ಭೆಟ್ಟಿಯಾಗಲೇಬೇಕೆಂದು ಕಾಸರಗೋಡು ಸ್ಟೇಶನ್ನಿಗೆ ನನನ್ನು ಒತ್ತಾಯಮಾಡಿ ಕರಕೊಂಡು ಹೋದರು. ನಾನಾದರೋ ಆಗ 13 ವರುಷದ ಬಾಲೆ ಅತ್ತೆ ಮನೆಯಲ್ಲಿ ಬಾಳಿದವಳೇ ಅಲ್ಲ. ಆಗ ತಾನೇ ಮದುವೆಯಾದ ಏನೊಂದೂ ತಿಳಿಯದವಳು. ಅದರ ಮೇಲೆ ಅಜ್ಞಾನಿ. ನಾಚಿಕೆಯಿಂದ ಸದಾ ತಲೆ ಬಾಗಿಸಿರುವವಳು. ಆದರೆ, ಪತಿಯ ಆಜ್ಞೆ ಉಲ್ಲಂಘನೆ ಮಾಡುವುದು ಅನ್ಯಾಯವೆಂದು ತಿಳಿದು ಕಾಸರಗೋಡು ಸ್ಟೇಶನ್ನಿಗೆ ಹೊರಟೆನು. ಟ್ರೈನು ಬರೇ 10 ನಿಮಿಷ ಅಲ್ಲಿ ನಿಲ್ಲುತ್ತಿತ್ತು. ಜತೆಯಲ್ಲಿ ಕಾಫಿ, ತಿಂಡಿ ತೆಗೆದುಕೊಂಡು ಹೋಗಿದ್ದೆವು ಅದನ್ನೆಲ್ಲಾ ಕಿಟಕಿಯ ಮೂಲಕ ನನ್ನ ಅಣ್ಣಕೊಟ್ಟರು; ಅದೇ ನಮ್ಮ ಪರಿಚಯ.

ಕ್ರಮೇಣ, 1927ರಲ್ಲಿ ಪತಿಯವರು ಬೆಂಗಳೂರಿನ ಕೆಲಸ ಬಿಟ್ಟಿರುವ ಕಾರಣ ನಾವು ಮಂಗಳೂರನ್ನೇ ಸೇರಬೇಕಾಯಿತು. ಆಗ, ರಮಾನಂದರು ತನ್ನ ಪರಿಚಿತರಾದವರಿಂದ ಸದಾನಂದ ಪ್ರೆಸ್ಸಿನಲ್ಲಿ ಪ್ರೂಫ್‌ರೀಡರಾಗಿ ನಮ್ಮವರಿಗೆ ಕೆಲಸ ಕೊಡಿಸಿದರು.

ಆಗ, ನನ್ನ ಕಿರಿಯ ಮಗ ಗುರುದತ್ತ ಮೂರು ವರ್ಷದ ಮಗು. ನಮಗೆ ವಾಸ ಮಾಡಲು ಮನೆ ಬೇಕಲ್ಲವೇ ? ಶ್ರೀ ರಮಾನಂದರಾಯರ ಪತ್ನಿಯವರು ಕಾಯಿಲೆ ಬಿದ್ದು ಹವಾ ಬದಲಾವಣೆಗಾಗಿ ಬೆಂಗಳೂರಿಗೆ ಹೋಗಿದ್ದರು. ರಮಾನಂದರಾಯರು ಪತಿಯವರ ಹಿರೇ ಅಣ್ಣನ ಮಗ. ನಮಗೆ ತೀರ ಹತ್ತಿರದ ಸಂಬಂಧ. ಅವರು ತ್ರಾಸಿ

ದೇವರಾಯರ ಶಂಕರ ವಿಠಲ ಬಸ್ಸು ಕಂಪೆನಿಯ ಮುಂದುಗಡೆ ಇರುವ ನಾಲ್ಕು ರೂಮಿನ ಫ್ಲಾಟಿನಲ್ಲಿ ತಮ್ಮ ಐದು ವರ್ಷದ ಮಗ ಪ್ರಭಾಶಂಕರನೊಡನೆ ವಾಸಿಸು ತ್ತಿದ್ದರು. ನಾವು ಅವರಲ್ಲೇ 10 ತಿಂಗಳು ಉಳಿದುಕೊಂಡೆವು. ಪ್ರಭಾಶಂಕರನು ಅತಿಶಯ ತುಂಟ. ನಮ್ಮ ಗುರುದತ್ತನ ತುಂಟತನಕ್ಕೂ ಆತನ ತುಂಟತನಕ್ಕೂ ತುಂಬಾ ವ್ಯತ್ಯಾಸವಿತ್ತು. ಆದರೂ ಇಬ್ಬರೂ ಒಟ್ಟಿಗೆ ಆಡುವುದು ಜಗಳಾಡುವುದು ಇದ್ದೇ ಇತ್ತು. ಅವರ ಓಡಾಟ ತುಂಟತನ ನನ್ನ ಮನಸ್ಸನ್ನು ಮೆಚ್ಚಿಸುತ್ತಿತ್ತು.

ಶ್ರೀ ರಮಾನಂದರಾಯರು ಆಗ "ಗೌರ್ನಮೆಂಟ್" ಕಾಲೇಜಿನಲ್ಲಿ ಇಂಗ್ಲಿಷಿನ ಪ್ರೊಫೆಸರ್ ರಾಗಿದ್ದರು. ಆಗಲೇ ಬೊಂಬಾಯಿ ರೇಡಿಯೊ ಪ್ರೊಗ್ರಾಮನ್ನು-ಅದರಲ್ಲೂ ಸಂಗಿತವನ್ನು ನಾವು ಕೇಳಲು ಸಾಧ್ಯವಾಯಿತು. ಆಗಿನ ಆಶ್ಚರ್ಯ, ಕುತೂಹಲ ಎಷ್ಟೆಂದು ಹೇಳಲಿ?

ಶ್ರೀ ರಮಾನಂದರು ಕರ್ನಾಟಕ ಮತ್ತು ಹಿಂದುಸ್ತಾನಿ ಸಂಗೀತವನ್ನು ತಮ್ಮ ಕಾಲೀನ ಹಾರ್ಮೋನಿಯಮ್‌ನಿಂದ ಬಾರಿಸುತ್ತಾ ಇಂಪಾದ ಧ್ವನಿಯಲ್ಲಿ ಹಾಡುವುದನ್ನು ನಾನು ತನ್ಮಯಳಾಗಿ ಕೇಳುತ್ತಿದ್ದೆನು. "ಭಿಭಾಸ ಮತ್ತು ಯಮುನ ಕಲ್ಯಾಣ" ರಾಗ ಅವರಿಗೆ ಅತ್ಯಂತ ಪ್ರಿಯರಾಗಗಳಾಗಿದ್ದುವು. ಈ ಸಂಗೀತದಿಂದಲೇ ಅವರೂ ನಾನೂ ಮಿತ್ರ ರಾದೆವು. ಸಂಗೀತಜ್ಞಾನದ ಪರಿಚಯ ಅವರಿಂದಲೇ ನಾನು ಪಡೆದೆನು. ಸಂಗೀತ ವೆಂದರೆ ಚಿಕ್ಕಂದಿನಿಂದ ನನಗೆ ಅತೀ ಪ್ರಿಯ. ಆದರೆ, ನನ್ನದು ಅವರಿವರಲ್ಲಿ ಕೆಲ ಕೆಲವು ತಿಂಗಳು ಕಳೆದ ಜೀವನ. ಕಲಿಯಲು ಸಂದರ್ಭವೇ ಸಿಗದೇ ಹೋಯಿತು. ಆದರೆ ವಿದ್ಯಾರ್ಜನೆಯ ಹುಚ್ಚು ಇನ್ನೂ ಹೋಗಲಿಲ್ಲ.

ಸಂಗೀತ ಮಾತ್ರವಲ್ಲ, ಸಾಹಿತ್ಯ-ಅದರಲ್ಲೂ ಇಂಗ್ಲಿಷ್ ಸಾಹಿತ್ಯದಲ್ಲಿ ಅಭಿರುಚಿ ಯನ್ನುಂಟು ಮಾಡಿಸಿದವರು ರಮಾನಂದರಾಯರೇ. ಇದಕ್ಕಾಗಿ ನಾನು ಸದಾ ಋಣಿಯಾಗಿರುವೆನು. ನಮ್ಮ ಯಜಮಾನರು ಇಂಗ್ಲಿಷನಲ್ಲಿ ಉತ್ತಮ ಜ್ಞಾನ ಉಳ್ಳವರಾಗಿದ್ದರು. ಅದೆಷ್ಟೋ ಸಲ ಚಿಕ್ಕತಂದೆಗೂ ಅಣ್ಣನಮಗನಿಗೂ ವಾದವಿವಾದ ವಾಗುತ್ತಿತ್ತು. ಇಬ್ಬರೂ ತಾನು ಹೇಳಿದ್ದೇ ಸರಿ ಎಂಬುವವರು. ಇವರು ಅತಿಶಯ ಕುಪಿತರಾಗುವವರು, ಸಿಟ್ಟುಬಂದಾಗ ಗಡಗಡನೆ ನಡುಗುತ್ತಿದ್ದರು. ರಮಾನಂದ ರಾಯರೊ ಶಾಂತಿ ಪ್ರಕೃತಿಯವರು. ವಿಸ್ತಾರವಾಗಿ, ಸರಿಯಾಗಿ ಮನಸ್ಸಿಗೆ ಹತ್ತುವಂತೆ ಬಿಡಿಸಿ ಹೇಳುವವರು. ನಾವು ಹೇಡಿಯಂತೆ ಎಲ್ಲಾ ಕೇಳುತ್ತಿದ್ದೆನು. ನನ್ನ ಇಂಗ್ಲಿಷ್ ಜ್ಞಾನವಾದರೋ ಅತಿಕಡಿಮೆ. ಕೆಲವೊಂದು ಅರ್ಥವೇ ಆಗುತ್ತಿರಲಿಲ್ಲ. ಅಂತು, ಆ 10 ತಿಂಗಳು ಎಷ್ಟೊಂದು ಮನಸ್ಸಿಗೆ ತೃಪ್ತಿ ತಂದಿದ್ದುವೆಂದು ಹೇಳಲಸಾಧ್ಯ.

ನಾನು ಚಿಕ್ಕದಿನಿಂದಲೂ ವಾತ್ಸಲ್ಯ, ಪ್ರೀತಿಯನ್ನು ಯಾರಿಂದಲೂ ಸಿಕ್ಕದಿದ್ದ ಒಂದು ಪ್ರಾಣಿ. ಶ್ರೀ ರಮಾನಂದರ ಪ್ರತಿಭೆ ಮತ್ತು ಜ್ಞಾನವನ್ನು ಕಂಡು ಒಳಗೊಳಗೆ ಬೆಂದು ಬಳಕುತ್ತಿರುವವಳು. ದುರಾದೃಷ್ಟದಿಂದ ನಾವು ಅಲ್ಪ ಸಮಯದಲ್ಲೇ ಅನಿವಾರ್ಯವಾಗಿ ಅವರ ಮನೆಯಿಂದ ಬೇರೆ ಕಡೆಗೆ ಹೋಗಬೇಕಾಯಿತು. ಯಾರು ಏನು ಹೇಳಿದರೂ ನನಗೆ ಅವರಲ್ಲಿದ್ದ ಸದ್ಗುಣಗಳಿಗಾಗಿ ಶ್ರದ್ಧೆ, ಭಕ್ತಿ, ಪ್ರೇಮ ಕಡಿಮೆಯಾಗಿಲ್ಲ. ಅವರಂತೆ ನಾನು ಗಟ್ಟಿ ಸ್ವಭಾವದವಳು. ಬಾಯಿಬಿಟ್ಟು ನನ್ನ ಆಂತರಿಕ ದುಃಖ ಹೊರಗಡೆ ತೋರಿಸುವವಳಲ್ಲ.

ಶ್ರೀ ರಮಾನಂದರಾಯರು ತಮ್ಮ ಪರಿವಾರವನ್ನು ಅತಿರೇಕ ಪ್ರೀತಿಸುತ್ತಿದ್ದರು. ತಮ್ಮ ಮಕ್ಕಳಿಗೆ ಸದಾ ಬೆಂಬಲರಾಗಿ, ಉತ್ಸಾಹಕೊಟ್ಟು ತಮಗೆ ಆಗುವುದಕ್ಕಿಂತ ಹೆಚ್ಚು ಖರ್ಚು ಮಾಡಿ, ಪ್ರತಿಯೊಬ್ಬರಿಗೂ ಸಾಕಾದ ಶಿಕ್ಷಣ, ಪ್ರೋತ್ಸಾಹ ಕೊಟ್ಟು ಮುಂದರಿಸಿದ್ದರು. ಮಕ್ಕಳೂ ಕೊನೆಯತನಕ ಅವರನ್ನು ಪ್ರೇಮದಿಂದ, ಮರ್ಯಾದೆಯಿಂದ, ವಾತ್ಸಲ್ಯದಿಂದ ಕಂಡಿರುವರು. ಇಂತಹ ದೃಷ್ಟಾಂತಗಳು ಸದ್ಯದ ಕಾಲದಲ್ಲಿ ಸಿಗುವುದು ಕಡಿಮೆ. ಆದುದರಿಂದಲೇ ಅವರ ಜೀವನ ಸುಖವಾಯಿತು. ಅವರು ಮೇಧಾವಿ ಪತ್ನಿಯನ್ನೂ ಪಡೆದವರು. ಇಬ್ಬರ ಮನಸ್ಸು ಕಲಾ ಪ್ರೇಮದಲ್ಲಿ ಒಂದಾಗಿತ್ತು. ಅದೇ ಕೆಲವು ಕೊಂಕಣಿ ಭಾಷೆಯಲ್ಲಿ ಶ್ರೀಮತಿ ಸುಶೀಲಾ ಬರೆದ ನಾಟಕವನ್ನು ರಮಾನಂದರೇ ನಿರ್ದೇಶಿಸಿ ರಂಗಮಂಚದ ಮೇಲೆ ತೋರಿಸಿ ಎಲ್ಲರಿಂದ ಪ್ರಶಂಸೆ ಪಡೆದರು.

ಈಗಿನ ಪ್ರೇಮ ವಿವಾಹವಲ್ಲದಿದ್ದರೂ ಇಂತಹ ಅನ್ಯೋನ್ಯ ದಾಂಪತ್ಯ ಜೀವನ ಪಡೆದವರಿಬ್ಬರೂ ಧನ್ಯರು.

ಸಂಸಾರದಲ್ಲಿ ಯಾವುದಾದರೂ ಕೊರತೆ ಇಲ್ಲವೇ ಇಲ್ಲ. ಪ್ರತಿಯೊಂದಕ್ಕೂ ಸದ್ಗುಣ ಶೀಲತೆಯಿಂದ ಎದುರಿಸಿ ಮಾನವ ಜೀವನ ಕಳೆಯುವವರೇ ಧನ್ಯರು. ಕ್ಷಣಿಕವಾದ ಈ ಮಾನವ ಜೀವನದಲ್ಲಿ, ಜೀವಂತವಿದ್ದಾಗ ಏನಾದರೂ ಸತ್ಕಾರ್ಯ ಮಾಡಿ, ಅವರವರ duty ಮಾಡಿ ಸಂಸಾರದ ರಥವನ್ನು ಸಾಗಿಸುವುದೇ ನಮ್ಮ ಧರ್ಮ.

ಶ್ರೀ ಪಡುಕೋಣೆ ರಮಾನಂದರಾಯರೂ ಶ್ರೀಮತಿ ಸುಶೀಲಾಬಾಯಿಯವರೂ ಇಂತಹ ಜೀವನವನ್ನೇ ಸಾಗಿಸಿದರು. ಅದೇ ಸಂಸ್ಕಾರದಲ್ಲಿ ಹುಟ್ಟಿದ ಮಕ್ಕಳೂ ಕಲಾವಿದರಾಗಲು ಕಾರಣವಾಯಿತು.

ದುರ್ದೈವದಿಂದ ರಮಾನಂದರಾಯರು ಪತ್ನಿಯನ್ನು ಕಳಕೊಂಡರು. ಅವರ ನಿಧನದ ವಾರ್ತೆ ಕೇಳಿ ನಾನು ರಮಾನಂದರಾಯರಿಗೆ ಸ್ವಲ್ಪವಾದರೂ ಸಮಾಧಾನ

ವಾಗಲೆಂದು ನೋಡ ಹೋದೆನು. ಆದರೆ ಅವರ ಆ ಶಾಂತ ಮುಖ, ಸಹನ ಶಕ್ತಿ ನೋಡಿ ನನ್ನ ಬಾಯಿಂದ ಮಾತು ಹೊರಡಲಿಲ್ಲ.

ಇನ್ನೊಂದು ದುಃಖದ ಪ್ರಸಂಗ ಅವರು ಸಹಿಸಬೇಕಾಗಿ ಬಂತು. ಅವರ ಅತ್ಯಂತ ಪ್ರಿಯ ಮಗಳಾದ ಶಾಂತಿ ಅನೇಕ ವರ್ಷಗಳಿಂದ ಹಾಸಿಗೆ ಹಿಡಿದು, ಕಡೆಗೆ ಸ್ವರ್ಗಸ್ಥಳಾದಳು. ಆಗಲೂ ನಾನು ಅವರನ್ನು ನೋಡಹೋದೆ. ಅವರ "ಸ್ಥಿತಪ್ರಜ್ಞ" ದ ಮಾನಸಿಕ ದುಃಖ ತಮ್ಮಲ್ಲೇ ಸಹಿಸುತ್ತಿರುವುದು ನನ್ನಿಂದ ನೋಡಲಾಗಲಿಲ್ಲ. ಕಾರಣ, ಸಂತಾನವನ್ನು ಕಳೆದವರ ಮನಸ್ಸಿನ ತಾಪ ನಾನು ಅರಿತವಳೇ ಆಗಿದ್ದೆನಲ್ಲ?
ಅವರ ಅಂತ್ಯ ದರ್ಶನ ಮಾತ್ರ ನನ್ನಿಂದ ನೋಡಲಾಗದೇ ಅವರ ಮಕ್ಕಳನ್ನು ಸಹ ನೋಡಲಿಕ್ಕೆ ಹೋಗಲಿಲ್ಲ. ಇವರಿಂದ ನನ್ನ ಶ್ರದ್ಧೆ, ಭಕ್ತಿ, ಅವರ ಋಣ ಮರೆತೆನೆಂದಲ್ಲ ನನಗೆ ಬಾಯಿಯಲ್ಲಿ ಸಿಹಿ ಮಾತನಾಡಿ ಯಾರಿಗೂ ಸಮಾಧಾನ ಮಾಡುವ ಧೈರ್ಯ ವಾಗಲೀ, ಶಕ್ತಿಯಾಗಲೀ ಇಲ್ಲ.

ಶ್ರೀ ರಮಾನಂದರಾಯರ ಆತ್ಮಕ್ಕೆ ಚಿರಶಾಂತಿ ಇರಲೆಂದು ಮನಸ್ಸಿನಲ್ಲಿ ಪರಮಾತ್ಮನನ್ನು ಪ್ರಾರ್ಥಿಸಿದೆನು. ಅವರ ನಿಧನದಿಂದ ಅವರ ಅನೇಕ ಸಾಹಿತ್ಯ ಮಿತ್ರರಿಗೂ ಕನ್ನಡ ಸಾಹಿತ್ಯಕ್ಕೂ ಒಂದು ಧಕ್ಕೆಯೇ ಸೈ.

ಹುಟ್ಟಿದವರಿಗೆ ಸಾವು ಒಂದಿಲ್ಲದಿದ್ದರೊಂದು ದಿನ ತಪ್ಪದು. ಆದರೆ, ಶರೀರದ ಅನಾರೋಗ್ಯದಿಂದ ನರಳಿ ಇತರರಿಗೆ, ಭಾರವಾಗದೇ ರಮಾನಂದರಾಯರು ದೈವಾಧೀನರಾದದ್ದು ಸಮಾಧಾನ.

ಸಾಹಿತ್ಯದ ಹುಚ್ಚು

ಕಾಲೇಜು ವಿದ್ಯಾರ್ಥಿ ಆಗಿದ್ದಾಗಲೇ ಅವರಿಗೆ ಕನ್ನಡ-ಇಂಗ್ಲಿಷ್ ಉಭಯ ಸಾಹಿತ್ಯದ ರುಚಿ ಬಲವಾಗಿತ್ತು. ಇಂಗ್ಲಿಷ್ ಭಾಷೆಯಲ್ಲಿ ಉತ್ತಮ ಕೃತಿಗಳೆಲ್ಲವನ್ನೂ ಓದಿ ಅದರ ಸ್ವಾರಸ್ಯವನ್ನು ತಮ್ಮ ಧರ್ಮಪತ್ನಿ ಶ್ರೀಮತಿ ಸೀತಾಬಾಯಿ ಅವರಿಗೆ ತಿಳಿಸಿ ಅವರಿಗೂ ಬರೆಯುವ ಪ್ರೀತಿಯನ್ನು ಹುಟ್ಟಿಸಿದರು. ಅವರ ಚಿಕ್ಕಪ್ಪ ವಿಠಲ ರಾಯರಿಗೂ (ಇವರು ಅನಂತರ ಕಾನಂಗಾಡಿನ ಸ್ವಾಮಿ ರಾಮದಾಸರಾಗಿ ಪ್ರಸಿದ್ಧರಾದರು) ರಮಾನಂದ ರಾಯರಿಗೂ ಸಾಹಿತ್ಯದ "ಹುಚ್ಚು" ಹಿಡಿದ ಫಲವಾಗಿ, ದೀರ್ಘ ಪತ್ರ ವ್ಯವಹಾರವು ಅನೇಕ ವರ್ಷಗಳ ತನಕ ನಡೆದಿತ್ತು. ಈ ರೀತಿ ರಮಾನಂದರಾಯರ ದೃಷ್ಟಿಕೋನವು ವಿಶಾಲವಾಗಿ, ಇಂಗ್ಲಿಷ್ ಮೂಲಕ ಪ್ರಪಂಚದ ಉತ್ತಮ ಸಾಹಿತ್ಯದ ಪರಿಚಯವಾಗಿ ಅವರ ಜ್ಞಾನವೂ, ಆಸಕ್ತಿಯೂ ಬೆಳೆಯಿತು. ಆಲ್ಡಸ್ ಹಕ್ಸ್ಲಿ, ರೋಮೆಂರೋಲಾ, ಜಾರ್ಜ್ ಬರ್ನಾರ್ಡ್ ಶಾ, ಒಸ್ಕರ್ ವಾಲ್ಡ ಸೊಮರ್‌ಸೆಟ್ ಮೋಹಾಂ, ಎನ್ಟೋನ್ ಚೆಕಾಫ್ ಹಾಗೂ ಲಘು ಹಾಸ್ಯ ಬರಹಗಾರರಾದ ಸ್ಟೀಫನ್ ಲೀಕಾಕ್, ಪಿ. ಜಿ. ವೋಡ್‌ಹೌಸ್ ಇತ್ಯಾದಿ ಅವರ ಮೆಚ್ಚುಗೆಯ ಬರಹಗಾರರು.

ಪ್ರಭಾಶಂಕರ

P. R.

L. Venkata Rao, Bombay

Our Ramanand was, I think, one of the first among the Saraswats of our district (S.K.), to drop the appellation "RAO" after his name and took his official name as just P.R, which reminds one of such well-known personalities as C.R. M. S., Vi. Si. and others.

It was in my school days that I first came to know Ramanand only by name and sight. I was studying in the Third form of Ganapathy High School and he was in the Senior Intermediate class of Government College. 5 standards senior to me. My elder sister's house was in Attavar, a Suburb of Mangalore and he was living with his Uncle Mr. Mudbidri Ganesh Rao a few houses down the same street. He was daily passing by our house to go to the College with two of his elder cousins. In my sister's house also, there were several students besides myself. So, often, we were also going to our respective classes in a group. When I joined the Government college for the Fourth Form, Ramanand had already passed the senior Intermadite and gone to Madras for B.A. (Hons) Course in Chemistry.

I used to spend my summer and X'mas holidays with my other relatives living at places other thanMangalore During the holidays in December 1915, I went to Hosdurg (now known as Kanhangad) to my uncle Trikannad Sadashiv Rao, my father's cousin. One day, during that time, we were invited to the house of Padukone family- who were living next-door to my Uncle's. It happened to be the Betrothal or Engagement Ceremony of Ramanand. While sitting with my relatives in a group waiting for the Bride's Party, I witnessed the arrival of some four or five imposing looking Lawyers, dressed in black coats and white turbans and with fierce-looking moustaches. One of them was Father-in-Law

to be of Ramanand. Little did I dream then, that he would be my father-in-Law also after 6 years. I married the younger sister of Ramanand's wife and so became a close relative of his. Ramanand, by then had finished his Honours Course and taken up Service as a Lecturer in Chemistry in Government Colleges affiliated to the Madras University. I went to Burma (Rangoon) and got a job in an educational Institution.

Being in the Educational field, we had common summer holidays. During such holidays, sometimes I used to go to my father-in-law's place at Puttur. At that same time Ramanand also used to be there from Mangalore where he was Lecturer in the Government college. It seems to me that a greater part of his service was in the Mangalore Government college. since we had to pass through Mangalore to go Puttur from Rangoon and also return by the same route, my family and I spent some days at Ramanand's house during most of our visits.

During one such summer vacation, while we were together at Puttur. I found out that Ramanand was fond of Classical music-both Hindustani and Carnatic. He had a gramophone of Old type and several good records....variety of songs of the then famous actors like Bal Gandharv, Pendaecar of Maharashtra stage and also of Bidaram Krishnappa ans songs of Purandara Dasa. Occasionally, I used to hear Ramanand humming these songs feelingly, specially the songs of Purandaradasa. He was a fairly good Flute Player also. I wonder why he gave up this Fine Art........

A few years later, we were again together at Puttur. One day, I found him writing something on a piece of paper. On closer look, I saw that he was making a list of Kannada words beginning with the letter "ಬ". Later, I found this list to be the basis of one of his most hilarious in Kannada. "ಬಣ್ಣದ ಬೀಸಣಿಗೆ"

I was told that Ramanand had already established himself as a well-known writer in Kannada and English with his several dramas, stories and translations of the works of famous English and Russian writers. It was a surprise to me that a Science Professor of some eminence taking such keen interest in Fine Arts So, once I asked him how he had such affinity towards Art when he was a Lecturer in Chemistry. He told me that on passing Senior Intermediate with credit in several subjects, he had applied to the Presidency College, Madras for a seat in B. A. (Hons). Course in English Literature ; but, instead, he was offered a seat in Chemistry and he had to accept it. He must have done equally well in both English and Science in the Senior intermediate.

He was posted in Mangalore for several years. Wheneve, we came from Burma we used to stay in his house. His was an "Open House" always having some relatives or guests-guests like T. P. Kailasam, G. P Rajaratnam and o'her top-ranking literary gaints of Karnataka. Shivaram Karanth was a constant guest. It was Ramanand who discovered the versatile talents in Karanth in the early years-latent tn him perhaps for lack of opportunities or finance. Ramanand it was, again, who suggested to our father-in-law that Karanth would be very helpful to him in his activities. Our father-in-law was then Puttur Taluk Board President and fDistrict Board Member. He was devoting all his attention to the uplift of villagers-particularly their education. Karanth proved very helpful to our father in-law in such activities........

I should not fail to record here, my deed felt gratitude to Ramanand and his wife Sushila for undertaking the onerous responsibility of looking after my wife during her difficult delivery of my twin-daughters Shalini-Malini........ in spite of their financial worries. I am told that these fine names for the twins were also chosen by Ramanand.

As he and I grew older the difference of 5[redacted] years narrowed and we felt very close to each other. He looked upon me

as a brother rather than a Co-Brother. Rarely have I seen him lose his temper and poise of mind. Among the old and retired persons who meet every evening in the Chembur Garden (Bombay) where I always go are two old students of Ramanand when he was Professor of Chemistry in Mangalore College. They were telling me that of all the Professors in the college with whom they studied, Ramannd was the most lovable....

Yes, Ramanand was a Man of Peace with ever present smile on his face and God granted him a peaceful Death with least pain and in the shortest time which medical men call Cardiac arrest a type of death which we all old people pray for........

From Letter U. S. Ramachandran

........The manner of your dear father's death reveals how well he had lived his life. It is not given to all to die in the way he died I. e. with the name of the Lord on his lips. Ram to whomhe was so much devoted must have received him in his arms and granted him peace which nothing can mar. He inherited from his uncle Vittu Bappa his literary tastes and devotion to the Lord. I had the joy of meeting him here in here in Anandashram (Ramanagar) in 1942 or so and could not help falling in love with him. He was so simple, modest and devout. After that I had many occasions to see him here at Madras. He gave me the privilege of reviewing his beautiful play "Mirdad" in "Brahmavadin" of which I was the Editor. In a short but sweet letter he expressed his great appreciation of the review. I am glad his translation of the war novel "All Quiet on the western front 'has atlast been published. His contribution in the field of Kannada and English literature will be remembered by discerning scholars. We have lost in him a truly gentle, cultured soul. May God help you all to follow in his footsteps .... that is the best way to keep alive his memory........

ಮಮತೆಯ ಮಾತಾ-ಪಿತೃರು

ಶಾಲಿನಿ ಉದ್ಯಾವರ್

ಸ್ವರ್ಗವಾಸಿ ಶ್ರೀ ರಮಾನಂದ ಪಡುಕೋಣೆ ಮತ್ತು ಸ್ವರ್ಗವಾಸಿ ಸೌ॥ ಸುಶೀಲಾ ಬಾಯಿ ಪಡುಕೋಣೆ ಇವರು ನನ್ನ ತಂದೆ-ತಾಯಿಯ ಸಮಾನರಾಗಿ ನನ್ನ ಕಷ್ಟ ಕಾಲದಲ್ಲಿ ನನಗೆ ಬೆಂಬಲ ಮತ್ತು ಧೈರ್ಯಕೊಟ್ಟು ನನ್ನನ್ನು ಇಂದಿನ ಈ ಒಳ್ಳೆಯ ಪರಿಸ್ಥಿತಿಗೆ ತಂದು ನಿಲ್ಲಿಸಿದರು. ಇವರನ್ನು ನಾನು ಯಾವಾಗಲೂ ಮರೆಯುವ ಹಾಗಿಲ್ಲ. ನಾನು ಪಡುಕೋಣೆ ಕುಟುಂಬದವಳಲ್ಲ. ಇನ್ನೊಂದು ಕುಟುಂಬದಲ್ಲಿ ಹುಟ್ಟಿದ್ದರೂ ನನ್ನನ್ನು ಅವರು ತಮ್ಮ ಸ್ವಂತ ಮಗಳಂತೆ ನೋಡಿಕೊಂಡಿದ್ದರು. ನಾನು ಅವರನ್ನು ಅವರ ಇತರ ಮಕ್ಕಳು ಕರೆಯುವಂತೆ "ಅನ್ನೂ-ಅಮ್ಮಾ" ಎಂತಲೇ ಕರೆಯುತ್ತಿದ್ದೆ. ಅವರಿಗೆ 4 ಹೆಣ್ಣು ಮಕ್ಕಳು-ಒಬ್ಬ ಗಂಡು ಮಗ. ನಾನು ಅವರಿಗೆ 5ನೇಯ ಹೆಣ್ಣುಮಗಳಾಗಿದ್ದೆನು. ನನಗೆ ಸ್ವಂತ ಅಣ್ಣ ಇಲ್ಲದಿದ್ದರೂ ಅವರು ನನಗೆ ಒಬ್ಬ ಅಣ್ಣನನ್ನು ಒದಗಿಸಿಕೊಟ್ಟರು.

ನನಗೆ ಅವರ ಮೊದಲ ಪರಿಚಯವಾದುದು ನಾನು ಮದರಾಸಿಗೆ ಒಮ್ಮೆ ಹೋದ ಸಂದರ್ಭದಲ್ಲಿ. ಅವರ ನಾಲ್ಕನೆಯ ಮಗಳಾದ ಯಶೋಧರೆಗೆ ಆಗ ಮದುವೆ ಆಗಿರಲಿಲ್ಲ. ಅವಳ ಜೊತೆಗೆ ನಾನು ನಾಟಕದಲ್ಲಿ ಪಾತ್ರವಹಿಸಿದ್ದೆನು. ಅವಳ ಸ್ನೇಹ ಒದಗಿತು. ಹಾಗೇ ನಾನು ಬೊಂಬಾಯಿಗೆ ಹಿಂತಿರುಗಿ ಬಂದ ಕೆಲವೇ ವರ್ಷಗಳಲ್ಲಿ ಯಶೋಧರೆಯೂ ಮದುವೆಯಾಗಿ ಚಿ॥ ಸೌ॥ ಯಶೋಧರಾ ಭಟ್ ಆಗಿ ಬೊಂಬಾಯಿಗೆ ಬಂದಳು. ನನಗೆ ಆ ಸಮಯದಲ್ಲಿ ಜೀವನದಲ್ಲಿ ತುಂಬಾ ಕಷ್ಟ ನಷ್ಟಗಳಾಗಿ ನನಗೆ ಒಂದು ಸರಿಯಾದ ಸ್ಥಿರವಾದ ನೆಲೆಯೇ ಇರಲಿಲ್ಲ. ಯಶೋಧರೆಯು ಹಡೆದು ಅವಳಿ-ಜವಳಿ ಹೆಣ್ಣು ಮಕ್ಕಳು ಹುಟ್ಟಿವೆ ಎಂದು ತಿಳಿಯಿತು. ಆ ಮಕ್ಕಳನ್ನು ಬೆಳೆಸುವುದು ಬಹಳ ಕಷ್ಟದ ವಿಷಯವಾಗಿತ್ತು. ಏಕೆಂದರೆ ಜವಳಿ ಮಕ್ಕಳಲ್ಲಿ ಒಂದು ಮಗು ತೀರಾ ಕಮ್ಮಿ ತೂಕ ಪಡೆದಿತ್ತು. ಅವಳ ತಾಯಿ, ಅವಳ ಸಹಾಯಕ್ಕೆ ಬಂದು ಆ ಮಕ್ಕಳನ್ನು ಬಹಳ ಜೋಪಾನವಾಗಿ ನೋಡಿಕೊಂಡರು. ಮಕ್ಕಳು ಬೆಳೆಯುತ್ತಿರುವಂತೆ ಅಮ್ಮನು ಆ ಮಕ್ಕಳ ಆರೈಕೆಗಾಗಿ ನನ್ನನ್ನು ಕೇಳಿಕೊಂಡರು. ನಾನು ಒಪ್ಪಿ ಅಂದಿನಿಂದ ಯಶೋಧರೆಯ ಮನೆಯಲ್ಲೇ ವಾಸಮಾಡಲು ಆರಂಭಿಸಿದೆ. ನನ್ನಿಂದ ಅವರಿಗೆ ಸಹಾಯ ಅವರಿಂದ ನನಗೆ ಒಂದು ಆಸರೆ ಲಭಿಸಿತು. ಪರಸ್ಪರ ಸಂಬಂಧ ಬಲವಾಯಿತು.

ಅಮ್ಮನ ಉಪಕಾರ ಮರೆಯಲಾರೆ. ಅವರು ಇತರರಿಗೆ ಸದಾ ಉಪಕಾರ ಮಾಡು ವುದು ಅವರ ಸ್ವಭಾವ, ಹುಟ್ಟುಗುಣವಾಗಿತ್ತು. ಮನೆ ಮಕ್ಕಳಿಗೆ ಅಡಿಗೆ ಹೇಳಿ ಕೊಡುವುದು, ನಾಟಿ ಔಷಧಿಗಳನ್ನು ತಯಾರಿಸಲು ತರಬೇತು ಕೊಡುವುದು ಇತ್ಯಾದಿ ಅವರ ಇಷ್ಟದ ಕೆಲಸವಾಗಿತ್ತು. ಅವರ ಮನೆಯಲ್ಲಿ ಅಡಿಗೆಗೆ ಬಂದ ಒಬ್ಬ ಚಿಕ್ಕ ಹುಡುಗ ಇಂದು ಬೊಂಬಾಯಿಯಲ್ಲಿ Flat ಕೊಂಡು ಕೊಂಡು ಸಂಸಾರವನ್ನು ಸುಗಮವಾಗಿ ಸಾಗಿಸುತ್ತಿದ್ದಾನೆ. ಅಮ್ಮನ ಹತ್ತಿರ ಆ ಹುಡಗ ಅಡಿಗೆಯ ಎಲ್ಲ ಮಾಹಿತಿ ಪಡೆದುದು ಅವನ ಕೃತಜ್ಞತೆಯೇ ನನಗೆ ಇಂದು ಒಂದು ಗುರುತಾಗಿದೆ. ಅವನ ಮನೆ ಬೆಳಗಿಸಿದುದು ಅಮ್ಮನ ಉತ್ತಮವಾದ ತರಬೇತಿಯಿಂದ ಎಂದು ಅವನು ಯಾವಾಗಲೂ ಹೇಳುತ್ತಿರುತ್ತಾನೆ. ಈಗ ಆ ಹುಡುಗ ಒಬ್ಬ ಗಣ್ಯಪುರುಷ. ಎಲ್ಲ ಮದುವೆ ಮುಂಜಿಗಳಲ್ಲಿ ಪೂಜೆ ಸಂಸ್ಕಾರಗಳಲ್ಲಿ-ಸಾಮಾಜಿಕ ಸಂದರ್ಭಗಳಲ್ಲಿ ರುಚಿ-ರುಚಿಯಾದ ತಿಂಡಿ–ತೀರ್ಥಗಳನ್ನು ಮಾಡಿ ಬಹಳ ಹೆಸರು ವಾಸಿಯಾಗಿದ್ದಾನೆ. ನಮ್ಮ ಸಾರಸ್ವತ ಜನರು ಮಾತ್ರವಲ್ಲ, ಬೊಂಬಾಯಿಯ ಹಲವಾರು ಜನರು ಅವನ ಸಹಾಯ ಕೋರುವಂತಿದೆ. ಆತನ ಜೀವನ ಈಗ ನೆಮ್ಮದಿಯಾಗಿದೆ. ಇಂತಹ ಅನೇಕ ಸಂಸಾರಗಳು ಅವರಿಂದ ಉದ್ಧಾರವಾಗಿವೆ.

ಆದರೆ ಅಮ್ಮನವರ ಅಂತ್ಯಕಾಲ ಬಹಳ ಶೋಚನೀಯವಾಗಿತ್ತು. ಕಾಯಿಲೆ ಅವರಿಗೆ ತುಂಬಾ ತೊಂದರೆ ಕೊಟ್ಟಿತು. ಆಗ ನಾನು ನರ್ಸಿಂಗ್ ವಿದ್ಯೆಯಲ್ಲಿ ತರಬೇತು ಪಡೆದಿದ್ದೆ. Dr. Shah ಅವರ P. A. ಆಗಿ ಅವರ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ಅಮ್ಮನವರನ್ನು ಆ ಆಸ್ಪತ್ರೆಗೆ ಸೇರಿಸಬೇಕಾಯಿತು. ಆಗ ಡಾಕ್ಟರ್ ನನ್ನನ್ನು ಅವರ ಶುಶ್ರೂಸೆಗೆ ಬಿಟ್ಟುಕೊಟ್ಟರು. ಒಂದು ದಿನ ಡಾಕ್ಟರು ಅಮ್ಮನವರನ್ನು ವಿಚಾರಿಸುವಾಗ "Halo Mr. Sushila Bai How are you ? How do you feel–what do you want? ಎಂದು ಕೇಳಿದರು. ಆಗ ಅಮ್ಮನ ಉತ್ತರ-"I donot want anything mr. I Sir requisting you one favour. I want one nurse to be with me all time, can you spare her to me ?" ಒಡನೆ ವೈದ್ಯರು ನನಗೆ ರಜಾ ಕೊಟ್ಟು ಅಮ್ಮನೊಡನೇ ಯಾವಾಗಲೂ ಇರಲು ಅನುಮತಿ ಕೊಟ್ಟರು. ಅಮ್ಮನಿಗೆ ಎಷ್ಟು ಸಂತೋಷವಾಯಿತು ಎಂದರೆ ಆ ವೈದ್ಯರು ದೇವರ ಸಮಾನ ಎಂದು ಅವರನ್ನು ಹೊಗಳಿದರು. ಆ ಗಳಿಗೆಯಿಂದ ನಾನು ಅವರ ಕೊನೆಯ ಉಸಿರಾಡುವ ವರೆಗೆ ಅವರ ಜೊತೆಗೆ ಆಸ್ಪತ್ರೆಯಲ್ಲಿದ್ದೆ. ನಾನು ಒಂದು ಗಳಿಗೆ ಅವರನ್ನು ಅಗಲಲು ಬಿಡುತ್ತಿರಲಿಲ್ಲ! ರಾತ್ರೆ ಅವರ ಮಗ್ಗುಲಲ್ಲೇ ಮಲಗಬೇಕಾಗಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಸಣ್ಣ ಮಕ್ಕಳಿಗೆ ಮುತ್ತುಕೊಡುವಂತೆ ನನಗೆ ಮುತ್ತಿಕ್ಕಿದರು! ನನ್ನ ಸ್ವಂತ ತಾಯಿ ಕೂಡ ನನಗೆ ಮುದ್ದು ಮಾಡಿದ ನೆನಪು ನನಗಿಲ್ಲ. ಅಮ್ಮನ ಆ ಪ್ರೇಮ ನಾನು ಎಂದೂ

ಮರೆಯಲಾರೆ. ಅವರು ಅಂದು ನನಗೆ ತೋರಿಸಿದ ಮಮತೆ ನನ್ನ ಮನಸ್ಸಿನ, ಹೃದಯಾಂತರಾಳದಲ್ಲಿ ಅಚ್ಚೊತ್ತಿ ನಿಂತಿದೆ. ದಿನಗಳು ಕಳೆದಂತೆ ಅವರ ದೇಹಾರೋಗ್ಯ ಬಹಳ ಕೆಟ್ಟುಹೋಯಿತು. ಆಗಾಗ್ಗೆ ಪ್ರಜ್ಞೆ ತಪ್ಪುತ್ತಿದ್ದರು. ಎಚ್ಚರವಾದೊಡನೆ "ಏತಕ್ಕಾಗಿ ನನಗೆ ಪುನಹ ಇಲ್ಲಿಗೆ ಎಳತಂದಿರಿ?" ಎಂದು ನಮ್ಮನ್ನು ಅಸಮಾಧಾನದಿಂದ ಕೇಳುತ್ತಿದ್ದರು. ಅವರ ಸ್ಥಿತಿ ಚಿಂತಾಜನಕವಾಗಿತ್ತು. ದೇಹ ಒಂದೇ ಭೂಮಿಯಲ್ಲಿತ್ತು. ಕೆಲವೊಮ್ಮೆ 24 ಗಂಟೆಗಳ ಕಾಲ ಪ್ರಜ್ಞೆ ಇರುತ್ತಿರಲಿಲ್ಲ. ಪ್ರಜ್ಞೆ ಬಂದಾಗ ಒಮ್ಮೆ ತಮ್ಮ ಪತಿಯವರನ್ನು ಹತ್ತಿರ ಕರೆದು ಅವರ ಕೈಯನ್ನು ಹಿಡಿದು "ನಮಗೆ ನಾಲ್ಕು ಹೆಣ್ಣು ಮಕ್ಕಳಿಲ್ಲವೇ? (ನನ್ನ ಕೈ ಹಿಡಿದು) ಇವಳು ನಮಗೆ 5ನೇ ಹೆಣ್ಣುಮಗಳು. ಜ್ಞಾಪಕ ವಿರಲಿ!" ಎಂದರು. ಇಂದಿಗೂ ನಾವು ಎಲ್ಲರೂ ಸ್ವಂತ ಅಕ್ಕ-ತಂಗಿಯರ ಹಾಗೆಯೇ ಇದ್ದೇವೆ.

ಶ್ರೀ ಸೌ॥ ತಾಯಿಯವರು ತೀರಿಹೋದನಂತರ ಶ್ರೀ ತಂದೆಯವರು ಏಕಾಂಗಿಯಾದರು. ಹೆಚ್ಚಾಗಿ ಓದುವುದು ಬರೆಯುವುದು ಮಾಡಿಕೊಂಡು ತಮ್ಮ ದುಃಖವನ್ನು ಮರೆಯಲು ಪ್ರಯತ್ನಿಸುತ್ತಿದ್ದರು. ಮಕ್ಕಳ ಮನೆಗಳಲ್ಲಿ ಆಗಾಗ್ಗೆ ಪ್ರವಾಸ ಕೈಕೊಳ್ಳುತ್ತಿದ್ದರು. ಕೊನೆಯ ವರುಷಗಳಲ್ಲಿ ಮಗನ ಮನೆ ಬಿಟ್ಟು ಎಲ್ಲೂ ಹೋಗಲಿಲ್ಲ. ಸಾಯಂಕಾಲ Walk ಮಾಡಿಕೊಂಡು ಬರುತ್ತಿದ್ದರು. ರೇಡಿಯೋ ಕೇಳುವುದು, T. V. ನೋಡುವುದು ಅವರ ದಿನಚರಿಯಾಯಿತು. ಅವರ ಇಳಿ ವಯಸ್ಸಿನಲ್ಲಿ ಸಂಸಾರದಲ್ಲಿ ಒಂದು ದುರಂತ ಆಯಿತು. ಅವರ ಎರಡನೇ ಮಗಳಾದ ಸೌ॥ ಶಾಂತಿ ನಿಧನಳಾದಳು. ಯಾವ ತಂದೆ ತನ್ನ ಕಣ್ಣಮುಂದೆ ಮಗಳು ಮರಣವಾದುದನ್ನು ಸಹಿಸಬಲ್ಲ? ಸೌ॥ ಶಾಂತಿಗೆ ಎಲ್ಲ ಸುಖವೂ ಇತ್ತು. ಆದರೆ ದೇವರು ಏನಾದರೂ ಒಂದು ಕೊರತೆಕೊಟ್ಟ ಕರ್ಮ ಫಲ ಅನುಭವಿಸಬೇಕಾಗುತ್ತದೆ. ತಂದೆಯವರ ನಾಲ್ಕನೇ ಮಗಳು ಯಶೋಧರೆಯೂ ಅಂಗವಿಕಲೆ. ಈ ಇಬ್ಬರು ಹೆಣ್ಣು ಮಕ್ಕಳಿಗಾಗಿ ಅವರು ಕೊರಗುತ್ತಿದ್ದರು. ಆದರೂ ತಮ್ಮ ಮನಸ್ಸಿನಲ್ಲಿದ್ದ ಚಿಂತೆ ತೋರಗೊಡುತ್ತಿರಲಿಲ್ಲ. ತನಗೆ ಮೈಯಲ್ಲಿ ಹುಶಾರಿಲ್ಲದಿದ್ದರೂ ಯಾರಿಗೂ ಹೇಳುತ್ತಿರಲಿಲ್ಲ. ಮಗನ ಹತ್ತಿರ ಹೇಳಿದರೆ ಅನಾವಶ್ಯಕ ಭಯಕ್ಕೆ ಕಾರಣ, ಅಲ್ಲದೆ ಖರ್ಚಿಗೆ ದಾರಿ ಎಂದು ತನ್ನ ಕಾಯಿಲೆಯನ್ನು ಮೂಕರಾಗಿ ಅನುಭವಿಸುತ್ತಿದ್ದರು.

ನನಗೆ ಬಿಡುವಾದಾಗ ನಾನು ಅವರನ್ನು ನೋಡಲು ಹೋದಾಗ ಅವರಿಗೆ ಎಷ್ಟು ಸಂತೋಷವಾಗುತ್ತಿತ್ತೋ—ನನಗೆ ಹೇಳಲಾರದ ವಿಷಯವಾಗಿದೆ. ನನ್ನ ಈಗಿನ ನೆಮ್ಮದಿಯ ಜೀವನ ಅವರಿಗೆ ಸಂತಸ ನೀಡುತ್ತಿತ್ತು. ನನಗೆ ಈಗ ನನ್ನದೇ ಆದ ಒಂದು ಮನೆ–ಸಂಪಾದಿಸುವ ಮಗ–ಅಕ್ಕರೆಯ ಸೊಸೆ-ಮುದ್ದು ಮೊಮ್ಮಗಳು ಇತ್ಯಾದಿ ಇದ್ದು ಜೀವನ ಸುಖವಾಗಿದೆ. ನನಗೆ ಮಗನ ಮಗು ಹುಟ್ಟಿದ ವೇಳೆಗೆ

ಮಗ ಮೊಮ್ಮಗನನ್ನು ಕರೆಕೊಂಡು ಅವರಲ್ಲಿ ಹೋದೆ-ತಂದೆಯವರ ಕಾಲ ಮೇಲೆ ಮಗನನ್ನು ಹಾಕಿ ಆಶೀರ್ವಾದ ಪಡೆಯಲು ಹೋದಾಗ—'ಶಾಂತಮ್ಮ—ನನ್ನ ಹತ್ತಿರ ಮಗುವನ್ನು ತರಬೇಡ. ನನಗೆ Herpes ಆಗಿದೆ. ಅದು ಅಂಟುರೋಗವಂತೆ" ಎಂದರು. ಅವರಂತಹ ಪೂಜ್ಯ ಹಿರಿಯರ ಆಶೀರ್ವಾದ ಇದ್ದರೆ ಮಗುಗೆ ಏನೂ ಆಗಲಾರದು ಎಂಬ ನನ್ನ ಬಲವಾದ ನಂಬಿಕೆಯಿಂದ ಮೊಮ್ಮಗುವನ್ನು ಅವರ ಕಾಲ ಮೇಲೆ ಹಾಕಿ ಆಶೀರ್ವಾದ ಪಡೆದೆ. ಅವರ ಕಣ್ಣುಗಳಲ್ಲಿ ಮಮತೆಯ ಕಣ್ಣೀರು ತುಂಬಿದುವು. "ಮನುಷ್ಯನಿಗೆ ಕಾಯಿಲೆ ಬರಬೇಕಾದರೆ ಹೇಗೋ ಬಂದೇಬಿಡುತ್ತದೆ. ನೆಪ ಬೇರೆಯಿಲ್ಲ" ಎಂದಾಗ ಅವರ ಮುಖದ ಮೇಲೆ ನಗು ಬಂತು. ಮತ್ತೆ ಎಷ್ಟೋ ಹೊತ್ತು ಹರಟೆ ಹೊಡೆಯುತ್ತಾ ಕುಳಿತೆ. ಅಗ್ನಿ ಸರ್ಪದ ನೋವು ಇದ್ದರೂ ಸಹನ ಶಕ್ತಿಯಿಂದ ನನ್ನೊಡನೆ ಮಾತನಾಡಲು ಕುಳಿತರು. ಆ ನಗುಮುಖ ನಾನು ಎಂದೂ ಮರೆಯುವ ಹಾಗಿಲ್ಲ.

ನಾನು ಭೇಟಿಯಾದ 22 ದಿನಗಳಲ್ಲೇ ಅವರನ್ನು ದೇವರು ಕರೆಕೊಂಡು ಹೋದರು. ನನಗೆ ಮಾತ್ರ ಅವರ ಕೊನೆಯ ದರ್ಶನದ ಭಾಗ್ಯ ಸಿಗಲಿಲ್ಲ. ಅವರು ತೀರಿಹೋದ ಮರುದಿವಸ ಮಧ್ಯಾಹ್ನ ತಿಳಿಯಿತು. ತಕ್ಷಣ ತಿಳಿದಿದ್ದರೆ ನಾನು ಹೋಗಿ ಅವರ ಅಂತಿಮ ದರ್ಶನ ಪಡೆಯುತ್ತಿದ್ದೆ. ನನಗೆ ದೂರವಾಣಿ ಮೂಲಕ ವಾರ್ತೆ ತಿಳಿಸಲು ತೊಂದರೆ ಆದುದು ನನ್ನ ದೌರ್ಭಾಗ್ಯ. ನನಗೆ ಋಣಾನುಬಂಧ ಇಲ್ಲ ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡಿದ್ದೇನೆ.

ರಾಮ–ಸೀತಾ ಜೋಡಿ ಇದ್ದಂತೆ ಇದ್ದ ಮಾತಾ ಪಿತೃರ ಆತ್ಮಕ್ಕೆ ದೇವರು ಶಾಂತಿ ಕೊಡಲಿ ಎಂದು ನಾವೆಲ್ಲರೂ ಸೇರಿ ಪ್ರಾರ್ಥಿಸುತ್ತೇವೆ.

Smt. Shalini B. Pandit Bendor Mangalore

Our heart-felt condolences on the sad demise of your father. He was a greet scholar and a very popular man known to everyone here in this district (South Kanara) I had the pleasure of meeting him a couple of times. His witty remarks and jokes are well-known and we still enjoy repaeting them....that he died in hls sleep, very few are lucky enough to get such a peaceful and sudden death.... May then oble soul rest in peace.

ನಮ್ಮ ಭಾವಯ್ಯ

ಲಾಭಾದಾಯ ಶಾರದಾಬಾಯಿ

ಭಾವಯ್ಯನೆಂದಪ್ಪ್ರೊ, ಈಗ ಅವರು ಕಣ್ಮರೆಯಾದದ್ದು, ಶಾಂತ ಪ್ರವೃತ್ತಿಯ ಹಸನ್ಮುಖದ ವ್ಯಕ್ತಿಯು ಕಣ್ಣೆದುರು ಬರುತ್ತಿದೆ. ಜೀವನದುದ್ದಕ್ಕೂ ಅವರ ಇರವೇ ಹಾಗಿತ್ತು.

ಪಡುಕೋಣೆ ನರಸಿಂಗರಾಯರ ಮೊದಲನೆ ಹೆಂಡತಿಯು ಹೆತ್ತ 3-4 ಮಕ್ಕಳಲ್ಲಿ ಇವರೊಬ್ಬರೇ ಬದುಕಿ ಉಳಿದರಂತೆ. ಆ ತಾಯಿಗೆ ಇವರ ಬಾಲ್ಯದಲ್ಲೇ ಅಂದರೆ 3-4 ವರ್ಷಗಳಲ್ಲೇ ಕ್ಷಯರೋಗವು ಹತ್ತಿ ಹಾಸಿಗೆ ಹಿಡಿದಿದ್ದರಂತೆ. ಅವರನ್ನು ಹಾಗೆ ಮಲಗಿದ್ದಲ್ಲಿ ಕಂಡ ಮಸಕು ಮಸಕಾದ ನೆನಪು, ತಾಯಿಯೆಂಬ ವಾತ್ಸಲ್ಯದಿಂದ ಮುದ್ದಿಸಿಕೊಳ್ಳಲು ತಾನು ಹತ್ತಿರ ಹೋದ್ರೆ, ಬೆತ್ತ ಹಿಡಿದು, ಗದರಿಸಿ, ನನ್ನನ್ನು ಓಡಿಸುತ್ತಿದ್ದ ನೆನಪೂ ಬರುತ್ತಿದೆ-ಎನ್ನುತ್ತಿದ್ದರು ನಮ್ಮ ಪಾಪದ ಭಾವಯ್ಯ! ಏಕೆ ಅವರು ಹಾಗೆ ಮಾಡುತ್ತಿದ್ದಾರೆಂಬುದು ದೊಡ್ಡವನಾಗಿ ಶಾಲೆಗೆ ಹೋಗಿ ವಿದ್ಯೆ ಕಲಿಯಲಾರಂಭಿಸಿದ ಮೇಲೆ ತನ್ನ ಅರಿವಿಗೆ ಬಂತು ಎನ್ನುತ್ತಿದ್ದರು. ಆ ಕಾಲದಲ್ಲಿ ಕ್ಷಯರೋಗಕ್ಕೆ ಮದ್ದೇ ಇರಲಿಲ್ಲ, ಬಹಳ ಸಾಂಕ್ರಾಮಿಕ ರೋಗವೂ ಆದ ಕಾರಣ, ಈ ಬದುಕುಳಿದ ಮಗನಿಗೂ ಎಲ್ಲಾದರೂ ತನ್ನ ಕಾಯಿಲೆ ತಗಲೀತೆಂದು ಆ ತಾಯಿಗೆ ತುಂಬ ದಿಗಿಲು ಇದ್ದಿರಬೇಕು. ಮನಸ್ಸನ್ನು ಕಲ್ಲಂತೆ ಗಟ್ಟಿಮಾಡಿಕೊಂಡು, ಹತ್ತಿರ ಬರುವ ಮಗುವನ್ನು ಓಡಿಸುವಾಗ ಆ ತಾಯಿಗಾದ್ರೂ ಮನಸ್ಸಿಗೆ ಎಂತಹ ನರಕ ಯಾತನೆ ಆಗಲಾರದು? ಅದನ್ನು ಅವರು ಹೇಳುವಾಗ ಕೇಳುವವರಿಗೆ ಹೃದಯ ಹಿಂಡಿದಂತಾಗುತ್ತಿತ್ತು. 4-5 ವರ್ಷವೆನ್ನುವಾಗಲೇ ಆ ತಾಯಿಯನ್ನೂ ಕಳಕೊಂಡರವರು. ಆ ಮೇಲೆ ಅವರ ಸೋದರ ಮಾವ ಮೂಡಬಿದ್ರೆ ಗಣೇಶರಾಯರೇ, ತಂಗಿಗೆ ಮಾತುಕೊಟ್ಟು, ಅಭಯನೀಡಿ, ಅವರನ್ನು ಸಾಕಿ, ಸಲಹಿ, ಇಂಟರ್‌ವರೆಗೆ ವಿದ್ಯೆಯನ್ನು ಕಲಿಸಿದರು.

ಭಾವಯ್ಯನವರ ತಂದೆ ನರಸಿಂಗರಾಯರು ತಾಲೂಕು ಆಫೀಸಿನಲ್ಲಿ ಕಾರಕೂನರಾಗಿದ್ದರು. ಮೊದಲನೇ ಹೆಂಡತಿ ತೀರಿಹೋಗುವಾಗ ಅವರಿಗೂ ಚಿಕ್ಕವಯಸ್ಸು. ಎರಡನೇ ಮದುವೆ ಮಾಡಿಕೊಂಡು ಅವರ ಸಂಸಾರವೂ ಬೆಳೆಯುತ್ತಲಿದ್ದ ಕಾರಣ, ಈ ಮಗನ ಜವಾಬ್ದಾರಿ, ಭಾವ ಮೈದುನ ಮೂಡಬಿದ್ರೆ ಗಣೇಶರಾಯರಿಗೆ ಬಿಟ್ಟ

ಕೊಟ್ಟರು. ಗಣೇಶರಾಯರಿಗಾದರೋ ಈ ಪಯ್ಯನ ಪರಿವಾರದ ಮಕ್ಕಳು ಇದ್ದು ಅವರ ಸಂಸಾರವೂ ಬೆಳೆಯುತ್ತಿತ್ತು. ಜೂರು ಪಾರು ಆಸ್ತಿ, ತಕ್ಕನಾಷ್ಟಿಗೆ ಒಳ್ಳೆ ಕೆಲಸವೇ ಇದ್ದ ಕಾರಣ ಸಂಸಾರ ನಿರ್ವಹಣದ ಕಾರ್ಯ ಸ್ವಲ್ಪ ಸುಲಭವಾಗಿದ್ದಿರ ಬೇಕವರಿಗೆ.

ಹತ್ತೊಂಬತ್ತನೆಯ ವರ್ಷ ಕಳೆದು ಇಪ್ಪತ್ತು ವರ್ಷ ನಡೆಯುವಾಗ ನಮ್ಮ ಅಕ್ಕಮ್ಮ ನನ್ನ ಕೊಟ್ಟು ಅವರ ವಿವಾಹ, ಪುತ್ತೂರಲ್ಲಿ ಅದ್ದೂರಿಯಾಗಿ ಜರುಗಿತು. ಆಗಿನ ಕಾಲದ ಪದ್ಧತಿಯಂತೆ ಎಂಟು ದಿವಸಗಳ ಮದುವೆಯ ಕಾರ್ಯಕಲಾಪಗಳು. ನಮ್ಮ ದೊಡ್ಡಪ್ಪನವರ ಮಗಳಿಗೂ, ಅಕ್ಕಮ್ಮನ ಓರಗೆಯವಳಿಗೂ-ಅದೇ ಸಮಯ ಮದುವೆ ಆಯಿತು. ಹೀಗೆ ಹದಿನೈದು ದಿನಗಳು ಸಂಭ್ರಮವೇ ಸಂಭ್ರಮ-ಗೌಜಿ-ಗದ್ದಲ. ಆಗ ನನಗೆ ಕೇವಲ ಏಳು ವರ್ಷ. ವಿವರವಾಗಿ ಎಲ್ಲ ನೆನಪಿಗೆ ಬಾರದಿದ್ದರೂ, ಚಪ್ಪರದ ಮೇಲೆ ಚಿಕ್ಕ ಚಪ್ಪರ ಕಟ್ಟಿ, ಅಂಗಳ ತುಂಬಾ ಎಲೆ ಹರವಿ, ಊರ ನೆಂಟರು, ಸಂಬಂಧಿ ಕರ ಊಟ ಉಪಚಾರಗಳಾದ್ದು ನೆನಪಿದೆ. ದೇವ ಕಾರ್ಯದಲ್ಲಿ ಇಬ್ಬರೂ ವಧು ಗಳನ್ನು ಕೂರಿಸಿ, ಎಣ್ಣೆ, ಅರಸಿನ ಹಚ್ಚಿ, ಆರತಿ ಎತ್ತಿದ ನೆನಪೂ ಬರುತ್ತಿದೆ.

ನಿಶ್ಚಿತಾರ್ಥದ ಸಮಯ ವರೋಪಚಾರ, ವರದಕ್ಷಿಣೆ ಕುರಿತು ಯಾವ ಮಾತುಕತೆ ಗಳಾದುವೆಂದು ತಿಳಿಯದು. ಭಾವಯ್ಯನವರ ತಂದೆ ನರಸಿಂಗರಾಯರೂ, ಅಜ್ಜ ಬಾಲಕೃಷ್ಣರಾಯರೂ, ನಮ್ಮ ತೀರ್ಥರೂಪರವರಿಗೆ, ವರನ ಮುಂದಿನ ವಿದ್ಯಾಭ್ಯಾಸದ ಹೊಣೆ, ಖರ್ಚು ಎಲ್ಲ ವಹಿಸಿಕೊಳ್ಳಲು ಕೇಳಿಕೊಂಡರು. ತೀರ್ಥರೂಪರವರು (ಮೊಳಹಳ್ಳಿ ಶಿವರಾಯರು) ಸಂತೋಷದಿಂದ ಅದನ್ನು ಒಪ್ಪಿಕೊಂಡು, ಮದ್ರಾಸಿನಲ್ಲಿ ತನ್ನ ಅಣ್ಣನ ಮನೆಯಲ್ಲಿ ಅವರನ್ನು ಇರಿಸುವ ಏರ್ಪಾಡು ಮಾಡಿ, ವಿದ್ಯಾಭ್ಯಾಸ ವ ಮುಂದುವರಿಯುವಂತಾಯಿತು. 1919-1920 ರಲ್ಲಿ ಅವರು M. A. ಪರೀಕ್ಷೆ ಪಾಸಾಗಿ, L. T. ಯನ್ನು ಬಹುಶ ಆಗಲೇ ಮುಗಿಸಿರಬೇಕು. 1920 ರಲ್ಲಿ ರಾಜ ಮಹೇಂದ್ರಿಯ ಸರಕಾರಿ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಲೆಕ್ಚರರ್ ಆಗಿ ಅವರು ನೇಮಕರಾದರು. ಅವರ 25ನೇ ವಯಸ್ಸಿನಲ್ಲಿ ಚೊಚ್ಚಲು ಮಗಳು ಚಂದ್ರಭಾಗಿ (ಚಂದಮ್ಮ) 1921ರಲ್ಲಿ ಜನಿಸಿದಳು ಆಕೆಯೇ. ಖ್ಯಾತ ನೃತ್ಯಗಾತಿ ಚಂದ್ರಭಾಗಾದೇವಿ. ಆ ಮಗುವನ್ನು ಎತ್ತಿಕೊಂಡು ಅಕ್ಕಮ್ಮನವರು ಬಿಡಾರಕ್ಕೆ ಹೋಗಿದ್ದು 1922ರಲ್ಲಿ ತಲಚೇರಿಗೆ ಆಗ ಭಾವಯ್ಯನವರಿಗೆ ರಾಜಮಹೇಂದ್ರಿಯಿಂದ ತಲಚೇರಿಗೆ ವರ್ಗ ವಾಗಿತ್ತು. ಕೆಲಸವಾದ ಬಳಿಕ ತಂದೆಗೆ ಆಗಾಗ ಆರ್ಥಿಕ ಸಹಾಯ, ತಮ್ಮಂದಿ ರನ್ನು ಮನೆಯಲ್ಲಿರಿಸಿಕೊಂಡು ಅವರ ವಿಧ್ಯಾಭ್ಯಾಸಕ್ಕೂ ಸಹಾಯ ಮಾಡುತ್ತಿದ್ದರು.

ನೃತ್ಯ-ನಾಟಕ-ಸಂಗಿತ ಮುಂತಾದ ಕಲೆಗಳಲ್ಲಿ ಅವರಿಗೆ ತುಂಬಾ ಅಭಿಮಾನ ಪ್ರೀತಿ ಇದ್ದ ಕಾರಣ College Day ಯ ಸಂಭ್ರಮದ ಸಮಯ, ಆ ವಿಭಾಗದ ಎಲ್ಲ

ಜವಾಬ್ದಾರಿ, ನೃತ್ಯ-ನಾಟಕಗಳಲ್ಲಿ ಮಕ್ಕಳನ್ನು ತರಬೇತು ಮಾಡುವುದು ವಗೈರೆ ಭಾವಯ್ಯನವರ ಪಾಲಿಗೇ ಬರುತ್ತಿತ್ತು. ಅದನ್ನು ಅವರು ಚೆಲೋದಾಗೆ ನಿರ್ವಹಿಸುತ್ತಲೂ ಇದ್ದರು. ಮಂಗಳೂರಿಗೆ ವರ್ಗವಾದ ಬಳಿಕ ಅವರ ಈ ಚಟುವಟಿಕೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ಆಗ ನಮ್ಮ ತೀರ್ಥರೂಪರವರ ಸಾರ್ವಜನಿಕ ಕಾರ್ಯ, ಪುತ್ತೂರು ತಾಲೂಕ್‌ನ ಹಳ್ಳಿ ಹಳ್ಳಿಗಳಲ್ಲಿ ಅಲೆದು ಶಾಲೆಗಳನ್ನು ಸ್ಥಾಪಿಸಿ, ರಜಾ ದಿನಗಳಲ್ಲಿ ಮಕ್ಕಳಕೂಟ, ವಗೈರೆ ಚಟುವಟಿಕೆ ಎಲ್ಲವೂ ಆರಂಭವಾಗಿತ್ತು. ಕೋಟ ಶಿವರಾಮ ಕಾರಂತರೂ, ನಮ್ಮ ಭಾವಯ್ಯನವರೂ ತೀರ್ಥರೂಪರವರಿಗೆ ತುಂಬ ಬೆಂಬಲ ಕೊಡುತ್ತಿದ್ದರು. ಅವರ ಆ ಕಾರ್ಯಗಳಲ್ಲಿ ನಮ್ಮ ಅಕ್ಕಮ್ಮನೂ ಸಾಧ್ಯವಾದಾಗಲೆಲ್ಲ ಮಕ್ಕಳನ್ನೂ ಕಟ್ಟಿಕೊಂಡು ಈ ಚಟುವಟಿಕೆಗಳಲ್ಲಿ ನೆರವಾಗುತ್ತಿದ್ದರು.

ಪುತ್ತೂರಿನಲ್ಲಿ ಜರುಗುತ್ತಿದ್ದ ನವರಾತ್ರಿಯ ನಾಡಹಬ್ಬದ ಕಾರ್ಯಕಲಾಪ, ವಿಜೃಂಭಣೆಗಳನ್ನು ಈಗಲೂ ಎಲ್ಲರೂ ನೆನಪಿಸಿಕೊಳ್ಳುತ್ತಿದ್ದಾರೆ. ಆ ನಾಡಹಬ್ಬ 10–12 ವರ್ಷಗಳಾದ್ರೂ ನಡೆದಿರಬೇಕು. ನಮ್ಮ ಅಕ್ಕಮ್ಮನವರಿಗೆ ಸುಶ್ರಾವ್ಯವಾದ ಕಂಠವಿತ್ತು. ನಿಶ್ಶಬ್ದವಾದ ಆ ರಾತ್ರಿಯ ಹೊತ್ತಿನಲ್ಲಿ ಎಲಿಮೆಂಟರಿ ಶಾಲೆಯ ದಿಬ್ಬದ ಮೇಲೆ ಜರಗುತ್ತಿದ್ದ ಈ ನಾಡ ಹಬ್ಬದ ಅಂಗವಾಗಿ ಕಾರಂತರು ರಚಿಸಿದ ಒಂದು ನಾಟಕದಲ್ಲಿ ಅವರು ಹಾಡಿದ ಹಿನ್ನೆಲೆ ಹಾಡು ಎಷ್ಟೋ ದೂರದವರೆಗೆ ಕೇಳಬರುತ್ತಿತ್ತು. ಈಗಲೂ ಅದನ್ನು ನೆನಪು ಮಾಡುತ್ತಿದ್ದರೆ ಮೈನವಿರೇಳುತ್ತಿದೆ!

ನಾಡ ಹಬ್ಬದಾಚರಣೆಯ ಕಾರ್ಯಕಲಾಪಗಳಲ್ಲಿ, ನಾಟಕ, ನೃತ್ಯಗಳೇ ಅಲ್ಲದೆ ಬೆಳಗಿನ ಹೊತ್ತು ಕಾವ್ಯ ವಿಮರ್ಶೆ, ಕಾವ್ಯಾವಲೋಕನ, ಕಥೆಗಳ ಸೊಗಸನ್ನು ವಿಚಾರ ವಿನಿಮಯ ಮಾಡುತ್ತಿದ್ದರು. ಕನ್ನಡದ ಹೆಸರಾಂತ ಕವಿ, ಲೇಖಕ ವರ್ಗ ಆದರದ ಕರೆಗೆ ಓಗೊಟ್ಟು ಬಂದು ಭಾಗವಹಿಸುತ್ತಿದ್ದರು. ಅದೊಂದು ನಿಜವಾದ ರಸದೌತಣವಾಗಿತ್ತು. ಪುರದ ರಸಿಕ ಜನರಿಗೆ–ಆಗ ಪರಿಚಯವಾದ ಈ ಸಾಹಿತ್ಯ ಕವಿ, ಲೇಖಕರೊಡನೆ ಕಡೇ ತನಕವೂ ಭಾವಯ್ಯನವರಿಗೆ ಪತ್ರವ್ಯವಹಾರವಿತ್ತು. ಅವರಾದ್ರೂ ಆದರಾಭಿಮಾನದಿಂದ ಪ್ರಕಟನಗೊಂಡ ತಮ್ಮ ಕೃತಿಗಳ ಪ್ರತಿಯೊಂದನ್ನು ನೆನಪಿನಿಂದ ಭಾವಯ್ಯನವರಿಗೆ ಕಳಿಸಿಕೊಡುವ ರೂಢಿ ಇಟ್ಟುಕೊಂಡಿದ್ದರು. ಸಾಹಿತ್ಯಾಭಿರುಚಿಯೂ ನಮ್ಮ ಭಾವಯ್ಯ, ಅಕ್ಕಮ್ಮ ಇಬ್ಬರಿಗೂ ಇತ್ತು. ಹಾಗಾಗಿ, ಆದರ ಸೊಗಸು, ಭವ್ಯತೆ ಜನತೆಗೂ ತಿಳಿಯುವಂತಾಗಿಸಲು ಇಬ್ಬರೂ, ನನ್ನ ತಂಗಿ, ವರದೆಯೂ ಕೂಡಿ ಸಿ. ಕೆ. ವೆಂಕಟರಾಮಯ್ಯನವರ 'ಮಂಡೋದರಿ' ಹಾಗೂ ವಿ. ಸೀ. ಅವರ 'ಸೋಹ್ರಾಬ್-ರುಸ್ತುಂ' ನಾಟಕಗಳಲ್ಲಿ ಭಾಗವಹಿಸಿ ಎಷ್ಟೋ ಸಲ ಆಡಿ ಪುತ್ತೂರು, ಮಂಗಳೂರು ಪ್ರೇಕ್ಷಕರನ್ನೆಲ್ಲ ಮುಗ್ಧಗೊಳಿಸಿದ್ದಾರಂತೆ. ಅವುಗಳಲ್ಲಿ ಪಾತ್ರವಹಿಸಲು,

ಉಪನ್ಯಾಸಕರಾಗಿ, ಶಾಲಾ ಇನ್ಸ್‌ಪೆಕ್ಟರ್‌ರಾಗಿ, ಈಗ ನಿವೃತ್ತಿ ಹೊಂದಿ ಮಂಗಳೂರಿನಲ್ಲಿ ಸ್ಥಾಯಿಯಾದ ಮಹಾಲಿಂಗನವರೂ. ಜೆಸೆಂಟ್ ಶಾಲೆಯ ಕನ್ನಡ ಅಧ್ಯಾಪಕರಾಗಿ ಇತ್ತೀಚೆ ನಿಧನರಾದ ಕನ್ನಡ ಪಂಡಿತ ಪಿ. ಕೆ. ನಾರಾಯಣ ಅವರೂ ಮುಂಬರುತ್ತಿದ್ದರಂತೆ. ಜಾತ್ರೆಗಳೇ ಮುಂತಾದ ಕೂಟಗಳಲ್ಲೆಲ್ಲ ಈ ನಾಟಕಗಳನ್ನು ಮಾಡುತ್ತಿದ್ದ ಕಾರಣ ಜನತೆಗೆ ಕಣ್ಮನಗಳಿಗೆ ಹಬ್ಬವಾಗುತ್ತಿದ್ದಿರಬೇಕು. ಅಕ್ಕಮ್ಮ–ಭಾವಯ್ಯ ದಂಪತಿಗಳಿಗೆ ಕಲಾಭಿರುಚಿ ಇತ್ತೆಂದೇನಲ್ಲ? ಸಾಹಿತ್ಯ ಕ್ಷೇತ್ರದಲ್ಲಿ ದಂಪತಿಗಳಿಬ್ಬರೂ ಅನೇಕ ಭಾಷಾಂತರಗಳನ್ನೂ ಸ್ವಂತ ಕೃತಿಗಳನ್ನೂ ರಚಿಸಿದ್ದಾರೆ. 82-84 ವರ್ಷ ವೆನ್ನವಾಗಲೂ ಭಾವಯ್ಯನವರು Eric remarque ಅವರ All Quiet on the Westren Front ಎಂಬ ಕಾದಂಬರಿಯನ್ನು "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ" ಎಂಬುದಾಗಿ ಭಾಷಾಂತರಿಸಿದ್ದರು! ಕನ್ನಡಾಭಿಮಾನಿಗಳಾಗಿದ್ದರವರು. ಈ ಗ್ರಂಥ-'ಯುದ್ಧ ಕಾದಂಬರಿ'–ಜಗತ್ತಿನ ಎಲ್ಲ ಭಾಷೆಗಳಲ್ಲಿ ಪರಿವರ್ತಿಸಿದೆ. ಭಾರತಿಯ ಯಾವ ಭಾಷೆಯಲ್ಲಿಯೂ ಭಾಷಾಂತರವಾಗಲಿಲ್ಲ ಎಂಬ ಕೊರತೆ ಕಂಡು ಕನ್ನಡದಲ್ಲಿ ಮಾಡಲೇಬೇಕೆಂಬ ಹಠ ತೊಟ್ಟು ಆ ಹಣ್ಣು ವಯಸ್ಸಿನಲ್ಲಿ ಅದರ ಭಾಷಾಂತರ ಕೈಕೊಂಡು, ಪ್ರಕಟಣಾ ಸಂಸ್ಥೆಗಳಿಗೆಲ್ಲ ಬರೆದು- ಒಂದು ವಿಧದ ಭಗೀರಥ ಪ್ರಯತ್ನವನ್ನೇ ಮಾಡಿ ಪ್ರಕಟವಾಗುವಂತೆ ಮಾಡಿದರು. ಅದರಲ್ಲಿ ಸಾಲಿಗೆರಡೆಂಬಂತೆ ತಪ್ಪುಗಳು, ಮೊಳೆ ಜೋಡಿಸುವವರ ಬೇಜವಾಬ್ದಾರಿಯಿಂದ ಆಗಿದ್ದನ್ನು ಕಂಡು ಅವರು ಪಟ್ಟ ಬೇಸರ ಅಷ್ಟಿಷ್ಟಲ್ಲ. ಪ್ರಕಟಣೆಗೆ ಕಾದುಕೊಂಡಂತೆ ಇದ್ದು, ಅದು ಪ್ರಕಾಶಕಂಡ ನಾಲ್ಕಾರು ತಿಂಗಳಲ್ಲೇ ಅವರ ನಿಧನವಾಯಿತು.

ಓದುತ್ತ ಇರುವುದು ಅವರ ಹವ್ಯಾಸವಾಗಿತ್ತು. Cataract ನಿಂದಾಗಿ ಕಣ್ಣು ಕಾಣಿಸದಂತಾದಾಗ ಅವರು ತುಂಬಾ ವ್ಯಥೆಪಟ್ಟರು. ಚಡಪಡಿಸಿದರು. ದೇವರ ದಯದಿಂದ ಎರಡೂ ಕಣ್ಣುಗಳ ಆಪರೇಶನ್ ಆಗಿ ದೃಷ್ಟಿಯು ಪುನಹ ಬಂದಮೇಲೆ ಅವರ ಓದು, ಬರೆಹ ಹಿಂದಿನಷ್ಟಿಲ್ಲದಿದ್ದರೂ, ಸಾಕಷ್ಟು ಪ್ರಮಾಣದಲ್ಲಿ ಸಾಗಿತು. ತುಂಬು ಮನಸ್ಸಿನಿಂದ, ನಿಸ್ವಾರ್ಥತೆಯಿಂದ, ಎಲ್ಲರನ್ನೂ ಪ್ರೀತಿಸುವ ಸ್ವಭಾವವು ಅವರದ್ದಾಗಿದ್ದ ಕಾರಣ ಎರಡೂ ಕಡೆಯ ಕುಟುಂಬದವರಿಗೆಲ್ಲ ಅಚ್ಚುಮೆಚ್ಚಿನವರಾಗಿದ್ದರವರು. ಯಾರು ಬಂದರೂ ಕೈಯ್ಯಲ್ಲಿ ಹಿಡಿದ ಕೆಲಸ ಬಿಟ್ಟು "ಬಂದಿಯಮ್ಮಾ-ಬಂದೆಯಪ್ಪಾ"-ಎಂದು ವಾತ್ಸಲ್ಯದಿಂದ ಸ್ವಾಗತಿಸಿ, ಕೂರಿಸಿಕೊಂಡು, ನಗುನಗುತ್ತ ಮಾತನಾಡಿ ಕಳಿಸಿಕೊಡುತ್ತಿದ್ದರು. ನಮಗಂತೂ ತೀರ್ಥರೂಪರವರ ನಿಧನದ ನಂತರ ಭಾವಯ್ಯನವರೇ ತೀರ್ಥರೂಪರವರ ಸ್ಥಾನದಲ್ಲಿದ್ದರು. ಅವರು ಕೊಟ್ಟ ತುಂಬು ಹೃದಯದ ಪ್ರೀತಿಯನ್ನು ನಮ್ಮ ಭಾವಯ್ಯನವರೂ ನಮಗೆ ಕೊಟ್ಟಿದ್ದಾರೆ.

ಮಂಗಳೂರಿನಲ್ಲಿ 8-10 ವರ್ಷಗಳಾದ್ರು ಅವರು ಗವರ್ನ್‌ಮೆಂಟ್ ಕಾಲೇಜಿನಲ್ಲಿ ಕಲಿಸುತ್ತಿದ್ದರೆಂದು ಕಾಣುತ್ತದೆ. ಆಗ ಕಾಲೇಜು ವಿದ್ಯಾಭ್ಯಾಸ ಮಾಡಲು ಇತರ ಕಡೆಗಳಲ್ಲಿ ಕಾಲೇಜುಗಳಿರಲಿಲ್ಲವೆಂಬ ಕಾರಣ, ಹತ್ತಿರದಿಂದ, ದೂರದ ನೆಂಟರಲ್ಲಿ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬಂದ ಹುಡುಗರಿಗೆಲ್ಲ ಇವರ ಮನೆಯೇ ಆಶ್ರಯ ವಾಯಿತು. ನಮ್ಮ ಅಕ್ಕಮ್ಮನೂ ತುಂಬು ಹೃದಯವಂತಿಕೆ ಪಡೆದವರು. ಅವರಷ್ಟೇ ದೊಡ್ಡ ಮನಸ್ಸು-ಭಾವಯ್ಯನವರೂ ಸಾಧು ಸ್ವಭಾವದ ದಾಕ್ಷಿಣ್ಯಪರರು. 3-4 ವಿದ್ಯಾರ್ಥಿಗಳು ಬಂದು ಹೋಗುವ ಅವರ ಮನೆ ಯಾವಾಗಲೂ ತುಂಬಿದ ಮನೆಯೇ ಆಗಿರುತ್ತಿತ್ತು. ಸಹಜವಾಗಿ ಖರ್ಚು ವೆಚ್ಚ, ಸಂಪಾದನೆಗಿಂತ ಮಿತಿ ಮೀರುತ್ತಿತ್ತು. ಒಳ್ಳೆ ನಾಟಕ-ಸಿನೆಮಾ ಬಂದರೆ ಎಲ್ಲರನ್ನೂ ಕಟ್ಟಿಕೊಂಡು ಹೋಗುವ ಹವ್ಯಾಸಬೇರೆ. ಹಾಗಾಗಿ ಅವರ ಸಂಸಾರದ ಆರ್ಥಿಕ ಪರಿಸ್ಥಿತಿ ಹಲವೊಮ್ಮೆ ಹದಗೆಡುತ್ತಿತ್ತು. ಆದರೂ ಅವರ ಸಂಸಾರ ನಿರ್ವಹಣೆಯನ್ನು ಬದಲಾಯಿಸುತ್ತಿರಲಿಲ್ಲ-ಅವರ ಮನೆ ಛತ್ರದಂತೆ ನಡೆಯಲೇಬೇಕು !

ಗೃಹ ಕೃತ್ಯದ ಮಟ್ಟಿಗೆ ಎಲ್ಲ ಜವಾಬ್ದಾರಿ ನಮ್ಮ ಅಕ್ಕಮ್ಮನವರೇ ಹೊತ್ತು ಇರುತ್ತಿದ್ದ ಕಾರಣ, ಭಾವಯ್ಯನವರಿಗೆ ಸಂಸಾರ ಸಸಾರವಾಯ್ತು. ಐದು ಮಕ್ಕಳು (ಒಂದು ಗಂಡು, ನಾಲ್ಕು ಹೆಣ್ಣು) ನೆಂಟಸ್ತಿಕೆ, ಮದುವೆಗಳನ್ನು ಮಾಡುವ ಹೊಣೆ ನಮ್ಮ ಅಕ್ಕಮ್ಮನೇ ನಿರ್ವಹಿಸಿದರು. (ಈ ಮಕ್ಕಳಲ್ಲಿ 2ನೇ ಮಗಳು ಶಾಂತಿ ತನ್ನ 52ನೇ ವಯಸ್ಸಿನಲ್ಲಿ ಕ್ಯಾನ್ಸರ್ ರೋಗದಿಂದ ತೀರಿಹೋದಳು-1977 ರಲ್ಲಿ.)

ಮಕ್ಕಳಲ್ಲಿ ಸೂಕ್ತವಾಗಿ ಅಡಗಿಕೊಂಡಿದ್ದ ಕಲೆಗಳನ್ನು ಕಂಡುಹಿಡಿದು ಅವನ್ನು ಆ ಕಲೆ ಯಲ್ಲಿ ಪ್ರೋತ್ಸಾಹಿಸಿ ಪ್ರವೀಣತೆ ಪಡೆಯುವಂತೆ ಹೆತ್ತವರು ಹುರಿದುಂಬಿಸುತ್ತಿದ್ದರು. ನಮ್ಮ "ಚಂದನ್ನ" ಖ್ಯಾತ ನರ್ತಕಿಯಾದಳು. ಎರಡನೇ ಮಗಳು ಶಾಂತಿ ಸುಂದರ ವಾದ ಚಿತ್ರಗಳನ್ನು ಬಿಡಿಸುವ ಚಿತ್ರ ಕಲಾಗಾರ್ತಿಯಾದಳು. ಮೂರನೇಯ ಮಗಳು ಜಯವಂತಿ ಹಾಡುವುದರಲ್ಲಿ ನಿಸ್ಸೀಮಳು-ಭಜನೆ-ದೇವರ ನಾಮ-ಭಾವಗೀತೆ Semi-Clasical ಸಂಗೀತದಲ್ಲಿ ಹೆಸರು ಪಡೆದ Radio artist. ನಾಲ್ಕನೆಯ ಮಗಳು ಯಶೋಧರೆಯಲ್ಲಿ ಹೆತ್ತವರಿಬ್ಬರಲ್ಲಿ ಸಾಹಿತ್ಯದ ಬರವಣಿಗೆಯ ಕಲೆ ಇಳಿದು ಬಂದಿದೆ. ಘನವಾದ, ಆಳವುಳ್ಳ Thought-Provoking ಕಥೆಗಳನ್ನೆಷ್ಟೋ ಬರೆದಿದ್ದಾಳೆ. ಈಗಲೂ ಬರೆಯುತ್ತಿದ್ದಾಳೆ. 'ಆಕಾಶ ಬಾಣ'ಗಳು ಎಂಬ ಅಭಿದಾನ ದಿಂದ ಅವಳು ಬರೆದ ಕತೆಗಳನ್ನೊಳಗೊಂಡ ಪುಸ್ತಕವೂ ಪ್ರಕಟವಾಗಿದೆ. 'ನಿಗ್ರಹ' ಎಂಬ ಕವನ-ಆಕೆಯ ಮೊದಲ ಕವನ-Poets International Organisa-tion ಅವರ ಬಹುಮಾನವನ್ನು ಪಡೆದಿದೆ. ಮಗ ಪ್ರಭಾಶಂಕರನಿಗೂ ಸಾಹಿತ್ಯಾಭಿ ರುಚಿ ತುಂಬ-ಹೆಸರಾಂತ ಬರಹಗಾರರ ಪುಸ್ತಕಗಳನ್ನು ತಂದು ಓದುವುದು, ಅವುಗಳ

ಸೊಗನ್ನು ಚರ್ಚಿಸುವುದು ಅವನಿಗೆ ತುಂಬ ಪ್ರಿಯವಾದ ಹವ್ಯಾಸ. B.Sc. (Hons) ಕುರಿತು O.C.S. ನಲ್ಲಿ Director ಆಗಿ ಹೋದ ವರ್ಷ (1982ರಲ್ಲಿ) ನಿವೃತ್ತಿ ಹೊಂದಿದ್ದಾನೆ. ದೂರದ ರಂಗೂನಿನಿಂದ ಎರಡು ಮೂರು ವರ್ಷಗಳಿಗೊಮ್ಮೆ ಭಾರತಕ್ಕೆ ಬರುತ್ತಿರುವ ನಮಗೆ ಅಕ್ಕ-ಭಾವಯ್ಯನವರ ಮನೆ ಎಂದರೆ ಎರಡನೇ ತವರು ಮನೆ. ಅಕ್ಕಮ್ಮನು ಅಪರೂಪದ ತಿಂಡಿ ತೀರ್ಥಗಳನ್ನು ಮಾಡಿ ಆದರದಿಂದ

ನಮ್ಮನ್ನು ಉಪಚರಿಸುತ್ತಿದ್ದುದು ಎಂದೂ ಮರೆಯಲಾಗದ ವಿಷಯ.

ಮಕ್ಕಳೆಲ್ಲ ಸುಖವಾಗಿ ಸಂಸಾರ ನಿರ್ವಹಿಸುತ್ತಿರುವುದು ಭಾವಯ್ಯನವರಿಗೆ ತಮ್ಮ ಇಳಿ ವಯಸ್ಸಿನಲ್ಲಿ ತೃಪ್ತಿ ತಂದಿತ್ತು. ಮೊಮ್ಮಕ್ಕಳೂ ಕಲಿಯುವುದರಲ್ಲಿ ತುಂಬಾ ಜಾಣರಿದ್ದು, ಒಳ್ಳೆ ವಿದ್ಯಾಭ್ಯಾಸ ಪಡೆದ, ಒಳ್ಳೇ ಕೆಲಸಗಳನ್ನೂ ಪಡೆದು, ಸಂಸಾರ ನಿರ್ವಹಿಸುತ್ತಿರುವುದೂ ಅವರಿಗೆ ತುಂಬಾಸಂತೋಷವನ್ನಿತ್ತಿತ್ತು.

ಅವರಿಗೆ 83 ವರ್ಷವೆನ್ನುವಾಗ ಒಮ್ಮೆ ಅವರು "ಇನ್ನು ನನಗೆ ಯಾವ ಆಸೆಯೂ, ಯೋಚನೆಯೂ ಇಲ್ಲ-ಸಂಸಾರದ ಕಷ್ಟ ಸುಖಗಳನ್ನೆಲ್ಲ ಅನುಭವಿಸಿಯಾಯ್ತು. ಇನ್ನು ಹಾಸಿಗೆ ಹಿಡಿದು ಮಲಗದೇ, ನರಳದೇ-ದೇವರ ಕರೆಬಂದಾಗ ಹೋಗಬೇಕೆಂದು ಮನಸ್ಸು; ಆತನ ಇಚ್ಛೆ ತಿಳಿಯದು "ಎಂದು ಹೇಳಿದರು. ಇಂಥ ಶಾಂತ ಸ್ವಭಾವದ ಪರೋಪಕಾರಿ ಜೀವದ ಕರೆ ಭಗವಂತನಿಗೆ ಕೇಳಿಸಿರಬೇಕು. ಅವರ ಪ್ರಾರ್ಥನೆಗೆ ಓ ಗೊಟ್ಟು ದೇವರು ಇದೇ ಫೆಬ್ರವರಿ 13 ರಂದು ಬೆಳಗಿನ ಜಾವ 6-6½ಗೆ ಹೃದಯಾಘಾತದಿಂದ ಅವರನ್ನು ಮೃತ್ಯು ಮುಖಕ್ಕೆ ಕರೆಸಿಕೊಂಡ. ಅವರ ಇಚ್ಛೆಯಂತೆ, ನರಳದೆ ಮುನ್ನಾದಿನದವರೆಗೆ ತನ್ನ ಕೆಲಸ ತಾನು ಮಾಡಿಕೊಂಡು, ಮಾರಣೆ ದಿನ ಬೆಳಗಾತ ಎದ್ದು "ರಾಮಾ ರಾಮಾ" ಎಂದು ಭಗವನ್ನಾಮೋಚ್ಚಾರಣೆ ಮಾಡಿ ಅಸು ನೀಗಿದರು. ಇಷ್ಟು ಸೊಗಸಾದ ಮರಣ ಬರಬೇಕಾದರೆ ಜನ್ಮಾಂತರದ ಪುಣ್ಯಬೇಕು. ನಮಗೆ ಮಾತ್ರ ಹಿರಿಯರಾಗಿದ್ದ, ಹಿರಿಯ ಜೀವ ಒಂದು ಕಣ್ಮರೆಯಾಯಿತು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದೇ ಇಲ್ಲ. ಬದುಕಿರುವಾಗಲೇ ಶಾಂತಿಯನ್ನು ಆಕಸ್ಮಾತ್ ಮಾಡಿಕೊಂಡ ಜೀವವದು. ಇನ್ನೇನು ತಾನೇ ಬರೆಯಲಿ?

Dr. K. S. Karanth, S. K.

He was more than a relative to me as my acquintance runs to more than five decades. His love for literature, arts' warmth to his friends and relatives, make me never forget him. I can quite understand the pain you have suffered owing to your father's death. I had stayed in your Mangalore house for years on end and know so much about his generosity—and good nature.

P. Ramanand or Bhayya

Varada R. Panje.

There was no time in my life when I did not know my brother-in-law or Bhayya, as I called him. He was one of us, when I w s a bab/ I wish I were one of those wonderful persons with long memories who could remember events that happened in the r early childhood. I only remember this in my childhood I used to look forward to the arrival of my Akka and Bhayya and their lovely children. The sleepy old house of ours used to wake up to the sound of talk, laughter and music.

Music was one of Bhayya's earliest passions. A story is current in our family of how Bhayya while listerning to the late Ustad Pyara Sahib's music, in a bewitched moment threw a gold chain weighing several sovereigns round the Ustad's neck as a mark of his appreciation, such was his craze for classical music. Although he himself was not a good singe he did try his hand at it. I remember him singing soulfully Purandaradasa's bhajans to the accompaniment of a harmonium.

It was at this time too he developed an interest in photography. He did his own developing and printing too An album full of pictures which are with his son in Bombay are a testimony of his talent in this direction.

Bhayya had a great sense of humour. He could take a joke and laugh heartily with the rest even when the joke was against him. This is a very rare chartaceristic which I hav found in very few I have come acvas.

Bhayya belonged to a generation where purity in speech was not practiced generally. He was an exception.

Men may come and men may go.

Even when the children were imposibly mischievous the biggest epitheic he used was that they were monkeys. Gentleness & Genttle manliness are two things I always associate with my memories of him.

For long years in his prime of life he had a deep abiding love for theatre. When he was in Mangalore Government College, the college day plays were mostly organised by him so also the high school plays. He took part in amateur theatre & encouraged my sister also to take part. Akka was one of the very few married ladies of that generation to appear on the stage. Together with my sister Bhayya brought on stage several Kannada Classies like "Mandodari" "Home-rule" etc. This love of the theatre stayed with him throughout his life. In the later stages of hislife it came out in the form of literature, "Mirdad" and "Return of Shakuntala" were written in the evening of his life. He never stopped thinking, reading and writing. His last book posthumously published is the Kannada translation of ,'All quiet on the western front ' a war epic written by Eric Maria Remarque. Bhayya was also one of the pioneers in the field of humorous Kannada writing.

One of the rarest and most endearing quality of Bhayya's was the encouragement he gave to my sister in pursuing knowledge by reading books. My sister had scarcely stepped into her teens when she was married to him. Under his constant encouragement my sisters latent talents blossomed and she became a writer of some repute in Kannada and Konkani.

Their house was like a small library. Frequently most celebrated writers in Kannada-among them Dr. K. S. Karanth and well known personalities of kannada professional theatre of those days used to be their visitors or guests. Thus there was constant flow of interesting talk and exhilarating

thoughts. There was never a dull moment wherever Akka and Bhayya were.

Theivs was one of the first houses (probably the only one) to have a battery operated radio when there was no electricity in Mangalore.

This harmonious blend of talent and pursuit of knowledge was indeed a fertile ground for the children to grow up on and absorb the essence of life. It is no wonder therefore that all my sister's children have some outstanding talent which was lovingly nurtured and encouraged by Bhayya.

Bhayya's house in Mangalore was an open house. Many a young man of our family stayed in their house to study in the Government College which was one of the very few colleges in the whole of South Kanara district.

Akka and Bhayya had their share of trials and tribulations of life. Akka passed away fourteenyears earlier than Bhayya Her demise must have been a very sad parting for him. She was his life companion for over fifty years and her last days were full of suffering. But the most cruel blow fell on him when his beloved daughter Shanthil passed away in the prime of iife after a short but painful illness. It must have taken tremendous strength of mind and surrender of self before the all powerful fate, to get over this loss.

To me personally my Akka and Bhayya were like foster parents. Their elder children and I were almost of the same generation and we have many childhood memorie in common. At every stage in my life Akka and Bhayya have given me a helping hand. When I was in Mangaloe for my studies I stayed with them. Later on when I fell ill in Patna they invited me to come and stay with them in Palghat I stayed with them for nearly six months. My sister's tender come and the homoeopathic treatment by late Dr.

S. R. U. Savoor restored me fully to good health. When tragedy stmuck in 1973 and I was numb with shock and grief Bhayya offered me his flat in Bangalore to stay in. This single act of care and concern went a long way in restoring some measure of stability and security in me. I will always cherish this most humani trian act with love and reverence

Bhayya had a robust healthy constitution. He was rarely ill and providence was kind to him in this respect. He was not bedridden to the last and his mental and physical factulties were in fact. He passed away gently like a whif of breeze a gentle end to a gentle kindly soul.

Rajinder Paul (Editor Enact New Delhi)

........God was merciful who granted a painless death to Shri P. Ramanand. My heart missed a beat while reading your letter. I know how much he loved ENACT. In fact I used to expect his reminders when we failed to come out on time. With his death ENACT has lost a real well-wisher and to me it is a great personal loss.... I only wish I should have posted two issues which had appeared earlier instead of waiting for the third. I would have given him a few moments of joy........ I share your grief........

B. R. Pai Madras

........sad news of passing away of friend, philosopher and guide whom I held in great resoect, love and reverence. Our relationships were of the ancient type the teacher pupil and we maintained it till the last. His letters to me were full of love overflowing and it gave me strength and a balance of mind. Teachers of his type and species fast disappearing........I share your sorrow equally........he was my beloved Master....it is too diffcult for me to express in words my feelings and my regard and more than that my love and deep affectlon. I could rather treasure it in my heart than put it in mutilated from in words........

ನನ್ನ ಅನುಭವದ ಮುದ್ದಿನ ಆನೂ

ಜಯಸಂತಿದೇವಿ ಹಿರೇಪೇಟ್

ನಮ್ಮ ಪೂಜ್ಯ ತಂದೆಯವರು-ನಮ್ಮೆಲ್ಲರ ಮುದ್ದಿನ ಆನೂ- ಅವರ ಪುಣ್ಯ ಸ್ಮರಣೆಯ ಸಂದರ್ಭದಲ್ಲಿ ಪ್ರಕಟಿಸುವ ಪುಸ್ತಕಕ್ಕೆ ನಾನು ಒಂದು ಬರಹ ಕೊಡಬೇಕೆಂದು ನಮ್ಮಕ್ಕ-ಚಂದಮ್ಮ-(ಶ್ರೀಮತಿ ಎಂ. ಕೆ. ಚಂದ್ರಭಾಗಾದೇವಿ) ಹೇಳಿದರು.... ಬರಹಗಾರರ ಮನೆತನದಲ್ಲಿ ನನ್ನದೂ ಜನ್ಮವಾಗಿದೆ ಎಂದು ಮರೆಯುವಂತೆ ಹಿಂದೊಮ್ಮೆ ನಾನೂ ಒಂದೆರಡು ಬರಹ ಗೀಚಿದ್ದೆ. ಹಾಗೆ ಗೀಚಿದ್ದ 'ಬರಹ' ಎಂಬ ಅಸ್ಥಿಪಂಜರಕ್ಕೆ ರಕ್ತಮಾಂಸ ತುಂಬಿ, ಜೀವದಾನ ಕೊಟ್ಟು ಒಂದು ರೂಪಕ್ಕೆ ತರುತ್ತಿದ್ದುದು ನಮ್ಮ ಆನೂ ಅಷ್ಟು ಮಾತ್ರವಲ್ಲ, ಮನೆಯಲ್ಲಿ ಹುಟ್ಟಿ ಬೆಳೆದ ಹೆಣ್ಣು ಮಕ್ಕಳಿಗೆ ಒಳ್ಳೆಯವರ ಮನೆತನ ನೋಡಿ ಮದುವೆ ಮಾಡಿಕೊಟ್ಟಂತೆ, ಆ 'ಬರಹ' ಒಳ್ಳೇ ಪತ್ರಿಕೆಯಲ್ಲಿ ಮುದ್ರಿಸಿ ಬರುವ ತನಕವೂ ಅವರ ಪ್ರಯತ್ನ ನಡೆಯುತ್ತಿತ್ತು. ಅಂತಹ ಆಧಾರ, ಉತ್ತೇಜನ ಅವರಿಂದ ಪಡೆಯುತ್ತಿದ್ದ ನಾನು ಈಗ ಅವರಿಲ್ಲದೆ ನಿಜವಾಗಿಯೂ ಅನಾಥೆ-ಅದರಲ್ಲೂ ನಾನು ಈಗ ಅವರ ವಿಷಯವಾಗಿಯೇ ಬರೆಯಬೇಕಾದುದು ನಿಜವಾದ ಎಂತಹ ಕಠಿಣ ಸಮಸ್ಯೆ ನನಗೆ!

ಆನೂಗೆ Interest ಇಲ್ಲದ ವಿಷಯಗಳೇ ಇರಲಿಲ್ಲ. ಕವಿತೆ-ಕಾದಂಬರಿಗಳು, ಚಲನಚಿತ್ರ, ಸಂಗೀತ, Sports. ಚಿತ್ರಕಲೆ ಇತ್ಯಾದಿ—ಹೀಗೆ ಪ್ರತಿಯೊಂದರಲ್ಲಿ ಆಸಕ್ತಿ ಇತ್ತು. ಅವುಗಳಲ್ಲಿ ಜ್ಞಾನವೂ ಇತ್ತು. ಮೆಚ್ಚುಗೆಯಲ್ಲಿ ತೃಪ್ತಿಯೂ ಇತ್ತು. ಅವರ ಈ ತಿಳುವಳಿಕೆ, ಜ್ಞಾನಾರ್ಜನೆಯ "Bank" ನಿಂದ ನಾವು ಮಕ್ಕಳು ನಮಗೆ ಬೇಕಾದಾಗಲೆಲ್ಲಾ ಲಾಭ ಪಡೆಯಲು ಸಾಧ್ಯವಾಗುತ್ತಿತ್ತು. ದೇವರ ಪ್ರತಿಯೊಂದು ಸೃಷ್ಟಿ ರಚನೆಯಲ್ಲಿ ಸೌಂದರ್ಯ ನೋಡುವ ಅಪರೂಪದ ವಿಶಿಷ್ಟ ಗುಣವು ಅವರಲ್ಲಿತ್ತು. ಅಂತಹ ಸೌಂದರ್ಯ ಅವರು ಹೂ ಹಣ್ಣು ಗಿಡಗಳಲ್ಲಿ ಕಾಣುವರು. ದೇವರ ವಿಗ್ರಹಗಳನ್ನು ಶೃಂಗರಿಸಿದ ಕುಶಲತೆಯಲ್ಲಿ ಕಾಣಬಹುದು. ಅಡಿಗೆಯಲ್ಲಿ ವ್ಯಂಜನಗಳಲ್ಲಿ ಕಾಣಬಹುದು. ನಿಷ್ಕಾಮ ದೃಷ್ಟಿಯಿಂದ ಹೆಣ್ಣಾಕೃತಿಯಲ್ಲಿ ಕಾಣಬಹುದು. ಆತ್ಮ ಪರಮಾತ್ಮನಲ್ಲಿ ಸೇರಿದ ನಿರ್ಜೀವ ದೇಹದಲ್ಲೂ ಕಾಣಬಹುದು. ಅವರ ಈ ಸದ್ಗುಣದಿಂದ ನಮ್ಮಲ್ಲೂ ಜಗತ್ತನ್ನು ನೋಡುವ ದೃಷ್ಟಿ ವಿಶಾಲವಾಗಿ ನಮ್ಮ ಜೀವನವೂ ಶ್ರೀಮಂತವಾಯಿತು. ಸಮೃದ್ಧವಾಯಿತು. ನಮ್ಮ ಆನೂಗೂ ಅಮ್ಮನಿಗೂ ಸಂಗೀತದ ಜ್ಞಾನ ಚೆನ್ನಾಗಿತ್ತು. ನನ್ನ ಕಂಠದ 'ಕೊಡುಗೆ' ನಮ್ಮಮ್ಮನಿಂದ ಎಂದಾದರೆ, ಒಳ್ಳೇ ಕವಿತೆ, ದಾಸರ ಹಾಡುಗಳನ್ನು ಆರಿಸಿ ಕೊಡುತ್ತಿದ್ದವರು ನಮ್ಮ ಆನೂ.

ಆಧುನಿಕ ಕವಿತೆಗಳಿಗೆ, ದಾಸರ ಪದಗಳಿಗೆ ತಕ್ಕರಾಗಗಳನ್ನು ಆರಿಸಿ-ಕೂಡಿಸಿ-ಆನರಿಮರು ಹಾಡಿದಾಗ ಅವನ್ನು ಮೆಚ್ಚುತ್ತಿದ್ದ ಅವರ ಮುಖಚರ್ಯೆಯೇ ನನಗೆ ಅಮೂಲ್ಯವಾದ Certificate ಆಗಿರುತ್ತಿತ್ತು! ಹಾಡುವಾಗ ಸಾಹಿತ್ಯದಲ್ಲಿನ ಪ್ರಮುಖ ಭಾವ ಸಂಗೀತಕ್ಕೆ ಬಾರದಿದ್ದರೆ, ಕವಿತೆಗೆ ಒಪ್ಪದ ರಾಗವಾಗಿರದೆ ಇದ್ದರೆ, ಆ ತಪ್ಪನ್ನು ತೋರಿಸಿಕೊಟ್ಟು ಸುಧಾರಣೆಗೆ ನೆರವು ನೀಡುತ್ತಿದ್ದರು. ನನ್ನ ಜೀವನದಲ್ಲಿ ನನ್ನ ಸಂಗೀತಕ್ಕೆ, ನನ್ನ ಪ್ರತಿಭೆಗೆ ಅವರು ಕೊಟ್ಟ ಬೆಂಬಲ ಅವರ ಕಲಾ ಪ್ರೇಮದ ಹೆಗ್ಗುರುತು ಆಗಿತ್ತು. ಹಾಗೂ ಸಾಹಸದ ಪ್ರವೃತ್ತಿಯೂ ಆಗಿತ್ತು ಎಂದರೆ ಅತಿಶಯೋಕ್ತಿ ಆಗಲಾರದು. ಉದಾಹರಣೆಗೆ ನನಗೆ ಚಲನ ಚಿತ್ರದಲ್ಲಿ ಅಭಿನಯಿಸಲು ಕಳುಹಿಸಿದುದು–ನನಗೆ ಆಗ ಮದುವೆ ಆಗಿರಲಿಲ್ಲ. 17-18 ವರ್ಷದ ಯೌವನದ ಸೌಂದರ್ಯ ತುಂಬಿ ತುಳುಕಾಡುತ್ತಿದ್ದ ತರುಣಿ-ನನ್ನನ್ನು ಆ ವಯಸ್ಸಿಗೆ ಆ ಕಾಲದಲ್ಲಿ ಚಲನಚಿತ್ರಲೋಕಕ್ಕೆ ಕಳಿಸಬೇಕೆಂದರೆ ಕುಲೀನ ಸಮಾಜದ ಸವಾಲನ್ನು ಎಷ್ಟು ಅವರು ಎದುರಿಸಿರಬೇಕು! ಸಮಾಜದ ಟೀಕೆಗೆ ಹೆದರದೆ (ಅಮ್ಮನ ವಿರೋಧದ ಬಿಸಿಯನ್ನೂ ಸಹಿಸಿಕೊಂಡು) ನನ್ನನು ಅವರು ದಿ. ಚಿತ್ತೂರು ನಾಗಯ್ಯನವರು ರಚಿಸಿದ "ತ್ಯಾಗಯ್ಯ" ಚಲನಚಿತ್ರದಲ್ಲಿ ರಾಜ ದರಬಾರಿನಲ್ಲಿ ಹಾಡುವ ಹಿಂದೂಸ್ತಾನಿ ಸಂಗೀತದ ಗಾಯಕಿಯಾಗಿ ಅಭಿನಯಿಸಲು ಅನುಮತಿ ಕೊಟ್ಟರು. ಅದೇ ಸಮಯ ನಾನು ಹಾಡಿದ್ದ ಗ್ರಾಮಾಫೋನ್ ರೇಕಾರ್ಡು (ಮುಖ್ಯವಾಗಿ "ಭಾಗ್ಯದ ಲಕ್ಷ್ಮಿ ಬಾರಮ್ಮಾ") ಬಹಳ ಪ್ರಸಿದ್ಧಿ ಪಡೆದುವು. ಬಹುಶಃ ನಮ್ಮ ಸಾರಸ್ವತ ಜಾತಿಯಲ್ಲಿ ಹೀಗೆ ರಿಕಾರ್ಡ್ಸ್ ಕೊಟ್ಟವಳು ನಾನೇ ಮೊದಲು ಎಂಬ ಹಿರಿಮೆ ಈಗ ನನಗಿದೆ! ಜಗತ್ಪ್ರಸಿದ್ಧ ನರ್ತಕ ಪಿ. ಉದಯಶಂಕರರ 'ಕಲ್ಪನಾ' ಚಲನಚಿತ್ರದ ಪಾರ್ಶ್ವ ಗಾಯನದಲ್ಲೂ ನಾನು ಭಾಗವಹಿಸಿದ್ದೆ. ಇವುಗಳೆಲ್ಲದರ ಶ್ರೇಯಸ್ಸು ನಮ್ಮ ಆನೂಗಲ್ಲದೇ ಇನ್ಯಾರಿಗೆ?

ಅವರ ಆ ಉದಾತ್ತ ಭಾವನೆ, ಕಲಾ ಪ್ರೇಮ, ಸಮಾಜದ ಟೀಕೆಗೆ ಹೆದರದಿರುವುದು ಇತ್ಯಾದಿ ಗುಣಗಳಿಂದ ಅವರ ಜೀವನ ಪಥದಲ್ಲಿ ಎಷ್ಟೊಂದು ಗಣನೀಯ ಮಿತ್ರರ ಸ್ನೇಹ ಲಭಿಸಿತ್ತು! ಆನೂವಿನ ಕಲಾ ಪ್ರೇಮ ಸಹಕಾರಗಳಿಂದಾಗಿ ತನ್ನ ಕೆಲವು ಸ್ವಪ್ನಗಳು ಸಾಕಾರವಾಗಲು ಸಾಧ್ಯವಾಯಿತೆಂದು ಡಾ|| ಶಿವರಾಮಕಾರಂತರು ಕೂಡ ತಮ್ಮ ಒಂದು ಬರಹದಲ್ಲಿ ವ್ಯಕ್ತಪಡಿಸಿದ್ದಾರೆ.

ಕಾರಂತರ ಬರೆದ ನೃತ್ಯ-ನಾಟಕ "ಮುಕ್ತ-ದ್ವಾರ"ದಲ್ಲಿ ನಮ್ಮ ಆನೂ ಏಸುಕ್ರಿಸ್ತನ ಪಾತ್ರವಹಿಸುತ್ತಿದ್ದರು. ನಮ್ಮಮ್ಮ ಅದರ ಹಿನ್ನೆಲೆಯ ಸಂಗೀತ ಹಾಡುತ್ತಿದ್ದರು. ಕಾರಂತರ ಮುಂದಾಳುತ್ವದಲ್ಲಿ ಜರುಗುತ್ತಿದ್ದ ಪುತ್ತೂರಿನ ದಸರಾ ಮಹೋತ್ಸವದ ಕಾರ್ಯಕ್ರಮಗಳಲ್ಲಾಗಲಿ ಒಂದಲ್ಲಾ ಒಂದು ಪಾತ್ರವನ್ನು ನಾವು ನಿರ್ವಹಿಸುತ್ತಿದ್ದೆವು.

ಆನುವಿನ ಈ ಚಟುವಟಿಕೆಗಳಿಗೆಲ್ಲಾ ಅವರ ಮಾವಂದಿರಾದ ದಿ. ಶ್ರೀ ಮೊಳಹಳ್ಳಿ ಶಿವರಾಯರ ಬೆಂಬಲವೂ ಒಂದು ಅದೃಷ್ಟದ ಭಾಗ್ಯವಾಗಿತ್ತು. ಡಾ|| ಕಾರಂತರು ಒಮ್ಮೆ ಪುತ್ತೂರಿನಲ್ಲಿ ಗುರುವರ್ಯ ರವೀಂದ್ರನಾಥ ಠಾಕೂರರ "ಶಾಂತಿನಿಕೇತನ"ದ ಮಾದರಿಯಲ್ಲಿ "ಬಾಲವನ" ಎಂಬ ಶಾಲೆಯನ್ನು ಪ್ರಯೋಗಾರ್ಥವಾಗಿ ಆರಂಭಿಸಿದ್ದರು. ನಮ್ಮ ಆನೂ ಅವರು ಈ ಅಪೂರ್ವದ ಪ್ರಯೋಗಕ್ಕೆ ಉತ್ತೇಜನ ಕೊಡಲು ಆ ಶಾಲೆಗೆ ಮುಕ್ತ ಮನಸ್ಸಿನಿಂದ ಬಾಲಕಿಯಾಗಿದ್ದ ನನ್ನನ್ನು ಸೇರಿಸಿದರು. ಅಲ್ಲಿನ ಶಿಕ್ಷಣದಿಂದ ನನ್ನ ಮುಂದಿನ ಯಶಸ್ವೀ ಜೀವನಕ್ಕೆ ಉಪಯೋಗವಾಗುವ ಹಲವು ವಿಷಯಗಳನ್ನು ನಾನಲ್ಲಿ ಕಲಿತಿರಬಹುದು. ಅವರೂ ಕ್ರಮೇಣ ಆ "ಬಾಲ-ವನ" ವನ್ನು ಮುಚ್ಚಬೇಕಾದ ಪ್ರಸಂಗ ಬಂದಾಗ ನನಗೆ ಮಾತ್ರ ವಿದ್ಯಾಭ್ಯಾಸಕ್ಕೆ ತೊಂದರೆ ಆಯಿತು–ಏಕೆಂದರೆ "ಬಾಲ-ವನ'ದ ತರಬೇತಿ ಆದಮೇಲೆ ಸರಕಾರೀ ಶಾಲೆಯಲ್ಲಿ ನಾನು ಸಹಜವಾಗಿ ಕೂಡಬೇಕಾದ ವರ್ಗದಲ್ಲಿ ನನ್ನನ್ನು ಸೇರಿಸದೆ ಕೆಳಗಿನ ದರ್ಜೆಯಲ್ಲಿ ಹಾಕಿದುದು ನನ್ನ ಮನಸ್ಸಿಗೆ ತುಂಬಾ ನೋವು ಆದುದು ಆನೂಗೂ ತಿಳಿದಿತ್ತು. ಅವರ ಮನಸ್ಸು ನೊಂದಿತ್ತು. ಆನೂಗೆ ಕಲಾದೇವತೆಯ ಉಪಾಸನೆಗೆ ತನ್ನ ಹೆಂಡತಿ ಮಕ್ಕಳೇ ಗಂಧಾಕ್ಷತೆಗಳಾಗಿದ್ದುವು ಎಂದರೆ ತಪ್ಪಾಗಲಾರದು.

ಆನೂ ಕೆಲಸ ಮಾಡುತ್ತಿದ್ದ ಕಾಲೇಜಿನ ಕಲಾತ್ಮಕ ಕಾರ್ಯಕ್ರಮಗಳಲ್ಲಿ "ಭಾಗವಹಿಸಲಾರೆ" ಎಂದರೆ ಅವರಿಗೆ ಅಸಹನೀಯ ಕೋಪ ಬರುತ್ತಿತ್ತು. ಇಂತಹ ಒಂದು ಸಂದರ್ಭದ ಘಟನೆ ಇಲ್ಲಿ ಹೇಳದೆ ಇರಲಾರೆ. ಅಂದು ಮಂಗಳೂರಿನ ಸರಕಾರಿ ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ 'ವಿವಿಧ ವಿನೋದಾವಳಿ' ಏರ್ಪಡಿಸಿದ್ದರು. ಅಂಥ ಕಾರ್ಯಕ್ರಮಗಳನ್ನೆಲ್ಲಾ ಹೆಚ್ಚಾಗಿ ಆನೂವೇ ನಿರ್ದೇಶಿಸುತ್ತಿದ್ದರು. ಕಾರ್ಯಕ್ರಮಕ್ಕೆ ನಾವೆಲ್ಲ ಅಮ್ಮನೊಡನೆ (ಆನೂ ಬೆಳಗ್ಗಿನಿಂದ ಕಾಲೇಜಿನಲ್ಲೇ ಇದ್ದಿರಬೇಕು) ಹೋಗಿದ್ದೆವು. ನನಗಾಗ ಸುಮಾರು 7-8 ವಯಸ್ಸಿರಬಹುದು. ಅಮ್ಮ ನನಗೆ ತಲೆ ಬಾಚಿ ಗಟ್ಟಿಯಾಗಿ ಹೆಣೆದ ಜಡೆಯಲ್ಲಿ ತುಂಬಾ ಮಂಗಳೂರು ಮಲ್ಲಿಗೆ ಮುಡಿಸಿ, ಬಳೆ, ಸರ ಹಾಕಿ ಚಂದದ ಉಡುಪು ಕೊಟ್ಟು ಸಿಂಗರಿಸಿ, ಕರೆದುಕೊಂಡು ಹೋಗಿದ್ದರು ಅಂದುFancy Dress Competition ಏರ್ಪಡಿಸಿದ್ದರು. ಆನೂವಿನ ಶಿಷ್ಯೆ ಒಬ್ಬಳು 'ಭಿಕ್ಷುಕಿಯು'ವ ಪಾತ್ರದಲ್ಲಿ Faney Dress Competion ಗೆ ಹೋಗುವವಳಿದ್ದಳು ಅವಳೊಡನೆ ಒಂದು ಮುದ್ದಾದ ಮಗು ಕೂಡ ಇದ್ದರೆ ಪಾತ್ರಕ್ಕೆ ಕಳೆ ಕಟ್ಟುವುದು ಖಂಡಿತ ಎಂದು ಬಗೆದು ಆನೂ ನನ್ನನು ನೋಡಿದ ಕ್ಷಣ ಎತ್ತಿಕೊಂಡು Greenroom ಗೆ ಹೋದರು. ನನ ಚಂದದ ಉಡುಪನ್ನು ಕಳಚಿದರು ಸರ-ಬಳೆ ತೆಗೆದರು ಕೂದಲು ಬಿಚ್ಚಿ ಕೆದರಿಸಿ ಬಿಟ್ಟರು. ಮುಖ ಕೈಗೆಲ್ಲಾ ಕಪ್ಪು ಹುಡಿ ಬಳಿದ ವಿದ್ರೂಪಗೊಳಿಸಿದರು! ಭಿಕ್ಷುಕಿಯ ಮಗಳಾಗಿ "[illegible]" ಹಾಕಿ ಕೊಟ್ಟರು! ನನಗಂತೂ ಆನೂವಿನ ಈ ವಿಚಿತ್ರವರ್ತನೆಯಿಂದ ಅಳು ಬಂತು.

(ಬಹುಶಃ ಅಪ್ಪನಿಗೂ!) ಆದರೆ ಆ ಪಾತ್ರವಹಿಸಲು ನಿರಾಕರಿಸಿದರೆ ಅನುಭವಿಸ ಕೋಪ ಎದುರಿಸುವುದು ಇನ್ನೂ ಕಷ್ಟವಾಗುತ್ತಿತ್ತು. ಅಂದು ಅವರು ಹೇಳಿಕೊಟ್ಟ 'ಅಭಿನಯ' ಮಾಡಿದೆ. ನನ್ನ ಬಣ್ಣ ವೇಷ ಎಲ್ಲ ಸೇರಿ ಆ "ಭಿಕ್ಷುಕಿ"ಗೆ ತಕ್ಕ ಹಾಗಾಗಿ ಆ Fancy Dress ಬಹಳ ಯಶಸ್ವಿಯಾಯಿತು. "ಭಿಕ್ಷುಕಿ" ಪಾತ್ರಕ್ಕೆ ಪ್ರಥಮ ಬಹುಮಾನವೂ ಬಂತು! ಈ ಪ್ರಕರಣದಿಂದ ಅವರ ಕಲಾಪ್ರೇಮ ದೃಢ ನಿಷ್ಠೆಯತೆ ಎಷ್ಟಿತ್ತು ಎಂದು ಊಹೆಗೂ ಬಾರದ ವಿಷಯ! ಇದೇ ಪ್ರವೃತ್ತಿ ಒಂದಿಷ್ಟೂ ಕಳೆಗುಂದದೆ ಅವರ ಜೀವಮಾನವೆಲ್ಲವೂ ಮೆರೆದು ಜೀವಂತವಾಗಿತ್ತು.

ಆದರೆ ವರುಷಗಳು ಉರುಳಿದಂತೆ, ಜೀವನದ ಏರು ತಗ್ಗುಗಳನ್ನು ಅನುಭವಿಸಿದಾಗ, ಅವರ ಜೀವನದ ಸಂಗಾತಿ–ಮುದ್ದಿನ ಮಗಳು ಶಾಂತಿ-ಬಂಧುಮಿತ್ರರು ಒಬ್ಬೊಬ್ಬರೇ ಅವರನ್ನಗಲಿ ಹೋದಾಗ ಅವರ ಮನೋ ವೃತ್ತಿಯಲ್ಲಿ ಕ್ರಮೇಣ ಬದಲಾವಣೆ ಆಗುತ್ತಾ ಬಂತು. "ಹುಚ್ಚು ಬೆಳದಿಂಗಳಿನ ಹೂಬಾಣಗಳು" ಬರೆದ ಕೈ "Mirdad," "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ" ಮುಂತಾದ ಗಂಭೀರ ಪುಸ್ತಕಗಳನ್ನು ಬರೆಯಿಸಿತು. ಮರಣ-ಮರಣೋತ್ತರ ಸ್ಥಿತಿಯ ಪರವಾದ ಕುತೂಹಲ ಅವರ ಮನಸ್ಸನ್ನು ಆವರಿಸಿತ್ತು.

"ಯಾರು ಅಗಲಿದರೂ ಪುಸ್ತಕಗಳು ನನ್ನನ್ನು ಅಗಲಲಾರವು" ಎಂಬಂತೆ ಅವರ ಓದಿನ ಹಸಿವನ್ನು ತೃಪ್ತಿಪಡಿಸಲು ಕಷ್ಟವಾಗುತ್ತಿತ್ತು. ಹೊಟ್ಟೆಯ ಹಸಿವನ್ನು ಸಹಿಸಿಕೊಳ್ಳಲು ಹಿಂಜರಿಯದೆ ಇದ್ದವರು ಓದಿನ ಹಸಿವನ್ನು ತಡೆಯಲಾರದಾದರು! ಕಣ್ಣಿಗೆ Catatract ನ ಶಸ್ತ್ರಕ್ರಿಯೆ ಆಗಿ ದೃಷ್ಟಿಲಾಭ ಬಂದಾಗಲೂ Magnifying glass ನ ಸಹಾಯದಿಂದ ಓದಿ ಮನಸಮಾಧಾನ ಪಡೆಯುತ್ತಿದ್ದರು.

ಇತ್ತೀಚೆ, ತನ್ನ ಮಕ್ಕಳೇ ತನಗಾಗಿ ಕಷ್ಟಪಟ್ಟರೂ ಅವರ ಮನಸ್ಸು ದುಃಖಿತವಾಗುತ್ತಿತ್ತು. ಅವರಿಗೆ ತನ್ನ 84ನೇ ವಯಸ್ಸಿನಲ್ಲಿ ಅರ್ಧಾಂಗ ವಾಯುವಿನ attack ಬಂದು ಸ್ವಲ್ಪ ಸಮಯ ಆಸ್ಪತ್ರೆಯಲ್ಲಿದ್ದಾಗ ಅವರೊಡನೆ ಇರಲು ನಾನು ಪೂನಾದಿಂದ ಬೊಂಬಾಯಿಗೆ ಹೋಗಿದ್ದೆ. ಆಗ ಅವರ ಆರೋಗ್ಯದ ವಿಷಯ ನನಗೆ ಯೋಚನೆ ಇದ್ದರೆ ಅವರಿಗೆ ನನ್ನ ಚಿಂತೆ ಕಾಡುತ್ತಿತ್ತು!–"ಅಯ್ಯೋ ನನ್ನಿಂದಾಗಿ ನಿನಗೆ ಹೊತ್ತಿಗೆ ಸರಿಯಾಗಿ ಊಟ ತಿಂಡಿ ಇಲ್ಲವಲ್ಲಾ-ನಿದ್ರೆಗೆ ತೊಂದರೆ-ಸ್ನಾನಕ್ಕೆ ತೊಂದರೆ-ಆಸ್ಪತ್ರೆ-ಮನೆ ಅಂತ ಓಡಾಡುವ ಶ್ರಮ-ನಿನ್ನ ಪತಿಗೆ ನೀನಿಲ್ಲದೆ ಅಲ್ಲಿ ಎಷ್ಟು ಕಷ್ಟವೋ" ಎಂದು ಚಿಂತೆಯ ಕಂತೆಯನ್ನು ಬೆಳೆಸುತ್ತಿದ್ದುದನ್ನು ಹೇಗೆ ಮರೆಯಲಿ?

ಒಂದೆರಡು ವರ್ಷಗಳ ಹಿಂದೆ ಅನೂ ಒಂದು ದಿನ ನನ್ನೊಡನೆ ಅಂದಿದ್ದರು:-ಜೈವಂತಿ, ದೇವರು ನನಗೆಷ್ಟು ಸಮೃದ್ಧ ಜೀವನ ದಯಪಾಲಿಸಿದ್ದಾನೆ; ಜೀವನದಲ್ಲಿ ನನ್ನ

ಎಷ್ಟೋ ಇಚ್ಛೆಗಳು ಪೂರ್ಣಗೊಂಡಿವೆ. ಅಲಭ್ಯ ಮಿತ್ರರು, ಮಾಯೆ-ವ ಮತೆಗಳಿಂದ ನೋಡಿಕೊಳ್ಳುವ ಮಕ್ಕಳು ಮತ್ತು ಅದರಲ್ಲಿ ಪಾಲ್ಗೊಳ್ಳುವ ಅವರವರ ಜೀವನದ ಸಂಗಾತಿಗಳು ಕೂಡ! ಎಷ್ಟೊಂದು ತೃಪ್ತಿಕರ ಜೀವನ ನನ್ನದು! ನನ್ನ ಈಗಿನ ಸ್ಥಿತಿ ಪುರಂದರದಾಸರ "ಏನು ಬೇಡಲಿ ನಿನ್ನ ಬಳಿಗೆ ಬಂದು? ನೀನಿತ್ತ ಸೌಭಾಗ್ಯ ಅಖಿಲವಾಯಿತೆನಗೆ" ಎಂಬಂತಿದೆ! (ಆದರೆ ಬಹುಶಃ ಅವರಿಗೆ ಆ ಪದದ ಮುಂದಿನ ಚರಣಗಳು ಮರೆತಿರಬೇಕು. ಅವು ಅವರ ಅಂದಿನ ವಿಚಾರಕ್ಕೆ ವಿರೋಧವಾಗಿಯೇ ಇವೆ ಅಲ್ಲವೇ?)

"ಅರೆ!–ನೀನು ಈ ಪದಕ್ಕೆ ರಾಗ ಜೋಡಿಸಿ ಹಾಡಬೇಕು!" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. "ಈಗ ನನಗೊಂದೆ ಆಸೆ ಉಳಿದಿದೆ. ಕೊನೆ ತನಕ ಆರೋಗ್ಯವಾಗಿದ್ದು, ಇತರರಿಗೆ ದೈಹಿಕ-ಆರ್ಥಿಕ ತೊಂದರೆ ಕೊಡದೆ ಈ ಜಗತ್ತು ಬಿಟ್ಟು ಹೋಗುವಂತೆ ದೇವರು ಕರುಣಿಸಬೇಕು" ಎಂಬುದಾಗಿ ಪ್ರಾರ್ಥಿಸಿದರು.

ಅಂತಿಮ ಯಾತ್ರೆಗೆಂದು ಹೊರಟ ಅವರ ಮುಖದಲ್ಲಿನ ಸುಂದರತೆ-ಶಾಂತಿ-ತೃಪ್ತಿಗಳನ್ನು ನೋಡಿದಾಗ ಅವರ ಆ ಇಚ್ಛೆಯನ್ನು ದೇವರು ಪೂರೈಸಿರಬೇಕು ಎಂದೆನಿಸಿತು ನನಗೆ–ಒಂದು ವೇಳೆ ಕಿಂಚಿತ್ ಆಸೆ ಏನಾದರೂ ಉಳಿದಿದ್ದರೆ-ಅವರ ಮಕ್ಕಳ-ಮೊಮ್ಮಕ್ಕಳ-ಮಿತ್ರರು-ಆಪ್ತೇಷ್ಟರು ಅರ್ಪಿಸುವ ಈ ಶ್ರದ್ಧಾಂಜಲಿಯಿಂದ ಅವರ ಆತ್ಮ ಸಂತುಷ್ಟವಾಗುವುದರಲ್ಲಿ ನನಗಂತೂ ಸಂಶಯವೇ ಇಲ್ಲ. ಭಗವಂತನು ಅವರಿಗೆ ಸದ್ಗತಿ ತೋರಿಸಲಿ. ಅವರ ಆತ್ಮಕ್ಕೆ ಶಾಂತಿ ಇರಲಿ.

ಸುಶೀಲಾ ಭಟ್

ಇದರೊಂದಿಗೆ ಮಾರ್ಚ್ 6ರ "ತರಂಗ"ದ ಒಂದು ಕಟ್ಟಿಂಗ್ ಇದೆ. ಶ್ರೀ ರಮಾನಂದರಾಯರು ನಿಮ್ಮ ತೀರ್ಥರೂಪರೆಂತ ಕೇಳಿದ ನೆನಪು. ಅವರು ಕಣ್ಮರೆಯಾದ ಸುದ್ದಿ ನನಗೆ 'ತರಂಗ' ದಿಂದ ತಿಳಿಯಿತು ಅವರ ಅಗಲುವಿಕೆಯ ದುಃಖವನ್ನು ಸಹಿಸುವ ಶಕ್ತಿ ನಿಮಗೆ ಬರಬೇಕೆಂತ ಹಾರೈಸುವೆ. ಅವರ ಕುರಿತು–'ತರಂಗ'ದಲ್ಲಿ ಓದಿದಾಗ ಅವರೊಂದು 'ಸಾರ್ಥಕ ಜೀವನ ನಡೆಸಿದ ವ್ಯಕ್ತಿ' ಎಂಬ ಅಭಿಮಾನವು ಮೂಡಿತು. ಆ ಹಿರಿಯ ಚೇತನಕ್ಕೆ ನಮಿಸುವುದರೊಂದಿಗೆ ಅವರ ಆತ್ಮಕ್ಕೆ ಶಾಂತಿ ಉಂಟಾಗಲೆಂತ ಹಾರೈಸುವೆ.

ಯಾರು ನಮ್ಮ ಜೀವನವನ್ನು ಸುಖಪ್ರದವಾಗಿ ಮಾಡುತ್ತಾರೋ ಅವರೇ ನಿಜವಾದ ಮಾನವ. ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಂಡಾಗ ಸುಖ ಜೀವನದ ತೃಪ್ತಿ ಕಾಣಲು ಸಾಧ್ಯ ಎನ್ನುವ ವಿಚಾರ ಯೋಚಿಸಬೇಕಾದ್ದು.

Prof. P. Ramanand Rao

" Shankru "

Our dear 'Annu' who left us suddenly on 13th February at the ripe old age of 86 years was a person who combined in himself many qualities of the head and the heart. Father was by profession an educationist starting his carrer as a lecturer in Chemistry and retiring as Principal of the Govt. Training Colege Mangalore. But he is remembered best for his contributions to the amateur stage and the Kannada literature. He was a pioneer who set a new trend in Kannada humoraus literature by writing delightful essays and short stories which were subsequently published by a well known publishinghouse of Dharwad in a book from titled 'Huchchu Beladingalina Hoobanagalu" (Flower arrows shot in lunatic moonlight.)

His passion for stage and performing arts started in the early twenties and lasted till his very end. Our earliest memories as children, are a mixture of interminable rehearsals in our home, sitting goggle-eyed through 5 hours of professional dramas, the smell of grease paint and drama costumes and the sound of jingling dance-bells. Way back in 1929, unmindful of the shock waves that passed through the more conservative sections of our community, he encouraged our mother to team with him on stage in a rollicking Konkani farce, trsanslated by her from Kannada. His encouragement made my mother later on earn a high place among women writers of Kannada with several of her books published. The Jnanpith award winner Dr. Shivaram Karanth and my father became friends arround 1928 or so and their friendship lasted throughout father's life. My father was responsible for opening the whole rich world of western drama, ballet music and literature to the young Karanth whose creative genius flowered fully to enraich Kannada literature and the stage

with his innovative forms in ballet, operettas and true-to-life novels too numerous to list here. In these experimental visual art forms by Karanth we children were encouraged by both our parents to actively participate, thereby enriching our artistic sensibilities. Thanks to this early exposure to art, the children grew up to make a name in different fields of art.

Father's published works are Kannada translations of Anton Chekov's plays Cherry Orchard and Sea Gull, Erich Von Remarque's famons war novel 'All Quiet On The Western Front' (published some 8 months back) English plays: 'Inward Bound' and 'The Return of Shakuntala' published in the famous New Dejhi quarterly 'ENACT' dedicated to theater-arts. English Verse-play 'Mirdad' published by the Bharatiay Vidya Bhavan Bombay, by far the best know of his works. Fascinated by the Vedantic overtones in the long poem 'Mirdad' written by the famous Lebanese poet Mikhail Naimy, father obtained his permission to transcribe it into play form and, upon securing his appreciative approval gottit published in 1971.

To the list of above interests our Father had, one should add his interest for photography at a time when comeros cumbersome, and he sensitised glass plates after exposure had to be developed at home in a make slift 'dark room, In spite of these limitations some of the photos taken by him have remained unfaded clear even after 60 years and adorn our album. And I should not forget his craze for radio, which, in late twenties was in its infancy and one had to assemble a set by obtaining the kit of spare parts. With such a homebuilt receiver we used to enjoy the concerts of Hindustani music broebcast by VUB Bombay as the station was then called. His love for music both Hindustani, Carnatic and Western (Paul Robeson's 'Old man River' was his favourite) made him invest his whole month's salary in the purchase of a spring-wonud gramophone in 1930.

Towards the end of his life he made a deep study of an exotic and rare book 'The Tibetan Book of the Dead' translated into English from Tibetan by Evans Wentz. It deals with the Art of Dying so that the soul, on being detached from the body, may be properly guided to reach a state of not being reborn. Father attempted to dramastic this difficult theme and gave it up halfway as it would not satisfy him. He had however given it a title 'The Spirit Unborn,. Ii is our firm belief that our dear Father's soul has become the spirit unborn and reached the highest state of Bliss.

— Kanara Saraswat

From Letter Mundkur Shrikar

........A stalwart from among us has gone, and you his children and grand-children have lost a pater familias of whom why one can be proud rightly. Ramanand's obituary notice in "The Times of India" to-day told us the sad story. However, he lived his full span, tending the spirit of art literature and drama till the last and the end I was told was painless and sudden. The gap in your reepective families cannot be filled for which I offer all my sympathy and sad sentiments........

Guruji Mulki, Bangalore

........the sad news of Mamu's passing away. It is too early for me to gauge my sense of personal loss. To me he was much more than a relative and teacher. I shall always remember the interest he took in me and the way he treated me as his son. It was fortunate that last April when I was in Bombay I spent three pleasant hours with him talking on the two subjects dearest to his heart-literature and theatre....

Prof. Naimpally Shantharam Cochin

.... He was the professor of Chemistry in the Presidency College at Madras when I was doing my P. G. in that Institution. So, his passing away is a personal loss to me too. I have rarely come across a man of such variegated talents as Ramanandmam. His passing away is undoubtedly a loss to the whole community and I am sure the sorrow generated by his passing away is shared by one and all........

U. S. Krishna Rao, Bangalore

........The days after February 13th have been days of

........These days after February 13th have been days of remembrance, adoration, and devotion to that great soul who sheltered us, loved us and looked after us and inspired es to become good citizens and human beings....Words fail to describe a great personality who has been a sheet-anchor for his progeny because just as there is a lump in our throat when we talk about him so also there is an impediment to our hand when we write about him....Father-in-law was an inspiration to one and all as he was a multi-faceted individual a stalwart amongst stalwarts, a simple man amongst simple men, an artist, amongst artists, a scientist amongst scientists and above all a great human being amongst human beings. Let us pay our homage to him who has been our frien, philosopher and guide. Greatness in our little world may be unknown to others; but, to us all he is a genial being, revered, adored and glorified. Let us hope that his atman has reavhed Paramatman........

Varada R. Panje

........Your letter conveying the sad news. Like the doctor who attended on him in the last moments, we also feel it is a beautiful death for a gentle soul. I can imagine the desolation you feel although it was an expected event any time. When it does come it shakes you up. You have been an ideal son to him-a Pundarika. The sadness of the final parting will remain with all of us specially you, for a long time....Flashes of his many-faceted personality come to my mind. He was a respected and loved 'Father Figure' to me. I role which he played at different stages of my life and recently when he so generously offered me shelter when a was shelterless.... I feel I am one of his children....

Varada Panje

........I share with you, Chandam, most of the fond memories. I am happy the merciful providence granted him the one wish we all pray for a peaceful end....what a beautiful death his was....

Shivadev Ubhayakar, Los Angeles, USA

......The bad news completely shook me and all I could do was to sit still in one place and think. I thought of the wonderful three years i spent with him when Amma and Anna were in England. I thougnt of his Pleasent and hear-warming personality-always recognizing the good things in peoole and ignoring the bad aspects. I thought of his life-style, No fastidiousness, eat, drink, smoke, sniff All in Moderation-something which must be emulated by all those who get addicted to vices. I thought of his enormous literary and scientific capabilities. I felt proud to be the grand-son of such a great man. Learning that his final moments were not very painful, I was relieved Even his final exit was done gracefully and kindly. I will miss him, I will cherish him the rest of my life........

Vrinda's Mother, Bombay,

........Condolence to you all....we have lost our old Uncle-Respected Gold-Gem-Ramanand Mam. May his soulrest in peace, peace, peace........

He was very kind-hearted to everyone. He had affection for the young and the old. He treated everyone as his family members. At Deepa's wedding, from the beginning till the iast, he gave good guidance to Suman and others as if they were his own grand-children, He loved one and all. I have no words to express as my eyes get blurred with tears....We did'nt think that he would cast us back so soon. By the Grace of God and by the help of our elderly respected Ramanandmam, Deepa's wedding went off smoothly. When we were like orphans in trouble, he gave his favour. He was truly a God-Father it seemed to me.... After the wedding, at the dining table. when the guests and friends were having their lunch, Ramanand Mam's cheerful face and jolly mood was like a gaily Vase full of Flowers kept on the table His personality was like a bouquet of flowers amidst the company....I was very proud and enjoyed this sight when I was unable to do all this. This is the elders play; they do help others as if they are their own family members. Alas, I'm so sorry for not giving thanks for his trouble. May his soul rest in peace Oh, God Gracious....I'm too late for this....

Jayadev Uphayakar Bangalore

.... How vain it is to fild a grief with words words words.... Since that bright day in his life and our black day, the wondreous life AJJA led has fallen in allof us living mortals like buds and blossoms He has been and will continue to be our paogenitor for future fruits--ripened in his blood........ "Whence" and "Whither" were two of his eternal quests he taught me, being the eldest grandchild....child I still am I .... To me he is not dead. He is living. When death gives al there is of worth to life, the worth supercedes. And to use his own sapt word "Effulgent". None of anyone can imagine that he is no more. All of us know that he is living perhaps in an healthier atmaosphere.... His worth is more than all human emotions one undergoes (if he were behind me he would most gently correct me.).... There are no words in any language In the entire world that can describe the TOTAL personality of my AJJA. I call him My AJJA because he is. He is now Ajja to all. If mental tears can speak he would have quietly erased those human tears. His wisdom glorified by love is a standing example on four legs of a writing desk that he gave me when I passed my S. S. L. C. Memories are made of such forethought, wisdom and more important, love and understanding........ I miss him personaly. physically. But, then I don't miss him at all, all my life.... Because he is constantly here, there and everywhere.... He taught me,; He told me; He was he. Now He is He....

Vittal Rajagopal Bhat, Bombay

........Affection is a rare commodity these days and dear Rama nandamam was affectionate to the core. How elase could he have climed up to the 4th floor to bless my son during his Upanayanam. In his passing away, a very kindly light has been extinguished....A peaceful parting from this world is a rare gift of the gods...."Anaayaasena maranam" is a genuine aspiration of everyone who is born. Almighty summoned dear Ramanandmam unto himself by conferring this gift on him. Eternal peace will be his as a matter of right........

Mohan V. Labhadaya USA

.... the suddennese of the sad news found us totally unprepared........ it took some time for us to realise the facuality and finality of what had happened,.... Death is the natural end of this body. We all know this and think of it in personal terms at times. As someone said it is not death that we fear but the dying. One has to be fortunate to conclude the life of this body in a quick, painless fashion. Dear Mhanth's end was one such.... as he had hoped for. He must have, more so than any of us agonised over the final days of dear Mhav. His prayer for a peaceful, painless death was granted by the All Knowing Lord. One is blessed to breathe his last in familiar surroundings, with his family around him and in the arms of his son. He has gently passed on, with the name of the Lord on his lips and in his heart. The scriptures say that such a one merges into the Lord. To those of us who are left behind, this assurance will be a profound consolation and source of strength. Let us all hope pray to Him to help us accept this beautiful end to dear Mhanth's life and ro give us strength to continue to meet our responsibilities and fulfil our duties. We are glad that we could spend sometime with Mhanth in january sitting in the living room conversing. Perhaps that is how we will remember him. Was it wordsworth that mused about the 'Old Familiar Faces?' Many of them are no longer with us; the past decede or so has taken e heavy toll. But the drama continues- a different Act, a different scene. Willy nilly, we all have to play our roles in this. May the Lord grant us His Grace so that we may play our roles as we should- for His glory and in his service........

Shantharam padukone Kotekar Soulh Kanara

.... It Is with great sorrow that we heard that dear Ramanand Anna passed away suddenly due to heart failure. My his noble soul rest in peace eternal.... you have been a dutiful son to him and looked after him with love and affection in his old age. God will reward you for this filial duty which you have discharged. May He bless you........

ದಿ॥ ಪಡುಕೋಣೆ ರಮಾನಂದರಾಯರು

ಯಶೋಧರಾ ಭಟ್

ಕಾಲೇಜಿನ ಒಂದು ತರಗತಿ. ಅಂದು ಲೆಕ್ಚರರ್ ಬಂದಿರಲಿಲ್ಲ. ಅಂದಮೇಲೆ ಕೇಳಬೇಕೆ, ವಿದ್ಯಾರ್ಥಿಗಳ ಗದ್ದಲ? ಇತರರಿಗೆ ತಲೆನೋವಾಯಿತು. ಕಡೆಗೆ ಪ್ರಿನ್ಸಿಪಾಲ್ ರಮಾನಂದರಾಯರೇ ಅಲ್ಲಿ ಬರಬೇಕಾಯ್ತು. ಅವರನ್ನು ನೋಡಿದಕೂಡಲೇ ಎಲ್ಲರೂ ಎದ್ದು ನಿಂತರು. "ಲೆಕ್ಚರರ್ ಬರಲಿಲ್ಲವಾದರೆ ಗಲಾಟೆ ಯಾಕೆ ಮಾಡ್ಬೇಕು? ನಿಮ್ಮಷ್ಟಕ್ಕೆ ಓದಿಕೊಳ್ಳಬಹುದಲ್ಲ?" ಎಂದುದಕ್ಕೆ ಅವರಲೊಬ್ಬ "ಏನು ಓದಿಕೊಳ್ಳೋದು ಮಣ್ಣು, ಎಂಥದೂ ತಲೆಗೆ ಹೋಗೋದಿಲ್ಲ" ಎಂದು ಆಕಳಿಸಿದ.

"ಎಲ್ಲಿ, ನಿಮ್ಮ ಪಠ್ಯಪುಸ್ತಕ ನೋಡೋಣ" ಎಂದು ಕೈಚಾಚಿದರು.

ಅದು ಷೇಕ್ಸ್‌ಪಿಯರನ ನಾಟಕವಾಗಿತ್ತು. ಅದನ್ನು ತೆಗೆದುಕೊಂಡು ವೇದಿಕೆ ಹತ್ತಿ ಗಟ್ಟಿಯಾಗಿ ಓದಲು ಶುರುಮಾಡಿದರು. ಅಗತ್ಯವಿದ್ದಲ್ಲಿ ಅರ್ಥ ವಿವರಿಸಿದರು. ನಿಂತಲ್ಲೇ ಪಾತ್ರಗಳನ್ನು ಅಭಿನಯಿದರು. ಅವರು ಓದುತ್ತಿದ್ದಂತೆ ಶಾಯಲೋಕ್‌ನ ಕಟಿತನ, ಆಂಟೋನಿಯನ ಅಸಹಾಯಕತೆ, ಪೋರ್ಷಿಯಾಳ ಚುರುಕು ಬುದ್ಧಿ ಹೊರಹೊಮ್ಮಿ ಬಂದುವು. ಮಂತ್ರಮುಗ್ಧರಾಗಿ ಕೇಳುತ್ತಿದ್ದ ವಿದ್ಯಾರ್ಥಿಗಳಿಗೆ ಕ್ಲಾಸು ಮುಗಿದಾಗ ಬಾರಿಸಿದ ಗಂಟೆ ಸಹ ಕೇಳಿಸಲಿಲ್ಲ!

ಅಷ್ಟಕ್ಕೂ ರಮಾನಂದರಾಯರ ವಿಷಯ ಇಂಗ್ಲೀಷಾಗಿರಲಿಲ್ಲ. ಅವರದ್ದು ರಸಾಯನ ಶಾಸ್ತ್ರವಾಗಿತ್ತು. ರಾಜಮಹೇಂದ್ರಿ, ತಲಚೇರಿ, ಪಾಲಘಾಟ್, ಮದ್ರಾಸಿನ ಮಹಾವಿದ್ಯಾಲಯಗಳಲ್ಲಿ ರಸಾಯನ ಶಾಸ್ತ್ರ ಹೇಳಿಕೊಡುತ್ತಾ ಆ ವಿಭಾಗದ ಮುಖ್ಯಸ್ಥರಾಗಿ ತೇರ್ಗಡೆ ಹೊಂದಿದ್ದರು, ಆವತ್ತಿನ ಇಂಟರ್‌ಮೀಡಿಯೇಟ್ ತರಗತಿಗೋಸ್ಕರ ರಸಾಯನ ಶಾಸ್ತ್ರದ ಮೇಲೆ ಒಳ್ಳೆಯ ಪಠ್ಯಪುಸ್ತಕವನ್ನು ಕೂಡ ಬರೆದಿದ್ದರು. ಈ ಜ್ಞಾನದ ಲಾಭದಿಂದ ಮನೆಯಲ್ಲೇ ಸಾಬೂನು, ಟೂಥ್‌ಪೇಸ್ಟ್, ಪೌಡರು, ಮತ್ತೆ ದೀಪಾವಳಿ ಬಂತೆದರೆ ಪಟಾಕಿ ಇತ್ಯಾದಿಗಳನ್ನು ಸ್ವಯಂ ತಯಾರಿಸುತ್ತಿದ್ದರು. ಅಷ್ಟೇ ಅಲ್ಲದೆ, ಈ ವಿಜ್ಞಾನ ದೃಷ್ಟಿಯಿಂದಲೇ ಅಡುಗೆ ಸಹ ಮಾಡಬಲ್ಲವರಾದರು.

ಒಮ್ಮೆ ಹೆಂಗಸರ್‍ಯಾರೂ ಇರಲಿಲ್ಲ. ಅಪ್ಪ, ಮಗ ಇಬ್ಬರೇ ಮನೆಯಲ್ಲಿ. ಮಗನ ಹುಟ್ಟುಹಬ್ಬ. ಕೊಂಡಾಡಬೇಕೆಂದು ಮನಸ್ಸಾಯಿತು. ಅನ್ನ, ಪಲ್ಯ, ಸಾರು ಅಲ್ಲದೆ ಪೂರಿ ಶ್ರೀಖಂಡಗಳನ್ನು ಸಹ ಮಾಡಿ ಬಡಿಸಿದರು. ಹೆಂಡತಿ ಇದ್ದಾಗ ಅಡಿಗೆ ಕೋಣೆಯಲ್ಲಿ ಹೆಜ್ಜೆ ಇಡದ ಇವರಿಗೆ ಇಷ್ಟೆಲ್ಲಾ ಹೇಗೆ ಬಂತು ಎಂದು ಕೇಳಿದ್ದಕ್ಕೆ,

"ನಮ್ಮ ಮನೆಯೂ ಒಂದು ಪ್ರಯೋಗಶಾಲೆಯಲ್ಲವೆ? ಇಲ್ಲಿಯೂ ಸಹ ಕುದಿಸುವುದು ಕಲೆಸುವುದು, ಕರಗಿಸುವುದು, ಜೆರೆಸುವುದು, ಸೋಸುವುದ ಎಲ್ಲ ಅಲ್ಲಿಯ ಹಾಗೇ ಅಲ್ಲವೇ? ಉಗಿಬಂಡಿಯನ್ನು ಕಂಡು ಹಿಡಿದಾತ ಹೆಂಡತಿಯ ಚಾದಾನಿಯಿಂದ ಹೊರ ಬರುವ ಆವಿಯನ್ನು ನೋಡಿಯೇ ಅಲ್ಲವೆ ಸ್ಫೂರ್ತಿಪಡೆದದ್ದು?" ಎಂದು ಮುಗುಳ್ನಕ್ಕರು.

ರಮಾನಂದರಾಯರಿಗೆ ಹಲವು ಅಭಿರುಚಿಗಳಿದ್ದವು. ಕ್ಲಬ್ಬಿನಲ್ಲಿ ಬಿಲಿಯರ್ಡ್ಸ್ ಆಟ, ಮನೆಯಲ್ಲಿ ಗ್ರಾಮಾಫೋನು, ರೆಕಾರ್ಡುಗಳು, ಛಾಯಗ್ರಹಣದ ಸಾಹಿತ್ಯಗಳು, ಉಪಕರಣಗಳು. ಓದಲು ಹೊಸ ಹೊಸ ಗ್ರಂಥಗಳು. ಸಂಗೀತ ಪ್ರಿಯರಾದ ಅವರು ಮಂಗಳೂರಿನಲ್ಲಿ ಯಾರೋ "ಲಕಡಿ ಬುವಾ" ಹಾಡಿದಾಗ ಭಾವನಾಪರವಶರಾಗಿ ತಮ್ಮ ಕತ್ತಿನಲ್ಲಿ ಇದ್ದ ಚಿನ್ನದ ಸರತೆಗೆದು ಬಹುಮಾನ ಕೊಟ್ಟುಬಿಟ್ಟರಂತೆ, ಒಡ್ಡೋಲಗದ ಅರಸರಂತೆ.

ಕೆಲವು ಮಟ್ಟಿಗೆ ಅವರು ರಾಜರ ಹಾಗೆಯೇ ದರ್ಬಾರು ಮಾಡಿ ಮೆರೆಯುತ್ತಿದ್ದರೆಂದು ಅವರ ಪತ್ನಿ ಸೀತಾದೇವಿಯ ಅಂಬೋಣ. ಊರಿನಲ್ಲಿ ಏನು ಹೊಸದಾಗಿ ಬಂದರೂ ಅದು ಅವರಿಗೆ ಬೇಕಿತ್ತು. ಅತ್ಯಂತ ಆಧುನಿಕ ಪೋಷಾಕು ಅವರು ಧರಿಸಬೇಕು. ಆಂಗ್ಲ ನಟರ ತೆರದಲ್ಲಿ ಗಲ್ಲಗಳ ಬದಿಯಲ್ಲಿ "side burns" ಬೆಳಸಿ ಸುತ್ತಾಡುವುದು ಬಹುಶಃ ಆ ಕಾಲದಲ್ಲಿ ಇವರೊಬ್ಬರೇ ಅನ್ನಿಸುತ್ತದೆ;

ಆದರೆ ಇಂಥ ಶೋಕಿ ಮನುಷ್ಯನ ಅಂತರಂಗದಲ್ಲಿ ಮಾತ್ರ ಆಳವಾದ ಪಾರಮಾರ್ಥಿಕ ವಿಚಾರಗಳು ಮನೆ ಮಾಡಿದ್ದುವು ಎಂದರೆ ಎಂಥವರೂ ಆಶ್ಚರ್ಯ ಪಡಬೇಕು. ಯತಿ, ಸನ್ಯಾಸಿ, ಗುರುಗಳ ಪಾದಪಡಿಯಲ್ಲಿ ಕುಳಿತು ಗಂಭೀರದ ಚರ್ಚೆಗಳನ್ನು ನಡೆಸುತ್ತಿದ್ದರು. ಅವರ ಚಿಕ್ಕತಂದೆಯಾದ "ವಿಟ್ಟು ಬಾಪ್ಪಾ" ಸನ್ಯಾಸ ಗ್ರಹಣಮಾಡಿ ಸ್ವಾಮಿರಾಮದಾಸರಾದಾಗ ಅವರನ್ನೂ ಅವರ ಉಪದೇಶವನ್ನೂ ಕುರಿತು ಹಲವು ಲೇಖನಗಳನ್ನು ಬರೆದರು. ಮದ್ರಾಸಿನಲ್ಲಿ ಪ್ರತಿ ಶನಿವಾರ ತಮ್ಮ ಮನೆಗೆ ಟಿ. ಎಮ್. ಪಿ. ಮಹಾದೇವನ್ ಮುಂತಾದ ಪ್ರಖ್ಯಾತ ದಾರ್ಶನಿಕರನ್ನು ಹಾಗೂ ಭಜನೆ ಮಂಡಳಿಗಳನ್ನು ಆಹ್ವಾನಿಸುತ್ತಿದ್ದರು. ಪರಮಾತ್ಮ ಒಬ್ಬನೇ ಎಂದು ನಂಬಿದ ಅವರು ಈ spiritual centre ನಲ್ಲಿ ಹಲವಾರು ದೇವರ ಪಟಗಳನ್ನಿಡದೆ ಗೋಡೆಯ ಮೇಲೆ ಬರಿಯ "ಓಂ" ಬಿಡಿಸಿ ಅದರ ಕೆಳಗೆ ಕಾಲು ದೀಪವನ್ನು ಹಚ್ಚಿ ಇಡುತ್ತಿದ್ದರು. ದೇಹದಿಂದ ಬಿಡುಗಡೆಯಾದ ಆತ್ಮದ ಗತಿಯನ್ನು "ಜೋಳಿ" (ಅಂಗಿ) ಎಂಬ ನಾಟಕದಲ್ಲಿ ಬಣ್ಣಿಸಿದ್ದಾರೆ. ಅದರಲ್ಲಿ ಪಾತ್ರ ವಹಿಸಬೇಕಾದ ನಟ

ಕಾಯಿಲೆ ಬಿದ್ದಾಗ ತಮ್ಮ ಇಳಿವಯಸ್ಸನ್ನೂ ಲೆಕ್ಕಿಸದೆ ಆ ಪಾತ್ರವನ್ನು ತಾವೇ ಅಭಿನಯಿಸಿದರು, ಮದ್ರಾಸಿನಲ್ಲಿ. ಮೀರ್‌ದಾದ್ ಎಂಬ ಪ್ರಾಚೀನ ದಾರ್ಶನಿಕನ ಕುರಿತು Blank Verse ನಲ್ಲಿ ಬರೆದ ಅವರ ಶ್ರೇಷ್ಠಕೃತಿಯೊಂದನ್ನು ಬೊಂಬಾಯಿಯ ಭಾರತೀಯ ವಿದ್ಯಾಭವನದವರು ಪ್ರಕಟಿಸಿದ್ದಾರೆ.

"ಈಗ ಎಲ್ಲರೂ 'Absurd Play' ಬರೀ ತಾರಲ್ಲ, ನಾನೂ ಅಂಥದ್ದು ಒಂದು ಬರದೇಬಿಡ್ತೇನೆ, ನೋಡುವಾ"—ಎಂದು ಇಂಗ್ಲೀಷಿನಲ್ಲಿ ಒಂದು ನಾಟಕ ಬರೆದರು. ತಮ್ಮ ಬಾಲ್ಯದಲ್ಲೇ ಕಳಕೊಂಡ ತಾಯಿ, ತಮ್ಮ ಸಂಗಡ ಕೆಲಸಮಾಡುತ್ತಿದ್ದ ಅಧ್ಯಾಪಕರ ಮನಸ್ಸಿನ ದುಗುಡಗಳು, ಈ ಭೌತಿಕಲೋಕದ ಆಚೆಯ ಯಾವುದೋ ಅಜ್ಞಾತ ಪ್ರಪಂಚ—ಈ ನಾಟಕದ ಮುಖ್ಯವಸ್ತು. ಬರೆದು ಮುಗಿಸಿ "ಯಾರಿಗೂ ಅರ್ಥವಾಗದ ರೀತಿಯಲ್ಲಿ ಬರದರೆ ಮಾತ್ರ ಅದು ನಿಜವಾದ 'Absurd Piay' ಆಗ್ತದೆ. ಆದ್ರೆ ನಾನು ಬರೆದದ್ದು ಎಷ್ಟು ಪ್ರಯತ್ನಿಸಿದರೂ ಅರ್ಥವಾಗ್ತಾ ಇದೆಯಲ್ಲಾ" ಎಂದು ಪೇಚಾಡಿದರು, ರಮಾನಂದರಾಯರು.

ವಿದ್ಯಾರಂಗದಲ್ಲಿ ಅವರು ತಮ್ಮ ಆಯುಷ್ಯದ ಬಹು ಭಾಗವನ್ನು ಸವೆಸಿದರು. ಕೆಲವು ವಿದ್ಯಾರ್ಥಿಗಳಿಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ಸೂಕ್ತ ಸಲಹೆ ಕೊಟ್ಟು ಅವರ ಜೀವನಕ್ಕೆ ಅರ್ಥಗರ್ಭಿತ ತಿರುವು ಕೊಟ್ಟಿದ್ದಾರೆ. ಅಂತಹ ವಿದ್ಯಾರ್ಥಿಗಳು ಇಂದೂ ಅವರನ್ನು ಸ್ಮರಿಸುತ್ತಾರೆ. ಮಂಗಳೂರಿನ ಅಧ್ಯಾಪಕರ ತರಬೇತುಕಾಲೇಜು ಮತ್ತು ಬಳ್ಳಾರಿಯ ವೀರಶೈವ ಕಾಲೇಜುಗಳ ಪ್ರಾಂಶುಪಾಲರಾಗಿ ಎಲ್ಲರ ಮೆಚ್ಚುಗೆಯನ್ನು ಗಳಿಸಿದ್ದರು. ಈಗ ಅಲ್ಲಲ್ಲಿ ತಲೆದೋರಿದ ಶಿಕ್ಷಕವರ್ಗ ಮತ್ತು ಕ್ಷಾತ್ರವರ್ಗದ ನಡುವಣ ಘರ್ಷಣೆ ಅವರು ಅರಿಯದ ಬಾಬತ್ತು. ಪಾಲಘಾಟಿನಲ್ಲಿದ್ದಾಗ ಚೆಟ್ಟೂರರ college composition ಎಂಬ ವ್ಯಾಕರಣ ಪುಸ್ತಕವನ್ನು ತಯಾರಿಸುವುದರಲ್ಲಿ ಇವರದು ಮೇಲುಗೈಯಾಗಿತ್ತು.

ರಾಯರು ಅನೇಕ ಸಮಾರಂಭಗಳಲ್ಲಿ ಭಾಷಣ ಮಾಡಿದ್ದಾರೆ. ಅನೇಕ ಪತ್ರಿಕೆಗಳಿಗೆ ಲೇಖನ ನೀಡಿದ್ದಾರೆ. ಮೈಸೂರು ಸರಕಾರ ತಯಾರಿಸಿದ ವಿಶ್ವಕೋಶಕ್ಕೆ 'ಭಾರತೀಯ ಚಲನಚಿತ್ರದ ಇತಿಹಾಸ' ಕುರಿತು ಬರೆದು ಕೊಟ್ಟಿದ್ದಾರೆ. ಅಲ್ಲದೆ ಕವನ ಕಾದಂಬರಿಗಳಲ್ಲಿ ಅವರಿಗೆ ಆಸಕ್ತಿ ಇದ್ದೇ ಇತ್ತು. ಆದರೆ ನಾಟಕದ ಮಾಧ್ಯಮ ಮಾತ್ರ ಅವರಿಗೆ ಅತ್ಯಂತ ಪ್ರಿಯವಾಗಿತ್ತು. ಅವರು ಬರೆದ, ಪ್ರಕಟಿಸಿದ, ಅಭಿನಯಿಸಿದ, ನಿರ್ದೇಶಿಸಿದ ನಾಟಕಗಳೆಷ್ಟೋ! ಕೊಂಕಣಿ, ಕನ್ನಡ, ಇಂಗ್ಲೀಷು. ಈ ಮೂರು ಭಾಷೆಗಳಲ್ಲೂ ಬರೆಯುತ್ತಿದ್ದರು. ಚೆಕಾಫ್ ಅವರ ನಾಟಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಅವುಗಳಲ್ಲಿ ಪ್ರಕಟವಾಗಿರುವ "ಚೆರ್ರಿ ಹಣ್ಣಿನತೋಟ" ಮುಖ್ಯವಾದದ್ದು.

ಅವರ ಪ್ರಿಯ "ಸುಶಿ"ಯೊಂದಿಗೆ ಜೋಡಿಯಾದ "ಮಂಡೋದರಿ," "ಹೋಂವಾಲು," "ಭಟ್ಕಳ ಅಪ್ಪಯ್ಯ" ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಉನ್ನತ ವಿದ್ಯಾಭ್ಯಾಸ ಪಡೆಯಲಿಲ್ಲವೆಂಬ ಆಕೆಯ ಕೊರತೆಯನ್ನು ನೀಗಿಸಿ ಆಕೆಗೆ ಇಂಗ್ಲೀಷ್ ಸಾಹಿತ್ಯದ ರುಚಿ ಹಿಡಿಸಿ ಆಕೆಯೂ ತನ್ನಸಂಗಡ ದೊಡ್ಡ ಗ್ರಂಥಗಳ ಚಿತ್ರಪಟಗಳ, ನಾಟಕಗಳ, ಕವನಗಳ ರಸಸ್ವಾದನೆ ಮಾಡುವಂತೆ ಕಾರಣರಾದರು. ಆಕೆಯಲ್ಲಿರುವ ಪ್ರತಿಭೆಯನ್ನು ಗುರುತಿಸಿ ಆಕೆ ಶ್ರೇಷ್ಠ ಲೇಖಕಿ, ಅಭಿನೇತ್ರಿ, ಭಾಷಣಕಾರ್ತಿ, ಉಪನ್ಯಾಸಕಿ, ಹಾಡುಗಾರ್ತಿ, ಆಗುವುದಲ್ಲದೆ ಸಮಾಜದಲ್ಲಿ ಒಂದು ಗಣ್ಯವ್ಯಕ್ತಿಯಾಗಿ ಮೆರೆಯುವಂತೆ ಪ್ರೋತ್ಸಾಹಿಸಿ ಕೃತಕೃತ್ಯರಾದರು. ಪ್ರಕೃತಿ-ಪುರುಷರಂತೆ ಒಬ್ಬರಿಗೊಬ್ಬರು ಪೂರಕರಾದ ಆದರ್ಶದಂಪತಿಗಳಿವರು. ಬಾಳುವೆಯ ಸಾಧಾರಣ ಸರಹದ್ದನ್ನು ದಾಟಿ ನಾಟಕ, ನೃತ್ಯಗಳ ಚಟ ಹಿಡಿದ ಇವರನ್ನು ಸಹಜವಾಗಿ ಹಣದ ಅಡಚಣೆಗಳು ಪೀಡಿಸುತ್ತಲೇ ಇದ್ದವು.

'ಆರ್ಥಿಕ ಬಿಕ್ಕಟ್ಟು ಒಂದನ್ನು ಬಿಟ್ಟರೆ ನಮ್ಮ ಸಂಸಾರ ಹಾಲು ಜೇನಿನಂತಿತ್ತು" 'ಎಂದು ಅವರೊಮ್ಮೆ ನನ್ನ ಹತ್ತಿರ ಅಂದಿದ್ದರು.

ಹೆಂಡತಿಯನ್ನು ಮೇಲಕ್ಕೆ ತಂದಂತೆ ತಮ್ಮ ಮಕ್ಕಳಲ್ಲಿ ಹುದುಗಿರುವ ಕಲಾಸ್ಫೈಪುಣ್ಯವನ್ನು ಪೋಷಿಸಿದರು. ಐವರು ಮಕ್ಕಳನ್ನೂ ಭೇದಾಭೇದವಿಲ್ಲದೆ. ಗದರಿಸದೆ, ಶಿಕ್ಷಿಸದೆ, ಬುದ್ಧಿ ಹೇಳಿ ಬೆಳೆಸಿದ ವಾತ್ಸಲ್ಯ ಮೂರ್ತಿಯವರು.

ಕಾಲಕ್ಕೆ ತಕ್ಕಂತೆ ತಮ್ಮ ವಿಚಾರಧಾರೆಯನ್ನು ಅಳವಡಿಸಿಕೊಂಡು ಶಾಂತಚಿತ್ತರಾಗಿರುವುದು ಮುದಕರಿಗೆ ಸುಲಭವಾಗಿ ಬರುವ ಗುಣವಲ್ಲ. ಅದು ಸ್ವಪ್ರಯತ್ನದಿಂದ ತರಿಸಿಕೊಳ್ಳುವಂಥಾದ್ದು. ಎಂಭತ್ತು ದಾಟಿದ ವಯಸ್ಕರಲ್ಲಿ ಕಾಣಬಹುದಾದ ಕಿರಿಕಿರಿ ಸ್ವಭಾವ ಅವರಿಗಿರಲಿಲ್ಲ. ತಿಂಡಿ ತೀರ್ಥದ ಬಗ್ಗೆಯೂ ಅವರದೇನೂ ಕರಕರೆ ಇರಲಿಲ್ಲ. ದೇಹಾಲಸ್ಯವಿರಲಿಲ್ಲ. ತಮ್ಮ ಸ್ವಂತ ಉಪಯೋಗದ ವಸ್ತುಗಳನ್ನು ವಸ್ತ್ರಗಳನ್ನು ಇಡುವುದರಲ್ಲಿ ಒಪ್ಪಓರಣವಿತ್ತು. ಪುಣ್ಯವಶಾತ್ ಅವರ ಮೆದುಳು ಸಚೇತನವಾಗಿದ್ದು ಅದಕ್ಕೆ ಅರಳು ಮರಳು ಕವಿದಿರಲಿಲ್ಲ. ಬಹುಶಃ ಸದಾ ಬಿಡಿಸುತ್ತಿದ್ದ Cross Word ಒಗಟುಗಳು ಅವರ ಮಸ್ತಿಷ್ಕವನ್ನು ಚುರುಕಾಗಿ ಇಟ್ಟಿರಬಹುದು, ಇಲ್ಲದಿದ್ದರೆ ಎಷ್ಟೋ ದಶಕಗಳ ಹಿಂದೆ ಬರೆದು ಮುಗಿಸಿದ. "ಹುಚ್ಚು ಬೆಳದಿಂಗಳಿನ ಹೂಬಾಣಗಳು" ಇನ್ನೂಮುಂದುವರಿಯಬೇಕೆಂದು ಯಾರೋ ಕೇಳಿಕೊಂಡಾಗ ಅದೇ ಶೈಲಿಯಲ್ಲಿ "ಹರಿಕಮತನ ಹಿಂದಿ" ಬರೆದು ಕೊಡಲು ಸಾಧ್ಯವಾಗುತ್ತಿತ್ತೆ ? ಕಾಳಿದಾಸ ಬಿಟ್ಟಕಡೆಯಿಂದ ಕಥಾಸೂತ್ರವನ್ನು ಎತ್ತಿಕೊಂಡು, ರಾಣಿವಾಸದ ಪರ ಈರ್ಷೆಯ ರಾಜನೈತಿಕ ಕುತಂತ್ರಗಳ ಹೊಲಸು ವಾತಾವರಣದ ಮಧ್ಯೆ ತಪೋವನದ

ಸ್ವಚ್ಛ ಪರಿಸರದಲ್ಲಿ ಬೆಳೆದ ಮುಗ್ಧೆ ಶಕುಂತಲೆ ಏನೆಲ್ಲಾ ಅನುಭವಿಸುತ್ತಿರಬಹುದು ಎಂದು ಅವಳ ಮಾನಸಿಕ ತುಮುಲವನ್ನು ಊಹಿಸಿ "Return of Shakunthala" ಬರೆದಾಗ ರಮಾನಂದರಾಯರಿಗೆ ಪ್ರಾಯ ಎಪ್ಪತ್ತೈದಕ್ಕಿಂತ ಹೆಚ್ಚಾಗಿತ್ತು.

ಪರಿಚಿತರನ್ನು ಕಂಡೊಡನೆ ದೊಡ್ಡದಾಗಿ "ಹಲ್ಲೋ....ಲ್ಲೋ....ಲೊ....ಲೊ....ಲೊ" ಕರೆಯುತ್ತ, ಕೈಕುಲುಕುತ್ತ ನಿಲ್ಲುತ್ತಿದ್ದ ಆ ಮಂದಸ್ಮಿತ ಮೂರ್ತಿಯನ್ನು ಯಾರೂ ಮರೆಯಲಾರರು. ಕಿರಿಯರ ನಡುವೆ ಕಿರಿಯರಾಗಿ ವ್ಯವಹರಿಸುವ ಅವರ ಹೃದಯಕ್ಕೆ ಎಂದೂ ಮುಪ್ಪೇ ಬಂದಿರಲಿಲ್ಲ. ಬಾಳಸಂಗಾತಿಯನ್ನು ಅಗಲಿ, ಪ್ರೀತಿಯ ಪುತ್ರಿಯನ್ನು ಕಳಕೊಂಡ ದುಃಖದ ಕಹಿಗುಟುಕುಗಳನ್ನು ಹೇಗೆ ಅವರು ನುಂಗಿಕೊಂಡಿದ್ದರೋ! ಗೆಳೆಯರೊಬ್ಬರು "ಓಹೋ? ಪರಮಾನಂದ? ಪರಮಾನಂದ!" ಎಂದು ತಮಾಷೆ ಮಾಡುತ್ತಿದ್ದರಂತೆ. ಹೆಸರಿಗೆ ತಕ್ಕಂತೆ ಅವರ ಬಳಿ ಪರಮಾನಂದವನ್ನೇ ಪಡೆಯ ಬಹುದಾಗಿತ್ತು. ಆದುದರಿಂದಲೇ ಸ್ನೇಹಿತರ ಬಳಗ ಬೆಳೆಯುತ್ತ ಹೋಯ್ತು. ಹೆಸರಾಂತ ಸಾಹಿತಿಗಳು, ಕಲಾವಿದರು ಇವರ ಆತ್ಮೀಯರಾಗಿ ಇವರ ಪರಿವಾರದ ಅಂಗಗಳಾದರು. "ತಾಯಿದ್ರೆ ತವರ್‍ಹೆಚ್ಚು ತಂದಿದ್ರೆ ಬಳಗ್ಹೆಚ್ಚು" ಎಂಬ ಜಾನಪದ ನುಡಿಯನ್ನು ನಿಜವಾಗಿಸಿದವರು ಇವರು.

ಹೆತ್ತವರು ಮರಣಾನಂತರ ತಮ್ಮ ಸಂತತಿಗೆ ಆಸ್ತಿ ಭೂಮಿ, ಧನ-ದೌಲತ್ತು ಇತ್ಯಾದಿ ಬಿಟ್ಟು ಹೋಗುತ್ತಾರೆ. ಅವುಗಳನ್ನು ಪಡೆಯುವುದಕ್ಕೆ ಆ ಮಕ್ಕಳು ತಮ್ಮ ತಮ್ಮಲ್ಲಿ ಹೊಡೆದಾಡಿಕೊಳ್ಳುತ್ತಾರೆ. ಆದರೆ ರಮಾನಂದರಾಯರು ಮಕ್ಕಳಿಗೋಸ್ಕರ ಬಿಟ್ಟುಹೋದ ಸಂಪತ್ತು ಅನುಭವಿಸಿದಷ್ಟೂ ಹೆಚ್ಚುವಂಥಾದ್ದು ಮಾತ್ರ!

ಪ್ರಥಮ ಜಾಗತಿಕ ಯುದ್ಧವನ್ನು ಕುರಿತು ಬರೆದ ಪ್ರಖ್ಯಾತ ಇಂಗ್ಲೀಷ್ ಕಾದಂಬರಿಯನ್ನು ಈ ತನಕ ಕನ್ನಡಕ್ಕೆ ಯಾರೂ ತರಲಿಲ್ಲವೆಂದು ರಮಾನಂದರಾಯರೇ ಆ ಕೆಲಸಕ್ಕಿಳಿದರು. ಇದು ತನ್ನ "ಹಂಸ ಗೀತೆ" ಎಂದು ಆಗಲೇ ಹೇಳಿಯೂ ಆಗಿತ್ತು. ಬೆಂಗಳೂರಿನ ಬಾಪ್ಕೋ ಪ್ರಕಾಶನ ಹೊರತಂದ ಅವರ ಈ ಅಂತಿಮ ಕೃತಿಯ ಹೆಸರು "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ."

1983, ಫೆಬ್ರವರಿ 13ನೇ ಪ್ರಾತಃಕಾಲ ಅವರನ್ನು ಅಪ್ಪಿದ ಮರಣದ ರೀತಿಯೂ ಶಾಂತ. ಅದರ ಪರಿಣಾಮವಾಗಿ ಅವರ ಪ್ರಾಣಶಕ್ತಿ, ಅವರ ಚೈತನ್ಯ, ಉತ್ಸಾಹ, ಗೆಲುವು, ಜೀವನಜ್ಯೋತಿ, ಅವರ ಬಹುರಂಗೀ ವ್ಯಕ್ತಿತ್ವ ಎಲ್ಲವೂ, ಎಲ್ಲವೂ ಶಾಂತ.

ಕೃಪೆ : ಮಲ್ಲಿಗೆ

ಪ. ರಮಾನಂದರಾಯರು ನನಗೆ ಬರೆದ ಕೊನೆಯ ಪತ್ರ

ಚಡಗ

ಶ್ರೀ ಸೂರ್ಯನಾರಾಯಣ ಚಡಗ ಇವರಿಗೆ ಸಪ್ರೇಮ ವಂದನೆಗಳು

ನನ್ನ ಮೊಮ್ಮಗ ಜಯದೇವ ಮೊನ್ನೆ ನನಗೆ ಒಂದು ಪತ್ರವನ್ನು ಬರೆದಿದ್ದಾನೆ. ಅದರಲ್ಲಿ ನೀವು ಅವನನ್ನು ಸಂಧಿಸಿ, ನಾನು ನಿಮಗೆ ಬರೆದ 3-4 ಪತ್ರಗಳು ಇಂಗ್ಲಿಷಿನಲ್ಲಿ ಬರೆದುದ್ದರಿಂದ ನಿಮಗೆ ಅರ್ಥವಾಗಲಿಲ್ಲವೆಂದು ನೀವು ಅವನಿಗೆ ತಿಳಿಸಿದ್ದೀರೆಂದೂ ಬರೆದಿದ್ದಾನೆ. ಇದನ್ನು ಕೇಳಿ ನನಗೆ ತುಂಬಾ ಬೇಸರವಾಯಿತು. ಕಳೆದ 75 ವರ್ಷಗಳಿಂದಲೂ ನಾನು ಕಾಗದ ಪತ್ರಗಳನ್ನು ಬರೆಯುವುದು ಇಂಗ್ಲಿಷಿನಲ್ಲೇ ಆಗಿದೆ. ಕನ್ನಡದಲ್ಲಿ ಪತ್ರ ಬರೆಯುವ ಅಭ್ಯಾಸ ನನಗೆ ಅಷ್ಟು ಇಲ್ಲ. ಬರೆಯುವುದಕ್ಕೂ ಕಷ್ಟವಾಗುತ್ತದೆ. ಉಪಾಯವಿಲ್ಲದಿದ್ದಾಗ ಮಾತ್ರ ನಾನು ಕನ್ನಡದಲ್ಲಿ ಪತ್ರ ಬರೆಯುತ್ತೇನೆ. [ಪ. ರಮಾನಂದರಾಯರು ಕನ್ನಡದಲ್ಲಿ ಪತ್ರ ಬರೆಯುವುದು ನನಗೆ ಪ್ರಿಯವಾದದ್ದು..ಕಾರಣ ಅವರ ಕನ್ನಡ ಅಕ್ಷರ ಸುಂದರ ಮತ್ತು ಸ್ಪಷ್ಟ.]

ಅದು ಹೇಗೂ ಇರಲಿ, ನಾನು ನಿಮಗೆ ಈಚೆಗೆ ಬರೆದ ಪತ್ರದ ಸಾರಾಂಶವಿಷ್ಟೇ— ಮೊಟ್ಟಮೊದಲು ನಿಮ್ಮ ಆರೋಗ್ಯ ಈಗ ಹೇಗಿದೆ ಎಂದು ಕೇಳಿದೆ. ಅದೀಗ ಬಹಳ ಮಟ್ಟಿಗೆ ಸುಧಾರಿಸಿದೆಯೆಂದು ತಿಳಿಯುತ್ತೇನೆ. ಬಾಪ್ಕೋದವರು ಪ್ರಕಾಶಿಸಿದ ನನ್ನ ಪುಸ್ತಕದಲ್ಲಿ 1,500 ಕ್ಕಿಂತಲೂ ಹೆಚ್ಚಾಗಿ 1,600ಕ್ಕೆ ಹತ್ತಿರ ಬರುವಷ್ಟು ಮುದ್ರಣ ದೋಷಗಳು ನನ್ನ ಮಾನಸಿಕ ಶಾಂತಿಯನ್ನು ಬಹುಮಟ್ಟಿಗೆ ಕೆಡಿಸಿವೆ. ಅದೇಕೆ ಹೀಗೆ ಆಯಿತೆಂದು ಆಶ್ಚರ್ಯ, ದುಃಖಪಡುತ್ತಾ ಇದ್ದೇನೆ. ಎಂ. ಸಿ. ಬಿ ಪ್ರೆಸ್ಸಿನವರ ಬೇಕೆಂತಲೇ ಹೀಗೆ ಮಾಡಿರಬಹುದೆ? ಎಂಬ ಸಂಶಯವೂ ಬಲವಾಗುತ್ತ ಬರುತ್ತದೆ. ಅಚ್ಚಾದ ಪುಸ್ತಕವನ್ನು ಇತರರಿಗೆ ತೋರಿಸಲಿಕ್ಕೂ ನಾಚಿಕೆಪಡುತ್ತೇನೆ.

ಆದರೂ ಶ್ರೀ ಕಮಲೇಶರು ಹೇಳಿದಂತೆ ಬಾಪ್ಕೋ ಪರವಾಗಿ ಎಲ್ಲವನ್ನೂ ಮಾಡಿದ್ದೇನೆ. ಅವರ ಕೇಳಿಕೆಯಂತೆ ಪುಸ್ತಕವನ್ನು ಪಠ್ಯಪುಸ್ತಕವಾಗುವಂತೆ ಮಾಡಬೇಕೆಂದು ನಮ್ಮ ನಾಲ್ಕು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನದ ಮುಖ್ಯಸ್ಥರಿಗೆಲ್ಲ ಬರೆದಿದ್ದೇನೆ. ಅವರಿಗೆ ಹಾಗೆ ಬರೆಯುವಾಗ ಪುಸ್ತಕದಲ್ಲಿ ಈಗ ಹೇರಳ ಮುದ್ರಣ ದೋಷಗಳಿದ್ದರೂ ಒಂದು ವೇಳೆ ಅದು ಪಠ್ಯಪುಸ್ತಕವಾಗುವುದಿದ್ದರೆ ಅದರಲ್ಲಿ ಯಾವ ಮುದ್ರಣ

ದೋಷವೂ ಇಲ್ಲದಂತೆ ಪುಸ್ತಕದ ಇನ್ನೊಂದಾವೃತ್ತಿಯನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪ್ರಕಾಶಕರು ಕೈಕೊಳ್ಳುವರೆಂದು ಭರವಸೆ ಕೊಟ್ಟಿದ್ದೇನೆ. ಪಠ್ಯಪುಸ್ತಕಗಳನ್ನು ನಿಶ್ಚೈಸಿಸುವ ಸವಿತಿ ಬರುವ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಸೇರಲಿಕ್ಕಿದೆ. ಆಗ ಈ ವಿಷಯವನ್ನು ಸಹಾನುಭೂತಿಯಿಂದ ವಿಚಾರಿಸುತ್ತೇವೆಯೆಂದು ಮೂರು ವಿಶ್ವವಿದ್ಯಾಲಯಗಳಿಂದಲೂ ಆಶಾದಾಯಕ ಪತ್ರಗಳು ಬಂದಿವೆ. ಈ ಪತ್ರಗಳ ನಕಲನ್ನು ಅವು ಬಂದ ಹಾಗೆ ಕಮಲೇಶರಿಗೆ ಕಳುಹಿಸಿದ್ದೇನೆ. ಪುಸ್ತಕದ ಪುನರಾವೃತ್ತಿ ಇವರು ಪಠ್ಯಪುಸ್ತಕ ಮಾಡಿದರೇನೇ ಸಾಧ್ಯ ಎಂದು ಅವರು ನನಗೆ ತಿಳಿಸಿದ್ದಾರೆ. ಒಂದು ವೇಳೆ ಹಾಗೆ ಆಗದಿದ್ದರೆ ದೇವರೇಗತಿ ನನಗೆ !

ಆ ಮಹಾಶಯರಿಗಲ್ಲದೆ, ಕ. ಸಾ. ಪರಿಷತ್ತಿನ ಅಧ್ಯಕ್ಷರಾಗಿ ಪುನಃ ಚುನಾಯಿತರಾದ ಡಾ॥. ಹಂಪ ನಾಗರಾಜಯ್ಯನವರಿಗೂ ಬರೆದಿದ್ದೆ. ಅವರೂ ಪುಸ್ತಕ ಪಠ್ಯ ಪುಸ್ತಕವಾಗುವಂತೆ ತಾನೂ ತನ್ನಿಂದಾಗುವಷ್ಟು ಪ್ರಯತ್ನಮಾಡುತ್ತೇನೆಂದು ಆಶ್ವಾಸನೆ ನೀಡಿದ್ದಾರೆ. ಇದನ್ನೂ ಕಮಲೇಶರಿಗೆ ತಿಳಿಸಿದ್ದೇನೆ. ಇದಲ್ಲದೆ, ಅವರ ಕೋರಿಕೆಯಂತೆ ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಪುಸ್ತಕ ಭಂಡಾರದ ಪ್ರಮುಖ ಅಧಿಕಾರಿಗೂ ಪುಸ್ತಕದ 300 ಪ್ರತಿಗಳ ಮಾರಾಟವಾಗುವಂತೆ ಸಹಕರಿಸಲು ಬರೆದಿದ್ದೇನೆ. ಇದೂ ಕಮಲೇಶರಿಗೆ ಗೊತ್ತಿದೆ.

ಅವರ ಕೋರಿಕೆಯಂತೆ ನಾನು ಇಷ್ಟೆಲ್ಲ ಮಾಡಿದರೂ, ಮಾಡಿದುದನ್ನೆಲ್ಲ ಅವರಿಗೆ ತಿಳಿಸಿದರೂ, ಅವರಿಂದ ಪ್ರತಿಕ್ರಿಯೆಯಾಗಿ ಈ ತನಕ ಒಂದು ಪತ್ರವಾದರೂ ಬಂದಿಲ್ಲ!

ಈ ಸಂದರ್ಭದಲ್ಲಿ ನಾನಿದನ್ನು ನಿಮಗೆ ತಿಳಿಸಲೇಬೇಕು-ನಮ್ಮೊಳಗೆ ಈ ತನಕ ಯಾವ ತರದ ಕರಾರೂ ಆಗಲಿಲ್ಲ. ಬಾಪ್ಕೋರವರಿಂದ ಯಾವ ಹಣವೂ ನನ್ನ ಕೈಸೇರಿಲ್ಲ. ಪುಣ್ಯವಶಾತ್ ನನ್ನ ಪುಸ್ತಕದ ಹಸ್ತಪ್ರತಿಯ ಮೂಲಪ್ರತಿಗೂ ಈಗ ಅವರಿಗೆ ಅಚ್ಚಿಗೆ ಕೊಟ್ಟ ಹಸ್ತಪ್ರತಿಗೂ ವಿಶೇಷ ಭೇದವೇನೂ ಇಲ್ಲ. ಮೂಲ ಪ್ರತಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿ ಬಂದುದರಿಂದ ಅದರ ಶುದ್ಧ ಪ್ರತಿಯನ್ನು ಮಾಡಿ ಅಚ್ಚಿಗೆ ಕೊಟ್ಟದ್ದಾಗಿದೆ, ಅಷ್ಟೇ. ನನ್ನ ಮಗಳು ಚಂದಮ್ಮನ ಮನೆಯಲ್ಲಿತ್ತು. ಅದನ್ನು ತರಿಸಿ, ಅದರೊಡನೆ ಅಚ್ಚಾದ ಪುಸ್ತಕದಲ್ಲಿದ್ದುದನ್ನು-ನನಗೆ ಸಂಶಯವಿದ್ದಲ್ಲಿ-ಹೋಲಿಸಿ ನೋಡಿದಾಗ, ಅಚ್ಚಿನಲ್ಲಿ ಅನೇಕ ಪ್ಯಾರಾಗ್ರಾಫುಗಳು ಕಾಣೆಯಾಗಿದ್ದುದನ್ನು ಕಂಡೆ! ಇದಲ್ಲದೆ ಅನೇಕ ಪ್ಯಾರಾಗ್ರಾಫುಗಳಲ್ಲಿ ಅಲ್ಲಲ್ಲಿ ಕೆಲವು ವಾಕ್ಯಗಳೂ, ಮುಖ್ಯವಾದ ಅನೇಕ ವಾಕ್ಯಗಳಲ್ಲಿ ಕೆಲವು ಶಬ್ದಗಳೂ ಅಚ್ಚಾಗದೆ ಇರುವುದನ್ನೂ

ಕಂಡೆ! ಇದು ಕತ್ತರಿ ಪ್ರಯೋಗವಲ್ಲ—ಬಂದು ಭಾಷಾಂತರದಲ್ಲಿ ಯಾವ ಕತ್ತರಿ ಪ್ರಯೋಗಕ್ಕೂ ಆಸ್ಪದವಿಲ್ಲ! ಹೀಗೆ ಆಗಿರುವುದಕ್ಕೆ ಆ ಮುದ್ರಣಕಾರರ ಶುದ್ಧ ಆಲಸಿಕೆ, ಅಸಡ್ಡೆ. ಅಸಮರ್ಥತೆ ಮತ್ತು ಅಲಕ್ಷ್ಯ, ಇವೇ ಕಾರಣವಲ್ಲದೆ ಮತ್ತೇನಲ್ಲ. ಈಗ ಅಚ್ಚಾದ ಪುಸ್ತಕದ ಮತ್ತೊಂದು ಪ್ರತಿಯಲ್ಲಿ ನಾನೀಗ ಗೊತ್ತು ಹಚ್ಚಿದ ಮುದ್ರಣದ ಎಲ್ಲ ದೋಷಗಳನ್ನು-ನನ್ನ ಗ್ರಹಿಕೆಗೆ ಬಂದವುಗಳನ್ನು-ತಿದ್ದಿದ್ದೇನೆ ನಾನು ಮೇಲೆ ಹೇಳಿದಂತೆ ಇವು 1,500 ಕ್ಕೂ ಮಿಕ್ಕಿ, 1,600 ಕ್ಕೆ ಹತ್ತಿರ ಬಂದಿವೆ! ಬಿಟ್ಟು ಬಿಟ್ಟ ಪ್ಯಾರಾಗ್ರಾಫುಗಳನ್ನೂ, ವಾಕ್ಯಗಳನ್ನೂ, ಒಂದಕ್ಕೂ ಹೆಚ್ಚಾಗಿರುವ ಶಬ್ದಗಳನ್ನೂ ಪುಸ್ತಕದಲ್ಲೇ ಬರೆಯಲು ಸಾಕಷ್ಟು ಜಾಗಯಿಲ್ಲದಿದ್ದುದ ರಿಂದ ಅವನ್ನೆಲ್ಲ ಬೇರೆಯಾಗಿಯೇ ಬರೆದಿಟ್ಟಿದ್ದೇನೆ. ಪುಸ್ತಕದ ಇನ್ನೊಂದಾವೃತ್ತಿ ಯನ್ನು ಕೈಕೊಳ್ಳುವಾಗ ಇವೆರಡನ್ನೂ ಖಂಡಿತವಾಗಿಯೂ ಉಪಯೋಗಿಸಬೇಕಾಗಿದೆ. ಇವನ್ನು ನನ್ನ ಮಗಳು ಚಂದಮ್ಮನೊಂದಿಗೆ ಡಿಸೆಂಬರ ಮೊದಲನೆಯ ವಾರದಲ್ಲಿ ಬೆಂಗಳೂರಿಗೆ ಕಳುಹಿಸುತ್ತೇನೆ.

ಮಾತ್ರವಲ್ಲ, ಪುಸ್ತಕದ ದ್ವಿತೀಯ ಮುದ್ರಣದಲ್ಲಿ-ಅದು ಸಾಧ್ಯವಾದಾಗ-ನೀವೇ ಅದರ ಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಅದನ್ನು ಪೂರ್ತಿಗೊಳಿಸಬೇಕೆಂದು ನನ್ನ ಹಿರಿಯಾಸೆಯಿದೆ ಆ ಸಂದರ್ಭ ಬಂದಾಗ ನಾನು ಬಾಪ್ಪೋರವರಿಗೆ ಹಾಗೆಯೇ ಬರೆಯುತ್ತೇನೆ. ಅವರಿಗೇ ಮುದ್ರಣವನ್ನು ಪುನಃ ಬಿಟ್ಟರೆ ಕೆಲಸವು ಮೊದಲಿನಂತೆಯೇ ಕೆಟ್ಟುಹೋಗಬಹುದೆಂದು ಭಯವಿದೆ. ಈ ವಿಷಯದಲ್ಲಿ ನಿಮ್ಮ ಮೇಲೆಯೇ ನನ್ನ ಸಂಪೂರ್ಣ ವಿಶ್ವಾಸವಿದೆ. ಬೇರೇನು ಹೇಳಲಿ? ಯಾವುದಕ್ಕೂ ಮೊದಲು ನಿಮ್ಮ ಆರೋಗ್ಯ ಈಗ ಹೇಗಿದೆ ಎಂದು ತಿಳಿಸಿರಿ. ಅದೀಗ ತುಂಬಾ ಸುಧಾರಿಸಿದೆ ಎಂದು ನಂಬುತ್ತೇನೆ.

ವಿ. ಸೂ :...ಈ ಪತ್ರವನ್ನು ದಯವಿಟ್ಟು ಕೊಂಚ ಸಮಯ ಇಟ್ಟುಕೊಳ್ಳಿ.

೨೦-೯-೮೨

ನಿಮ್ಮವ,

ಪ. ರಮಾನಂದ

ಮುತ್ತೈದೆಗೆ ಓಲೆ ಭಾಗ್ಯ ಇದ್ದಂತೆ ಗ್ರಂಥಗಳಿಗೆ ತಪ್ಪೋಲೆ ಭಾಗ್ಯ. ಓಲೆ ಇಲ್ಲದ ಮುತ್ತೈದೆ ಇಲ್ಲ. ತಪ್ಪೋಲೆ ಇಲ್ಲದ ಗ್ರಂಥವಿಲ್ಲ. ಆದರೆ ಕನ್ನಡಿಗರು ಕುರಿತೋದ ದೆಯೂ ಕಾವ್ಯ ಪ್ರಯೋಗ ಪರಿಣತಮತಿಗಳಾದ್ದರಿಂದ ಏನೇ ತಪ್ಪಿರಲಿ-ತಿದ್ದಿ ಕೊಂಡೇ ಓದುತ್ತಾರೆ.—ಚಡಗ

ಶಾಲಿನಿ ಉದ್ಯಾವರ, ಮುಂಬಯಿ

ಶ್ರೀ. ತಂದೆಯವರು ಎಲ್ಲರ ಹತ್ತಿರವೂ ಸೈ ಸೈ ಎನ್ನಿಸಿಕೊಂಡು ಎಲ್ಲರಿಗೂ ಉಪಕಾರ ಮಾಡಿದ್ದಕ್ಕೆ ಅವರಿಗೆ ಒಳ್ಳೆಯ ಮರಣವೇ ಬಂತು. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ.

ಜೀವನದ ಸಿಹಿ ಕಹಿಗಳನ್ನುಂಡ, ಉಂಡು ತೀರ ಹಣ್ಣಾದ ಜೀವ. ಹಾಸಿಗೆ ಹಿಡಿಯದೆ ನರಳದೆ ಮುನ್ನಾದಿನದವರೆಗೆ ತನ್ನ ಕೆಲಸ ತಾನು ಮಾಡಿಕೊಂಡು ರಾತ್ರಿ ಮಲಗಿದವರು ಬೆಳಿಗ್ಗೆ ಏಳಲೇ ಇಲ್ಲ. ಅಲ್ಲಿಂದಲ್ಲೆ "ರಾಮರಾಮಾ" ಎನ್ನುತ್ತಿದ್ದಂತೆ ಪ್ರಾಣೋತ್ಕ್ರಮಣವಾಗಬೇಕಾದ್ರೆ ಎಷ್ಟು ಪುಣ್ಯಮಾಡಿರಬೇಕು ? ಅದನ್ನು ಯೋಚಿಸಿದ್ರೆ, ಅವರಿಗಾಗಿ ದುಃಖಿಸಬಾರದು ಆತ್ಮೀಯತೆಯಿಂದ ಅಲ್ಲಿ ಹೋದಾಗಲೆಲ್ಲಾ ಬಂದೀಯಮ್ಮಾ, ಬಾ, ಹೇಗಿದ್ದಿ ? "ಎಂದು ಕೇಳುವ ಜೀವ ಕಣ್ಮರೆಯಾಯ್ತು. ನರಳದೆ ಮಲಗಿದ್ದಲ್ಲೇ ತಾನು ಸಾಯಬೇಕು, ಅದೃಷ್ಟ ಹೇಗಿದೆಯೋ" ಎಂದು ಯಾವಾಗಲೂ ಅನ್ನುತ್ತಿದ್ದರು, ಇಚ್ಛಿಸಿದ ಮರಣ ಬಂತವರಿಗೆ. ಪುಣ್ಯಜೀವಿ. He is a great man. ಅದಕ್ಕೇ ಅಂಥ ಮರಣ ಬಂತು. ಆತ್ಮಕ್ಕೆ ಶಾಂತಿ ಸಿಗಲೆಂದು ಕೂಡಾ ಕೋರಬೇಕೆಂದಿಲ್ಲ. ಖಂಡಿತ ಸಿಕ್ಕಿದೆ. "ಮರಣಕಾಲಕ್ಕೆ ನಿನ್ನ ಸ್ಮರಣೆ ಒದಗುವಂತೆ" ಎಂದು ಪುರಂದರ ದಾಸರ ಹಾಡಿನಲ್ಲಿದೆ. ಆ ಸ್ಮರಣೆ ಬಂತು. ಮಾತ್ರವಲ್ಲ ಉಚ್ಛರಿಸಲಾಯ್ತು. ಇನ್ನೇನಾಗಬೇಕು? Envible death, ನಿಜವಾಗಿ. ಎಲ್ಲರೂ ಬರಲು ಅನುಕೂಲವಾಗುವಂತೆ ಭಾನುವಾರ ಬೇರೆ ಸಾಧಿಸಿದ್ರು.

D. G. Ubhayakar Bombay

The Times of India, Obituary Column, today, brings us the news of the demise of your beloved dad, dear Shri Ramanand Rao, on the 13th instant.

Dear Ramanondrao espoused many a good cause in his long purposefully useful examplary life. With his very sincere, delightfully soft well chosen words and kind loving manners, he rendered yeomen service with great humility which outshined his briliance. The stamp of his untiring efforts covered every aspect of life, Educational, Spirtual, Social and Cultural-Fine Arts, Music, Sport etc., making himsalf dear and easy of access to young and old alike. It would be an indequate tribute to him to say that he was an enlightened scholarly saint. His demise has created a

vacuam and void in Society, Community, & especially amongst Padukonekars, & allied families and everyone who knew him and came into contact with him, will reverentially cherish memories of his kindly nature.

Afte· two mild heart attacks I hab since December 1978. my ¡suburban visits have been very infrequent. With every hope that I may be able to keep up my promise, I shall try to cal. on you some time. In the meanwhile, may I assure you that I fully share your sorrow as good as a family member and with full confidence that he has merged into the Divine Self-not to come back as the "CLOAK" anytime hereafter.

With heartfelt condolences & loving pranams to you all

ಒಂದು ದೇಶ ಎಂತಹ ಮನುಷ್ಯರನ್ನು ನಿರ್ಮಿಸಿದೆ ಎನ್ನುವುದೇ ನಾಗರಿಕತೆಯ ಹೊರತು–ಆ ದೇಶದ ಜನಸಂಖ್ಯೆಯಲ್ಲ, ವಿಸ್ತಾರಲ್ಲ, ಯೋಜನೆ ಸಾಧನೆಗಳ ಪಟ್ಟಿಯೂ ಅಲ್ಲ.

Neena Padukone New York

We were realy shocked to hear that Ajja passed away We are thankful that it was a peaceful end. Maitreya especially was and is very pained. He keeps remembering all tho wonderful times he and Ajja had throughout hi childhood. Both Seemed to have held a special place for each other. I know, before I had met Maitreya, Ajja was stayihg at Yashodharakka's place and he would talk very fondly of Maitrery. And Maitreya had spent some time with them at Bangalore. when he was a child special memories of this time.

But thing are inevitable. I'm sure maltreya would have liked to be there with Ajja-at the end. But he will always have wonderfal memories of him.

Since we didn t' see him towards the end, we din't realise hat is health was faling. Although V pachi did hint to

that effect in her last letter, it is terribly sad. when someone who has been so healthy and active loses his health. All the time we have seen him, he has bee insuch good health especially since it was a sharp contrast to most people orhis age, So it was very unexpected for us, But he seems as if he had been prepared and Very calm about the end. I think nature makes us that way-prepares, us for almot every stage of our lives,

I am sure he is at peace, He had such a full and productive life- right up to the very end, How many people at his age will be so actively writing thinking creatively ?I wish Pia had been able to spend some time with him, She would have enjoed that a great deal, And he would too, But she will always have the memorries from photographs. It is a wonderful feeling to know that someone knew you and loved you. And I hope she keeps up his prophecy that she will become great. That was a special blessing from him to her,

---

Shankru's reply to a letter from Prabhakar a Mudur, Bmobay He was very closely associated with Konkani drama and as you have rightly said intimately connected with your activities. Till his health permitted he was attending performances of plays especially Konkani plays. It may be of interest to you, in case you do not know already, that so far as South Kanara was concerned he was a pioneer in introducing social themes for Konkani plays As long back as 1959 the famaous Kannada play-write T.P. Kailam's farce 'Home rule, was translated by my mother (late Smt. Sita Devi) into Konkani. It was staged on the Ganapathi High school stage with my mother acting as the shrewish wife 'Venkamma' and Father as the hapless Nammannu'. As you know it required quite some daring for respectable ladies to don make up and appear on stage but due to my father's stead fast encouragement our mother did appear on the stage,

though a section of our community was quite shocked at this. The first day's performance was held in the presence of reverved His Holiness Shrimat Anandashram Swamiji who enjoyed the situations in the play where the poor lawyer is caught between a shrewish wife and an equally strong willed mother. Later the play must have been repeated atleast 20 or 30 times and staged in Bombay also, I remebered all this as I sat to reply you and since you are also one of the active devotees of the Konkani stage which you are serving in various capacities, I thought I might relate this incident which may or may not be known to you. Pardon if I have been too wordy!

On behalf of all of us who are proud to have been dear father's close relations, I thank you and the Konkani Sahitya Samiti for the condolence letter and the recogirition of Father's interest in the Samiti's activities

---

ನಾನು ಸಾಧಾರಣವಾಗಿ ಏಕೆ ದೇವಸ್ಥಾನಗಳಿಗೆ ಹೋಗುವುದಿಲ್ಲವೆಂದು ನೀವು ಗ್ರಹಿಸಿಕೊಳ್ಳಬಹುದು. ಇದರಿಂದಲೇ ನೀವು ನಾನೊಬ್ಬ ನಾಸ್ತಿಕನೆಂದು ತೀದುಕೊಂಡಿದ್ದೀರಿ ನಾನು ನಾಸ್ತಿಕನಲ್ಲ. ಆದರೆ ನಿಮ್ಮ ದೇವರಿಗೂ ನನ್ನ ದೇವರಿಗೂ ಅಪರಿಮಿತವಾದ ವ್ಯತ್ಯಾಸವುಂಟು. ನನ್ನ ದೇವರಿಗೆ ನಿತ್ಯಸ್ತೋತ್ರವೂ, ಆರಾಧನೆಯೂ ಅವಶ್ಯವಿಲ್ಲ. ನನ್ನ ದೇವರನ್ನು ಹುಡುಕುವ ಅವಶ್ಯಕತೆಯೂ ನನಗಿಲ್ಲ. ತಾಯಿ ಹತ್ತಿರವೇ ಇರುವಾಗ್ಗೆ ಯಾವ ಮಗು ಅವಳನ್ನು ಹುಡುಕುವುದರಲ್ಲಿ ಉದ್ಯುಕ್ತವಾಗುತ್ತದೆ? ಯಾವ ತಾಯಿ ತನ್ನ ಮುದ್ದು ಮಗುವಿನಿಂದ ಹೊಗಳಿಸಿಕೊಳ್ಳುವುದಕ್ಕೆ ಇಷ್ಟ, ಪಡುತ್ತಾಳೆ? "ಅಮ್ಮಾ, ನೀನು ಎಂತಹ ಚಲುವೆ! ಎಂತಹ ಕರುಣಾಸಾಗರಳು! ನಿನಗೆ ಸಮಾನರಾದವರು ಈ ಲೋಕದಲ್ಲಿ ಯಾರು ಇಲ್ಲ. ನಿನ್ನ ಮುಖಕಮಲ ನಿರಂತರವೂ ನನ್ನ ಹೃದಯದಲ್ಲಿ ಶೋಭಿಸಲಿ! ನಿನ್ನ ಅಡಿದಾವರೆಗಳ ಮೇಲೆ ನಿರಂತರವೂ ಶಿರಸ್ಸನಿಡುವ ಹಾಗೆ ಆಗಲಿ! ಎಂದು ಮೊದಲು ಹೇಳಿ, ಮತ್ತೆ ಕೊಂಚ ಸಮಯದ ಮೇಲೆ "ಅಮ್ಮಾ" ನನ್ನ ಇಷ್ಟಾರ್ಥಗಳನ್ನೆಲ್ಲ ನೆರವೇರಿಸು! ನನಗೆ ಮಿಟಾಯಿಯ ಮೇಲೆ ತುಂಬಾ ಪ್ರೀತಿ, ನನ್ನ ಮೇಲೆ ಕರುಣೆಯಿಟ್ಟು ಪ್ರತಿನಿತ್ಯವೂ ನನಗೆ ಒಂದಿಷ್ಟು ಮಿಟಾಯಿಯನ್ನು ಕೊಡು!" ಎಂದು ಒಂದು ಮಗು ತನ್ನ ತಾಯಿಯನ್ನು ಸದಾ ಕಾಲವೂ ಪ್ರಾರ್ಥಿಸುವುದಾದರೆ ಆ ತಾಯಿಯ ಸ್ಥಿತಿ ನಿಜವಾಗಿಯೂ ಕನಿಕರವಾದುದೆಂದು ನಾನು ಬೇರೆ ಹೇಳಬೇಕಾದ್ದಿಲ್ಲ.

ಪ. [illegible]ವಾನಂದ

Uma CNS Rao   Calcutta

........the last time I met him, in '78' he was very sure he would not live to see the end of the year but God did grant him a few more years of comfortable old age. It was heartening to know he did not suffer long and that he died with all those he loved around him. Such god fortune is not given to all men........

Gita   Bombay

........Ramanand Mam, many a time used to take up my phone when I rang you and he used to talk to me. Recently I did talk to him He was a well-read, well-versed man with a sense of humour-athrough gentlemen....his end must have been very sudden and unexpected but peaceful....earlier, a couple days ago you had told me he is doing well....May his soul rest in peace........

Kamli Padbidri   Bombay

........We were shocked and grieved to hear about Ramanand Bappa's sudden passing away. On mature thinking one should be glad that he was most fortunate to have lived a full life and that the end was so peaceful and painless. Nevertheless, one is saddened that a life marked by unstinted generosity and selflessness, an era of quiet but significant achievements on several cultural fronts, has come to an end. We pray for his Atma and our deep sympathies to all in this hour deep sympathies to all in this hour of bereavement........

Shantha Molahalli

....it is of profound sorrow to know from your p. c. that dear Ramanand Bhayya passed away on 13thinst. By God's grace it was a peaceful end though he suffered for quite sometime after an attack of Herpes. May his soul rest in peace....

Pratibha Jayadev Bangalore

The loss of dear Ajja is felt deeply by one and all of us and more so by you all, his children. He lived a noble and fulfilled life, always kind, gentle and extremely understanding. I shall miss him very badly when I visit 'Bait-ul-Amin' in the near future-after all he was The person who brought me into the family.

Prema Nadkarny Kotah

........he lived a full life and saw his children contribute so much ty Konkani Society aa artists........you will all feel his absence very much....It only reminds us that we are also growing old and should take inspiration from such old people who made full use of this life in creative activity........

R. S. Naimpally, Bombay

........the house will look blank without the Colofsus, the towering height of solid knowledge and a man entirely dedicated to education, drama and literature....kindly soul....never forgotten....Ther, in the heavens, he will be looked after by your mother and Shanti........

Manohar V. Basrur New Delhi

Dear Ramanand Bappa lived a full life and we can picture now he and dear Sushilpachi re-united in an atmosphere far more congenial than we are in to day....May their souls enjoy the paace, so richly deserved.

Thammayya

I had a special respect and love for him which I will always cherish all my life. He was not only a guide, philosopher and friend but an example to emulate a man of so diverse talents, interests and accomplishmeants.

Trikannad Mukund

This was in early 20's. it was only when he came to mangalore as our Chemistry Lecture that I became more famiiiar with him. Though as a student I was a great disappointment to him, it was during this period that he gave me a lot of encouragement to my cartooning. Since then, we had met off and on over the years. How I used to look forward to and enjoy such meetings.

N. A. Chandavarkar Calcutta

He was telling that he has lived long, enjoyed a fruitful life and was happy to see a life of fulfilment. He has no further wish to live and God should answer his Prayer.

Srirang Molahally Madras

We were indeed very surprised and sad to hear the sad news. We used to hear of his good health and alert mind all these days....Ramanand Bhayya is a blessed soul and so he was able to know his end approaching at the time of leaving this mortalremains. You are also blessed as to be able to be near him during his eternal journey.

Guruji Mulky Bangalore

To me he was much more than a relative and teacher. I shall always remember the interest he took in me and the way he treated me as his son.

Shanti Chandavarkar Culcutta

He was a great soul....he joined his heavenly abode. His loss is irreparable....May his soul resr in peace.

Mundkur Shrikar

He lived his full span, tending the spirit of art, literature and drama till the last and the end I was told was painless and sudden. The gap in your respective families cannot be filled for which I offer all my sympathy and sad sentiments.

Shivadas Mudbidri Bangalore

It is with a heavy heart that we got the shocking news of dear Bhayya's passing away on the 13th inst....for me personally, apart Bhayya being a cousin, he had been my friend, philosopher and guide....During my student days in Govt. College Mangalore.

Umanath

I knew your father since the teens of this centuary (not intimately) and have admired much his literary output both in English and Kannada. He had a lovely style in both the languages.

ಶಾರದಾ ಪಚ್ಚಿ

ಸುದ್ದಿ ಮೊನ್ನೆ ಕೃಷ್ಣ ಫೋನ್ ಮಾಡಿ ತಿಳಿಸಿದಾಗ ಆ ದಿನವಿಡೀ ಏನೂ ತೋಚುತ್ತಿರಲಿಲ್ಲ. ನನಗೆ ತೀರ್ಥರೂಪರವರ ಸ್ಥಾನದಲ್ಲಿ ಇದ್ದರವರು. ಮತ್ತೊಮ್ಮೆ ತೀರ್ಥರೂಪರವರನ್ನು ಕಳಕೊಂಡ ವ್ಯಥೆಯಾಯ್ತು ಮನಸ್ಸಿಗೆ.

ಸೂರ್ಯನಿಗೆ ಬಹಳ ಚಿಂತೆಯಾಯಿತು–ತಾನು ಹೋದರೆ ಜಗತ್ತು ಕತ್ತಲೆಯಾಗುತ್ತದಲ್ಲ ಎಂದು. ಆಗ ಚಿಕ್ಕ ಹಣತೆ ಹೇಳಿತು "ಏನೂ ಯೋಚಿಸಬೇಡ. ನಾನಿದ್ದೇನೆ-ನೀ ಬರುವ ತನಕ ನನ್ನ ಬೆಳಕಿನಿಂದ ಈ ಜಗತ್ತನ್ನು ಬೆಳಗಿಸುತ್ತೇನೆ". ಎಂದು.

ಪಡುಕೋಣೆ ಪರಿವಾರದವರ ಹಾಸ್ಯ ಪ್ರವೃತ್ತಿ

ಸಂಗ್ರಹ : ಚಂದ್ರಭಾಗಾದೇವಿ, ಪ್ರಭಾಶಂಕರ, ಯಶೋಧರಾ

ಪ. ನರಸಿಂಗರಾಯರ ಹಾಸ್ಯ

ಭಗವದ್ಗೀತೆಯ ಒಂದು ಶ್ಲೋಕದಲ್ಲಿ ಬರುವ "ಕಿಂ ಕುರ್ವಂತಿ ಸಂಜಯ" ಎಂಬುದನು ಪ. ನರಸಿಂಗರಾಯರಾಯರು ಕೊಂಕಣಿಗೆ ತರ್ಜುಮೆ ಮಾಡಿದರು. "ಕಸ್ಸಲೆಕ ಕುರ್ವಂತಾ ಸಂಜಯ ?" ಎಂದು. ಕೊಂಕಣಿಯಲ್ಲಿ ಕಸ್ಸಲೆಕ ಎಂದರೆ "ಏಕೆ ?" ಎಂದರ್ಥ. ಕುರ್ವತಾ ಅಂದರೆ ತೂಕಡಿಸುವುದು. "ಏಕೆ ತೂಕಡಿಸುತ್ತಿಯಾ ಸಂಜಯಾ ?" ಎಂದು ನಗಿಸುತ್ತಿದ್ದರು.

1955ನೇ ಇಸವಿ. ಪ. ನರಸಿಂಗರಾಯರಿಗೆ ಆಗ 82 ವಯಸ್ಸು. ಮಂಗಳೂರಿನಿಂದ ಮುಂಬೈಗೆ ಡಕೋಟ ವಿಮಾನದಲ್ಲಿ ಪ್ರಯಾಣ ಮಾಡುವ ಯೋಗ ಬಂತು. ವಿಮಾನ ಹತ್ತಿದರು. ವಿಮಾನದ ಎಂಜಿನ್ನಿನ ಗದ್ದಲ ಕೇಳಿಸದಂತೆ ಮಾಡಲು ಆಗ ಗಗನ ಸಖಿಯರು ಕಿವಿಯೊಳಗೆ ಹತ್ತಿ ತುರುಕಿಸಿಕೊಳ್ಳಲು ಪ್ರಯಾಣಿಕರಿಗೆ ಹತ್ತಿಯನ್ನು ಕೊಡುತ್ತಿದ್ದರು. ಆದರೆ ನರಸಿಂಗರಾಯರಿಗೆ ಅದರ ಅಗತ್ಯವೇ ಇರಲಿಲ್ಲ. ಕಾರಣ ಆಗಲೇ ಅವರಿಗೆ ಕಿವುಡುತನ ಬಂದಿತ್ತು. ಗಗನ ಸುಖಿ ಹತ್ತಿಯೊಂದಿಗೆ ಬಂದು "ಕಿವಿಗೆ ಹತ್ತಿ ಇಟ್ಟುಕೊಳ್ಳಿ" ಎಂದಾಗ ಪ. ನರಸಿಂಗರಾಯರು ಗಟ್ಟಿಯಾಗಿ "ಏನಮ್ಮಾ ನೀ ಹೇಳೋದು....ಏಕೆ ಈ ಹತ್ತಿ" ಎಂದರಂತೆ. ಗಗನ ಸಖಿ ಮತ್ತೆ ಹೇಳಿದಾಗಲೂ "ನೀ ಹೇಳೋದೆ ನನಗೆ ಕೇಳ್ತಾ ಇಲ್ಲ. ಈ ಹತ್ತಿ ಏಕೆ ?" ಎಂದಾಗ ಗಗನ ಸಖಿ ಅಂದ ಕೊಂಡಳು ಈ ತಾತ ಕಿವುಡರಿರಬೇಕು ...ಇವರಿಗೇಕೆ ಹತ್ತಿ ಎಂದು ಹತ್ತಿ ಇರುವ ಟ್ರೇಯನ್ನು ಹಿಡಿದು ಮುಂದೆ ಹೋದಳಂತೆ. ನರಸಿಂಗರಾಯರ ತಮ್ಮ ಕಿವುಡುತನದ ಬಗ್ಗೆ ಸ್ವಾರಸ್ಯವಾಗಿ ಹೇಳಿ ನಗುತ್ತಿದ್ದರು.

ಪ. ನರಸಿಂಗರಾಯರ ತಂದೆಯ ಹೆಸರು ಬಾಲಕೃಷ್ಣ ಎಂದು. ಆ ದಿನಗಳಲ್ಲಿ ಮನೆಯ ಹೆಂಗಸರು ಗಂಡಂದಿರ ಮತ್ತು ಮಾವನ ಹೆಸರನ್ನು ಹೇಳುತ್ತಿರಲಿಲ್ಲ. ಅದು ನಿಶಿದ್ಧ ಎಂಬ ಭಾವನೆಯಿತ್ತು. ತುಂಬಿದ ಮನೆ. ಹಟ್ಟಿ ತುಂಬಾ ದನಕರುಗಳು. ಆ ಹಸುಗಳ "ಬಾಲ" ಎಂದು ಒಬ್ಬರ ಮಾವನ ಹೆಸರಾಗುತ್ತದೆ. "ಸಿಂಗ" ಎಂದು ಕರೆದರೆ ಗಂಡನ ಹೆಸರಾಗುತ್ತದೆ. ಆದರೆ ಸಿಂಗ ಎಂದರೆ ಕೊಂಬು ಎಂದಾಗುತ್ತದೆ.

ಈ ಉಭಯ ಸಂಕಟದಿಂದ ಪಾರಾಗಲು ತನ್ನ ಹೆಂಡತಿ ಹಸುಪಿಸ "ಒಂಭಾಗ" ಮತ್ತು 'ಮೇಲ್ಭಾಗ' ಎಂದೇ ಕರೆಯುತ್ತಿದ್ದರು ಎಂದು ಹೆಂಡತಿಯನ್ನು ಚಡಾಯಿಸು ತ್ತಿದ್ದರು ನರಸಿಂಗರಾಯರು.

ಒಂದು ಆಶ್ರಮ. ಕೆಲವು ಸಾಧಕರು ತಮ್ಮ ತಮ್ಮ ಯೋಗ ಸಾಧನೆಯಿಂದ ತಾವೆಷ್ಟು ಅದರಲ್ಲಿ ಸಿದ್ಧಿ ಪಡೆದಿದ್ದೇವೆ ಎಂದು ತಮ್ಮೊಳಗೆ ಮಾತನಾಡಿಕೊಂಡು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರಂತೆ. ಒಬ್ಬ ಸಾಧಕ, 'ನೋಡಿ ನನಗೆ ಒಮ್ಮೊಮ್ಮೆ ಗಾಳಿಯಲ್ಲಿ ಹಾರಾಡುತ್ತಿರುವಂತಹ ಅನುಭವವಾಗುತ್ತದೆ. ಇದು ಯೋಗದ ಫಲ' ಎಂದು ಕೊಚ್ಚಿಕೊಳ್ಳುತ್ತಿದ್ದಾಗ ಅಕಸ್ಮಾತ್ ಅಲ್ಲಿಗೆ ಬಂದ ನರಸಿಂಗರಾಯರು ಅದನ್ನು ಕೇಳಿ ನಕ್ಕರು. ಅವನ ಬಳಿ ಬಂದು ಮೆಲ್ಲನೆ ಅವನ ಬೆನ್ನು ತಟ್ಟಿ "ನೋಡಪ್ಪ....ಗಾಳಿಯಲ್ಲಿ ಹಾರಾಡುವಂತೆ ಅನುಭವ ಆಗುತ್ತದೆಯೆ? ಹಾಗಿದ್ದರೆ ಹೀಗೆ ಮಾಡು. ದಿನಾ ಬೆಳಗ್ಗೆ ಎದ್ದಕೂಡಲೇ ಬರೀ ಹೊಟ್ಟೆಯಲ್ಲಿ ಒಂದು ಲೋಟ ನಿಂಬೆ ರಸ ಕುಡಿ. ಸ್ವಲ್ಪ ನೀರೂ ಸೇರಿಸು. ಪಿತ್ತ ದೋಷ ಏನೇ ಇದ್ದರೂ ವಾಸಿಯಾಗುತ್ತದೆ. ಆಗ ಈ ಗಾಳಿಯಲ್ಲಿ ಹಾರಾಡುವಂತಹ ಅನುಭವ ಆಗುವುದಿಲ್ಲ" ಎಂದರಂತೆ ಪರಿಹಾಸದಿಂದ.

ಪ ನರಸಿಂಗರಾಯರು ಓದುತ್ತಿದ್ದ ಶಾಲೆ ಮನೆಯಿಂದ ತುಂಬಾ ದೂರದಲ್ಲಿತ್ತು. ಶಾಲೆಯ ಹತ್ತಿರವೇ ಇದ್ದ ಒಬ್ಬಳು ವಿಧವೆಯ ಮನೆಯಲ್ಲಿ ಮಧ್ಯಾಹ್ನದ ಊಟಕ್ಕೆ ಏರ್ಪಾಟು ಮಾಡಿದ್ದರು. ಆ ಮುದುಕಿಯೋ ಶೀರಾ ಜಿಪುಣೆ. ಮಕ್ಕಳಿಗೆ ಹೊಟ್ಟೆ ತುಂಬಾ ಬಡಿಸುತ್ತಲೂ ಇರಲಿಲ್ಲ. ಪದಾರ್ಥಗಳಲ್ಲೂ ರುಚಿ ಇರುತ್ತಿರಲಿಲ್ಲ. ಅಷ್ಟು ಜಿಪುಣತನ. ಮಕ್ಕಳ ಮಾತನ್ನು ಆಕೆ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಹುಡುಗರು ಎಂದ ಮೇಲೆ ಕೇಳಬೇಕೆ? ಏನೇ ಹೇಳಿದರೂ ಆ ಮುದುಕಿ ತನ್ನ ವ್ಯಾಪಾರೀ ಬುದ್ಧಿ ಬಿಡಲೇ ಇಲ್ಲ. ಕೊನೆಗೆ ನರಸಿಂಗರಾಯರು ಆಕೆಗೆ ಸರಿಯಾದ ಪಾಠ ಕಲಿಸಲು ನಿರ್ಧರಿಸಿದರು. ಒಂದು ದಿನ ಅದೂ ಆದಿನ ಅಮಾವಾಸ್ಯೆ. ಊಟದ ಎಲೆಯ ಮುಂದೆ ಕುಳಿತ ನರಸಿಂಗರಾಯರಿಗೆ ನಡುಕ ಆರಂಭವಾಯ್ತು. ನೋಡುತ್ತಿದ್ದಂತೆ ನಡುಕ ಜೋರಾಗಿ ದೆವ್ವದ ಪಾತ್ರಿಯಂತೆ ಮೈಅಲ್ಲಾಡ ತೊಡಗಿ ಕಣ್ಣಿನ ದೃಷ್ಟಿ ಮೇಲಕ್ಕೆ ಹೋಯಿತು. ಕ್ರಮೇಣ "ಹೂಂ.. ಆಂ" ಎಂದು ಆರ್ಭಟ ಆರಂಭವಾಯ್ತು. ಯಾವುದೋ ದೆವ್ವ ಮೈ ಮೇಲೆ ಬಂದಂತೆ ನಟಿಸಿದರು. ಮುದುಕಿಗೆ ಗಾಬರಿ ಯಾಯ್ತು. ನರಸಿಂಗರಾಯರ ಮುಂದೆ ಕುಳಿತು ಎರಡೂ ಕೈ ಜೋಡಿಸಿ "ತಾವು... ತಾವು....ಏಕೆ ಹೀಗೆ?" ಎಂದು ಹೆದರುತ್ತಾ ಕೇಳಿದಳು. "ನನ್ನ ಗುರುತು ಸಿಕ್ಕಲಿಲ್ಲವೆ....ಹೂಂ....ರುಕ್ಕು....ರುಕ್ಕು....ನನ್ನನ್ನು ಮರೆತುಬಿಟ್ಟೆಯಾ?" ಎಂದು ಜೋರಾಗಿ ಕೇಳಿದರು.

ಥರಥರ ನಡುಗಿದಳು ಮುದುಕಿ.

ಇಲ್ಲ....ಯಾರು....ಏಕೆ ಬಂದೆ? ಎಂದು ವಿನಯದಿಂದ ಕೇಳಿದಳು.

ಕಾರಣ ನೀನೇ....ನೀನೇ ರುಕ್ಕು. ನಿನ್ನ ಘಂಟೆಂಗತನ ನೋಡಿ ಬಂದೆ....ಹೂಂ.... ಈ ಪಾಪದ ಮಕ್ಕಳಿಗೆ ಮೋಸ ಮಾಡುತ್ತಿಯಾ? ಅವರೇನು ಪುಕ್ಕಟೆ ಊಟ ಮಾಡುತ್ತಾರೆಯೆ? ಏನು....ಹೇಳು....ದುಡ್ಡು ತೆಗೆದುಕೊಂಡು ಹೀಗೆ....ಮಕ್ಕಳಿಗೆ ಮೋಸ ಮಾಡುತ್ತಿಯಾ?

ಇಲ್ಲ....ಇಲ್ಲ....ಇನ್ನು ಮುಂದೆ ಅನ್ಯಾಯ ಮಾಡುವುದಿಲ್ಲ....ತಾವು....ತಾವು ಯಾರು....?

ಬೇಡ ರುಕ್ಕು ...ಹೇಳಿದರೆ ಈಗಲೇ ಪ್ರಾಣ ಬೀಡುತ್ತಿ. ಬೇಡ, ಈ ಅನ್ಯಾಯ ನೋಡ ಲಾರದೆ ಬಂದೆ....

ಖಂಡಿತಾ ಮುಂದೆ ಅನ್ಯಾಯ ಮಾಡೋದಿಲ್ಲ

ನಂಬಲೆ?

ದೇವರ ಆಣೆ....

ಮತ್ತೆ ಮಾಡಿವರೆ ಇನ್ನೊಂದು ಅಮವಾಸ್ಯೆಗೆ ಬಂದೇ ಬರುತ್ತೇನೆ. ಬಂದಾಗ ನಿನ್ನನ್ನು ನೋಡಿಕೊಳ್ಳುತ್ತೇನೆ....

ಬೇಡ...ಬೇಡ..

ಈಗ ಹೋಗ್ತೇನೆ....ಮಕ್ಕಳಿಗೆ ಒಳ್ಳೆಯ ಊಟ ಹಾಕು. ಸಾರಿಗೆ ಸರಿಯಾಗಿ ಬೇಳೆ ಹಾಕು. ಸಾರಿಗೆ ನೀರು ಹಾಕಿ ಕಲಗಚ್ಚು ಮಾಡಿ ಬಡಿಸಬೇಡ.

ಇಲ್ಲ....

ಮಜ್ಜಿಗೆಗೆ ನೀರು....

ಮುಂದೆ ಗಟ್ಟಿ ಮೊಸರನ್ನೆ ಹಾಕ್ತೇನೆ.

ತುಪ್ಪ....ತುಪ್ಪದ ವಿಚಾರ ಹೇಳು....

ತುಪ್ಪಕ್ಕೆ ಏನನ್ನೂ ಬೆರಸುವುದಿಲ್ಲ....ಕಾಯಿಸಿದ ತುಪ್ಪವನ್ನೇ ಹಾಕುತ್ತೇನೆ....

ನಿಜವಾಗಿಯೂ....

ನನ್ನವರ ಆಣೆ ...

ನನ್ನ ಮೇಲೆ ಆಣೆ ಇಟ್ಟದ್ದಿ....ರುಕ್ಕು ಗೊತ್ತಾಯ್ತೆ ನಾನು ಈಗ ಯಾರು ಎಂದು.... ಎಂದು ನರಸಿಂಗರಾಯರು ಹೇಳಿದವರೆ ನೆಲದ ಮೇಲೆ ಬಿದ್ದು ಸ್ವಲ್ಪ ಹೊತ್ತು ಹೊರಳಾಡಿ ಆವೇಲೆ ಹಾಗೆಯೇ ಮಲಗಿಬಿಟ್ಟರು. ಮುದುಕಿಗೆ ತಿಳಿಯಿತು, ಗಂಡನೇ ದೆವ್ವವಾಗಿ ಬಂದುದು ಎಂದು. ಮುದುಕಿ ನರಸಿಂಗರಾಯರ ಹತ್ತಿರ ಕುಳಿತು ಏನೇನೋ ಹೇಳಿದ ಮೇಲೆ ಅವರು ಕಣ್ಣು ತೆರೆದರು. ಬರೀ ನಾಟಕ. ಏನಾಯು

ನನಗೆ...ಏಕೆ ಪುಲಿಗಿಪ್ಟೀನ್" ಎಂದು ನಟನೆಯ ಪ್ರಹಸನಮಾಡಿದರು. ಆ ಮೇಲೆ ಎಲ್ಲವೂ ಸರಿ ಹೋಯ್ತು. ನರಸಿಂಗರಾಯರ ಬುದ್ಧಿವಂತಿಕೆಗೆ ಇತರ ವಿದ್ಯಾರ್ಥಿಗಳೂ ಬೆನ್ನು ತಟ್ಟಿದರು. ಅಂದಿನಿಂದ ಒಳ್ಳೆಯ ಊಟವೂ ಸಿಕ್ಕುವಂತಾಯ್ತು.

ನರಸಿಂಗರಾಯರು ಮಗ ಪ್ರಭಾಕರನ ಮನೆಯಲ್ಲಿದ್ದಾಗ ನಡೆದ ಘಟನೆ ಇದು. ಮನೆ ತೀರಾ ಸಮುದ್ರದ ಹತ್ತಿರವಿತ್ತು. ಅಲೆಗಳು ಬಂದು ಹಿತ್ತಲ ಗೋಡೆಗೆ ಬಡಿದಾಗ ಕಾರಂಜಿಯಂತೆ ನೀರು ಮೇಲಕ್ಕೆ ಚಿಮ್ಮುತ್ತಿತ್ತು. ನರಸಿಂಗರಾಯರಿಗೆ 85 ವರ್ಷ ಪ್ರಾಯವಾಗಿದ್ದರೂ ಒಳ್ಳೆಯ ಆರೋಗ್ಯ....ಲವಲವಿಕೆ....ಸದಾ ಚಟುವಟಿಕೆ ಯಾರಾದರೂ "ಏನಪ್ಪಾ....ಚೆನ್ನಾಗಿದ್ದೀರಾ?" ಎಂದು ಕೇಳಿದರೆ ಹೀಗೆ ಉತ್ತರ ಹೇಳಿ ಚುಡಾಯಿಸುತ್ತಿದ್ದರು. "ಚೆನ್ನಾಗಿದ್ದೇನೆ. ನಿಮಗಿಂತ ಚೆನ್ನಾಗಿದ್ದೇನೆ. ಏಕೆ ಗೊತ್ತೆ? ಉಪ್ಪಿನಕಾಯಿ ಗೊತ್ತಲ್ಲ. ಮಿಡಿ ಮಾವಿನ ಕಾಯನ್ನು ಉಪ್ಪಿನಲ್ಲಿ ಹಾಕಿಟ್ಟರೆ ಕೆಡುತ್ತದೆಯೆ? ಮಿಡಿ ಸುಕ್ಕು ಬಿದ್ದರೂ ಕೆಡಕುಂಟೆ? ಹಾಗೆಯೇ ನಾನು ಕೂಡಾ. ಮುಂದೆ ಕಾಣುತ್ತದಲ್ಲ ಕಡಲು. ಕಡಲಿನ ನೀರಿನಲ್ಲಿ ಈ ದೇಹ ನೆನೆದು ನೆನೆದೇ ಕೆಡದೆ ಹಾಗೆಯೇ ಇವೆ ಗೊತ್ತಾಯ್ತೆ?" ಎಂದು.

ಪ. ಸೀತಾದೇವಿ ಅವರ ಹಾಸ್ಯ

ಸೀತಾದೇವಿಯ ಮಾತುಕತೆ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ನಾವು ಸಮೀಪಿಸು ವಾಗಲೂ ಹಾಸ್ಯ ಪ್ರವೃತ್ತಿ ಬಿಟ್ಟಿರಲಿಲ್ಲ. ರೋಗಿಗಳಿಂದ ಕಿಕ್ಕಿರಿದ ಸರಕಾರೀ ಆಸ್ಪತ್ರೆ ಯಲ್ಲಿದ್ದರು ಅವರು. ಡಾಕ್ಟರುಗಳಿಗೆ, ನರ್ಸುಗಳಿಗೆ ಯಾವಾಗಲೂ ಮಿತಿ ಮೀರಿದ ಕೆಲಸ. ನರ್ಸಿಗೆ ಥರ್ಮಾಮೀಟರನ್ನು ತಕ್ಕಸ್ಥಳದಲ್ಲಿಟ್ಟು ಜ್ವರ ನೋಡುವ ತಾಳ್ಮೆಯೂ, ಪುರುಸೊತ್ತೂ ಇರುತ್ತಿರಲಿಲ್ಲ. "ಬರ್ತಾಳೆ. ಥರ್ಮಾಮೀಟರನ್ನು ಕುಪ್ಪಸದೊಳಗೆ ಹಾಕಿ ಹೋಗ್ತಾಳೆ. ಅದು ಕಂಕುಳಲ್ಲಿ ಇಡಬೇಕೆಂದೇನಿಲ್ಲ. ಎಲ್ಲೋ ಹೋಗಿ ಬಂದು ಅದನ್ನು ಹುಡುಕಿ ತೆಗೆದು ತನ್ನ ಪುಸ್ತಕದಲ್ಲಿ ಏನೋ ಗೀಚಿ ಹೋಗ್ತಾಳೆ. ಅವಳ ಕರ್ತವ್ಯ ಅನ್ನೋದನ್ನಷ್ಟು ನಿರ್ವಹಿಸ್ತಾಳೆ, ಪಾಪ" ಎಂದು ನಿಧಾನವಾಗಿ ತಲೆ ಆಡಿಸಿದರು.

ಅಗತ್ಯ ಬಿದ್ದಾಗ Call Bell ಒತ್ತಲು ಮಂಚದ ಹತ್ತಿರ ಗುಂಡಿ ಇತ್ತು. ಆದರೆ ಎಷ್ಟೋ ಸಲ ಒತ್ತಿದರೂ ಯಾರೂ ಓಡಿ ಬರುತ್ತಿರಲಿಲ್ಲ. ಗಂಟೆ ಬಾರಿಸಿ ಬಾರಿಸಿ ಬೇಸತ್ತು ಕೊನೆಗೆ ದಾದಿಯನ್ನು ಕರೆಯಲು ಹೋಗಬೇಕಾಗಿತ್ತು. ಅದಕ್ಕೆ ಅವ ರೆಂದರು "ಇದಕ್ಕೆ Call Bellಅನ್ನುವುದಕ್ಕಿಂತ Bell-Call ಅನ್ನುವುದು ಒಳಿತು "ಕರೆ ಗಂಟೆಯಲ್ಲ. ಮೊದಲು ಗಂಟೆ, ಆಮೇಲೆ ಕರೆ."

ಕೆಲವು ಹರಕಲು ಬಟ್ಟೆಯ ಹಸಿವ ಭಿಕ್ಷುಕರು. ಏನು ಕೊಟ್ಟರೂ ಸಂತೋಷದಿಂದ ಹೋಗುವಂಥವರು. ಕೆಲವರು ನೋಡಿದರೆ ಅಷ್ಟು ದರಿದ್ರರಂತೆ ಕಾಣದಿದ್ದರೂ ಮಹಾ ಉಪದ್ರವಿಗಳ. ಅಟ್ಟಿದರೂ ಹೋಗದವರು. ಹೇಳಿದ್ದು ಕೇಳದವರು. ಏನು ಕೊಟ್ಟರೂ ಸಮಾಧಾನವಿಲ್ಲದವರ. ಇವರ ಕಾಟದಿಂದ ಪಾರಾಗುವುದು ದೊಡ್ಡರಗಳೆ ಅಂಥವನು ಒಬ್ಬ ಬಂದಾಗ ಅಮ್ಮ ಆವೇ ತಾನೆ ಸ್ನಾನ ಮಾಡಿ ಕೂದಲೆಲ್ಲಾ ಹರಡಿ. ಕೊಂಡು ಹೊರಗೆ ಬಂದರು. ಗೌರೀ ಹಬ್ಬದ ದಿನವಾದ್ದರಿಂದ ದೊಡ್ಡದಾಗಿ ಅಡ ಕುಂಕುಮ ಇಟ್ಟುಕೊಂಡಿದ್ದರು. ಮಡಿಯಲ್ಲಿ ನೈವೇದ್ಯವಾಗಬೇಕಾದ್ದರಿಂದ ರೇಷ್ಮೆ ಸೀರೆ ಉಟ್ಟಿದ್ದರು. ಇದಕ್ಕೆ ಕಣ್ಣು ಕುಕ್ಕುವ ಸಿಂಧೂರ ಬಣ್ಣ. ಕೆಲಸದ ಗಡಿಬಿಡಿಯಲ್ಲಿ ಹಚ್ಚಿಕೊಂಡಿದ್ದ ಕಾಡಿಗೆ ಗಲ್ಲಗಳ ಮೇಲೆ ಸಿಕ್ಕಾಪಟ್ಟೆ ಇಳಿದು ಹೋಗಿತ್ತು. ಈ ಕಾರಣವಾಗಿ ಕಣ್ಣುಗಳಿಗೆ ಒಂದು ವಿಚಿತ್ರವಾದ ವಿಶಾಲತೆ ಬಂದಿತ್ತು. ಇಂಥ ವೇಷ ದಲ್ಲಿ ಅಮ್ಮನನ್ನು ಕಂಡ ತಕ್ಷಣ ಆಗಂತುಕ ಅಲ್ಲಿಂದ ಪಲಾಯನವಾದ. "ನಾನೊಂದು ಭದ್ರಕಾಳಿಯಂತೆ ಕಂಡಿರಬೇಕು. ಅಥವಾ ಮೈಮೇಲೆ ದೆವ್ವ ಬಂದವಳೆಂದು ಭಾವಿ ಸಿದನೋ.-ಅಂತೂ ಚೆನ್ನಾಗಿ ಹೆದರಿಬಿಟ್ಟ ಪ್ರಾಣಿ, ಇನ್ನು ಈ ಕಡೆ ಹಾಯೋದಿಲ್ಲ ಖಂಡಿತ," ಅಮ್ಮ ತಮಾಷೆಯಿಂದ ಹೇಳಿದರು.

ರಮಾನಂದರಾಯರ ಹಾಸ್ಯ

ಕಿರಿ ಕಿರಿ ಸ್ವಭಾವದ ಒಬ್ಬಳಿಗೆ ಕಣ್ಣಿನ ಕ್ಯಾಟರ್‍ಯಾಕ್ಟ್ ಆಪರೇಶನ್ ಆಯ್ತು ಉಳಿದವರೆಲ್ಲರೂ ಬಂದರೂ ಸಂಬಂಧಿಕರ ಪೈಕಿ ಯಾರೋ ಒಬ್ಬಾಕೆ ತನ್ನನ್ನು ಆಸ್ಪತ್ರೆ ಯಲ್ಲಿ ನೋಡಲು ಬರಲಿಲ್ಲ ಎಂದು ಕಂಡ ಕಂಡವರ ಹತ್ತಿರ ದೂರು ಕೊಟ್ಟಳು. ಈ ಮಾತು ರಮಾನಂದರಾಯರ ಕಿವಿಗೆ ಬಿದ್ದಾಗ ಅವರ ಜವಾಬು ಹೀಗಿತ್ತು :

"ಛೆ, ಎಲ್ಲಂತು! ಅವಳನ್ನು ಇತರರು ನೋಡುವುದಲ್ಲ. ಈಗ ನೋಡುವ ಸರದಿ ಅವಳದ್ದೇ ಆಗಿದೆ. ಕಣ್ಣಿನ ಪರೆ ತೆಗೆದಿದ್ದಾರೆ. ಚೆನ್ನಾಗಿ ಕಾಣ್ತಾ ಇದೆ. ದೃಷ್ಟಿ ವಾಪಾಸು ಬಂದ ಸಂತೋಷದಲ್ಲಿ ಅವಳು ಅಲ್ಲವೇ ಎಲ್ಲರನ್ನು ನೋಡಬೇಕಾದದ್ದು ?"

ರಮಾನಂದರಾಯರ ಸೊಸೆ ಅಮೇರಿಕೆಗೆ ಹೋಗಿದ್ದಳು. ಊಟ ತಯಾರಿಸುವ ಹೊಣೆ ಮಗನ ಮೇಲೆ ಬಿತ್ತು. ಇವನ ಪಾಕಶಾಸ್ತ್ರದ ಜ್ಞಾನ ಅಷ್ಟಕ್ಕಷ್ಟೆ. ಹೇಗೋ ಒಂದು ಸಾರು ಅನ್ನ ಬೇಯಿಸಿಹಾಕುತ್ತಿದ್ದ. ಅವನೇನು ಮಾಡಿದರೂ ಸುಧಾರಿಸಿ ಕೊಂಡು ಹೋಗಿ ಕೆಲವೊಮ್ಮೆ ಮೆಚ್ಚುಗೆಯನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು ತಂದೆ ಯವರು. ಹತ್ತಿರದ ಬಳಗದವರು ಬಂದಾಗ ಮಾತ್ರ ಅವರ ಹತ್ತಿರ ನಿಜಸ್ಥಿತಿಯ ಕುರಿತು ಹೇಳುತ್ತಿದ್ದರು.

"ತೊಸ್ತೆ ಒಂದೊಂದು ದಿವಸ ಒಂದೊಂದು ನಮೂನೆ. ಒಮ್ಮೊಮ್ಮೆ ಬೇಳೆ ಕಡಿಮೆಯಾಗಿ ಸಾರು 'ಚೆಳ್ ಚುಳೀ' (ನೀರಿನಂತೆ) ಆಗುತ್ತದೆ. ಹಾಗೆಂದು ಅಧಿಕ ಬೇಳೆ ಹಾಕಿಬಿಟ್ಟರೆ ನಾಲ್ಕುದಿವಸದ ತನಕ ಅದನ್ನೇ ತಿನ್ನಬೇಕು. ಪ್ರಮಾಣದ ಲೆಕ್ಕ ತಪ್ಪುತ್ತದೆ. ಆದರೂ, ಪಾಪ, ಎದೆ ಗುಂದದೆ ಪ್ರಯೋಗ ನಡಿಸ್ತಾ ಇದಾನೆ"

ರಮಾನಂದರಾಯರ ಸೊಸೆ ಅಮೇರಿಕೆಗೆ ಮಗನ ಮನೆಗೆ ಹೋದಾಗ ಬೊಂಬಾಯಿಯ ಮನೆಯಲ್ಲಿ ಮಗ-ಮೊಮ್ಮಗ ಇಬ್ಬರೇ ಅವರ ಜೊತೆಗಿದ್ದರು. "Father–son and Holy Ghost" ಎಂಬಂತೆ! ಎಂದು ಮನೆಗೆ ಬಂದವರನ್ನು ನಗಿಸುತ್ತಿದ್ದರು.

During P.R'S last hospitalisation in January 1981. As part of Investigation the hospital doctor treating him had Anu's brain scan picture taken. Nothing abnormal was found. Bus Anu keeping the brain scan photo with him all the time used to show it to one and all who visited him with a remark ,No one can accuse me of being a brainless man-here's proof ,that I do possess a brain !"

Once for a general check-up P.R. was kept in the hospital for a few days and kept under observation. All tests were done He was hale and hearty. He would quip saying "They did all tests except Gynaecology!"

K. Gurudutt and his wife Smt. Rathna Bai celebrated their Golden Wedding Anniversary in February 1966 in Bangalore. P.R. attended the happy function with a present in his hand, While felicitating K. Gurudutt, P,R. presented a heavy, very large packet saying, 'You can never guess what this packet is !.... While many interesting presents like silver bell. lamps etc; were given by his relatives, friends and well-wishers Gurudutt opened the packet P.R. gave to find many reams of blank white paper beautifully packed!........a unique present indeed! When Gurudutt asked "What can I do with this? P.R. replied, "Write! Write." K Gurudutt did use those papers to write many of his articles later on....

P.R once told us, in a serious contemplation, regarding the human span of life:- After 60 years of longevity, every year is a grace period.... after 70, every month, after 80, every day.... after 90, every hour after 100, every minute is God's Grace time given........

P.R. cracked a joke at one of his first speeches in Bellary after he became the Principal of Veerasnaiva College........ refering to Malaria and Beechi, the Humourist-as the two afflictions of Bellary....he said "While the former has a cure the latter hasn't One........

In a cocktail Party if he was offered 'Rum', he would say beamingly :-
"Rum will only make me 'RUM-ANANDA'!!

P.R. was always unhappy that Karnataka is neglected as regards Broad Guage Railway line to Bombay from Bangalore and also as regards Radio Broadcasts in Short-wave length- thus depriving Kannadigas comfort and pleasure. 'Kannadigas never complain and suffer meekly' he said....

The 'TIME' Magazine of the year 1966 printed a special article on "Is God Dead? " In response to that article, P.R. wrote a letter to the Editor of 'Time' magazine which was edited and printed in the issue dated 23rd April 1966 as follows :- "It is a pity TIME has considered the views of only those who speak of God-not those who have experienced GOD"....

ಬೂಟ್ಸ್ ತೆಗೆದುಕೊಳ್ಳುವ ಬುದ್ಧಿ ಜೀವಿಗಳು ಬುಕ್ ತೆಗೆದುಕೊಳ್ಳುವುದಿಲ್ಲ. ಸೆಂಟಿನ ವಾಸನೆಗೆ ಮಾರು ಹೋಗುವವರು ಕನ್ನಡದ ಒಳ್ಳೆಯ ಸಾಹಿತ್ಯಕ್ಕೆ ಏಕೆ ಬೆಲೆ ಕೊಡುವುದಿಲ್ಲ. ಬದುಕುವುದಕ್ಕೆ ಆಹಾರ ಬೇಕು. ಬುದ್ಧಿ ಬೆಳೆಯುವುದಕ್ಕೆ ಸಾಹಿತ್ಯ ಬೇಡವೆ ?

ಸಾರಸ್ವತ ಜನಾಂಗದ ರಾಷ್ಟ್ರೀಯ-ಅಂತರರಾಷ್ಟ್ರೀಯ ಗಣ್ಯರು

ಚಂದಮ್ಮ

ಪ್ರಸ್ತಾವನೆ

ಚಿತ್ರಾಪುರ ಸಾರಸ್ವತ ಜನಾಂಗದವರು ಸಂಖ್ಯೆಯ ದೃಷ್ಟಿಯಲ್ಲಿ ತೀರಾ ಕಡಿಮೆ. ಆದರೆ ವಿಶಿಷ್ಟವಾದ-ತಮ್ಮದೇ ಆದ ವೈವಿಧ್ಯಮಯ ಕ್ಷೇತ್ರದಲ್ಲಿ ಉನ್ನತ ಸ್ಥಾನಪಡೆದು ಹಲವು ರಂಗಗಳಲ್ಲಿ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಖ್ಯಾತಿಗಳಿಸಿರುವುದನ್ನು ತಮ್ಮ ಅವಗಾಹನೆಗೆ ತರಲು ಸಂತೋಷಪಡಿಸುತ್ತದೆ. ನಮ್ಮ ಗಮನಕ್ಕೆ ಬಂದ ಅನೇಕರ ಹೆಸರನ್ನು ಇಲ್ಲಿ ಸೂಚಿಸಲಾಗಿದೆ. ಇಷ್ಟಲ್ಲದೆ ಇನ್ನೂ ಹಲವರು ಖ್ಯಾತ ನಾಮರಿರಬಹುದು. ಅಂತಹ ವ್ಯಕ್ತಿಗಳ ಹೆಸರು ಬಿಟ್ಟಿದ್ದರೆ ಕ್ಷಮಿಸಬೇಕಾಗಿ ಪ್ರಾರ್ಥನೆ. ಬೇರೆ ಬೇರೆ ಕಡೆ ಉದ್ಯೋಗದಲ್ಲಿರುವವರು ಯಾವ ಯಾವ ಕ್ಷೇತ್ರದಲ್ಲಿ ಪರಿಣತರಾಗಿ ಖ್ಯಾತರಾಗಿದ್ದಾರೆ ಎಂಬುದನ್ನು ವಿವರವಾಗಿ ತಿಳಿಯುವುದು ಕಷ್ಟದ ಕೆಲಸವೇ. ನಮ್ಮ ಇತಿಮಿತಿಗೆ ಒಳಪಟ್ಟಿದೆ ಈ ವಿಭಾಗದ ಹೆಸರು. ಆದರೆ ಅತ್ಯಂತ ಖ್ಯಾತರ ಸಾಧ್ಯವಾದಷ್ಟು ಹೆಸರನ್ನು ಸಂಗ್ರಹಿಸಿದ್ದೇವೆ. ನಮ್ಮ ಜನಾಂಗದವರು ಕೆಲವು ವಿಶಿಷ್ಟ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಉದಾಹರಣೆಗಾಗಿ Air India Maharaja ಅಲಾಂಛನವನ್ನು Tata Air Linesನವರಿಗೆ ರಚಿಸಿಕೊಟ್ಟವರು ಮುರ್ಡೇಶ್ವರ ಉಮೇಶರಾವ್. ಮುರ್ಡೇಶ್ವರ ಉಮೇಶರಾವ್ ಮೂಲತಃ ಪಡುಕೋಣೆ ಕುಟುಂಬದವರು. ಅವರನ್ನು ಮುರ್ಡೇಶ್ವರ ಕುಟುಂಬದವರು ದತ್ತು ತೆಗೆದುಕೊಂಡಿದ್ದರು. ಪ್ರಪಂಚದ ಎಲ್ಲರನ್ನು ಆಕರ್ಷಿಸಿದ ಈ ಮಹಾರಾಜನ ಬಗ್ಗೆ Time ಪತ್ರಿಕೆಯಲ್ಲೂ ಬಂದಿತ್ತು: "So this world-wide lovable personage Maharajah is a "padukone-kar !" ಎಂದು ಹೇಳಬಹುದಲ್ಲವೆ? ಇದು ಹೆಮ್ಮೆಯ ವಿಚಾರ. ಆಕಾಶವಾಣಿಯ (All India Radio) ಆರಂಭದ ಕರೆ ಧ್ವನಿ ಅಥವಾ ಪ್ರಾರಂಭದ ಸಂಕೇತವಾದ ಸ್ವರ (Air Call) ವನ್ನು ಸಂಯೋಜಿಸಿದವರು ಪಿಟೀಲು ವಿದ್ವಾನ್ ಗಜಾನನ ಕಾರ್ನಾಡ್ ಅವರು. ಎರಡು ದಶಕಗಳ ಹಿಂದೆ ಬೆನ್‌ಗಲ್ ರಾಮರಾವ್ ಭಾರತದ ರಿಸರ್ವ್ ಬ್ಯಾಂಕ್ ಗವರ್ನರ್‌ರಾಗಿದ್ದರು. ಹೀಗೆ ಖ್ಯಾತರಾದ ಸಾರಸ್ವತ ಜನಾಂಗದವರಲ್ಲಿ ಬಹುಮುಖ ಪ್ರತಿಭೆಯಿಂದ ವಿವಿಧ ಕ್ಷೇತ್ರದಲ್ಲಿ ಹೆಸರಾದವರನ್ನು ಇಲ್ಲಿ ಕೊಡಲಾಗಿದೆ.

ಸಂಗೀತ : ಹಾಡುಗಾರಿಕೆ ಮತ್ತು ವಾದ್ಯ

ಚಿದಾನಂದ ನಗರ್‌ಕರ್,-ದಿನಕರ ಕ್ಯಾಕಿಣಿ. ಶಶಿಕಲಾ ಕ್ಯಾಕಿಣಿ, ಅದಿತಿ, ಲಲಿತ ಜೆ. ರಾವ್, ಲಲಿತಾ ಶಿವರಾಂ ಉಭಯಕರ್, ಸುಶೀಲಾ ಮೆಹತಾ, ಸೀತಾ ಕಾಗಲ್, ಸೀತಾ ಹಿರೇಬೆಟ್, ಕೃಷ್ಣಾ ಉದ್ಯಾವರ್, ಸೀತಾ ಮುೂಲ್ಕಿ, ನಾಗರತ್ನ ಆತ್ಮಾರಾಂ' ಸುಮನ್ ಕಲ್ಯಾಣಪುರ್, ಎಸ್. ಸಿ. ಆರ್. ಭಟ್, ಸುಗುಣಾ ಕಲ್ಯಾಣಪುರ್ ಶಶಿಕಲಾ ಸಂಶಿ, ಕೌಶಲ್ಯ ಮಂಜೇಶ್ವರ, ಲಲಿತಾ ಕಲಂಬಿ ಸುಶೀಲಾ ರಾಣೆ, ಸಪೂರ ಮೀರಾ, ಉದ್ಯಾವರ ಮೀರ, ಸುಮನ್ ನಾಗರಕಟ್ಟೆ, ಲೀಲಾಬಾಯಿ ಮುುಂಡ್ಕೂರ್ (ಸಾರಂಗಿ) ದೇವೇಂದ್ರಮುರ್ಡೇಶ್ವರ್ (ಕೊಳಲು,) ಪಿ.ಜಿ ಕಾರ್ನಾಡ್ ಟಿ. ಆಮೆಲ್ ಅಮ್ಮೆಂಬಳ (ವಾದ್ಯವೃಂದ) ಓಂಕಾರ ಗುಲ್ವಾಡಿ ನಯಂಪಳ್ಳಿ ಸದಾನಂದ, ಗುರುನಂದನ್ ಕಲ್ಯಾಣಪುರ್, ಗೌರಂಗ್ ಕೋಡಿಕಲ್ ಹಟ್ಟಂಗಡಿ ತಾರಾನಾಥ್ (ತಬಲ ವಾದಕರು) ವಿಷ್ಣುದಾಸ್ ಶಿರಾಲಿ (ವಾದ್ಯವೃಂದ) ಲಕ್ಷ್ಮೀ ನಯಂಪಳ್ಳಿ, (ವಾದ್ಯವೃಂದ) ಬಿ. ಎಸ್. ರಾವ್ (ಸುಗಮ ಸಂಗೀತ) ಜಯವಂತಿ ಹಿರೇಬೆಟ್, ಕೃಷ್ಣಾ ಕಲ್ಲೆ, ಸುಮನ್ ಕಲ್ಯಾಣಪುರ್ (ಹಿನ್ನೆಲೆ ಗಾಯನ) ಜೋಕಾಡಿ ವಸಂತ ಕುಮಾರ್ (ಸಿತಾರ್) ಗಜಾನನ ಕಾರ್ನಾಡ್ (ಪಿಟೀಲು ಆಕಾಶವಾಣಿಯ ಆರಂಭದ ಕರೆಧ್ವನಿಯನ್ನು ಸಂಯೋಜಿಸಿದವರು) ಆಶಾಪುತ್ಲಿ (Pop Music) ರಾಜೀವ್ ತಾರಾನಾಥ (ಸರೋಡ್ ವಿದ್ವಾನ್ ಮತ್ತು ಸಂಗೀತ ನಿರ್ದೇಶಕರು) ಭಾಸ್ಕರ ಚಂದಾವರ್ (ಚಲನ ಚಿತ್ರ ಸಂಗೀತ ನಿರ್ದೇಶಕರು, ದುರ್ಗೇಶ್ ಚಂದಾವರ್ ವೃಂದಾ ಮುುಂಡ್ಕೂರ್ ಅಲ್ಲದೆ ಆಕಾಶವಾಣಿಯಲ್ಲಿ....ವಾದ್ಯಗೋಷ್ಠಿಗಳಲ್ಲಿ ಹಾಡುವ ಅನೇಕ ಕಲಾವಿದರು.

ಸಾಹಿತ್ಯ

ಪಂಜೆ ಮಂಗೇಶರಾವ್-ಉಗ್ರಾಣ ಮಂಗೇಶರಾವ್-ಮಣೇಲ್ ಸುಬ್ಬರಾವ್ (ಕೊಗ್ಗ ಮಾಸ್ತರು ಎಂದ. ಪ್ರಸಿದ್ಧರಾಗಿರುವ ಇವರು ಮುದ್ದಣ ಕವಿಯ ಗುರುಗಳು) ಬೆನಗಲ್ ರಾಮರಾವ್-ವಸಂತಿದೇವಿ ಪಡುಕೋಣೆ, ಸುರಕುಂದ ಅಣ್ಣಾಜಿ-ಸುಂದರ ನಾಡಕರ್ಣಿ-ರಮಾಬಾಯಿ ಚಂದ್ರಶೇಖರ್-ತ್ರಿಕನ್ನಾಡ್-ಗೌರೀಶ ಕ್ಯಾಕಿಣಿ-ಜಯಂತ ಕ್ಯಾಕಿಣಿ-ಸತೀಶ ಕಾರ್ನಾಡ್-ಕತ್ರೆ ಸುಮಿತ್ರ-ಚಂದ್ರಭಾಗಾದೇವಿ-ಯಶೋಧರಾ ಭಟ್-ಹೀರಾ ಕಾರ್ನಾಡ್-ಸಾಲೆತ್ತೂರ್-ಪಡುಕೋಣೆ ರಮಾನಂದರಾವ್-ಪ್ರಭಾಶಂಕರ-ಅರವಿಂದ ನಾಡಕರ್ಣಿ-ಶಾಂತಾರಾಂರಾವ್ -ಮಾಯಾ ಬಲ್ಸೆ-ಶಾಂತಾ ರಾಮೇಶ್ವರ ರಾವ್-ಸಾಧನಾ ಕಾಮತ್-ಸುಬ್ರಾವ್ ಗೋಪಾಳ ಉಭಯಕರ್-ಚೈತನ್ಯ ಕಲ್‌ಬಾಗ್

ಕ್ರಿಡಾ ರಂಗ

ಅರವಿಂದ ಸವೂರ್ (ಸ್ನೂಕರ್)-ಪ್ರಕಾಶ್ ಪಡುಕೋಣೆ (ಬ್ಯಾಡ್ ಮಿಂಟನ್) ಲೀಲಾ ರಾವ್-ವೈ: ಆರ್. ರಾವ್ (ಟೆನ್ನಿಸ್) ಕಬಾಡ ಜಯಂತ್-ಸಾಯಿಕುಮಾರ್ (ಟೆನ್ನಿಸ್) ಶೋಭಾ ಪಂಡಿತ್ (ಕ್ರಿಕೆಟ್) ಬಡಾಕೆರೆ ಭಾಸ್ಕರರಾವ್-ನಾಡಕರ್ಣಿ ಸಂಜೀವರಾವ್-ಜಯಂತ ಕಲ್ಯಾಣಪುರ-ಹೆಮ್ಮಾಡಿ-ಹೊಸಂಗಡಿ ಪದ್ಮನಾಭರಾವ್. (ಕ್ರೀಡಾಪಟುಗಳು.) ವಿವೇಕ ಮುಂಡ್ಕೂರ್ (ಗ್ಲೈಡಿಂಗ್)

ವಿದ್ಯಾ ಇಲಾಖೆ

ಕೆ. ಗುರುದತ್-ಸರ್. ವಿ. ಎನ್. ಚಂದಾವರಕರ್-ಉಭಯ ಗೋಪಾಲಕೃಷ್ಣರಾವ್-ಬೆನಗಲ್ ಸಂಜೀವರಾವ್-ಪದ್ಮಾ ಸಂಜೀವರಾವ್-ತಾರಾ ಬಿಜ್ಜೂರ್-ಎಸ್. ಆರ್. ಡೊಂಗರಕೇರಿ-ಶಾಂತಾ ರಂಗರಾವ್-ಡಾ|| ಎಸ್. ಆರ್. ವಿ. ಸವೂರ್-ಎಂ. ಎಸ್. ಏಕಾಂಬರರಾವ್-ಕತ್ರೆ ಸುಮಿತ್ರರಾವ್-ಕೆ. ಭಾಸ್ಕರರಾವ್-ಪುತ್ತಿ ಸುಲೋಚನಾ-ಕೊಡಿಯಾಲಶಂಕರರಾವ್-ಮೂಲ್ಕಿ ಮಂಜನಾಥ್-ಹೆಮ್ಮಾಡಿ-ಮುಂತಾದವರು.

ಸಮಾಜ ಸಹಕಾರೀ ಸೇವೆ

ಮೊಳಹಳ್ಳಿ ಶಿವರಾವ -ಎಸ್.ಎಸ್. ತಾಲ್ಮಕಿ-ಶ್ಯಾಮರಾವ್ ವಿಠಲ್ ಕೈಕಿಣಿ-ರಾವ್. ಸಾಹೇಬ್ ಮಂಜೇಶ್ವರ ಅನಂತರಾವ್-ಜಿ ಪಿ.ಮುರ್ಡೇಶ್ವರ್-ದೇವರಾವ್ ಶಿವರಾಂ ಉಭಯಕರ್-ಕಮಲಾದೇವಿ ಚಟ್ಟೋಪಾಧ್ಯಾಯ-ಸೀತಾಬಾಯಿ-ಪಡುಬಿದ್ರಿ-ಕುದಮುಲ್ ರಂಗರಾವ್ (ಸ್ವಾಮಿ ಈಶ್ವರಾನಂದ.)

ಚಿತ್ರಕಲೆ-ಛಾಯಾಗ್ರಹಣ

ವಿ. ಆರ್. ರಾವ್. ಪಡುಕೋಣೆ ಶ್ರೀನಿವಾಸರಾವ್-ಮಂಗೇಶ ಶಿರಾಲಿ-ಪಿ. ಜಿ.ಶಿರೂರ್ ಬಿ. ಬಿ. ಬೆನಗಲ್-ಬಡಾಕೆರೆ ಶಾಂತಾರಾಂ-ಲಲಿತ ಲಾಜ್ಮಿ-ಪ ವೃಂದಾ, ತಿರ್ಕನ್ನಾಡ್ ಮುಕುಂದರಾವ್ (ವ್ಯಂಗ್ಯಚಿತ್ರ) ರಾಧಾರಾವ್, ಉಡುಪಿ ಜಯರಾಂ-ಶಿವರಂಜನ ಗುಲ್ವಾಡಿ-ಸಜೀಪ ರಾಮಕೃಷ್ಣ-ಕಾಲ್ತೋಡ್-ಬಳವಳ್ಳಿ.

ನೃತ್ಯ

ಯು. ಎಸ್. ಕೃಷ್ಣರಾವ್ (ಭರತನಾಟ್ಯ)-ಚಂದ್ರಭಾಗಾದೇವಿ (ಭರತನಾಟ್ಯ)-ಮೋಹನ್ ಕಲ್ಯಾಣಪುರ್ (ಕಥಕ್) ಶಾಂತಾರಾವ್(ಭರತನಾಟ್ಯ) ಮಾಯಾರಾವ್ (ಕಥಕ್) ಹೇಮಾ ಕೇಸರಕೋಡಿ (ಭರತನಾಟ್ಯ) ಉಮೇಶ್ ಹೆರೆಂಜಾಲ್-(ಭಾರತೀಯನೃತ್ಯ)-ನಾಗರತ್ನ ಪಡುಕೋಣೆ (ಭರತನಾಟ್ಯ ಮತ್ತು ಕಥಕ್ಕಳಿ)-ಸುಶೀಲಾ ಮೆಹತಾ ಉಳ್ಳಾಲ (ಭರತನಾಟ್ಯ)

ಹಾಸ್ಯ

ಸ್ವಾಮಿ ಆನಂದಾಶ್ರಮ ಸ್ವಾಮೀಜಿ-ಸ್ವಾಮಿ ರಾಮದಾಸ್-ಗಂಗೊಳ್ಳಿ ಸುಂದರರಾವ್ ಮಂಗಳೂರು ಸಂಜೀವರಾವ್-ಪ. ರಮಾನಂದರಾಯರು-ಪ. ಪ್ರಭಾಶಂಕರ-ಶಾಂತಿ ರಮಾನಾಥ ನಯಂಪಳ್ಳಿ.

ವೈದ್ಯಕೀಯ

ರಾವ್ ಸಾಹೇಬ್ ಗುಲ್ವಾಡಿ ದಿನಕರರಾವ್-ಡಾ॥ ಆತ್ಮಾರಾಂ-ಡಾ॥ ಆರ್. ರಾವ್. ಡಾ॥ ಕೊಂಬ್ರಬೈಲ್ ರಘುನಾಥರಾವ್-ಡಾ॥ ನಾಡಕರ್ಣಿ-ಡಾ॥ ಉದ್ಧವ್-ಡಾ॥ ಮುಂಡ್ಕೂರ್ ಶಿವರಾವ್-ಹರಿದಾಸ ದಂಪತಿಗಳು-ವೀಣೆಕರ್ ಕುಟುಂಬ-ಡಾ॥ ಕಾರ್ನಾಡ್ ಭಾಸ್ಕರ್-ಡಾ॥ ಉಗ್ರಾಣಕರ್-ಡಾ॥ ಅಡೂರ್ ಸೀತಾರತ್ನ-ಡಾ॥ ನಿರ್ಮಲಾ ಕೆಳಕರ್-ಡಾ॥ ಕೊಡಿಯಾಳ ಹರೀಶ್.

ಕೀರ್ತನಕಾರರು

ಭವಾನಿಶಂಕರ ನಾಗಪ್ಪಯ್ಯ ಗುಲ್ವಾಡಿ-ಸಾವುಕಾರ್ ನಾರಾಯಣ ಭಟ್-ರುಕ್ಮಾ ಬಾಯಿ ಚಂದಾವರ್-ಶಿರೂರ್ ಪ್ರಭಾಕರ್-ಕಲ್ಯಾಣಪುರ ಸಂಜೀವ-ಕಲ್ಯಾಣಿಬಾಯಿ ಸುಶಿ-ನಾಗಾನಂದ ಗುಲ್ವಾಡಿ-ಶಿವಾನಂದ-ಶೈಲಾ ಅಮ್ಮೆಂಬಳ.

ಪೋಲಿಸ್ ಇಲಾಖೆ

ಆರ್. ಎನ್. ನಯಂಪಳ್ಳಿ- ಎ. ಎನ್. ಶಾಗಲ್-ಸಾನಾಡಿ ಸರ್ವೋತ್ತಮ ಮುಗ್ಸಿ-ನಿಲೇಶ್ವರ್, ಹೆಬ್ಬೈ ಸಂಜೀವರಾವ್-ನಾಡಕರ್ಣಿ ಸಹೋದರರು.

ವ್ಯವಸಾಯ :

ಎನ್. ಎಸ್. ಶಿರೂರ್-ಮುಂಡ್ಕೂರ್ ರಂಗನಾಥರಾವ್-ಹಟ್ಟಿಕುದೂರ್ ಶಿವರಾವ್. ಪಂಜೆರಾಮರಾವ್- ಹನುಮಂತರಾವ್ ಕಾಸರಗೋಡು- ಬುರುಡೆಯವರು-ಪುತ್ತಿ ಉಮಾನಾಥ್-ಮಂಕೀಕರ್.

ಹೋಮಿಯೋಪತಿ :

ಉಳ್ಳಾಲ ರಘುನಾಥಯ್ಯ-ಭಾರದ್ವಾಜ ಶಿವರಾವ್,ಸಜೀಪ್ ರಾಮಕೃಷ್ಣ, S.R.U. ಸವೂರ್, H. S. R Roy & Co. [ಕುಲಕರ್ಣಿಸಹೋದರರು] ವಕ್ವಾಡಿ.

ವಿಜ್ಞಾನ :

ಡಾ॥ ಸವೂರ್ ಸದಾಶಿವರಾವ್- S. R. ಸವೂರ್-ಶಾಂತಾ ಸವೂರ್

ಭಾಷೆಗಳು :

ಬಂಟವಾಳ ಮಂಗೇಶರಾವ್- ಕಾರ್ನಾಡ ಅಮೃತರಾವ್

ವಾಸ್ತುಶಿಲ್ಪ :

ಎನ್. ಪಿ. ಚಂದಾವರ್- ತಾರಾಚಂದಾವರ್- ಎಸ್. ಕೆ. ನಾಡಕರ್ಣಿ-ಕತ್ರಿಸುಮಿತ್ರ ರಾವ್, ತಲಗೇರಿ.

Defence :

Lt. General B. M. Rao- Air Marshal L M. Katre Brig M. Y. Mudbidre- Air Commodore Benegal Ramesh Dhareshwr-Amembal Sundar Rao.

ವಾಣಿಜ್ಯ-ಕೈಗಾರಿಕೆ :

N. A. ಶಿರೂರ್- D N. ಶಿರೂರ್- ತೊಂಬತ್ ಸಖಾರಾಂ ರಾವ್- ಮುಲ್ಲರ್ ಪೆಟನ್‌ರು. ಯು.ಬಿ. ದತ್ ಅಂಡ್ ಕಂಪೆನಿ- ನೊಳಹಳ್ಳಿ ಸಂಜೀವರಾವ್-ನಯಂಪಳ್ಳಿ ಗಂಪತರಾವ್-Acmetexನ ರಾಂ ಮೋಹನ್ ಕಲ್ಯಾಣಪುರ್- ಪಂಡಿತ್‌ಕಾರರು, Jai tapesರಚಿಸಿದ P. D. Rao ಮತ್ತು ಕುಟುಂಬ-ಯೆಲ್ಲೂರು ರಾಮರಾವ್ ಅಂಡ್ ಸನ್ಸ್-Popular Book Depot-N.S. Rao Pest Control "ಮೂಸು ಮಾರ್ಸು ಕಾಸುಕೆಲ್ಲೊ"'' [ನೊಣ ಹೊಡೆದು ಹಣ ಮಾಡಿದೆ ಎಂಬರ್ಥ ಕೊಂಕಣಿಯಲ್ಲಿ] ಉಭಯಕರ್ ಕುಟುಂಬ-ಬಸ್ರೂರು ರಾಘವೇಂದ್ರರಾವ್

ಪತ್ರಿಕೋದ್ಯಮ :

ಬೆನಗಲ್ ಶಿವರಾವ್–ಸುಧಾಕರ ಭಟ್–ಆತ್ಮಾನಂದ ಭಟ್–H. ನಾರಾಯಣರಾವ್ G. V. ಶಿರೂರ್–ಶಿರೂರ್ ಗಣಪತರಾವ್– D. R. ಮಂಕೇಕರ್-ಉದ್ಯಾವರ ಭಾಸ್ಕರರಾವ್–ಕೆಬಾಡ ಬಾಲಕೃಷ್ಣರಾವ್–ವಿಮಲಾ ಪಾಟೀಲ್–ಮಾವಿನಕುರ್ವೆ–ನಂದನ್ ಕಾಗಲ್–ಶ್ರೀರಾಂತ್ರಿಕನ್ನಾಡ್-ಪಡುಬಿದ್ರೆಯವರು-ಸಂತೋಷಕುಮಾರ ಗುಲ್ವಾಡಿ.

ರಾಷ್ಟ್ರಭಕ್ತರು–ರಾಜಕೀಯ :

ಕಾರ್ನಾಡ್ ಸದಾಶಿವರಾವ್–ಉದ್ಯಾವರ್ ಶಾಂತಾರಾಮರಾವ್-ಗುಲ್ವಾಡಿ ಶಂಕರ್ ರಾವ್–R. S. ಪಡುಬಿದ್ರೆ.ಶ್ರೀಮತಿ ಪಡುಬಿದ್ರೆ-ಶ್ರೀಮತಿ ಉಮಾಬಾಯಿ ಕುಂದಾಪುರ-ಕೃಷ್ಣಬಾಯಿಪಣಜೀಕರ್ ಸುಂದರಿ–ಸುಂದರ್ ಪಡುಕೋಣೆ–ಕಮಲಾದೇವಿ ಚಟ್ಟೋಪಾಧ್ಯಾಯ-ಮಡಿಮಣ ಸುಮತಿ-ಮಡಿಮಣ ಶಾಂತಿ.

Banking :

ಬೆನಗಲ್ ರಾಮರಾವ್–ಉದ್ಯಾವರ್ ಆನಂದರಾವ್-D. M. ಸವೂರ್-ಪಂಡಿತ್ ಶಿವಾರಾವ್-S. V. C. Bank ನ ಶ್ಯಾಂರಾವ್ ವಿಠಲ್ ಕ್ಯಾಕಿಣಿ.

ನ್ಯಾಯ :

ಬೆನಗಲ್ ನರಸಿಂಗ್‌ರಾವ್-V. P. ರಾವ್-ಜಸ್ಟೀಸ್ ಶಂಕರನಾರಾಯಣರಾವ್-ಸರ್ ನಾರಾಯಣ ಚಂದಾವರಕರ್-ಜಸ್ಟೀಸ್ ಎಣ್ಣೆಮಿಡಿ–A. V. ಶಂಕರರಾವ್-ಗೊಲ್ಲರಕೇರಿ ತಮ್ಮಣ್ಣ್-ನಯಂಪಳ್ಳಿ ರಾಂರಾವ್.

ದಾನ–ಧರ್ಮ :

ದೇವರಾವ್ ಶಿವರಾಂ-ಶಾಂತಾಬಾಯಿದೇವರಾವ್–ಶಿವರಾಂ–ಸುಂದ್ರಾಬಾಯಿ ಶಿರೂರ್-Lady ಚಂದಾವರ್‌ಕರ್-ಸಖಾರಾಂ ಪಣಜೀಕರ್.

ಆಧ್ಯಾತ್ಮ :

ಸಾರಸ್ವತ ಮಹಿಳೆಯರು ಭಜನೆ ಹಾಡುವುದಕ್ಕೂ, ಭಜನೆ ಗೀತೆಗಳನ್ನು ರಚಿಸುವುದಕ್ಕೂ ಪ್ರವೀಣರಾಗಿದ್ದರು. ವಿದ್ಯಾಭ್ಯಾಸ ಇಲ್ಲದೆಯೂ ಅವರು ಸಾಹಿತ್ಯ ರಚಿಸಿರುವುದು ಶ್ಲಾಘನೀಯ.

ಸ್ವಾಮಿ ರಾಮದಾಸ್-ಭಟ್ಕಳ ಅಪ್ಪಯ್ಯ-ಸಂತ ಬೆಳ್ತಂಗಡಿ ಕೃಷ್ಣರಾವ್, ಸಂತ್ರೆ ಅವಡೀಬಾಯಿ-ನಾಡಪುರ್ ಶಾಂತಿ ಬಾಯಿ-ಹೆಮ್ಮಾಡ ಜೋಗನಾಸಿ-ಮಾತಾಜಿ ಕೃಷ್ಣಬಾ ಲಲಿತಾಬಾಯಿ-ಭಟ್ಕಳ ಶಾಂತಿ ಮತ್ತು ಮಗಳು ಸರಸ್ವತಿ.

ರಜತ ಪರದೆ :

ಹಟ್ಟಂಗಡಿ ದಂಪತಿಗಳು–ಗುರುದತ್–ವಿಜಯ್ ಪಡುಕೋಣೆ-ಆತ್ಮಾರಾಂ-ದೇವಿದತ್ ಕಲ್ಪನಾಲಾಜ್ಮಿ-ಶ್ಯಾಂಬೆನೆಗಲ್-ಗಿರೀಶ್ ಕಾರ್ನಾಡ್-ಅನಂತ್‌ನಾಗ್-ಶಂಕರ್‌ನಾಗ್ ನಯ್ಯಂಪಳ್ಳಿ ಸುಂದರ್-ಲೀನಾ ಚಂದಾವರ್-ಸುಶೀಲಾರಾಣಿ–ಶುಭಾಖೋಟೆ.

ನಾಟಕ :

ಪ. ರಮಾನಂದ- ಪ. ಸೀತಾದೇವಿ-ಕುಂದಾರ್ಗಿ-ಚಿತ್ರಾಪಾಲೇಕರ್ - ಕಲ್ಯಾಣಪುರ ನರಹರಿಭಟ್ (ಯಕ್ಷಗಾನ) ತಲಗೇರಿ ವೆಂಕಟರಾವ್-ಕೋಡಂಗೆ ರಾಮರಾವ್– ಕಲ್ಪನಾ ಶಿ...ರ-ವೀಣಾ ಶ್ರೀರಾಂ ಲಾಗು–ಗಂಗೊಳ್ಳಿ ಮುರಲೀಧರ್–ಗೋಪಾಲ ಮಾವಿನಕುರ್ವೆ-ಹಟ್ಟಂಗಡಿ ದಂಪತಿಗಳು-ಯಶೋಧರಾ ಭಟ್.

(ಹವ್ಯಾಸಿ ನಾಟಕಕಾರರು ಅಸಂಖ್ಯಾತ ಇದ್ದಾರೆ)

ಅಡಿಗೆ :

ರಾಧಾರಾವ್–"ರಸ–ಚಂದ್ರಿಕೆ" ಬರೆದ ಅಂಬಾಬಾಯಿ ಸಂಶಿ ಮತ್ತು ಸಂಗಡಿಗರು ಶೈಲಾ ಹಟ್ಟಂಗಡಿ-Afcon Products.

ಚಿತ್ರಾಪುರ ಸಾರಸ್ವತರು ಸಂಬಂಧ ದೇವಾಲಯುಗಳು :

ಇಡುಗುಂಜಿಯಲ್ಲಿನ ಗಣಪತಿ ದೇವಾಲಯ-ಬೈಲೂರಿನ ಶ್ರೀ ಲಕ್ಷ್ಮೀನಾರಾಯಣ ಮಂದಿರ- ಬೆಂಗಳೂರಿನಲ್ಲಿ ಶ್ರೀ ಪಾಂಡುರಂಗ ದೇವಸ್ಥಾನ, ಶ್ರೀ ರಾಧಾಕೃಷ್ಣ ಮಂದಿರ, ಚಿತ್ರಾಪುರ ಮಠದ ಕ್ಷೇತ್ರ, ಭಟ್ಕಳದಲ್ಲಿ ಶ್ರೀ ನಾಡಘುರ್ ಡೇವಾಲಯ (ಇದರ ಮೂಲ ಪುರುಷರು ರಾವ ನಗರದ ಮಾತಾಜಯವರ ಹಿರಿಯರು). ಬ್ರಹ್ಮಾವರದಲ್ಲಿ ಶ್ರೀ ವಿಠೋಬ ದೇವಾಲಯ, ಬೈಂದೂರಿನಲ್ಲಿ ಶ್ರೀ ಮಹಾಕಾಳಿ ದೇವಸ್ಥಾನ ಕುಂದಾಪುರದಲ್ಲಿ ಶ್ರೀ ದತ್ತಾತ್ರೇಯ ದೇವಾಲಯ, ಹಳದಿಪುರದಲ್ಲಿ ಶ್ರೀ ಶಾಂತಾದುರ್ಗ ದೇವಸ್ಥಾನ, ಗೋಕರ್ಣದಲ್ಲಿ ಶ್ರೀ ಭಂಡಿಕೇರಿ ಮಠ, ಶ್ರೀ ಕಾಶಿ ವಿಶ್ವೇಶ್ವರ ದೇವಾಲಯ, ಹಟ್ಟಂಗಡಿಯಲ್ಲಿ ಶ್ರೀ ಗೋಪಾಲಕೃಷ್ಣ ದೇವಾಲಯ, ಹೆಮ್ಮಾಡಿನಲ್ಲಿ ಹೇಮಾಪುರ ಮಠ, ಹೊನ್ನಾವರದಲ್ಲಿ ಶ್ರೀ ಗೋಪಾಲಕೃಷ್ಣ ದೇವಾಲಯ, ಹುಬ್ಬಳ್ಳಿಯಲ್ಲಿ ಶ್ರೀ ಶಿವ-ಕೃಷ್ಣ ಮಂದಿರ, ಕೈಲಾಜೆಯಲ್ಲಿ ಶ್ರೀ ಉಮಾಮಹೇಶ್ವರದೇವಸ್ಥಾನ ಕಾರ್ಕಳದಲ್ಲಿ ಶ್ರೀ ಶಿವ-ಗೋಪಾಲಕೃಷ್ಣ ದೇವಸ್ಥಾನ, ಕಂಬದಕೋಣೆಯಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಕುಮಟಾದಲ್ಲಿ ಶ್ರೀ ಶಂಕರನಾರಾಯಣ ದೇವಸ್ಥಾನ ಮಲ್ಲಾಪುರದಲ್ಲಿ ಶ್ರೀ ಗುರುಮಠ, ಶ್ರೀ ದತ್ತಾತ್ರೇಯ ಮಂದಿರ, ಶ್ರೀ ಗಣಪತಿ ದೇವಸ್ಥಾನ-ಶ್ರೀ ಸಮಾಧಿ ಪೀಠ, ಮಂಗಳೂರಿನಲ್ಲಿ ಶ್ರೀ ಉಮಾಮಹೇಶ್ವರ ದೇವ

ಸ್ಥಾನ, ಶ್ರೀ ರಾಮಮಂದಿರ, ಶ್ರೀ ಸಮಾಧಿ ಮಠ, ಮಂಕಿಯಲ್ಲಿ ಶ್ರೀ ಭದ್ರಾಂಬಿಕೇಶ್ವರ ದೇವಸ್ಥಾನ, ಶ್ರೀ ಜನಾರ್ದನ ದೇವಾಲಯ, ಮಿರ್ಜಾನ್‌ನಲ್ಲಿ ಶ್ರೀ ವೆಂಕಟರಮಣ ದೇವಸ್ಥಾನ, ಮುರ್ಡೇಶ್ವರದಲ್ಲಿ ಶ್ರೀ ಶಿವ-ಮುನೀಶ್ವರ ದೇವಾಲಯ ನಾಗೂರಿನಲ್ಲಿ ಶ್ರೀ ಶಾಂತಾ-ದುರ್ಗಾ ದೇವಸ್ಥಾನ, ಪುತ್ತೂರಿನಲ್ಲಿ ಶ್ರೀ ರಾಧಾಕೃಷ್ಣ ಮಂದಿರ, ಶ್ರೀ ಭವಾನಿಶಂಕರ ದೇವಸ್ಥಾನ, ಸಾಗರದಲ್ಲಿ ಶ್ರೀ ಶಿವ-ಗೋಪಾಲಕೃಷ್ಣ ಮಂದಿರ, ಶಿರಾಲಿಯಲ್ಲಿ ಶ್ರೀ ಚಿತ್ರಾಪುರ ಮಠ, ಶ್ರೀ ಗೋಪಾಲಕೃಷ್ಣ ಮಂದಿರ ಮತ್ತು ಶ್ರೀ ಶಾಂತಾದುರ್ಗ ಮಂದಿರ, ಉಡುಪಿಯಲ್ಲಿ ಶ್ರೀ ಶಂಕರನಾರಾಯಣ ದೇವಸ್ಥಾನ, ಉಪ್ಪೋಣಿಯಲ್ಲಿ ಶ್ರೀ ಶಾಂತಾದುರ್ಗಾ ದೇವಸ್ಥಾನ, ವಿಟ್ಲದಲ್ಲಿ ಶ್ರೀ ಅನಂತೇಶ್ವರ ದೇವಾಲಯ, ಉಳ್ಳಾಲದಲ್ಲಿ ಶ್ರೀ ಸೀತಾರಾಮ ಮಂದಿರ, ಬೊಂಬಾಯಿಯಲ್ಲಿ ಖಾರ್ ಬಡಾವಣೆಯಲ್ಲಿ "ಆನಂದಾಶ್ರಮ" ಪೀಠ, ಶ್ರೀ ದತ್ತ ಮಂದಿರ ವಾಕೋಲಾ, ವದ್ರಾಸಿನಲ್ಲಿ ಡಾ॥ ದಿನಕರ್ ಗುಲ್ವಾಡಿ ಮೆಮೋರಿಯಲ್ ಹಾಲ್‌ನಲ್ಲಿನ ಶ್ರೀ ಕೃಷ್ಣದೇವಸ್ಥಾನ, ಅಂಕೋಲೆಯಲ್ಲಿನ ಶ್ರೀ ಮಹಾ-ಮಾಯಾ ಮಂದಿರ.

ಸಾಮಾಜಿಕ ಸೇವೆ-ಚಿತ್ರಾಪುರ ಸಾರಸ್ವತರಿಗೆ ಮಾತ್ರ ಮೀಸಲಾಸುಮ.

1) ನಾಸಿಕದಲ್ಲಿನ "Holiday Home"
2) ಕೋಟೆಕ್ಕಾರನಲ್ಲಿನ "ಅನಾಥಾಲಯ"
3) ಶಿರಾಲಿಯಲ್ಲಿನ "ಆನಂದಾಶ್ರಮ"
4) ತಾಲ್ಮಕೀವಾಡಿಯ "ಉದ್ಯೋಗ ಮಂಡಲ"

ಚಿತ್ರಾಪುರ ಸಾರಸ್ವತರು ನಡೆಸುವ ಶಾಲೆಗಳು

1) ಬಾಲವಾಡಿ (ಬೊಂಬಾಯಿಯ ತಾಲ್ಮಕಿವಾಡಿಯಲ್ಲಿ)
2) ಸರಸ್ವತಿ ಮಹಿಳಾ ಸಮಾಜ (ಮಲ್ಲೇಶ್ವರ, ಬೆಂಗಳೂರು)

ಚಿತ್ರಾಪುರ ಸಾರಸ್ವತರ ಸಹಕಾರೀ ಕಟ್ಟಡಗಳು

ಬೆಂಗಳೂರಿನಲ್ಲಿ ಶ್ರೀ ಆನಂದಾಶ್ರಮ, ಶ್ರೀ ಪಾಂಡುರಂಗಾಶ್ರಮ, ಶ್ರೀ ಗುರುಪ್ರಸಾದ (ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ದತ್ತ ಪ್ರಸಾದ ಕಟ್ಟಡದಲ್ಲೂ ಇದ್ದಾರೆ. ಈಗ ಶ್ರೀ ಚಿತ್ರಾಪುರ ಮಠದ ಕಟ್ಟಡಗಳೂ ಆಗಿವೆ.)

ಬೊಂಬಾಯಿಯಲ್ಲಿ ಆನಂದಾಶ್ರಮ ಕಟ್ಟಡ-ತಾಲ್ಮಕಿವಾಡಿ-ಚಿತ್ರಾಪುರ ಸಹಕಾರೀ ಕಟ್ಟಡ, ವಿಲೆಪಾರ್ಲೆಯಲ್ಲಿನ ಸಹಕಾರೀ ಕಟ್ಟಡ-ಗೋರೇಗಾಂವ್‌ನಲ್ಲಿ "ಗುರುಸೇವಾ" ಕಟ್ಟಡಗಳು, ಮುಲುಂಡ್‌ನಲ್ಲಿ "ಗುರು-ಭಕ್ತಿ" ಸಹಕಾರೀ ಕಟ್ಟಡಗಳು-ಇತ್ಯಾದಿ ಅನೇಕ ಸಹಕಾರಿ ಕಟ್ಟಡಗಳಿವೆ.

ಇತ್ತೀಚೆ ಹೊಸ ಕಾನೂನು ಪ್ರಕಾರ ಕೋಮುವಾರು ಕಟ್ಟಡಗಳಿಗೆ ಅನುಮತಿ ಇಲ್ಲ. ಆದ್ದರಿಂದ ಒಂದೆರಡು ಮನೆಗಳನ್ನು ಇತರ ಜಾತಿಯವರಿಗೆ ಕೊಡಲಾಗುತ್ತದೆ.

ಶ್ರೀ ಚಿತ್ರಾಪುರ ಮಠದ ಗುರು ಮಠಾಧೀಶರ ಪರಂಪರೆ

ಶ್ರೀ ಅಚ್ಯುತಾಶ್ರಮ 1435-1465	ಶ್ರೀ ಆನಂದಾಶ್ರಮ I 1465-1495
ಶ್ರೀ ಕೈವಲ್ಯಾಶ್ರಮ 1495-1525	ಶ್ರೀ ನರಸಿಂಹಾಶ್ರಮ 1525-1555
ಶ್ರೀ ಕೇಶವಾಶ್ರಮ I 1555-1585	ಶ್ರೀ ವಾಮನಾಶ್ರಮ I 1585-1615
ಶ್ರೀ ಕೃಷ್ಣಾಶ್ರಮ I 1615-1645	ಶ್ರೀ ಪಾಂಡುರಂಗಾಶ್ರಮ I 1645-1675
ಶ್ರೀ ಪರಿಜ್ಞಾನಾಶ್ರಮ I 1675-1720	ಶ್ರೀ ಶಂಕರಾಶ್ರಮ I 1120-1757-45
ಶ್ರೀ ಶಂಕರಾಶ್ರಮ I 1720-1757	ಶ್ರೀ ಪರಿಜ್ಞಾನಾಶ್ರಮ II 1757-1770
ಶ್ರೀ ಶಂಕರಾಶ್ರಮ II 1770-1785	ಶ್ರೀ ಕೇಶವಾಶ್ರಮ II 1785-1823
ಶ್ರೀ ವಾಮನಾಶ್ರಮ II 1823-1839	ಶ್ರೀ ಕೃಷ್ಣಾಶ್ರಮ II 1839-1863
ಶ್ರೀ ಪಾಂಡುರಂಗಾಶ್ರಮ II 1863-1915	ಶ್ರೀ ಆನಂದಾಶ್ರಮ II 1915-1966
ಶ್ರೀ ಪರಿಜ್ಞಾನಾಶ್ರಮ III 1966–	

(ಶಿಷ್ಯ-ಸ್ವಾಮಿ)

ಚಿತ್ರಾಪುರ ಸಾರಸ್ವತರ ವಿವಿಧ ಕ್ಷೇತ್ರಗಳ ಸಮಾಚಾರಗಳನ್ನು ಕೊಡುತ್ತಿರುವ ಮುಖ್ಯವಾದ ಕೆಲವು ಪತ್ರಿಕೆಗಳು.

1) ಚಿತ್ರಾಪುರ ರವಿಕಿರಣ Quarterly
2) ಕೆನರಾ ಸಾರಸ್ವತ್ ಮ್ಯಾಗಜಿನ್ Monthly
3) ಕೆನರಾ ನ್ಯೂಸ್ ಲೆಟರ್ ಮಾಸಿಕ

ಪಡುಕೋಣೆ ರಮಾನಂದರಾಯರ ಅಜ್ಜಂದಿರಾದ ಪಡುಕೋಣೆ ಬಾಲಕೃಷ್ಣರಾಯರು ನಿಧನರಾಗುವ ಮುಂಚೆ ಕೊನೆಯ ಉಸಿರು ಎಳೆಯುತ್ತಿರುವ ಸಮಯ. ಮರಣ ಶಯ್ಯೆಯ-ಸುತ್ತಲೂ ಇದ್ದವರನ್ನು ನಗಿಸಿದ ಸಂದರ್ಭ ಒಂದಿದೆ; ಅವರ ಹಾಸಿಗೆಯ ಮೇಲೆ ಒಂದು ಕೆಂಪಿರುವೆ ಅವರಿಗೆ ತೊಂದರೆ ಕೊಡುವುದನ್ನು ಕಂಡು ಹತ್ತಿರ ಕೂತಿರುವವರಲ್ಲಿ ಒಬ್ಬರು ಅದನ್ನು ಕೊಲ್ಲಲು ಕೈ ಎತ್ತಿದರಂತೆ. ಆಗ ಬಳಿಯಲ್ಲಿದ್ದ ಸ್ವಾಮಿರಾಮದಾಸರು (ಬಾಲಕೃಷ್ಣರಾಯರ ಆರನೆಯ ಮಗ) "ಅಯ್ಯೋ ಅದನ್ನು ಕೊಲ್ಲಬೇಡಿ- ಆ " ಎಂಬೊ " (ಕೊಂಕಣಿ ಭಾಷೆಯಲ್ಲಿ "ಎಂಬೊ" ಅಂದರೆ ಕೆಂಪಿರುವೆ) ಒಳಗೆ ರಾಮನಿದ್ದಾನೆ!" ಅಂದರಂತೆ. ಸಾರಸ್ವತ ಕುಟುಂಬದ ಒಂಟೆ ವಾಳ ಕುಟುಂಬ ಒಂದಕ್ಕೆ "ಎಂಬೊ" ಎಂಬ Nick Name ಕೂಡ ಇದೆ. ಆದ್ದರಿಂದ ಸಾಯುತ್ತಿರುವ ಬಾಲಕೃಷ್ಣರಾಯರು ನಗುತ್ತಲೇ "ಹೌದು- 'ಎಂಬೊ ರಾಮನೂ" ಇದ್ದಾನೆ- ಅವನಿಗೆ 'ಎಂಬೊ ಲಕ್ಷ್ಮಣ' ಎಂಬ ತಮ್ಮನೂ ಇದ್ದಾನೆ" ಎಂದು ಎಲ್ಲರನ್ನೂ ನಗುವಿನಲ್ಲಿ ತೇಲಿಸಿ, ಕೆಲವೇ ನಿಮಿಷಗಳಲ್ಲಿ ದೇಹತ್ಯಾಗ ಮಾಡಿದರಂತೆ!

ಸ. ರಮಾನಂದರಾಯರ ಕೃತಿಗಳು

ಕೊಂಕಣಿ

1) "ಸಿನೆಮಾ ಪಿಶ್ಶೆ"

Original humorous play with a surprize ending. Was staged in Madras in 1950's.

2) "ಏಕು ದೀಸು ಸಕಾಳಿಂ"

Original humorous play. wrote it in the evening of his life when persuaded by his friends in Madras who stage it to everyone's delight.

3) "ಭಟ್ಕಳ್ ಅಪ್ಪಯ್ಯಾ"

Improved and adapted it from a script on the life of a Saraswat saint. Acted in it along with wife on the Bangalore stage.

4) "ಚೋಳೆಂ"

Adapted from the "Cloak". The theme is about the journey of the soul after death. The play was staged in Madras. Though he was not originally in the cast he had to do a role when one of the actors fell sick at the last moment.

ಕನ್ನಡ

1) "ಹುಚ್ಚು ಬೆಳದಿಂಗಳಿನ ಹೂ ಬಾಣಗಳು"

His best-know work. Introduced light and clean humour in Kannada literature of the time through this collection of essays and short stories. There are also some serious pieces in the book. Some parts of this book have been prescribed as texts for students. The credit for the creation of the popular Hari Kamath' goes to him.Hari Kamath's adventures continued even when his creator was ageing. The book is Illustrated with fine cartoons by Sri. T. M. Rao, his cousin Manohara Grantha Mala of Dharwar printed it. A.I.R. has also used it for broadcast. Recently In 1982, his " ಹರಿಕಮತನ ಹಿಂದಿ " — a specially written short for Manohara Grantha Mala's "Commemorative Volumes:" " ನಡೆದು ಬಂದ ದಾರಿ " was

adapted into a play by Smt. H. S. Parvathi and broadcast from A. I. R. Bangalore.

2) "ಚೆರ್ರಿ ಹಣ್ಣಿನ ತೋಟ"

Translation of Anton Chekov's ' Cherry Orchard ' A pathos-laden play about a lady who had to let her beloved Chery trees get felled much against her will. This play was printed in Mysore by Geeta Book House, in 1972.

P. R. has translated Anton Chekov's 'Sea-Gull' and alao his "Three Sisters". The scripts are prepared painstakingly and are ready for publicatlon but have found no willng publishers. (" ಕಡಲ ಕಾಗೆ ಮತ್ತು ಮೂವರು ಸಹೋದರಿಯರು ")

3) "ಅಹಿಂತಕ"

A One-Act Play based on Tolstoy's work.

4) "ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ"

when Erick von Remarque wrote this famous war novel on the Frist world war, it got translated into most European languages but not in any Indian language. So, P. R. decided to do it a Kannada. It is a novel describing the physical and mental suffering of hundreds of young men who were forced to fight the war. P. R. called this novel of his as his 'Swan-Song'. BAPPCO published this book in 1982.

5) 'ಜೀವನ'

An Article on 'life' in a highly literary style for the book prepared to honour the memory of SRI. B.M. S. in 'ಸಂಭಾವನೆ'.

6) After a great deal of study and reference work, contributed the matter on the 'History of Indian Cinema' for the Encyclopaedia commisioned by the Government of Mysore.

7) When the 36th Kannada Sahitya Sammelana met at Kumta, he had presided at the Science Conference. His Presidential speech was printed and distributed in the audience.

8) He has made a number of speeches, some of them pre-

prepared and some extempore. He spoke on the 400th Anniversary of Saint Purandara Dasa at Arun Sangeethalaya in Bombay. He has contributed many articles to Kanara Saraswat Magazine and others and they are scattered and hence difficult to enumerate.

He also spoke on the occasion of the Platinum Jubilee of the Shamrao Vittal Bank at Bombay in 1981.

ಇಂಗ್ಲಿಷ್ :

1) In collaboration with another author, wrote a Text-Book on Organic Chemistry which was very much in demand as long as the Intermediate classes of the University lasted. The well-brought-out book was published in Madras.

2) MAKARA CHANDRA : A play on Gypsy Life adapted from a story by M. Gorki. This play has lovely little ditties of his own though the story has been adapted. The play is enchanting.

3) TOM OF THE GLEAN : A One-act Play in English based on a Short story in English.

4) AMBIKA : On the central character of Ambika, he wrote a play inspired by an English story. The play has a surprize and pathetic ending. P. R. had entered it for the Drama Competetion in Bombay.

5) MIRDAD : A Play in blank verse inspired by the long poem "The Book of Mirdad" by the Lebanese Writer Mikhail Naimy. The mystic Mirdad's discourses have vedantic overtones. The drama leaves an impact with the polish of the language and the power of the thought. Bharatiya Vidya Bhavan, Bombay published it in 1971.

6) INWARD BOUND : Attempted to make it an "ABSURD PLAY" but ended up by making a lot of sense. Has autobiographical glimpses of his beloved mother whom he lost as a child and also his life with his colleagues. "ENACT", a magazine dedicated to the Theatre Arts, published it in New Delhi.

7) RETURN OF SHAKUNTALA : When Kalidasa brought together the lovers and ended on a happy note, everyone was pleased but not P. R. He had his own doubts....Would Shakuntala, a child of Nature, be able to breatne freely in the stifling atmosphere of the palace with its Jealosies and intrigues? Result of P. R. 's mental exertions was this drama which was also published by 'Enact'. P. R. has taken care to preserve the spirit and the mode of life ih the days of the Gurukul.

8) .... THE FOURTH SPECTRE : English rendering of K. S. Karanth's on the theme of V. D.

.... Booklet in English on the Gokulashtami Sampradaya observed at Mallapur Avadi Mutt.

.... Biographical on Swami Ramdas, Panje Mangesh Rao, Molahalli Shiva Rao, Sri Satya Sai Baba.

.... Wrote an article for the Souvenir which was brought out to celebrate the Golden Jubilee of the Gokulashtmi Bhajans at Madras.

.... When Bellary became part of Karnataka after a controversy, he compared her to a bride being welcomed into a new family in his article for the 'WELCOME BELLARY' Souvenir.

.... Wrote many one-act plays from short stories which were staged during College Days and School days. They were used for the ocecasions on the spot and hence are not collected or printed....like ALI BEG, The Prince and the Pauper and such other adaptations, translations etc.

ಹಿಂದಿ

1) Mere Gopal : play about the little son of a poor widow

2) Sohrab Rustum : Translated from Vi. Si's drama of the same title.

ಕೊಂಕಣಿ

3) ''ಹೋಂ ರೂಲ'' Kailasam himself urged her to translate his ''ಹೋಂ ರೂಲು'' Konkani knowing audiences were regaled with the presentation of this drama in which she herself acted with P. R.

4) ''ವಧುಪರೀಕ್ಷಾ'' A light play chiefly meant for girls.

5) ''ಲಡಾಯಿ ಮೂಳ'' Translation of ''ಕದನ ಕುತೂಹಲ''Has acted in it along with P. R.

6) ''ಕುಟ್ಟಿಮಾಕ್ಕಾರಿಫಜೀತಿ'' Wrote and regaled the audience in Madras by doing the role of ''ಕುಟ್ಟಿಮಾಕ್ಕಾ''

ಕನ್ನಡ

7) ''ಹೀಗಾಗಬೇಕೇ?'' A novelette translated from Marath ''ಜಾಯಿಮಾನ'' The story is about two girls attached to each other whose friendship meets with a sad end.

8) ''ಕಟುಕರೋಹಿಣಿಸಂವತ್ಸರದಲ್ಲಿ'' A Play about an imaginary age age when men and women exchange their roles in house hold chores and careers, An amusing satire. This one-act play has been broadcast in its Konkani translation from A. I. R. Bombay.

9) ''ವೇಣು ಮಾವ'' Translation, adaptation of ''Uncle Vanya' of Anton Chekov. Printed by Manohara Granthamala. This drama, translated into Konkani was enacted on the Bombay stage during the Drama Festival, in 1961.

ಚೆರ್ರಿಹಣ್ಣಿನ ತೋಟ

ವಿ. ಎಂ. ಇನಾಂದಾರ್

ಈ ಶತಮಾನದ ಆದಿಯಲ್ಲಿ ಸಾಹಿತ್ಯವನ್ನು ವಾಸ್ತವಿಕತೆಯ ಹೆದ್ದಾರಿಯಲ್ಲಿ ಮುನ್ನಡೆಯುವಂತೆ ಮಾಡಿದ ಮಹನೀಯರಲ್ಲಿ ರಶಿಯನ್ ಕತೆಗಾರ, ನಾಟಕಕಾರ ಆದ ಚೆಕೊವನೂ ಒಬ್ಬ. ನಾಟಕದ ಮಟ್ಟಿಗೆ ಪಶ್ಚಿಮ ಯೂರೋಪಿನ ನಾಟಕಪ್ರಪಂಚದಲ್ಲಿ ಕ್ರಾಂತಿಯನ್ನು ಇಬ್ಸೆನ್ ಎಸಗಿದ ಹಾಗೆ ರಶಿಯನ್ ನಾಟಕವನ್ನು ಅಂಥದೇ ದಾರಿಯಲ್ಲಿ ಮುನ್ನಡೆಸಿದವ ಚೆಕೊವ್. ಸಾಮಾನ್ಯ ಜನರ ದಿನನಿತ್ಯದ ಬಾಳನ್ನು ಚಿತ್ರಿಸುವುದೇ ತನ್ನ ಅಪೇಕ್ಷೆ ಎಂದು ಆತ ಅನೇಕ ಕಡೆಗಳಲ್ಲಿ ಹೇಳಿದ್ದಾನೆ. ನಾಟಕಗಳಲ್ಲಿ ಜನ ಬರುತ್ತಿರಬೇಕು, ಹೊರಟುಹೋಗುತ್ತಿರಬೇಕು; ಊಟ ಮಾಡಬೇಕು, ಅದು ಇದು ಎಂದು ಗಾಳಿಮಾತಾಡುತ್ತಿರಬೇಕು; ಇಸ್ಪೀಟು ಆಡುತ್ತಿರಬೇಕು. ಹೊರಗೆ ಹೇಗೆ ನಡೆಯುತ್ತಿರುತ್ತದೆಯೊ ಹಾಗೆಯೇ ನಾಟಕದಲ್ಲಿಯೂ ನಡೆಯಬೇಕು. ಜನಗಳೂ ಹಾಗೆಯೇ, ಮರಗಾಲು ಕಟ್ಟಿಕೊಂಡವರಾಗಿರಬಾರದು. ರಂಗಭೂಮಿಯ ಮೇಲೆ ನಡೆಯಬೇಕಾದ್ದು ಬದುಕಿನಷ್ಟೇ ಸರಳವಾಗಿರಬಾರದು. ರಂಗಭೂಮಿಯ ಮೇಲೆ ನಡೆಯ ಬೇಕಾದ್ದು ಬದುಕಿನಷ್ಟೇ ಸರಳವಾಗಿರಬೇಕು, ಅಷ್ಟೇ ತೊಡಕುತೊಡಕಾಗಿರಬೇಕು.—ನಾಟಕ ನಿರೂಪಿಸಬೇಕಾದ ವಿಷಯದಲ್ಲಿ ಬಗೆಯಲ್ಲಿ ಚೆಕೊವ್ ಅಭಿಪ್ರಾಯ ಇದು. ಆತ ಬರೆದ ಕಥೆಗಳಲ್ಲಿ ಹೇಗೊ ಹಾಗೆ ಆತ ಬರೆದ ನಾಟಕಗಳಲ್ಲಿ ಆತ ಮಾಡುವುದು ಅಷ್ಟನ್ನು.

ಅನುಭವ ಬದುಕಿನಿಂದಲೇ ಬಂದದ್ದಾದರೂ ಅದೊಂದು ಕಥೆಯಾಗಬೇಕಾದಾಗ, ಒಂದು ನಾಟಕವಾಗಬೇಕಾದಾಗ, ಅದನ್ನು ಬರೆಯುವವನು ಆ ಅನುಭವವನ್ನು ಒಂದು ರೀತಿಯಲ್ಲಿ ಜೋಡಿಸಿಕೊಳ್ಳುತ್ತಾನೆ. ಅದಕ್ಕೆ ಒಂದು ರೂಪ ಕೊಡುತ್ತಾನೆ. ನಿರೂಪಿಸಿದ ಅನುಭವದ ಮೂಲಕ ಯಾವುದೊ ಒಂದು ಅರ್ಥದ ಸೂಚನೆ ಕೊಡವುದಕ್ಕೆ ಈ ರೂಪಯೋಜನೆ ಅಗತ್ಯ. ಅಂಥ ಅರ್ಥವನ್ನು ಹೊರಡಿಸುವುದಕ್ಕಾಗಿಯೇ ಅಂಥ ರೂಪಯೋಜನೆಯನ್ನು ಆತ ಕಲ್ಪಿಸಿಕೊಂಡಿರಬಹುದು; ಅಥವಾ, ಹೊಳೆದ ಅರ್ಥದ ಮೂಲಕವಾಗಿ ಅನುಭವ ಆತನಿಗೆ ಹಾಗೆ ರೂಪುಗೊಂಡೇ ಕಾಣಿಸಿಕೊಂಡಿರಬಹುದು. ಕ್ರಮ ಯಾವುದೇ ಆದರೂ ಬದುಕಿನಲ್ಲಿಯ ಅನುಭವ ಕಲೆಯಾಗಿ ರೂಪುಗೊಳ್ಳುವ ಈ ಪ್ರಕ್ರಿಯೆಯಲ್ಲಿ ಎಷ್ಟರ ಮಟ್ಟಿಗೆ ತದ್ವತ್‌ಸ್ವರೂಪವನ್ನು ಉಳಿಸಿಕೊಳ್ಳುತ್ತದೆ ಎನ್ನುವುದು ಒಂದು ಸೂಕ್ಷ್ಮವಾದ ಪ್ರಶ್ನೆ. ಕಲೆಗೆ ರೂಪ ಅಗತ್ಯ. ಆದರೆ ರೂಪದ ಮೂಲಕ ಕೊಡಮಾಡಿದ ಬದುಕಿನ ಚಿತ್ರ ವಿಕೃತವಾಗಬಾರದು, ಕೃತಕವೆನಿಸಬಾರದು. ಒದಗಿಸಿದ ವಿವರಣೆಯಾಗಲಿ, ಚಿತ್ರವಾಗಲಿ ಕಟ್ಟಿದ ಕಥೆ ಎನಿಸಬಾರದು.

ಆವರೆ ಕಟ್ಟದ ಹೊರತು ಕಥೆಯಿಲ್ಲ. ಒಂದಲ್ಲೊಂದು ಬಗೆಯಲ್ಲಿ ಅನುಭವವನ್ನು ಜೋಡಿಸದ ಹೊರತು ನಾಟಕವಾಗದು. ವಾಸ್ತವಿಕತೆಯ ವ್ರತವನ್ನು ತೊಟ್ಟವನಿಗೆ ಒಂದು ಕಡೆಯಿಂದ ಕಲಾಸ್ವರೂಪದ ಅಗತ್ಯಗಳಾದರೆ ಇನ್ನೊಂದು ಕಡೆಯಿಂದ ಚಿತ್ರಿಸ ಬೇಕೆಂದ ಅನುಭವದ ಒತ್ತಡಗಳು ತಪ್ಪಿದವಲ್ಲ. ಒಂದು ಕಡೆ ಒಲಿದರೆ ನಿರೂಪಣೆ ಕೃತಕವಾಗುತ್ತದೆ. ಇನ್ನೊಂದು ಕಡೆ ಒಲಿದರೆ ರೂಪ ಮಸಕು ಮಸಕಾಗಿಯೊ ಅಸ್ತವ್ಯಸ್ತವಾಗಿಯೊ ಪರಿಣಾಮ ಊನವಾಗುತ್ತದೆ. ಇದು ಕಡಿದಾದ ದಾರಿ. ಈ ದಾರಿಯಲ್ಲಿ ತೂಕ ತಪ್ಪದೆ ನಡೆಯಬಲ್ಲವರ ಕೃತಿಗಳಲ್ಲಿಯ ಕಲೆ ಕಂಡೂ ಕಾಣದ ಹಾಗಿರುತ್ತದೆ. ತನ್ನೆಡೆಗೆ ಲಕ್ಷ್ಯವನ್ನು ಸೆಳೆಯದೆಯೂ ಪರಿಣಾಮ ಸಾಧನೆಯಲ್ಲಿ ಗುಪ್ತವಾಗಿ ತನ್ನ ಕೆಲಸವನ್ನು ಮಾಡುತ್ತಿರುತ್ತದೆ.

ಚೆಕೊವ್ ನಾಟಕಕಲೆ ಈ ಜಾತಿಯದು. ಕಣ್ಣಿಟ್ಟು ನೋಡದ ಹೊರತು ಆತನ ನಾಟಕಗಳ ರಚನೆಯಲ್ಲಿಯ ಕೈವಾಡ ಕಾಣಿಸಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ನಾಟಕಗಳಲ್ಲಿ ಒಂದು ಕಥೆ ಇರುತ್ತದೆ. ಒಂದು ರೀತಿಯಲ್ಲಿ ಮೊದಲಾದ ಸನ್ನಿವೇಶ ಪರಿಸ್ಥಿತಿಯ ಮೂಲಕವೊ ಪಾತ್ರ ಸ್ವಭಾವಗಳ ಮೂಲಕವೊ, ಇವೆರಡೂ ಸೇರಿಕೊಂಡೊ ಪರಾಕಾಷ್ಠೆಯ ಒಂದು ವಿಷಮ ಸ್ಥಿತಿಯನ್ನು ಮಟ್ಟುತ್ತದೆ. ಅದಕ್ಕೆ ಒಂದಿಲ್ಲೊಂದು ಬಗೆಯ ಪರಿಹಾರ ಒದಗಿಯೊ ಒದಗದೆಯೊ ನಾಟಕ ಮುಕ್ತಾಯವಾಗುತ್ತದೆ. ಒಂದು ತೊಡಕನ್ನು ಕಟ್ಟಿ ಅದನ್ನು ಬಿಡಿಸುವುದು ಸಾಮಾನ್ಯವಾಗಿ ನಾಟಕದ ತಂತ್ರವಿಧಾನ. ಈ ವಿಧಾನದ ಅಂಗವಾಗಿ ಪಾತ್ರಗಳು ತಮ್ಮ ತಮ್ಮ ಸ್ವಭಾವಾನುಗುಣವಾಗಿ ಕಾರ್ಯ ಗಳನ್ನೆಸಗುತ್ತವೆ. ಈ ಕಾರ್ಯಪರಂಪರೆಯೇ ನಾಟಕದ ಕ್ರಿಯೆ. ಆದರೆ ಚೆಕೊವ್ ನಾಟಕಗಳಲ್ಲಿ ಕಥಾಭಾಗಕ್ಕೆ ಪ್ರಾಧಾನ್ಯವಿಲ್ಲ. ಎತ್ತಿ ಹೇಳಬಹುದಾದ ಹಾಗೆ ಯಾವ ಕ್ರಿಯಾವಿಶೇಷವೂ ನಡೆಯುವುದಿಲ್ಲ. ಪರಸ್ಪರ ವಿರುದ್ಧವಾದ ಹಿತಾಸಕ್ತಿಗಳ ಅಥವಾ ನಿಷ್ಠೆಗಳ ಸಂಘರ್ಷವಾಗಲಿ, ಅಂಥ ಸನ್ನಿವೇಶದಲ್ಲಿ ಅನಿವಾರ್ಯವಾಗುವ ಉತ್ಕಟಭಾವಾ ವಿಷ್ಕಾರವಾಗಲಿ, ಯಾವ ಬಗೆಯ ತೀವ್ರ ಮಸೆತ, ತಿಕ್ಕಾಟವಾಗಲಿ, ಇಲ್ಲಿ ಕಾಣಿಸಿ ಕೊಳ್ಳುವುದಿಲ್ಲ. ಆತನ ರಚನಾವಿಧಾನದಲ್ಲಿ ಘಟನೆಗಳಿಗೆ ಯಾವ ವಿಶೇಷ ಸ್ಥಾನವೂ ಇಲ್ಲ. ನಡೆದದ್ದೇ ಘಟನೆ ಅದನ್ನು ತೋರಿಸುವುದೇ ನಾಟಕ.

ಚೆಕೊವ್ ರಂಗಭೂಮಿಯ ಮೇಲೆ ಯಾವ ವಿಶೇಷವೂ ನಡೆಯದಾದರೆ ಅಲ್ಲಿ ನೋಡ ಬೇಕಾದ್ದೇನು, ತಿಳಿಯಬೇಕಾದ್ದೇನು ಎನ್ನುವ ಪ್ರಶ್ನೆ ಸ್ವಾಭಾವಿಕ. ನಾಟಕದಲ್ಲಿ ಯಾವುದು ಮುಖ್ಯ—ಪಾತ್ರಗಳು ಎಸಗುವ ಕ್ರಿಯೆಯೊ ಅವುಗಳ ಸ್ವಭಾವದರ್ಶನವೊ ಎಂಬುದರ ಬಗ್ಗೆ ಬೇಕಾದಷ್ಟು ಚರ್ಚೆ ನಡೆದಿದೆ. ಕ್ರಿಯೆ ಎನ್ನುವುದು ಆ ಪಾತ್ರದ ಸ್ವಭಾವ ವ್ಯಕ್ತವಾಗುವ ರೀತಿ ಎಂಬುದನ್ನು ಒಪ್ಪಿದರೂ ಸ್ವಭಾವ ವ್ಯಕ್ತವಾಗುವುದು ಕ್ರಿಯೆಯಲ್ಲಿ ಮಾತ್ರವಲ್ಲ ಎಂಬುದನ್ನೂ ಒಪ್ಪಬೇಕಾಗುತ್ತದೆ. ನಿಷ್ಕ್ರಿಯತೆಯೂ

ಒಂದು ಸ್ವಭಾವವಾಗಬಹುದು; ಅದರ ದಿಗ್ದರ್ಶನವೇ ನಾಟಕಕ್ಕೆ ವಿಷಯುವಾಗಬಲ್ಲದು. ಮೇಲಿನ ಪ್ರಶ್ನೆಯನ್ನು ಚೆಕೊವನ್ನೇ ಕೇಳಿದ್ದರೆ ಆತ ಹೇಳಬಹುದಾಗಿದ್ದ ಉತ್ತರವನ್ನು ಊಹಿಸುವುದು ಸಾಧ್ಯ ; ಘಟನೆಯೂ ಅಲ್ಲ, ಪಾತ್ರವೂ ಅಲ್ಲ. ಬದುಕು ನಡೆಯುವುದು ಹೀಗೆ ಎಂದು ತೋರಿಸುವುದು ಮುಖ್ಯ ಎಂದು ಹೇಳುತ್ತಿದ್ದ. ಆತನಿಗೆ "ಲೋಕಚರಿತ" ಮುಖ್ಯವಾಗಿದ್ದಿತು. ಅದನ್ನು ತೋರಿಸುವುದಕ್ಕೆ ಯಾವುದು ಅಗತ್ಯ ಎಷ್ಟು ಅಗತ್ಯ ಎನ್ನುವುದನ್ನು ಆತನ ಕಲಾವಿವೇಕ ನಿರ್ದೇಶಿಸಿದ ಹಾಗೆ ಎತ್ತಿಕೊಂಡು ತೋರಿಸಿದ. ಕೃತಕ ನಾಟಕೀಯತೆಯಿಂದ ಕೂಡಿದ ಉತ್ಕಟ ಸನ್ನಿವೇಶಗಳನ್ನು ಆತ ಯಾವಾಗಲೂ ದೂರವಾಗಿಸುತ್ತಾನೆ. ಮುಖ್ಯಪಾತ್ರಗಳ ಬದುಕಿನಲ್ಲಿ ನಡೆದ ಮಹತ್ತರ ಘಟನೆಗಳನ್ನು ಕೂಡ ಹಿನ್ನೆಲೆಯಲ್ಲಿಟ್ಟುಬಿಡುತ್ತಾನೆ. ನಾಟಕದಲ್ಲಿ ಅವುಗಳ ನಿರ್ದೇಶನ ತೀರ ಪ್ರಾಸಂಗಿಕವಾಗಿ ಬರುತ್ತದೆ: ಆತನ "ಕಡಲು ಕಾಗೆ" ನಾಟಕದಲ್ಲಿಯ ನೀನಾಳ ಬದುಕಿನಲ್ಲಿಯ ಘಟನೆಗಳ ಹಾಗೆ "ಚೆರ್ರಿ ತೋಟ" ದಲ್ಲಿಯ ರಾನ್ಯೆ ವಸ್ಕಾಯಾ ಪ್ರಿಯಕರನನ್ನು ಹಿಂಬಾಲಿಸಿ ಪ್ಯಾರಿಸ್‌ಗೆ ಹೋದ ಸಂದರ್ಭವಾಗಲಿ, ನೀರಿಲ್ಲಿ ಮುಳುಗಿ ಹೋದ ಮಗನ ಸಾವಿನ ವಿಷಯವಾಗಲಿ ನೇರವಾಗಿ ನಾಟಕದಲ್ಲಿ ಬರುವುದಿಲ್ಲ. ಅವೆಲ್ಲವುಗಳ ಪರಿಣಾಮವನ್ನು ಮಾತ್ರ ನಾಟಕ ಸನ್ನಿವೇಶದ ಪ್ರಯೋಜನಕ್ಕೆ ಬಳಸುತ್ತಾನೆ.

ಹಿಂದೆ ಏನೇನೊ ನಡೆದಿದೆ. ಮುಂದೆ ಇನ್ನೂ ಏನೇನೊ ನಡೆಯಲಿದೆ. ಮಧ್ಯಂತರ ಅವಧಿಯಲ್ಲಿ ಇಂಥಿಂಥ ಪಾತ್ರಗಳು ಈ ರೀತಿ ನಡೆದುಕೊಂಡವು ಎಂದು ತೋರಿಸುವುದು ಚೆಕೊವ್ ನಾಟಕದ ರೀತಿ, ಪಾತ್ರಗಳು ನಡೆದುಕೊಳ್ಳುವ ನುಡಿಯುವ ರೀತಿ- ಆ ಪಾತ್ರಗಳಿಗೆ ಸಂಬಂಧಿಸಿದ್ದಾಗಿರುತ್ತವೆ. ನಾಟಕಕಾರನು ನಡೆಸಿದ ಹಾಗೆ ನಡೆಯುವ, ನುಡಿಸಿದ ಹಾಗೆ ನುಡಿಯುವ ಬೊಂಬೆಗಳಾಗದೆ ಸ್ವತಂತ್ರ ವ್ಯಕ್ತಿತ್ವ ಪಡೆದು ತಮ್ಮ ತಮ್ಮ ಸ್ವಭಾವ, ಅನುರಕ್ತಿ, ಅಪೇಕ್ಷೆ, ಆಸಕ್ತಿಗಳಿಗೆ ತಕ್ಕಂತೆ ವ್ಯವಹರಿಸುತ್ತವೆ. ನಾಟಕಕಾರನಿಂದ ಯಾವುದೂ ಪೂರ್ವನಿಯೋಜಿತವಾಗಿಲ್ಲ ಎಂಬ ಭಾವನೆ ಉಂಟಾಗುತ್ತದೆ. ಇದರಿಂದಾಗಿ ಪ್ರತಿಯೊಂದು ಪಾತ್ರಕ್ಕೂ ಜೀವಕಳೆ ತುಂಬುತ್ತದಲ್ಲದೆ ವೈಶಿಷ್ಟ್ಯವೂ ಪ್ರಾಪ್ತವಾಗುತ್ತದೆ. ನಾವು ನೋಡುತ್ತಿರುವುದು ಪಾತ್ರಧಾರಿಗಳನ್ನಲ್ಲ. ಬದುಕಿನಲ್ಲಿಯ ವ್ಯಕ್ತಿಗಳನ್ನು ಎನ್ನುವ ನಂಬಿಕೆ ಉಂಟಾಗುತ್ತದೆ. ಕ್ರಮಬದ್ಧವಾಗಿ, ಉದ್ದೇಶಮುಖವಾಗಿ ಮಾತನಾಡದೆ ಸಮಯಕ್ಕೆ, ಸನ್ನಿವೇಶಕ್ಕೆ ಸ್ವಭಾವಕ್ಕೆ, ಮನಃಸ್ಥಿತಿಗೆ ಸರಿಯಾಗಿ ಪಾತ್ರಗಳು ಮಾತನಾಡುವುದರಿಂದ ಅನೇಕ ಸಲ ಮೊದಲ ನೋಟಕ್ಕೆ ವಿಸಂಗತಿ, ಗೊಂದಲ ಎನಿಸಿದರೂ ಯೋಚನೆ ಮಾಡಿದ ಹಾಗೆ ಬದುಕಿನಲ್ಲಿ ಮನುಷ್ಯ ನಡೆಯುವುದು ನುಡಿಯುವುದು ಹಾಗೆ ಎಂಬ ಅರಿವು ಮೂಡುತ್ತದೆ.ಬದುಕಿದ್ದ ಮನುಷ್ಯ ಸದಾಕಾಲವು ಎರಡುಪ್ರಪಂಚಗಳಲ್ಲಿ ವ್ಯವಹರಿಸುತ್ತಿರುತ್ತಾನೆ. ಒಂದು ನಮ್ಮ ಕಣ್ಣಿ ಕಾಣುವ ಹೊರಗಿನ ಪ್ರಪಂಚ. ಇನ್ನೊಂದು

ಆತನ ಒಳಗಿನದು. ಈ ಎರಡರ ಸಂಬಂಧಗಳೂ ಆತನ ನಡೆನುಡಿಗಳಲ್ಲಿ ವ್ಯಕ್ತವಾದಾಗ ಮಾತ್ರ ಒಂದು ಪಾತ್ರ ಜೀವಂತ ವ್ಯಕ್ತಿಯ ಪ್ರತಿಬಿಂಬವಾಗುತ್ತದೆ. ಈ ಅರಿವು ಚೆಕೊವನ ಪಾತ್ರನಿರ್ಮಿತಿಯ, ಪಾತ್ರದರ್ಶನದ ಮುಖ್ಯಾಂಶ. ಈ ರೀತಿಯಲ್ಲಿ ಕಲ್ಪಿತವಾಗಿ ಒಂದು ವಿಶಿಷ್ಟ ಸನ್ನಿವೇಶದಲ್ಲಿ ಆಯಾ ಪಾತ್ರಗಳು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತವೆ ಎನ್ನುವುದನ್ನು ತೋರಿಸುವುದೇ—ಎಂದರೆ ಬದುಕಿನಲ್ಲಿಯ ಒಂದು ಸನ್ನಿವೇಶವನ್ನು ಯಥಾವತ್ತಾಗಿ ಚಿತ್ರಿಸುವುದೇ ಆತನ ನಾಟಕಗಳ ಉದ್ದೇಶ. ಸಾಮಾನ್ಯ ಜೀವನದ ಯಥಾವತ್ ಚಿತ್ರಣವನ್ನೇ ಮುಖ್ಯೋದ್ದೇಶವನ್ನಾಗಿಟ್ಟುಕೊಂಡದ್ದರ ಪರಿಣಾಮವಾಗಿ ಚೆಕೊವಿನ ನಾಟಕಗಳಲ್ಲಿ ಎರಡು ಮುಖ್ಯ ಲಕ್ಷಣಗಳನ್ನು ನಾವು ಗುರುತಿಸಬಹುದು. ಮೊದಲನೆಯದಾಗಿ, ಅಸಾಮಾನ್ಯವಾದ. ಎಂದರೆ ಉತ್ಕಟವಾದ ಭಾವೋದ್ರೇಕಗಳಿಗೆ ಅವಕಾಶ ಕೊಡುವ, ಸನ್ನಿವೇಶಗಳು ಅಲ್ಲಿ ಅಪರೂಪ ಇಲ್ಲವೆಂದರೂ ಆದೀತು. ಹಾಗೆಯೇ ಅಸಾಮಾನ್ಯವಾದ ಎಂದರೆ ಬದುಕಿನಲ್ಲಿ ತೀರ ಅಪರೂಪಕ್ಕೆ ಸಿಕ್ಕಬಹುದಾದ ಧೀರ, ಗಂಭೀರ, ಬುದ್ಧಿಭಾವನೆಗಳ ವಿಚಾರದಲ್ಲಿ ಸಾಮಾನ್ಯನಕಿಂತಲೂ ಹೆಚ್ಚಿನ ಆಳ ಎತ್ತರ ಉಳ್ಳ ಪಾತ್ರಗಳೂ ಸಿಕ್ಕುವುದಿಲ್ಲ. ಚೆಕೊವ್ ನಾಟಕಗಳಲ್ಲಿ ಸನ್ನಿವೇಶಕ್ಕಿಂತ ಪಾತ್ರಗಳಿಗೆ ಹೆಚ್ಚಿನ ಪ್ರಾಧಾನ್ಯವಿದ್ದರೂ ಕ್ಲಿಟಿಮ್ನೆಸ್ಟ್ರಾ, ಹ್ಯಾಮ್ಲೆಟ್, ಪೇರ್ ಗಾಯಂಟ್‌ನಂಥ ಪಾತ್ರಗಳು ಕಾಣಿಸುವುದಿಲ್ಲ. ಅವನನ್ನು ಆಕರ್ಷಿಸುವುದು ಸಾಮಾನ್ಯರ ಪ್ರಪಂಚ. ಸನ್ನಿವೇಶಗಳೂ ಹಾಗೆಯೇ, ಪಾತ್ರಗಳೂ ಹಾಗೆಯೇ. ಆದರೆ ಸನ್ನಿವೇಶ ಸಾಮಾನ್ಯವಾಗಿದ್ದರೂ ವೈಶಿಷ್ಟ್ಯಪೂರ್ಣವಾಗಿರುತ್ತವೆ. ಎರಡರ ಚಿತ್ರಣವೂ ಯಥಾವತ್ತಾಗಿರುತ್ತದೆ ಎನ್ನುವುದು ಆತನ ತಂತ್ರಕ್ಕೆ ಸಂಬಂಧಿಸಿದ ವಿಷಯ. ಇವೆರಡರ ಸಂಗಮದಲ್ಲಿ ಮೂಡಿ ನಿಲ್ಲುವ ನಾಟಕದ ಪರಿಣಾಮ ಮಾತ್ರ ಅದ್ವಿತೀಯ. ಇಂಥ ಒಂದು ನಾಟಕ ಆತನ "ಚೆರ್ರಿ ಹಣ್ಣಿನ ತೋಟ".

ಈ ನಾಟಕದಲ್ಲಿಯ ಸನ್ನಿವೇಶವನ್ನು ಎರಡು ಮಾತುಗಳಲ್ಲಿ ಸಂಗ್ರಹಿಸಬಹುದು. ಮನೆತನಕ್ಕೆ ಪೂರ್ವಜರಿಂದ ಬಂದ ಚೆರ್ರಿ ತೋಟ ಸಾಲಕ್ಕೆ ಆಧಾರವಾಗಿದೆ. ಸಾಲದ ಮೇಲಿನ ಬಡ್ಡಿಯನ್ನೂ ಕೊಡದ್ದಕ್ಕೆ ತೋಟ ಹರಾಜಿಗೆ ಬಂದಿದೆ. ತೋಟವನ್ನು ಚಿಕ್ಕ ನಿವೇಶನಗಳನ್ನಾಗಿ ಮಾರ್ಪಡಿಸಿ ಮಾರಾಟ ಮಾಡಿದರೆ ಸಾಲ ತೀರುವುದಲ್ಲದೆ ಸುಖವಾಗಿ ಇರಬಹುದಾದಷ್ಟು ಹಣ ಉಳಿಯುತ್ತದೆ. ಉಳಿದ ಮಾರ್ಗ ಅದೊಂದೇ ಆದರೂ ಅದನ್ನು ಒಡತಿ ಒಪ್ಪುವುದಿಲ್ಲ. ತೋಟ ಮಾರಾಟವಾಗಿ ಆಕೆ ಮನೆ ಬಿಟ್ಟು ಹೊರಡಬೇಕಾಗುತ್ತದೆ. ಒಪ್ಪಿದರೂ ಆಯಿತು, ಒಪ್ಪದಿದ್ದರೂ ಆಯಿತು, ಒಂದು ಪರಂಪರೆಯ ಸಂಕೇತದಂತಿದ್ದ ಆ ತೋಟಕ್ಕೆ ನಾಶದ ಹೊರತು ಬೇರೆ ಗತಿ ಇಲ್ಲ ಎನ್ನುವುದರಲ್ಲಿ ಹಳೆಯದು ಇಲ್ಲದಾಗಿ ಅಲ್ಲಿಂದ ಮೊದಲಾಗಲಿದ್ದ ಹೊಸತರ ಸೂಚನೆ

ಯಲ್ಲಿ ನಾಟಕ ಮುಕ್ತಾಯವಾಗುತ್ತದೆ. ನಾಟಕದ ಕೊನೆಯಲ್ಲಿ ಕೇಳಬರುವುದು ಆ ಚೆಲುವಾದ ಮರಗಳನ್ನು ಕಡಿದು ಉರುಳಿಸುತ್ತಿದ್ದ ಕೊಡಲಿ ಏಟಿನ ಶಬ್ದ.

ಈ ತೋಟದ ಒಡತಿ ಒಬ್ಬ ವ್ಯವಹಾರಶೂನ್ಯ ಹೆಂಗಸು—ಮೆಡೇಮ್ ರಾನ್ಯೆವಸ್ಕಾಯಾ. ಆರು ವರ್ಷಗಳ ಹಿಂದೆ ಕುಡಿತದಿಂದ ಗಂಡ ತೀರಿದ ಒಂದು ತಿಂಗಳಿನಲ್ಲಿ ಮುಳುಗಿಹೋದ ಮಗುವನ್ನು ಕಳೆದುಕೊಂಡು ಇದೆಲ್ಲವೂ ತನ್ನ ಗುಪ್ತ ಪ್ರಣಯಕ್ಕೆ ಶಿಕ್ಷೆ ಎಂದು ದೇಶಾಂತರ ಹೋದವಳು. ಆಕೆಯಹಿಂದೆ ಪ್ರಣಯಿಯೂ ಹೋಗಿರುತ್ತಾನೆ. ತಮಗಾಗಿ ಎಂದು ಅಲ್ಲಿ ಕೊಂಡ ಮನೆ ಸಾಲಕ್ಕಾಗಿ ಕೈಬಿಡುತ್ತದೆ. ಇದ್ದುಬಿದ್ದುದೆಲ್ಲವನ್ನೂ ಪ್ರಣಯಿ ಕದ್ದು ಇನ್ನೊಬ್ಬಳ ಹಿಂದೆ ಹೋಗುತ್ತಾನೆ. ಆತ್ಮಹತ್ಯೆಯ ವಿಫಲ ಯತ್ನದ ನಂತರ ಮನೆಗೆ ಹಿಂದಿರುಗಿದಾಗ ಮನೆಯನ್ನೂ ತೋಟವನ್ನೂ ಮಾರಬೇಕಾದ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಮನೆಗೆ ಹಿರಿಯಳಾಗಿದ್ದ ಈಕೆ ಒಂದು ದೃಷ್ಟಿಯಿಂದ ಕೇಂದ್ರ ಪಾತ್ರ. ಈಕೆಯ ಸುತ್ತಲೂ ಸಂಬಂಧಿಕರಾಗಿ, ಸ್ನೇಹಿತರಾಗಿ, ಆಶ್ರಿತರಾಗಿ, ಆಳುಗಳಾಗಿ ಹತ್ತಾರು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಒಂದೊಂದು ಬಗೆಯಲ್ಲಿ ಆಕೆಯ ವಿಫಲ ನಿಷ್ಕ್ರಿಯತೆಯನ್ನು, ವ್ಯವಹಾರಶೂನ್ಯ ಭಾವುಕತೆಯನ್ನು, ವಿವೇಕದೂರವಾದ ವಿಚಾರಶೂನ್ಯತೆಯನ್ನು ಎತ್ತಿ ತೋರಿಸುತ್ತವೆ. ನಾಟಕದಲ್ಲಿಯ ರಾನ್ಯೆವಸ್ಕಾಯಾ ಪಾತ್ರ ಒಂದು ಬಗೆಯ ಮನೋವೃತ್ತಿಗೆ ಪ್ರತೀಕವಾಗಿದ್ದಂತೆ ಅದನ್ನು ರೂಪಿಸಿದ ಆಕೆಯ ಬಾಳು ಹಳೆಯದಾಗಿ ಅಳಿದುಹೋಗುತ್ತಿದ್ದ ಒಂದು ಜೀವನಕ್ರಮದ ಸಂಕೇತವಾಗಿದೆ. ಆ ಜೀವನ ಕ್ರಮದಲ್ಲಿ ವೈಭವವಿದೆ, ಧಾರಾಳವಿದೆ, ಹೃದಯದ ಔದಾರ್ಯವಿದೆ. ಆದರೆ ವಿವೇಚನೆಯ ಹಿಡಿತ, ಮಿತಿ ತಪ್ಪಿದಾಗ ಧಾರಾಳದ ವೈಭವ ತನ್ನ ನಾಶಕ್ಕೆ ತಾನೇ ಕಾರಣವಾಗುತ್ತದೆ. ಹಾಗೆ ಬದುಕಿದ ಮನೆತನಗಳಿಗೆ ಬಂದ ಹಾಗೆ ಅಂಥವಕ್ಕೆ ಸೇರಿದ ಚೆರ್ರಿತೋಟದ ವಿಸ್ತಾರ ವೈಭವಕ್ಕೂ ಕೊನೆಗಾಲ ಬಂದಿದೆ. ನಾಟಕದ ಮೊದಲಲ್ಲಿ ಹೂವು ತುಂಬಿದ ತೋಟದಲ್ಲಿ ನಾಟಕ ಮುಕ್ತಾಯವಾಗುವಾಗ ಆ ಮರಗಳನ್ನು ಕಡಿದುಹಾಕುತ್ತಿದ್ದ ಕೊಡಲಿ ಪೆಟ್ಟು ಕೇಳಬರುತ್ತದೆ. ಬೀಗ ಹಾಕಿಕೊಂಡು ಹೋದ ಮನೆಯಲ್ಲಿ ಮುನ್ನೋಟಕ್ಕೆ ಅವಕಾಶವೇ ಇಲ್ಲದೆ ಹಿಂದಿನದರ ಅವಶೇಷವಾಗಿ ಉಳಿದು ಅಳಿದು ಹೋಗಬೇಕಾದ ಫಿಯರ್ಸನ ಕೊನೆಯಲ್ಲಿಯೂ ಅದೇ ಧ್ವನಿ ಇದೆ. ಝಾರನ ಕಾಲದ ಶ್ರೀಮಂತ ಮನೆತನಗಳ ಕಾಲ ಮುಗಿದು ಬದುಕಿನ ಒಂದು ಹೊಸ ರೀತಿ ಏರ್ಪಾಡಾಗುವುದರಲ್ಲಿದ್ದ ಸಂಧಿಕಾಲದ ರಶಿಯಾ ದೇಶವೇ ಸಂಕೇತವನ್ನು ಪಡೆಯುತ್ತದೆ, ತೋಟದ ಈ ಕಥೆಯಲ್ಲಿ. ರಂಗಭೂಮಿಯ ಮೇಲೆ ಯಶಸ್ವಿಯಾಗಬೇಕಾದ ನಾಟಕ ಸಾಹಿತ್ಯ ಗುಣವುಳ್ಳದ್ದಾದರೂ ಆದೀತು, ಇಲ್ಲದ್ದಾದರೂ ಆದೀತು ಎಂದು ವಾದಿಸುವವರಿಗೆ ಒಂದು ನಾಟಕದಲ್ಲಿಯ ಸಾಹಿತ್ಯಗುಣ ಏನನ್ನು ಸಾಧಿಸಬಹುದು, ಎಷ್ಟು ಬಗೆಯ ಆಳದ ಪರಿಣಾಮವನ್ನುಂಟುಮಾಡಬಹುದು ಎಂಬುದಕ್ಕೆ ಶ್ರೇಷ್ಠ ನಿದರ್ಶನ ಈ ನಾಟಕ. ಇಲ್ಲಿಯ ನಾಟಕ ಕಾವ್ಯದ ಸಾಮರ್ಥ್ಯವನ್ನು ಪಡೆದಿದೆ.

ವೇಣುಮಾವ

ಪ. ಸೀತಾದೇವಿ

ವೇಣುಮಾವ ಕೃತಿಯ ಕುರಿತು ನಾಲ್ಕು ಮಾತು ಬರೆಯಬೇಕಾಗಿದೆ.

ನಮ್ಮ ಯಜಮಾನರು ನಾಟ್ಯಕಲೋಪಾಸಿಗಳಾಗಿದ್ದು, ಆಗಾಗ್ಗೆ ರಂಗಭೂಮಿಯ ಮೇಲೆ ಕುಣಿದು, ನನ್ನನ್ನೂ ಕುಣಿಸಿದ ದಿನಗಳು ಅವು. ಅದೇ ಸಮಯದಲ್ಲಿ ಅವರೂ ನಾನೂ ಐರೋಪ್ಯದ ಮುಖ್ಯ ಸಾಹಿತ್ಯಗ್ರಂಥಗಳನ್ನು (ಇಂಗ್ಲಿಷ್ ಭಾಷಾಂತರಗಳ ಮೂಲಕ) ತುಂಬಾ ಆತುರದಿಂದ ಓದುತ್ತಿದ್ದೆವು. ಮೊದಲೇ ನಾಟಕದ ಹುಚ್ಚು ಯಜಮಾನರಿಗೆ; ಅದರಲ್ಲೂ ಚೆಕಾವನ "The Cherry Orchard" ಮತ್ತು "Uncle Vanya" ಓದಿದನಂತರ"ಇಂತಹನಾಟಕಗಳು ಕನ್ನಡದಲ್ಲೇಕಿರಬಾರದು? ಅಂತಹ ನಾಟಕಗಳನ್ನು ನಮ್ಮ ಕನ್ನಡ ರಂಗಭೂಮಿಯಲ್ಲೇಕೆ ತರಬಾರದು?" ಎಂದು ಕೇಳುತ್ತಾ ಬಂದರು. ನಾನೂ ಈ ಎರಡು ನಾಟಕಗಳನ್ನು ಓದಿ ತುಂಬಾ ಆನಂದಪಟ್ಟೆನು. "Uncle Vanya"ಕ್ಕಿಂತ "The Cherry Orchard" ಎಷ್ಟೋ ಮೇಲಿನ ಅಂತಸ್ತಿನಲ್ಲಿದೆ ಎಂದು ಅಭಿಪ್ರಾಯಪಟ್ಟೆನು. ಅವರೂ ಒಪ್ಪಿದರು. ಆದರೆ ನಾಟಕಗಳನ್ನು ಬಹುಮಟ್ಟಿಗೆ ಪ್ರದರ್ಶನದ ದೃಷ್ಟಿಯಿಂದಲೇ ತಿಳಿದುಕೊಳ್ಳುತ್ತಿದ್ದ ಅವರು "The Cherry Orchard" ಪ್ರದರ್ಶನಕ್ಕೆ ಕಷ್ಟ. ಕೈಗೆ ಎಟಕದಂತಹ ಯಾವುದೋ ಒಂದು ಸೂಕ್ಷ್ಮ ಗುಣ ಅದರಲ್ಲಿದೆ. ಅದನ್ನು ಕನ್ನಡಿಸುವುದಕ್ಕೂ ತುಂಬ ಕಷ್ಟವಾದೀತು. ಆದರೆ "Uncle Vanya" ಹಾಗಲ್ಲ. ಪ್ರದರ್ಶನಕ್ಕೂ ಸುಲಭ, ಕನ್ನಡದಲ್ಲಿ ಬರೆಯುವುದಕ್ಕೂ ಸುಲಭ, ಪ್ರೇಕ್ಷಕರು ನೋಡಿ ತಿಳಿಯುವುದಕ್ಕೂ ಸುಲಭ. ಅದಲ್ಲದೆ, ನಾನೇನೋ ಆ "Uncle Vanya" ಪಾತ್ರಕ್ಕೆ ತುಂಬಾ ಮೋಹಿತನಾಗಿದ್ದೇನೆ. ನನ್ನಂತೆಯೇ ಜೀವನದ ಗುರಿ ತಪ್ಪಿದ ಜೀವ ಅದು" ಎಂದರು. ಅವರ ಕಡೆಯ ಮಾತನ್ನು ನಾನು ಒಪ್ಪಲಿಲ್ಲವಾದರೂ ಅವರ ಬಿಡುವಿಲ್ಲದ ಆಗ್ರಹದಿಂದ "Uncle Vanya" ವನ್ನು ೧೦-೧೫ ದಿನಗಳಲ್ಲಿ ಕನ್ನಡಿಸಿ ಮುಗಿಸಿದೆ. ಇದೇ "ವೇಣುಮಾವ"ನ ಹುಟ್ಟು.

ಆದರೆ ಒಂದಲ್ಲ, ಒಂದು ಕಾರಣದಿಂದಾಗಿ-ಮುಖ್ಯವಾಗಿ ಈ ನಾಟಕವನ್ನಾಡುವುದಕ್ಕೆ ಯೋಗ್ಯ ನಟಸಮೂಹದ ಅಭಾವದಿಂದಿರಬಹುದು—"ವೇಣುಮಾವ" ಇಂದಿನ ತನಕ ರಂಗಭೂಮಿಗೆ ಬಾರದೆಹೋದ. ಇದರಿಂದ ನನಗೇನೂ ವಿಶೇಷವಾದ ಬೇಸರವಾಗಿಲ್ಲ. ಯಜಮಾನರಿಗೂ ನಾಟಕದ ಹುರುಪು ಇಂದು ಬಹುಮಟ್ಟಿಗೆ . ಇಳಿದುಹೋಗಿದೆ. "ವೇಣುಮಾವ" ಬರೆದ ಹಾಳೆಗಳು ಮಾತ್ರ ಹಾಗೇಯೇ ಉಳಿದುವು. ನಮ್ಮ ಆತ್ಮೀ

ಯರಾದ ಶ್ರೀಮಾನ್ ವಿ. ಸೀತಾರಾಮಯ್ಯ ಮತ್ತು ಜಿ. ಪಿ. ರಾಜರತ್ನಂ ಇವರು ಮಾತ್ರ ಈ ನಾಟಕದಲ್ಲಿ ಆಸಕ್ತಿ ತೋರಿ ಅದು ಪ್ರಕಾಶಕ್ಕೆ ಬರುವಂತೆ ಪ್ರಯತ್ನಿಸ ಬೇಕೆಂದು ನಮ್ಮನ್ನು ಆಗಾಗ್ಯೆ ಒತ್ತಾಯಗೊಳಿಸುತ್ತಿದ್ದರು. ಶ್ರೀಮಾನ್ ಜಿ. ಬಿ. ಜೋಶಿಯವರಂತೂ ಈ ನಾಟಕವನ್ನು (ಓದುವ ಮೊದಲೇ!) ತಮ್ಮ ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟಿಸುತ್ತೇನೆಂದು ಎಂದೋ ಹಟತೊಟ್ಟಿದ್ದರು. ಆದರೆ ನಮ್ಮಿಬ್ಬರ ಮಾನಸಿಕ ಪ್ರವೃತ್ತಿಯೇ ಬೇರೆಯಾಗುತ್ತ ಬಂದು, "ವೇಣುಮಾವ" ಇಷ್ಟು ವರ್ಷವೂ ಅಜ್ಞಾತವಾಸದಲ್ಲೇ ಇರಬೇಕಾಯಿತು.

ಆದರೆ ಆರೆಂಟು ತಿಂಗಳ ಕೆಳಗೆ ಯಜಮಾನರಿಗೆ ಏನೋ ಒಂದು "ಬ್ರೈನ್ ವೇವ್" ಬಂದು ತಮಗೆ ಬಿಡುವಿದ್ದಾಗಲೆಲ್ಲ ಈ ನಾಟಕದ ಅಂದದ ಪ್ರತಿಯೊಂದನ್ನು ತಯಾರಿಸುತ್ತಿದ್ದರು. ಈ ಹೊಸ ಉದ್ಯಮವೇಕೆಂದು ಕೇಳಿದೆ, "ಅಚ್ಚಿಗಾಗಿ, ಶ್ರೀಮಾನ್ ಜೋಶಿಯವರಿಗೆ ಎಂದೋ ಮಾತುಕೊಟ್ಟಿದುಂಟು. ಅದನ್ನೀಗ ನೆರವೇರಿಸುತ್ತೇನೆ. ಅವರಿಗೆ ಯುಕ್ತ ಕಂಡರೆ ಅದನ್ನು ಪ್ರಕಟಿಸಲಿ" ಎಂದರು. ಈ ಕಾರಣದಿಂದಲೇ "ವೇಣುಮಾವ"ನ ಅಚ್ಚಾದ ಪ್ರತಿ ಈಗ ತಮ್ಮ ಕೈಯಲ್ಲಿದೆ!

"ವೇಣುಮಾವ"ಬರೆಯುವಾಗ ನನ್ನಗುರಿ ಒಂದೇ ಇತ್ತು. ಅದೇನೆಂದರೆ, ಯಜಮಾನರ ಆಗ್ರಹದ ಮೇರೆಗೆ, "Uncle Vanya" ದ ಜೀವಾಳವನ್ನು ಕೆಡಿಸದೆ, ನಮ್ಮ ರಂಗಭೂಮಿಯ ಮೇಲೆ ಅಭಿನಯಿಸಲನುವಾಗುವಂತೆ ಅದರ ಯೋಗ್ಯವಾದ ಕನ್ನಡ ರೂಪಕವೊಂದನ್ನು ತಯಾರಿಸುವುದು. ಈ ಗುರಿಯನ್ನು ಸಾಧಿಸುವುದರಲ್ಲಿ ನಾನು ಎಷ್ಟರ ಮಟ್ಟಿಗೆ ಕೃತಾರ್ಥಳಾಗಿದ್ದೇನೆಂದು ನನಗೆ ಹೇಳಲು ಬರುವುದಿಲ್ಲ. ಅಂತೂ ನಾಟಕವನ್ನು ಯಜಮಾನರ ಸ್ವಾಧೀನಪಡಿಸಿದ ನಂತರ ಅದರ ವಿಷಯ ನನಗಿದ್ದ ಹೊಣೆಗಾರಿಕೆ ಮುಗಿಯಿತೆಂದೇ ತಿಳಿದುಕೊಂಡಿದ್ದೇನೆ.

ಆದರೆ ಒಂದು ಮಾತು. ಈ ನಾಟಕದಲ್ಲಿ ಬರುವ ಕೆಲವು ಸನ್ನಿವೇಶಗಳೂ ಪಾತ್ರಗಳೂ ನಮ್ಮ ಹಿಂದೂ ಸಮಾಜಕ್ಕೆ ಸಹಜವಲ್ಲ ಎಂದು ಇದನ್ನು ಓದಿದ, ಅಥವಾ ಓದಿಸಿ ಕೇಳಿದ, ಕೆಲವರು ಆಕ್ಷೇಪಿಸಿದ್ದುಂಟು. ಸಾಧಾರಣವಾಗಿ ನಮ್ಮ ನಮ್ಮ ವೈಯಕ್ತಿಕ ಅನುಭವದ ಆಕಾಶದೊಳಗೆ ಏನಾದರೂ ಬಾರದಿದ್ದರೆ ಅದನ್ನು ಅಸಮಂಜಸ ಅಸ್ವಾಭಾವಿಕ ಎಂದು ನಾವು ಕರೆಯುವುದುಂಟು. ಕವಿ—ಅವನು ಯಾವ ದೇಶದವನೇ ಆಗಲಿ—ಒಂದು ಸನ್ನಿವೇಶವನ್ನು ಕಲ್ಪಿಸಿ ಅದಕ್ಕೊಪ್ಪುವಂತಹ ವ್ಯಕ್ತಿಗಳನ್ನು ರಚಿಸಿದ್ದರೆ, ಇಲ್ಲವೇ ಕೆಲವು ವ್ಯಕ್ತಿಗಳನ್ನು ಕಲ್ಪಿಸಿ ಅವನ್ನು ಒಂದು ಸಂದಿಗ್ಧ ಸನ್ನಿವೇಶದಲ್ಲಿಟ್ಟರೆ, ಆ ವ್ಯಕ್ತಿಗಳು ಯಾವ ಜನಾಂಗವಾದರೇನು? ಅವು ಅದೇ ಸನ್ನಿವೇಶದಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಾಗಿ ವರ್ತಿಸುತ್ತವೆ ಎಂದು ನಾನು ತಿಳಿದುಕೊಂಡಿ

ದ್ದೇನೆ. ಏಕೆಂದರೆ ಹೊರಗಿನ ಮಟ್ಟಿಗೆ ಮಾತ್ರ ನಾವು ಹಿಂದುಗಳು, ಮುಸ್ಲೀಮರು, ಇಂಗ್ಲಿಷರು, ರಶಿಯನರು, ಅಮೇರಿಕನ್ನರು ಎಂದು ತಿಳಿದುಕೊಂಡರೂ ನಮ್ಮ ಮಾನವತೆಯ ಮೂಲಾಧಾರದಲ್ಲಿ ನಾವೆಲ್ಲರೂ ಒಂದೇ. ನಾಝೀ ಜರ್ಮನಿ ಮತ್ತು ಬೊಲ್ಶೆವಿಕ್ ರಶಿಯಾದಲ್ಲಿ ನಡೆದ ಕೆಲವು ಘಟನೆಗಳು ನಮ್ಮ ಕಲ್ಪನೆಗೂ ಮೀರಿದ್ದಾಗಿದ್ದುವು. ಅಂತಹ ಬೀಭತ್ಸ ಘಟನೆಗಳು ನಮ್ಮ ಹಿಂದುಸ್ಥಾನದಲ್ಲಿ ತೀರಾ ಅಸಂಭವ, ಅವು ನಮ್ಮ ಸಂಸ್ಕೃತಿಗೆ ತೀರಾ ವಿರುದ್ಧ ಎಂದು ನಾವು ಮೊನ್ನೆ ಮೊನ್ನೆವರೆಗೂ ಹೇಳುತ್ತಿರಲಿಲ್ಲವೇ? ಆದರೆ ಇದೇ ಮಾತನ್ನು ನಾವು ಇಂದು ಹೇಳಲು ಶಕ್ಯವೇ?

ಈ ನಾಟಕದಲ್ಲಿ ನಾನು ತಿಳಿದ ಮಟ್ಟಿಗೆ ಕಲ್ಪನೆಗೆ ಮೀರಿದ ಯಾವ ಸನ್ನಿವೇಶವೂ ಇಲ್ಲ; ಯಾವ ಪಾತ್ರವೂ (ನಮ್ಮ ಸಮಾಜದ ಇಂದಿನ ಸ್ಥಿತಿಯಲ್ಲಿ) ಅಸ್ವಾಭಾವಿಕವಾಗಿಯಾಗಲೀ ಅಸಮಂಜಸವಾಗಿಯಾಗಲೀ ವರ್ತಿಸುವುದಿಲ್ಲ. ನಾವಿಂದು ನಮ್ಮ ಸಮಾಜದಲ್ಲಿ ಇಲ್ಲಿ ಚಿತ್ರಿತವಾಗಿರುವ ಪಾತ್ರಗಳಿಗಿಂತ ಅಸ್ವಾಭಾವಿಕವಾಗಿ ವರ್ತಿಸುವ ಎಷ್ಟೋ ವ್ಯಕ್ತಿಗಳನ್ನು ನಮ್ಮ ಕಣ್ಣಮುಂದೆಯೇ ನೋಡುತ್ತೇವಲ್ಲ! ಬಿಸಿಲುಗುದುರೆಯನ್ನು ಬೆನ್ನಟ್ಟಿ ಹೋಗುವ ನೀಲಕಂಠರಾಯನಂತಹ, ಜೀವನದ ಗುರಿ ತಪ್ಪಿ ಸಂಕಟಪಡುತ್ತಿರುವ ವೇಣುಮಾಧವನಂತಹ, ತನ್ನ ಜೀವನದ ಗುರಿಯೇನೆಂದು ತಿಳಿಯಲಾರದ ಡಾ. ಆನಂದರಾಯನಂತಹ, ಒಂದು ಅಸ್ವಾಭಾವಿಕ ಹೆಜ್ಜೆಯನಿಟ್ಟು ಅದನ್ನು ಹಿಂತೆಗೆಯಲಾರದ ಲೀಲಾದೇವಿಯಂತಹ, ಪ್ರೇಮಜೀವಿಯಾಗಿದ್ದರೂ ನಿರ್ಭಾಗ್ಯಳಾದ ಪದ್ಮಾವತಿಯಂತಹ, ಮೊದಲು ಯೋಗ್ಯ ಸ್ಥಿತಿಯಲ್ಲಿದ್ದು ಅನಂತರ ಬಡತನದ ಕಿರಿತನವನ್ನು ಹೊಂದಿದ್ದ ತಿಮ್ಮಪ್ಪಯ್ಯನಂತಹ ಎಷ್ಟು ವ್ಯಕ್ತಿಗಳು ನಮ್ಮ ಕಣ್ಣಮುಂದೆ ಇಂದು ಹಾದು ಹೋಗುತ್ತಿಲ್ಲ?

ಹೀಗೆ ಬರೆದುದರಿಂದ ನಾನು ವಿಮರ್ಶಕನ(ಳ) ಸ್ಥಾನವನ್ನು ಆಕ್ರಮಿಸಿದ್ದೇನೆಂದು ದಯವಿಟ್ಟು ತಿಳಿಯಬಾರದು. ಬೇರೆ ದೇಶದ, ಅನ್ಯ ಸಂಸ್ಕೃತಿಯ ಕೃತಿಯೊಂದನ್ನು ಆಯ್ದು, ಅದರಲ್ಲಿನ ಸನ್ನಿವೇಶ ಮತ್ತು ವ್ಯಕ್ತಿಗಳನ್ನು ನಮ್ಮ ಸಮಾಜದ ಸ್ಥಿತಿಗತಿಗೆ ಬಗ್ಗಿಸಿದ್ದಕ್ಕಾಗಿ ಬಂದ ಒಂದೆರಡು ಆಕ್ಷೇಪಣೆಗಳನ್ನು ಕುರಿತು ನನಗೆ ತಿಳಿದ ಕೆಲವು ಮಾತುಗಳನ್ನು ಹೇಳಿದ್ದೇನೆ, ಅಷ್ಟೇ.

ಪ. ಸೀತಾದೇವಿ ಬೆಂಗಳೂರಿನಲ್ಲಿ ಚಿತ್ರಾಪುರ ಮಠದಲ್ಲಿ "ಜ್ಞಾನೇಶ್ವರಿ" ಯ ವಿಷಯವಾಗಿ ಉಪನ್ಯಾಸ ಮಾಲೆಯನ್ನು ಕೈಗೊಂಡಿದ್ದರು. ಸಮಾರೋಪ ಸಮಾರಂಭದಲ್ಲಿ ಆಶೀರ್ವಾದ ಕೊಡಲು ಶ್ರೀ ಶ್ರೀ ಸದ್ಗುರು ಆನಂದಾಶ್ರಮ ಸ್ವಾಮಿಯವರನ್ನು ಆಹ್ವಾನಿಸಿದರು.ಅವರು ತಮ್ಮ ಭಾಷಣದಲ್ಲಿ(ತಾತ್ಪರ್ಯಮಾತ್ರ) ಪ. ಸೀತಾದೇವಿಯವರ ತಂದೆ ವಕೀಲರಾಗಿದ್ದು, ಪತಿ ಕಾಲೇಜು ಅಧ್ಯಾಪಕರಾಗಿದ್ದುದರಿಂದ ಅವರಿಗೆ ವಾಗ್ಜಾಲ ರಕ್ತಗತವಾಗಿ ಬಂದಿದೆ. ಆಧ್ಯಾತ್ಮದ ವಿಷಯವಾಗಿ ಮಾತನಾಡುವುದು ಹೆಂಗಸರಿಗೆ ಎರಡನೇ ಸ್ಥಾನ ಎಂದು ಭಗವದ್ಗೀತೆ ಅಂದರೂ ಉಪನಿಷತ್ತು ವೇದಾಧ್ಯಯನದಲ್ಲಿ ನಾವು ಕಂಡಂತೆ ತರ್ಕ–ಮೀಮಾಂಸೆ–ವಾಗ್ಯುದ್ಧ–ಇತ್ಯಾದಿ ವಿಷಯಗಳಲ್ಲಿ ಶ್ರೇಷ್ಠಸ್ಥಾನ ಪಡೆದ ಗಾರ್ಗಿ ಮೈತ್ರೇಯಿಯರಂತೆ ಪ. ಸೀತಾದೇವಿ ಇಂದು "ಜ್ಞಾನೇಶ್ವರಿ"ಯನ್ನು ತಿಳಿಯಾಗಿ ತಿಳಿಸಿದ್ದಾರೆ.

My Dear Shanthakka

A tearful Tribute from Yashodhara

An amateur palmist used to visit us occasionally. When he had nothing better to do he used to read our palms. He didn't seem to trust his own predictions much, but to us they were important. We believed he had the key to the door of our future and opened it a wee bit for us to have a glimpse within. It was only what he said to SHANTAKKA that we didn't take seriously. How could we considering in what straitened circumstances we were then? He had said that she would rule like a queen drawing hundreds of "courtiers" to her "durbar".

This was enough for us to tease Shanthakka about. She was so cast that it didn't need much provocation for us to rag her. She was timid, gullible and never retaliated. She seemed an easy target for practical jokes. As a tiny tot she was the most engaging plaything for her brother, who was only slightly older than her. Impatient with her childish lisp and himself proud of his newly acquired " a-r-r-r " he used to make her utter, under pain of punishment, complicated words with a liberal sprinkling of "r"s in them. When she burst into tears helplessly, his heart would melt and he would go out of his way to cheer her up

Once, no matter what he did, she was inconsolable. Finally, he decided to bribe her with sugar. Mother, who had tired of his frequent onslaughts on the sugar container, had hidden it somewhere. He took her little hand and went about the house to find something new to distract her with. In Father's room his eyes spotted a bottle of glistening crystals. "So, this is where Mummy has kept the sugar, and such excellent sugar too." he said.

Before long, he was feeding the little girl with pinches of

the stuff from the bottle. Tempted though he was himself fraternal love made him put her pleasure before his own.

But sister seemed rather ungrateful. She did not at all appreciate that gift of love. How could she when what he was pushing into her mouth was a chemical which Father had kept in his room for his photographic work?

A few years passed and Brother forgot her miraculous return to life. He had reached an age when boys get to be remarkably cruel and callous with scant respect for life or feelings; an age when throwing stones at a frog is sport and storing butterflies in matchboxes is a hobby. Kid sisters are stepping stones to show oneself at an advantage.
Both had been chosen for a Dance Item with a few others. He, and only he, knew that among the ankle bells laid out in a row there was a pair which made an awful noise jarring to the ears. He lovingly tied this very pair round her ankles. On the stage, where other bells tinkled charmingly her bells struck the audience with a distinct discord! If he had known then that those dancing, feet should one day, not only stop dancing, but would lose even their mobility' he would never have played this shabby trick on her. But no one, not even that palmist had foreseen this.

From babyhood, she grew up to be a quiet, shy girl, choosing to remain a wall-flower unlike her live-wire brother and older sister. But she was an artiste in her own right Whether she cut vegetables or made flower garlands, or She drew designs on the floor, her artistic talent spoke for itself To me she was a little mother. I was born nine years after her. Mother had little time for me, what with a large family and constant house guests. It was Shantakka who showered attentions on me, combing my hair, placing flowers on them, doing me up so that I was presentable in every way, and then perhaps, send me out to play or to a movie.

I grew deeply attached to her. She was the one with whom I used to share my joys and sorrows. It was to her that I first ran to show any new acquisition of mine. I became as fond of her as a small puppy. Once, when she called my name, I rolled down the stairs in my eagerness to reach her. Landing on my back, I looked into a pair of eyes staring at me with a mixed expression of anxiety and helpless laughter At the time of her marriage, access to her became diffcult. I was left alone to amuse myself. I tried to tag on to her husband to-be. But here matters were rather complicated Every time I was catching his twin-brother instead of him- they were both so much alike. After one such encounter I remember saying to myself with a sigh, I only hope she does'nt make the same mistake too!

On the day of her wedding I was shooed out of her room. They were decking her with the few jewels Father could afford then. Not to be out done myself, I peeled off all the silver and gold foil from the decorative pillars of the marriage pandal and fashioned out of them a ring, a neck-lace and ear-rings for myself Glittering in this gilded glory I ran and stood expectantly before her. Imagine my pained shock, when instead of admiring the bejewelled beauty, she gave me the only scolding I ever had from her. Choked with sobs I left the room, unable to figure out why she felt so outraged at my innocent bid to beautify myself.

It was not until many years later that I realised that she was painfully conscious of Father's inability to spare a single ornament for me to wear at her wedding The sight of my bare arms and neck had made her fretful. I had only sparked off her pent-up emotion by emphasising our plight by wearing foil as a substitute for gold- 'like a beggar on the street!, she had said in her hurt pride and humiliation.

With her penchant for cleanliness and beauty, she transformed her new home into a gleaming exhibition piece as though she had waved a magic wand over it. The annual Gowri-Ganesh festivals drew record crowds to her home because of her special decor on those occasions. She became "the apple of her father-in-laws's eye. When a barren member of the family conceived, he attributed it to the "luck' in the feet with which his dear "Shantam" had stepped into the house.

Fortunately, the old man did not live long to see that 'luck' turned into a lock that tied her down to a bed for decades together. But the disease which shackled her body could not fortunately reach her spirit.

She did not resort to pan chewing or any other Idle pursuits to occupy herself with. How she spent her time, nobody knew. But whoever knew her, always remembered her wide smile and a hearty 'Come ins' with which she always greeted her visitors Whether it was a cook, a flower-seller, or a serving maid, each one was made to feel important by her. She used to take so lively an interest in their problems that they invariably forgot to inquire after her health ; She had always some simple but rare gift, at least a bunch of flowers, ready for those who called on her. If they stayed for lunch, she'd plan a menu specially designed to please their palate. She had an uncanny knowledae of what things were best available where. She, who never stepped out of the threshould of her home, was also able to give lucid directions as to how to reach a certain shop or spot. She was a woman who always rose to the occassion. When I got twins, contrary to even my doctor's anticipation, we ran short of baby clothes, the seasonal rains causing further difficulty. Sitting in her bed, she stitched on day night, and laid out before me piles of the necessary layette, When I had to be hospitalised for a month, it was she who undertook to look after my year-old twins.

it is said one cannot settle a marriage alliance without wearing out a few pairs of footwear. She managed this feat from where she lay on her bed by helping to bring together two people past their prime into happy wedlock.

Her affectfon was not limited to humans only. A crow often perched on her window and became a great friend of hers. She'd chat with him, tease him, feed him with rarest delicacies, and sometimes scold him in mock anger. Once when she was rapt up in a prayer book she failed to notice him. When no amount of croaking on his part drew her attention, he hopped down and through the bars of the window started packing at her hair. It was not until half her plait got loosend did she turn to him with a chuckle.

Her ever active brain seemed to make up a lot for the loss of limbs. Her family left allthe thinking and planning to her and they were all content with only carrying out her orders. watching her rule thelarge household, I couldn't help remembering the palmists forecasts about her. Indeedshe was ru-ing like a queen, only instead of the throne there was the invalid chair .

Her popularity drew suchlarge crowds tothe hospital where she was admitted that theyhad to be regulated to go into her sick room in twos and threes. She rewarded each one of them with her ever ready smile. The doctor said she was the only patient he had who never poured into his ears harrowowing reports of a bad night.

She was solicitous about her visitors even at that stage of her sickness. If they came straight from their office or place of work, they had to be refreshed with instant coffee. The shelf beside her bed contained more eatables than medicines. Her happiest moments were when her dear and near ones sat in a circle round her bed enjoying a treat offered by her as though they were at a picnic. That was

her style of hospitality even in her sick room by her bed. A time came when she realised that the doctors might be fighting a losing battle. Somehow she seems to have succeeded in extracting from her doctor the confession that her chances of recovery were remote.

Then came the biggest challenge in her life -- to accept the inevitable. Could it have been easy who had always been bubbing with the joie de vivre? Even in her bitterest moments she had never wished for death to release her. She detested the very word and referred to it as ' bad news''. Death could not have stalked her at a more cruel juncture -- when her cup of happiness was about to flow over. Her son had newly acquired a fine ownership flat. Her only child's first baby was due to arrive on the world scene in a couple of months.

With a supreme effort she overcame her despair and called her son to her. She gave instructions as to how her personal effects were to be distributed. She told him to sell her jewellery to pay for the hospital bills. He was to take a more lucrative post, if he liked, in any part of the world since she would be no longer in his way. She suggested also names for baby to be born- a male name if he was to be a son, and a female name if she was to be a daughter. Her husband was to throw himself into ritual worship and the study of philosopay. She begged her son to look after him with tender care.

She said all this in an even tenor, in a voice devoid of all emotion. It was as though she was giving last minute instructions before leaving on a pilgrimage -- as simple as that.

After that she slowly sank. She still summoned that smile with the last ounce of her strength, and when she could not do even that, she showed her recognition with a glimmer

in her eyes. She waited for the end with the fund of patience and courage she was so rich in

At the funeral she was flooded with flowers. The hearse had to halt more than once to receive a floral tribute from a panting mourner. They had placed a crown of fragrant flowers on her head. As she rode, I remembered that palmist's prediction again and thought, "There the queen goes, in such regal grandeur".

We had to open her cupboard for the unenviable task of distributing her worldly possessions as she had desired, My eyes fell on a pile of note books full of copious notes made in her neat handwritting. So this was how she was spending her idle hours

I settled down in a chair to go through those books, and in an instant SHANTAKKA sprang to life on my lap.

She had prepared an album full of colour pictures of birds and flowers reserved perhaps for the grandchild she was not destined to see. while one book had details of homeopathic treatment, another offered home remedies along with a packet of dried herbs, roots and barks, all properly labelled. Normal blood pressure chart and addresses, craft and original notes complete with the necessary sketches went into one book. There were several note books full of recipes highlighted with pictures of the finished products, with a reminder on the hard cover of the notebook that the way to a man s heart was through his stomach. There were magic incantations to be repeated when stars turned malevolent. One book had devotional songs, another compositions in praise of various Deities, illustrated with appropriate pictures, still another short stories with a moral, dedicated to her favourite nieces and "any child who may be interested" There were notebooks also giving a list of our

festivals, the do's and don'ts in general, details of how certain domestic functions-- from the engagement ceremony to the coming child's cradling ceremony-- were to be arranged, a list of invitees for such functions, likely expenses of such functions addresses of the cook, flower-seller, priest and other essential services, hints on prenatal, post natal and baby care with special mention of morning sickness, difficult labour, bed-wetting etc. There was a notebook which contained a guide for the new housewife as regards the storing of provisions and the necessary quantity of each of them, another contained predications made by astrologers, still another was a collection of pithy jokes to light one's drab moments. There was a notebook aiso on practical philosphy with an assurance of peace of mind. There were copies of significant letters, chapters on household hints, a key to the mixing of primary colours, explanations for certain traditions, superstitions, going as far as to explain why orthodox Brahmins were tufts of hair and there were notebooks full of beautiful thoughts taken from all religions.

Was this an encyclopaedia? A miniature library?-- a treasure house of valuable information?-- a private archive of manuscript?-- a fountain of knowledge which generations who came after her could turn to, and get benefited by?

Hugging the books to my heart I realized she hadn't gone at all. Her personality exuded out of those precious books and guided us still--only, instead of her steady voice there was this handwriting.

I lingered longest over her book of quotations. She had copied golden sayings from the variousbooks she had read-- on the subject of life, marriage, children, God, Sex and death. Yes, about Death too. The very first quotation about it struck me with its poignancy. She had written- "Death causes a feeling of relaxation. It is hope that gene-

rates exhaustion." How mistaken I was to think that in her zest for life, she had spared no thought for Death.

Among the pages was an unused inland letter. Perhaps she had meant to write to some one. To whom did she want to write? What would she have said? Would she have emptied the turmoil of her heart into it?

And that blank book with only " GOOD THOUGHTS " written on top? Did she want to fill the book with more quotations and was unable to do so due to her sudden removal to the Hospital? Or, did she decide that the perfect "good thought" was not to think or say or write anything, and that silence was golden and a void more eloquent than any words? Was the blank book symbolic of an unperturbed mind, which any day is more worthwhile to have than volumes of good thoughts? What Why? Where? are the answers to these queries? Alas, we would never Know.....

Yashodhara

7th Juiy 1978
31, Patrakar, Bandra East,
Bombay 400 051.

P. Ramananda's fourth daughter Yashodhara wrote this after the death of his second daughter Shanthi in 1977.

ಹೆಣ್ಣು, ಹೆಣ್ಣೆಂದೇಕೆ ಹೀನೈಸುವರು ಈ ಕಣ್ಣು ಕಾಣದ ಜನರು. ನಮಗೆ ಜನ್ಮ ಇತ್ತವಳು ಹೆಣ್ಣಲ್ಲವೆ? ನಮ್ಮನ್ನು ಸಾಕಿಸಲಹಿದವಳು ಹೆಣ್ಣಲ್ಲವೆ? ನಮ್ಮ ಕೈಹಿಡಿದು ಬಾಳು ಹಸನು ಮಾಡಿದವಳೂ ಅವಳೇ ಅಲ್ಲವೆ? ವೇದ ಉಪನಿಷತ್ತಿನ ಕಾಲದಿಂದಲೂ ಹೆಣ್ಣಿಗೆ ದೇವತಾ ಸ್ಥಾನ ಕೊಟ್ಟಿರುವ ನಾವು ಆಕೆ ಪೂಜ್ಯಳು-ಮಾನ್ಯಳು ಎಂಬುದನ್ನು ಮರೆತರೆ ಭಾರತೀಯ ಸಂಸ್ಕೃತಿಯ ಅವನತಿಗೆ ನಾಂದಿ. ಎಂದು ನಮ್ಮ ಭಾರತದ ಸ್ತ್ರೀಯ ಕಣ್ಣೀರು ಈ ಭೂಮಿಯ ಮೇಲೆ ಬೀಳುತ್ತದೋ ಅಂದೇ ಭಾರತೀಯರಾದ ನಾವೇ ಮಾನವೀಯತೆಯಿಂದ ದೂರವಾಗಿ ಮೃಗಗಳಾದಂತೆ.

ಪ. ರಮಾನಂದರಾಯರ ಪತ್ರದ ಸ್ವಾರಸ್ಯಗಳು

ಪ. ರಮಾನಂದರಾಯರು ಬಂಧುಗಳಿಗೆ ಮಿತ್ರರಿಗೆ ಬರೆಯುತ್ತಿದ್ದ ಪತ್ರಗಳು ಬರೇ ಕ್ಷೇಮ-ಸಮಾಚಾರದ ವಿಷಯವಲ್ಲದೆ ಅನೇಕ ಸ್ವಾರಸ್ಯಸಂಗತಿಗಳನ್ನೂ ವಿಚಾರಪೂರ್ಣ ವಿಷಯಗಳನ್ನೂ ಬರೆಯುತ್ತಿದ್ದುದು ಗಮನಾರ್ಹ. ಅನೇಕ ಸಂಗತಿಗಳು ಮಕ್ಕಳು ಮೊಮ್ಮಕ್ಕಳಿಗೆ ಸ್ಫೂರ್ತಿ ನೀಡುತ್ತಿದ್ದ ಸುಭಾಷಿತವೂ ಹೌದು. ಕೊನೆಯ ದಿನಗಳಲ್ಲಿ ಅವರು ಬರೆದ ಪತ್ರಗಳಿಂದ ಮಾದರಿಯಾಗಿ ಕೆಲವನ್ನು ಇಲ್ಲಿ ಕೊಡಲಾಗಿದೆ.

Talking of using constantly tape-music reminds me of the statement that formerly we mostly tended to be book-worms but, now we are mostly Tape-worms........ I've to keep doing something or other as long as I happen to be alive........

*

We learnt about K. V. Iyer's demise only the other day. Iyer has been more than a Brother to me for more than 50 years....

*

I,m glad you've now very interesting text-Book in English "Arms and the Man". We had staged that in our Govt. College, Mangalore. I used to recite the whole of Gray's Elegy when I was a student. What a wonderful poem it is Do you know that Gray took 7 years to give the final shape to the poem trying to polish every line and every stanza in it? Who remembers his other poems now? But, this one stands as one of the best poems in English language for all time ...

*

After you and Indira finish B. A. I'll be quite happy to possess your poetry texts. For, even now, when I have nothing interesting to read I delight in reading poems which had enchanted me during my school and college days and still do so........

*

Dr. M. had stopped my snuff-taking about 10 months ago.... So, after my SUSHi, I am now without another beloved companion........ I am therefore now a sort of "ನಿರ್ಜೀವ ಜೀವಿ" a blob of existence........

Doctor says without my "Companions" I would live long.... I was about to tell him sans my snuff any period I live will necessary seem to me very long!

*

With the departure of all of you from here, I felt that a good portion of my life had left me........10-10-1979.
........Financially I am quite in the pink conditon, not red.... Please be writing- not only to me but also to the magazines and to please yourself too........

*

4th August.... it is a sad day-Shanti's demise was on that day-and-I remembered it with great mental pain........

*

My dear Lalita, while in all subjects you have scored 70 to 80% you have scored only 50% in Indian history. Although my main subject was chemistry I always delighted to read books on Indian History, even during my official career. I used to lecture on chemistry in my college and read at home delightedly books on Indian history. Poole's, 'The Medieveal Period in India' (Which meant mostly Mughal History), 'History of the Marathas', Todd's Annals of Rajasthan' and The Forgotten Empire' dealing with the history of Vijayanagar Kingdom, were some of the great favourites in Indian History. Altogether Indian History has always fascinated me........

*

Recently we had in Bombay Kannada Literary Conference here. Adya Rangacharya presided. Whar a number of old literary friends we met there! Rangacharya, Vyasaraya Ballal and 2 or 3 other friends actually hugged me with joy. M. V Kamath was also there.... Sri Virendra Hegde of Dharmasthal G. B. Joshi and so many others....How pleased and happy we were to see one another!!.

*

Anothe event of impo'tance here for me was the recent celebration of the Platinum Jubilee of the SVC Co-operative Bank and surprisingly I was asked to release the Biography of Shamrao Vittal Kaikini written specially for the occasion by Gourish Kaikini. In my speech, I had to say something about Shame Rao Vittal and some nice things about Gourish Kaikini, So, when I stepped down from the Platform Gourish came to me and touched my feet....

The dream I saw featured a Cricket Match

Mahesh Padukone

Ajja, as a child, opens the innings. While walking up to the pitch, he talks to his non-striker (most likely 'Annamma') "I learnt batting mostly by myself without any regular coaching', he says. (This perhaps signifies the loss of his mother at a very young age.) He takes strike and reaches 24(both his score and age), with only boundaries and sixer. At this juncture, the drinks interval is called and an ectoplasm shimmers out of the pavilion (perhaps God?) and advises him to play steadily. (At 24 Ajja had developed slight heart trouble it seems and was told not to strain himself)....Anyway he keeps batting steadily and confidently till 84when a bouncer on the leg side is too tempting for him. He hooks it lustily to long leg. I, as a spector, the only one--watch with bated breath....Another shimmering Form runs to catch the lofted shot and Ajja, presuming he would be out slowly starts walking back.... The catch is dropped to which he says in Konkani "Vanchlo!" (Escaped!). All along he has been losing his partners....Mukund Mam, Prabhakar Bappa, Gourishankar Bappa and so on....Mukund Mam he especially warns time and again "Play with a straight bat and ignore

out-going balls, as you have already snicked one and almost got caught''....

(Ajja was in the Hospital in his 84th year with bad blood circulation) Finally, at 86 Ajja faces uch a sizzler that before he realises the ball has been bowled, his stumps are shattered! He raises his bat congratulating the Bowler(God?) and starts the steady march back to the Pavilion to a standing ovation from there.... On the way, he turns to me and whispers'' That ball could have got even Bradman Out!''.... His human form gradually transforms itself into an ectoplasm and he disappears.... (every run he scoard symbolses his age altering his physical appearance....He came to the middle as a child, steadily looked a young man, then middle-aged and finally as he was when he died whe the Umpire's finger went up....).

(This interesting dream was dreamt by Mahesh soon after th Tragedy)

ಪ. ರಮಾನಂದರಾಯರು ನಿಧನ ಹೊಂದಿದ್ದು 13-2-1983. ಕೇವಲ 9ದಿನಗಳ ಮುಂಚೆ ಸುಂದರವಾದ ಅಕ್ಷರದಲ್ಲಿ ತಮ್ಮ ಪ್ರೀತಿಯ ಮರಿ ಮಗ ಅಂದರೆ ಮೊಮ್ಮಗ ಜಯದೇವರವರ ಮಗ ಅರ್ಜುನನಿಗೆ ಬರೆದ ಹಾಸ್ಯ ಪ್ರಧಾನ ಪತ್ರ.

My Dearest Arjun—

Once there was a person with a surname ''BIGGER'' Who was bigger, Mr. BIGGER or his unmarried sister? His unmarried sister because she was still BIGGER

Who was bigger, Mr. BIGGER, or his son, Master BIGGER? His son Master Bigger, because he was a LITTLE BIGGER

Who was bigger, MR. BIGGER or MRS. BIGGER?

Mrs. Bigger, because she BECAME BIGGER

Well, Dearest Child, The above is from a very funny book called ''Ring for Jeeves'' by wode house

Your Anu knows it. (Slightly Changed.)

You won't be able to understand that book now.

But you will be able to read it, understand it and enjoy it When you are BIGGER

With hearty kisses, Dearest Child

Your PIJJA

(Bandra, 4-2-1983)

ಬಾಲ್ಯದ ನೆನಪುಗಳು

ಚಿಕ್ಕಂದಿನಲ್ಲಿ ಹೆತ್ತವರ ದೇಶಭಕ್ತಿ-ಸ್ವಾತಂತ್ರ್ಯ ಹೋರಾಟ-ಪರದೇಶಿ ಬಟ್ಟೆಗಳಿಗೆ ಬಹಿಷ್ಕಾರ-ಇದೊಂದೂ ನಮಗೆ ಗೊತ್ತಾಗುತ್ತಿರಲಿಲ್ಲ. ಸಹಪಾಠಿಗಳು ಉಡುವ ರೇಶ್ಮೆ ವಸ್ತ್ರಗಳನ್ನು ಕಂಡು ಹೊಟ್ಟೆಕಿಚ್ಚು ಪಡುತ್ತಿದ್ದೆವು. ಏಕೆಂದರೆ ನಮಗೆ ದಪ್ಪವಾದ ವೈವಿಧ್ಯತೆ ಇಲ್ಲದ ಖಾದಿ ಬಟ್ಟೆಯ ಉಡುಪಿದ್ದುದು ಅಸಮಾಧಾನಕರವಾಗಿತ್ತು. ಶಾಲೆಯಲ್ಲಿ ಒಮ್ಮೆ ಸಿಲ್ಕ್‌ರಿಬ್ಬನ್ ಹಿಡಿದು ಕುಣಿಯುವ ಒಂದು ನೃತ್ಯ ಕಾರ್ಯಕ್ರಮದಲ್ಲಿ ನಾನು ತರಬೇತು ಪಡೆದಿದ್ದೆ. ಪ್ರದರ್ಶನದ ದಿನ ನನಗೆ ಹಸಿರು ಸಿಲ್ಕ್ ರಿಬ್ಬನ್ ತರಲು ಟೀಚರ್ ಹೇಳಿದ್ದಾರೆ ಎಂದ ತಕ್ಷಣ ತಂದೆಯವರು ಖಡಾ ಖಂಡಿತವಾಗಿ "ಸಾಧ್ಯವೇ ಇಲ್ಲ- ಪರದೇಶಿ ಬಟ್ಟೆಗೆ ಬಹಿಷ್ಕಾರವಿದೆ- ಸಿಲ್ಕ್ ರಿಬ್ಬನ್ ಪರದೇಶಿ-ಸ್ವದೇಶಿಯಾದರೆ ಕೇಳು ಇಲ್ಲದಿದ್ದರೆ ನೀನು ನರ್ತಿಸ ವುದು ಬೇಡ"ಎಂದು ಆಜ್ಞಾಪಿಸಿದರು. ಅಂದು ನಾನು ಅತ್ತಿದ್ದೇ ಅತ್ತಿದ್ದು-

---

ನಾವು ದೀಪಾವಳಿ ಸಮಯ ಪಟಾಕಿ-ನಕ್ಷತ್ರಕಡ್ಡಿ-ಹಗಲುಬತ್ತಿ ಇತ್ಯಾದಿ ಅಂಗಡಿಯಿಂದ ಕೊಂಡುಕೊಳ್ಳುತ್ತಿರಲಿಲ್ಲ. ರಸಾಯನ ಶಾಸ್ತ್ರಜ್ಞರಾದ ಅಪ್ಪರು ತಾವೇ ಅವೆಲ್ಲವನ್ನೂ ಮಾಡಿ ನಮಗೆ ಕೊಡುತ್ತಿದ್ದರು. ಆದರೆ ಆ ರಾಸಾಯನಿಕ ಮದ್ದನ್ನು ದಿನಪತ್ರಿಕೆಯನ್ನು ಹರಿದು ಅದರೊಳಗೆ ತುಂಬಿ-ಸುತ್ತಿಟ್ಟು ನಮಗೆ ಉರಿಸಲು ಹೇಳುತ್ತಿದ್ದರು. ನಕ್ಷತ್ರಕಡ್ಡಿಗಳಂತೆ ನಕ್ಷತ್ರಗಳೇ ಬಂದರೂ ಹಗಲುಬತ್ತಿಯಂತೆ • ಬಣ್ಣಬಣ್ಣದ **Flames** ಬಂದರೂ ಪಟಾಕಿಯಂತೆ ಅವು ಸದ್ದು ಮಾಡಿ ಸಿಡಿಲಿದರೂ ನಮಗೆ ಆ ವಸ್ತುಗಳು ಬಣ್ಣ ಬಣ್ಣದ ಕಾಗದಗಳಲ್ಲಿ ಸುತ್ತಿಲ್ಲ ಎಂಬ ಅಸಮಾಧಾನವಿತ್ತು. ಆದರೂ ದೀಪಾವಳಿಗೆ ಅವರು ನಮಗೆ ಕೊಡುತ್ತಿದ್ದ ಬೆಂಕಿ ಆಟಗಳು ಒಂದು ದೊಡ್ಡ ಬುಟ್ಟಿ ತುಂಬಾ ಇರುತ್ತಿದ್ದುವು. ಮನಸ್ಸಿಗೆಬೇಕಾದಷ್ಟು ಉರಿಸಿ ಆನಂದಿಸಬಹುದಾಗಿತ್ತು. ಆಸೆಯ ಪೂರ್ಣಪೂರ್ತಿಕೆ!

"ಎಲ್ಲರೂ ಮನೆ ಕಟ್ಟಿಸುತ್ತಾರೆ-ದೊಡ್ಡ ದೊಡ್ಡ ಬಂಗ್ಲೆ ಕಟ್ಟಿಸುತ್ತಾರೆ, ಆದರೆ ಬರೆಯೋದಕ್ಕೆ ಒಂದು ಮೇಜು-ಮೇಜಿಗೆ ಜಾಗ-ತಕ್ಕ ಸೌಕರ್ಯ ಒದಗಿಸುವುದಿಲ್ಲ" ಎಂಬುದಾಗಿ ಅಪ್ಪ ಯಾವಾಗಲೂ ಗೊಣಗುವ ವಿಷಯವಾಗಿತ್ತು. ಸಾಮಾನ್ಯವಾಗಿ Dining Table ಬರೆಯುವುದಕ್ಕೆ ಉಪಯೋಗಿಸುತ್ತಿದ್ದರು. ಅವರಿಗೆ ಬರೆಯಲು ಕಾಗದ-ಪೆನ್ನು-ಇಂಕು ಎಲ್ಲ ಸದಾಸಿದ್ಧವಿದ್ದರೆ ಅತಿ ಆನಂದ. Penಗೆ ink ಹಾಕುವುದೋ

Refill ಹಾಕುವುದೂ ಅವರ ಇಷ್ಟದ ಕೆಲಸ ink ಇಲ್ಲದ Pen-Refillಇಲ್ಲದ Pen ಕಂಡರೆ ಅವರಿಗೆ ಆಗುತ್ತಿರಲಿಲ್ಲ. Pencilಗಳನ್ನು ಯಾವಾಗಲೂ ತೀದು ತಯಾರಾಗಿಡುತ್ತಿದ್ದರು. Paper ಬೇಕಾದರೆ ಅಥವಾ ಖಾಲಿ ಕಾಗದ ಬೇಕಾದರೆ ಅವರಲ್ಲಿ ಯಾವಾಗಲೂ ಬೇಕಾದಷ್ಟು Stock ಇದ್ದು ನಮಗೆ ನಿರಂತರ ಸಹಾಯ. Stationaryನಲ್ಲಿ ಒಂದು ಗುಂಡುಸೂಜಿ-ಒಂದು Gemclip ಒಂದು Stapler ಏನೂ ಕೇಳಿದರೂ ಅವರಲ್ಲಿ ಸಿದ್ಧ-ಕೊಡಲು ಆನಂದ-Carbon Paper ಕವರ್‌ಗಳು ಕಾಗದಕ್ಕೆ ಕೊರತೆಯೇ ಇಲ್ಲ. ಅವರ 60ನೇ ಹುಟ್ಟಿದ ಹಬ್ಬಕ್ಕೆ ನಾವು ಮಕ್ಕಳೆಲ್ಲ ಸೇರಿ ಅವರ ಆಸೆಯಂತೆ Baby Hermes Typewriter ಉಡುಗೊರೆಯಾಗಿ ಕೊಟ್ಟದ್ದೆವು. ಅದ ಯಾವಾಗಲೂ ಮೇಜಿನ ಮೇಲೆ ಸಿದ್ಧ!

ನಮ್ಮ Middle School ವಿದ್ಯಾಭ್ಯಾಸ ಆಗುತ್ತಿರುವಾಗ ಅಪ್ಪ ಹತ್ತಿರ ಬಂದು ಎಲ್ಲವನ್ನು ವಿಚಾರಿಸಿ ನಾವು ಬರೆಯುತ್ತಿದ್ದ Mapsಗಳಿಗೆ ತಾವೆ ಕೂತು ಚೌಕಟ್ಟು ಹಾಕಿ ನಮಗೆ ಸಹಕಾರ ಕೊಡುತ್ತಿದ್ದುದು ಎಂದೂ ಮರೆಯುವುದಿಲ್ಲ. ಮಲಗುವ ಮುಂಚೆ ಅಮ್ಮ ಒಂದು ದೊಡ್ಡ ಪಾತ್ರೆಯಲ್ಲಿ ಮನೆಯಲ್ಲೇ ಕರೆದ ಹಾಲು ತಂದಿದುತ್ತಿದ್ದರು. ಅಪ್ಪನು ನಮ್ಮನ್ನೆಲ್ಲ ಸುತ್ತಲೂ ಕೂಡಿಸಿ ಲೋಟಗಳಲ್ಲಿ ಹಾಲು-ಸಕ್ಕರೆ-Chocolate ಬೆರಸಿ ನಮಗೆ ಒಬ್ಬೊಬ್ಬರಿಗೆ ಕೊಟ್ಟುಮಲಗಿಸುತ್ತಿದ್ದರು.ಒಮ್ಮೊಮ್ಮೆ ನಾವು ನಿದ್ದೆ ಬಂದು ಎಲ್ಲಿಯೋ ಅಲ್ಲಲ್ಲೆ ಮಲಗಿದರೂ ಗದರಿಸಿ ಎಬ್ಬಿಸುತ್ತಿರಲಿಲ್ಲ. ತಾವೇ ಎತ್ತಿಹಿಡಿದು ನಮ್ಮ ನಮ್ಮ ಹಾಸಿಗೆಗಳಲ್ಲಿ ಮಲಗಿಸುತ್ತಿದ್ದುದು ಮರೆಯಲು ಸಾಧ್ಯವೇ? ನಾನಂತೂ ಅವರು ನನ್ನನ್ನು ಎತ್ತಿಕೊಳ್ಳಬೇಕೆಂದು ಅವರ ಪ್ರೇಮದ ಬಾಹುಗಳಲ್ಲಿ ಮಲಗಬೇಕೆಂಬ ಅಭಿಲಾಷೆಯಿಂದ ಕಳ್ಳ ನಿದ್ರೆಯನ್ನು ನಟಿಸುತ್ತಿದ್ದೆ! ನನಗೆ 8–10 ವರ್ಷ ವಯಸ್ಸಾದರೂ ಎಬ್ಬಿಸದೆ ನನ್ನನ್ನು ಎತ್ತಿ ನನ್ನ ಹಾಸಿಗೆಮೇಲೆ ಮಲಗಿಸಿದಾಗ ಅವರ ಪ್ರೇಮದ ಬಾಹುಗಳ ಭದ್ರಕವಚದೊಳಗೆ ಅಪ್ಪನ ವಾತ್ಸಲ್ಯವನ್ನು ಸವಿಯುತ್ತಿದ್ದೆ. ನಿದ್ರೆಯೆಂಬುದು ಆಗ ವೈಭವವೆಂದೆನಿಸುತ್ತಿತ್ತು.

ಬೆಂಗಳೂರಿನಲ್ಲಿನ 5ವರ್ಷಗಳ ಅಪ್ಪ–ಅಮ್ಮನ ಸಂಸಾರ ಮಲ್ಲೇಶ್ವರದ ಆನಂದಾಶ್ರಮ ಕಟ್ಟಡದಲ್ಲಿತ್ತು. ಆಗ ಅಪ್ಪ ಕೆನರಾ ಯೂನಿಯನ್‌ನ ಪ್ರೆಸಿಡೆಂಟ್ ಆಗಿದ್ದರು. ಅಮ್ಮನೂ ಅಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಯಾವುದಾದರೂ ಒಂದು ಒಳ್ಳೆಯ ಸಹಾಯಾರ್ಥ ಕಾರ್ಯಕ್ರಮ ಏರ್ಪಡಿಸಿ ಧನ ಸಂಗ್ರಹ ಮಾಡುವ ಯೋಜನೆಯಾಯಿತು. ಟಿಕೇಟು ಮಾರಲು ಹೋದರೆ ಜನರಿಂದ ನಿರೀಕ್ಷಿಸಿದ ಸಹಕಾರ, ಸಹಾಯ ದೊರಕಲಿಲ್ಲ. ಆಗ ಅಮ್ಮಅಂದರು "ನಾನು"

ನೃತ್ಯ ಕಾರ್ಯಕ್ರಮ ಕೊಡುತ್ತೇನೆ ಅಂತ ಘೋಷಿಸಿ–ಎಲ್ಲರೂ ತಾನು ಮುಂದೆ ನಾನು ಮುಂದೆ ಎಂದು ಟಿಕೆಟ್ ಕೊಂಡುಕೊಳ್ಳುತ್ತಾರೆ-ನೋಡಿ!

ನನ್ನ ಹಿರಿಯ ಮಗ ಜಯದೇವನ ಉಪನಯನಕ್ಕಾಗಿ ನಾವೆಲ್ಲ ಒಂದು Special Van ನಲ್ಲಿ ಶಿರಾಲಿ ಮಠಕ್ಕೆ ಹೊರಟಿದ್ದೆವು. ಸಂಜೆಯ ವೇಳೆ ನಾವು ಶಿರಾಲಿ ತಲುಪಬೇಕಾಗಿತ್ತು. ಆದರೆ ಸಂಜೆಯ ವೇಳೆ Vanನ Exhaust Pipe Burst ಆಗಿ ವಾಹನವನ್ನು ಗಂಟೆಗೆ 10 ಮೈಲಿನಂತೆ ಚಲಿಸಬೇಕಾದ ಸಂದರ್ಭ ಬಂತು. ದಾರಿಯಲ್ಲಿ ಒಂದು ದೊಡ್ಡ 16 ಅಡಿ ಪಟ್ಟೆಹುಲಿ ಕೂತಿದ್ದನ್ನು ನಾವು ದೂರದಿಂದ ನೋಡಿದೆವು. ಅದು ನಮ್ಮ Vanನ್ನು ಅಟ್ಟಿಸಿಕೊಂಡು ಬಂದರೆ! ದೇವರೇ ಗತಿ! ಅಮ್ಮ ಕೂಡಲೇ "ರಾಮನಾಮ ಜಪಿಸಿ" ಅಂದರು. ಕಣ್ಣು ಮುಚ್ಚಿ ನಾವು ಹರಿಸ್ಮರಣೆ ಮಾಡುತ್ತಲಿದ್ದೆವು. Van ಹುಲಿಯ ಹತ್ತಿರ ಬಂದಾಗ ಅದು ಮೆಲ್ಲಗೆ ಎದ್ದು ದಾರಿಬಿಟ್ಟುಕೊಟ್ಟು ಗಂಭೀರವಾಗಿ ತಿರುಗಿ ಕಾಡಿನೊಳಗೆ ನಡೆದು ಹೋಯಿತು!

ನನಗೆ ಮದುವೆಯ ವಯಸ್ಸು ಬಂದಾಗ ನಾನು ಓದುತ್ತಿರುವ ಮೇಜಿನ ಬಳಿಬಂದುಕೂತು "ಚಂದಮ್ಮ-ನಿನಗೆ ಕೆಲವು ವರಗಳನ್ನು ನೋಡುತ್ತಲಿದ್ದೇವೆ- ನಿನಗೆ ಒಪ್ಪಿಗೆಯಾದರೆ ತಿಳಿಸು?ಒಬ್ಬನು ಸ್ಫುರದ್ರೂಪಿ-Ramon Novarro ಥರ ಇದ್ದಾನೆ-ಇನ್ನೊಬ್ಬನ ಕುಟುಂಬ ಬಹಳ ಒಳ್ಳೆಯದು-- ಮತ್ತೊಬ್ಬನು Sports Man-Tennis Champion! ಇನ್ನೊಂದು ಕಡೆ ಶ್ರೀಮಂತ ಸಂಬಂಧ-ವರ ತುಂಬಾ ಒಡವೆ ತರಲು ಒಪ್ಪಿದ್ದಾರೆ.... ಇತ್ಯಾದಿ...." ಅವರು ಹೇಳಿದ ಯಾವ ನೆಂಟಸ್ತಿಕೆಯನ್ನೂ ನಾನು ಒಪ್ಪುತ್ತಿರಲಿಲ್ಲ. ನನ್ನ ನಿರಾಕರಣೆ ಅವರಿಗೆ ಬೇಸರ ಅಥವಾ ನಿರಾಸೆ ಆಗುತ್ತಿರಲಿಲ್ಲ-ಮಕ್ಕಳ ಮನಸ್ಸನ್ನು ಅರಿತ ಪ್ರೇಮಮಯಿ ತಂದೆ.

ಅಪ್ಪನಿಗೆ ಏನೇ ಇರಲಿ, ಪ್ರತಿದಿನ ದಿನಕ್ಕೆ ಮೂರು ಸಲವೋ ನಾಲ್ಕು ಸಲವೋ ರೇಡಿಯೋ ವಾರ್ತಾ ಪ್ರಸಾರ ಕೇಳಲೇಬೇಕಾಗಿತ್ತು. ಅವರ ಈ ನಿಯಮಕ್ಕನುಗುಣ ವಾಗಿ ನಮ್ಮಲ್ಲಿರುವಾಗ ನನ್ನ ಚಿಕ್ಕ ಮಗ ಕೋಣೆಕೋಣೆಗಳಲ್ಲಿ Radio ಮತ್ತು Amplifiers ಜೋಡಿಸಿಟ್ಟಿದ್ದ-ಅವರು ಎಲ್ಲಿದ್ದರೂ News ಕೇಳಲು ತೊಂದರೆ ಯಾಗದಿರಲೆಂದು.

ನನ್ನ Middle School ದಿನಗಳಲ್ಲಿ ನನ್ನ ತಮ್ಮನಿಗೂ ನನ್ನ ಇತರ ಆಪ್ತ ಸಹ ಪಾಠಿಗಳಿಗೂ ಶಾಲಾ ಸ್ಪರ್ಧೆಗಳಲ್ಲಿ Prize ಸಿಕ್ಕಿದಾಗ ನನಗೊಬ್ಬಳಿಗೆ ಸಿಗದೆ ಇದ್ದುದನ್ನು ಅಪ್ಪ ಅರಿತು–ನಾನು ಮನೆಗೆ ಬಂದ ತಕ್ಷಣ "ಚಂದಮ್ಮ ನಿನಗೊಂದು ಬಹುಮಾನ ಕಾದಿದೆ!" ಎಂದು ಒಂದು Packet ನ್ನು ತೋರಿಸಿದರು. ಒಳ್ಳೆಯ ಅಂದದ ಬಣ್ಣದ ಕಾಗದದಲ್ಲಿ ಸುತ್ತಿಟ್ಟು ಬಣ್ಣದ ದಾರಗಳಿಂದ ಕಟ್ಟಿದ್ದ ಆ

Packetನ್ನು ಆತುರದಿಂದ ಬಿಚ್ಚಿ ನೋಡಿದರೆ "Alice in Wonder Land ಪುಸ್ತಕ! ಒಳಗಿನ ಪುಟದಲ್ಲಿ ಅಪ್ಪನ ಹಸ್ತಾಕ್ಷರಗಳಲ್ಲಿ ನನಗೆ ಅವರು ಪ್ರೀತಿಯ ಆಶೀರ್ವಾದಗಳೊಂದಿಗೆ ಕೊಟ್ಟ ಕಾಣಿಕೆ! ಶಾಲೆಯಲ್ಲಿ ಬಹುಮಾನ ಬಾರದ ಬೇಸರ ಒಂದು ಕ್ಷಣದಲ್ಲಿ ಮಾಯವಾಯಿತು! ನನ್ನ ಮನಸ್ಸನ್ನು ಅರಿತ ಅವರ ಸ್ವಭಾವದ ಹಿರಿಮೆ ಎಂತಹದು! ಮರೆಯಲಾಗದ ಸಂದರ್ಭ.

ಇನ್ನೊಂದು ಸಂದರ್ಭದಲ್ಲಿ ಅವರ ಸ್ವಭಾವ ಇತರರ ಮನಸ್ಸನ್ನು ಅರಿತು ಸಮೃದ್ಧಿ ಕೊಡುವಂತಹದು– ನೃತ್ಯದಲ್ಲಿ ಆಸೆಪಟ್ಟ ನಾನು Filmsನಲ್ಲಿ Fred Astaire ಮತ್ತು Ginger Rogers Tap Dancing ಮಾಡುವುದನ್ನು ನೋಡಿ ಮೈಮರೆಯುತ್ತಿದ್ದೆ. ಆ ನರ್ತನ ಅಪ್ಪನಿಗೂ ತುಂಬಾ ಆಕರ್ಷಣೀಯವಾಗಿತ್ತು. ಹರ್ಷದಾಯಕವಾಗಿತ್ತು. ಒಮ್ಮೆ ನಾನು ಅವರೊಂದಿಗೆ Tap Dancing ಕಲಿತುಕೊಳ್ಳಬೇಕೆಂಬ ನನ್ನ ಆಸೆಯನ್ನು ವ್ಯಕ್ತಪಡಿಸಿದೆ–ಕೆಲ ಕಾಲ ಕಳೆಯಿತು. ಒಂದು ದಿನ ಟಪಾಲಿನಲ್ಲಿ ಒಂದು ಪಾರ್ಸೆಲ್ ಬಂತು. ತೆಗೆದು ನೋಡಿದರೆ Tap Dancing ಪಾಠಗಳನ್ನು ವಿವರಿಸುವ ಒಂದು ಕಿರು ಪುಸ್ತಕ ಹಾಗೂ ಒಂದು ಜೊತೆ Tap Dancing Shoes ! ಕಲಾ ಪ್ರಪಂಚದ ನಮ್ಮ ಯಾವ ಆಸೆಯನ್ನೂ ಅವರು ಅದುಮಿ ಹಿಡಿಯಲಿಲ್ಲ-ಸ್ವೇಚ್ಛೆಯಾಗಿ ಪಡೆಯಲು ಸಹಕರಿಸುತ್ತಿದ್ದರು ಇಂತಹ ತಂದೆ ಸಾಮಾನ್ಯರೇ?.

ಅಪ್ಪನಿಗೆ ಇತರರ ಬೇಕು-ಬೇಡಗಳು ಸೂಕ್ಷ್ಮವಾಗಿ ಯಾವಾಗಲೂ ಗೊತ್ತಾಗುತ್ತಿತ್ತು ಇತರರಿಗೆ ಸೌಕರ್ಯ ಒದಗಿಸುವುದು ಅವರ ಹುಟ್ಟುಗುಣವೇ ಎನ್ನಬೇಕು–ಉದಾಹರಣೆಗೆ ಬಚ್ಚಲು ಮನೆಗೆ ಅವರು ಕೈ ತೊಳೆಯಲು ಹೋದರೆ ತಾವು ತೊಳೆದಾದ ಮೇಲೆ ಬರುವವರಿಗೆ ಚೊಂಬಿನಲ್ಲಿ ನೀರು ತುಂಬಿ ಸಿದ್ಧಪಡಿಸುತ್ತಿದ್ದರು. "ಸ್ನಾನಕ್ಕೆ ಹೋಗುವೆ" ಎಂದ ತಕ್ಷಣ ಬಿಸಿನೀರು ಇದೆಯೋ ನೋಡಿ ಟವಲ್‌ಗಳನ್ನು ಕೈಗೆ ಕೊಡುತ್ತಿದ್ದರು.... ಪ್ರಯಾಣ ಮಾಡುವಾಗ ಅವರ ಜೇಬಿನಲ್ಲಿ ಯಾವಾಗಲೂ ಚಿಲ್ಲರೆಗೆ ಅಭಾವವಿರಲಿಲ್ಲ. ತಮ್ಮ ಜುಬ್ಬದ ಒಳಗಿನ ಚೀಲದಲ್ಲಿ 5ರೂ 10ರೂ ನೋಟುಗಳಿಟ್ಟರೆ ಹೊರಗಿನ ಜೇಬಿನಲ್ಲಿ 1ರೂಪಾಯಿ ನಾಣ್ಯ ಅಥವಾ ನೋಟುಗಳು ಹಾಗೂ ಚಿಲ್ಲರೆ ಹಣ ಯಾವಾಗಲೂ ಸಿದ್ಧ. ನಾವು ಪ್ರಯಾಣ ಮಾಡುವಾಗ ಖರ್ಚಿಗೆ ಚಿಲ್ಲರೆ ಹಣ ಕ್ಕೋಸ್ಕರ ಒದ್ದಾಡುವುದು ಸಾಮಾನ್ಯ. ಆದರೆ ಅವರೊಡನೆ ಪ್ರಯಾಣ ಮಾಡಿದರೆ ಸುಸೂತ್ರ ಪ್ರಯಾಣ..

ಅಪ್ಪನಿಗೆ ಪುಸ್ತಕ ಓದೋ ಹುಚ್ಚು-ಸಾಮಾನು ಕಟ್ಟಿ ಬರುವ ಪತ್ರಿಕೆಗಳ ಕಾಗದ ಚೂರನ್ನೂ ಬಿಡದೆ ಓದುತ್ತಿದ್ದರು. ಅಮ್ಮನು ತಮಾಷೆಗೆ–"ಹಸುಗಳಿಗೆ ಹುಲ್ಲು ಮೇಯೋಕೆ ಕೊಡುವಂತೆ ಅಪ್ಪನ ಮುಂದೆ ಪುಸ್ತಕಗಳ ಪತ್ರಿಕೆಗಳ ರಾಶಿ ಹಾಕಿದರೆ ಅವರು ನನ್ನ ತಂಟೆಗೆ ಬರೋದಿಲ್ಲ!" ಅನ್ನುತ್ತಿದ್ದರು!.

ಕೆಲವು ಮರೆಯಲಾಗದ ನೆನಪುಗಳು

ಅಪ್ಪನಿಗೆ ಗಾಳಿ–ಬೆಳಕು ಇರುವ ವಿಶಾಲ ಮನೆಗಳಲ್ಲೇ ವಾಸವಾಗಿದ್ದ ರೂಢಿ. Flat System ಅವರಿಗೆ ಗೊತ್ತೇ ಇರಲಿಲ್ಲ. ಮೊದಲಾಗಿ ಅವರು ಬೊಂಬಾಯಿಗೆ ಮಗಳು ಶಾಂತಿಯ ಮನೆಗೆ ಹೋದಾಗ ಅವರು First Floor ನಲ್ಲಿದ್ದರು. Landing ಎದುರಾಗಿ ಇದೇ ತರಹ ಇನ್ನೊಂದು Flat ಇತ್ತು. ಅಪ್ಪನಿಗೆ ಅದು ಬೇರೊಂದು ಮನೆಯೆಂದು ಗೊತ್ತಾಗಿಲ್ಲ. ಮಗಳ ಮನೆಯೆಲ್ಲ ಸುತ್ತಾಡಿ-ಪಕ್ಕದ ನೆರೆಮನೆಗೆ ಹೋಗಿ ಅವರ ಮೇಜಿನ ಮೇಲೆ ತನ್ನ ನಶ್ಯದ ಡಬ್ಬಿ ಇಟ್ಟು ಬೊಂಬಾಯಿ ವಾಸಕ್ಕೆ ಸಿದ್ಧರಾದರಂತೆ (ನೆರೆ ಮನೆ ಬಾಗಿಲು ತೆರೆದಿದ್ದ ಕಾರಣ ಈ ಸಾಧ್ಯವಾಯಿತು) ಕೊನೆಗೆ ಮಗಳು "ಅಪ್ಪಾ–ನೀನು ನಶ್ಯದ ಡಬ್ಬಿ ಪಕ್ಕದ ಮನೆಯಲ್ಲಿಟ್ಟಿದ್ದೀಯಾ-ಅದು ನಮ್ಮ ಮನೆ ಅಲ್ಲ. ನಮ್ಮದು ಇಷ್ಟೇ" ಅಂತ ಹೇಳಿದ ಮೇಲೆ ಅದನ್ನು ತೆಗೆದುಕೊಂಡು ಬಂದರಂತೆ.

ಒಮ್ಮೆ ಅಪ್ಪ ಅಳಿಯ ಕೃಷ್ಣರಾಯರ ಜತೆಗೆ ಶ್ರೀಶೈಲಕ್ಕೆ ಕಾರಿನಲ್ಲಿ ಪ್ರಯಾಣ ಮಾಡಿದ್ದರು-ಯಾವುದೋ Film Shootingಗೆ. ಬರ್ತಾ ದಾರೀಲಿ ಕಾರು 7 ಸಲ Puncture ಆಯಿತಂತೆ. ಕೊನೆಯ ಸಲ ಆಗ ಕಾರು Puncture ಆಗಿದ್ದು ಯಾವುದೋ ಗೊಂಡಾರಣ್ಯದಲ್ಲಿ–ಜನರಸುಳಿವೇ ಇಲ್ಲದ ಕಾಡು ಪ್ರದೇಶ. ಸೂರ್ಯಾಸ್ತವಾಗಿ ಕತ್ತಲು ಕವಿದಿತ್ತು. Tyre ಸರಿ ಮಾಡಲು ಡ್ರೈವರು ಬೇರೊಂದು ವಾಹನದ ಸಹಾಯ ಕೋರಿ ಸ್ವಲ್ಪ ದೂರದ ಹಳ್ಳಿಗೆ ಹೋಗಿದ್ದನಂತೆ. ಅಪ್ಪ-ಅಳಿಯ ರಸ್ತೆಯ ಬದಿಯಲ್ಲಿ ಕೂತು ತಮ್ಮ ಪ್ರಾಣಕ್ಕೆ ಅಪಾಯ ಬರುವ ಸಂಭವವಿದೆ-ಕಾಡು ಪ್ರಾಣಿಗಳೂ ಅಥವಾ ದರೋಡೆಕಾರರೂ ಬಂದು ಹಿಂಸೆ ಮಾಡಿದರೆ ಏನು ಮಾಡೋಣ ಅಂತ ಯೋಚಿಸುತ್ತಿದ್ದಾಗ ಅಪ್ಪ "ನನ್ನ ಹತ್ತಿರ ಯಾವ ಆಯುಧವೂ(Weapon) ಇಲ್ಲ. ನಶ್ಯದ ಡಬ್ಬಿ ಇದೆ- ಯಾರಾದರೂ ಹತ್ತಿರ ಬಂದು ತೊಂದರೆ ಮಾಡಿದರೆ ಒಂದು ಚಿಟಿಕೆ ನಶ್ಯ ಅವರ ಕಣ್ಣಲ್ಲಿ ಹಾಕಿದರೆ ಓಡಿ ಹೋದಾರು!' ಅಂದರಂತೆ!

ಪಡುಕೋಣೆ ಕುಟುಂಬದವರಿಗೆ ದಿನ ನಿತ್ಯದ ಕಾರ್ಯಗಳನ್ನು ಹೊತ್ತಿಗೆ ಸರಿಯಾಗಿ ಮಾಡುವುದರಲ್ಲಿ ಸೋಮಾರಿತನ ಮತ್ತೊಂದು ಗುಣ. "ಸ್ನಾನ ಆಯಿತೇ?" ಎಂದರೆ "ನಿನ್ನೆ ಮಾಡಿದ್ದೀನಲ್ಲ?"ಎನ್ನುವ ಸ್ವಭಾವ ಅವರದ್ದು. ಎಂದು ಅಮ್ಮ ಹೇಳುತ್ತಿದ್ದುದು ಸ್ವಾರಸ್ಯಕರ ಮಾತು!

"ಹಲಸಿನ ಬೀಜ ಸುಟ್ಟುಕೊಡು" ಎಂದು ಸೋಮಾರಿ ಒಬ್ಬನಿಗೆ ಹೇಳಿದರೆ "ಹಸಿಯಾಗಿ ಅದನ್ನು ತಿಂದರೆ ಬಹಳ ರುಚಿ ಅಲ್ಲವೇ?" ಎನ್ನುವನಂತೆ!

ಅಪ್ಪನ ನಗೆ ಮಾತಿನಲ್ಲಿ ಒಮ್ಮೆ ಅವರು ತಾನು ಧಾರಿಗೆ ಮದುವೆ ಮಂಟಪಕ್ಕೆ ಹೋದಾಗ ಅಂತರ ಪಟದ ಹತ್ತಿರ ವಧುವಾಗಿ ತಲೆ ಬಗ್ಗಿಸಿ ಸಿಂತಾಗ ಮೊದಲು ನೋಡಿದ್ದು ವರನ ಉದ್ದುದ್ದದ ದೊಡ್ಡ ದೊಡ್ಡ ಚರಣಗಳು! 13 ವಯಸ್ಸಿನ ವಧುವಿಗೆ ಅವನ್ನು ನೋಡಿ ತುಂಬಾ ದಿಗಿಲಾಯಿತಂತೆ!

ತಂದೆಯವರು ತಮ್ಮ ಹುಟ್ಟುಹಬ್ಬಕ್ಕೆ ನಾವು ಶುಭಾಶಯಗಳನ್ನು ಕೋರಿ ಬರೆದ ಪತ್ರಗಳಿಗೆ ಉತ್ತರ ಬರೆಯುವಾಗ "ಹೌದು 79 Not Out! ಎನ್ನುತ್ತಿದ್ದರು. ಹಾಗೂ "80 Not Out! "81 Not Out!" ಎನ್ನುತ್ತಿದ್ದರು. ಅವರ ಹತ್ತಿರ Cricketers ಹಾಕಿಕೊಳ್ಳುವಂತಹ Sweater ಇತ್ತು. ಅದನ್ನು ಧರಿಸಿ ಒಂದು Photo ತೆಗೆಸಿ ನಮಗೆ ಕಳುಹಿಸಿದ್ದರು- ಅಡಿಯಲ್ಲಿ "75 Not out" ಎಂದು ಬರೆದು!

ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶಭಕ್ತರಾಗಿ ಹೆತ್ತವರು ಮತ್ತು ನಮ್ಮಲ್ಲಿದ್ದ ಕಾರಂತರು ನೂಲು ನೇದು ಖಾದಿ ವಸ್ತ್ರಗಳನ್ನು ಪಡೆಯುತ್ತಿದ್ದರು. ನೂಲುಕೊಟ್ಟಮೇಲೂ ಆ ಬಟ್ಟೆಗೆ ಶಕ್ತಿ ಮೀರಿ ಬಿಲೆ ತೆರಬೇಕಾಗಿತ್ತು. ಆಗ ಕಾರಂತರು "ಈ Billನ್ನು ಗಾಂಧೀಜಿಗೆ ಕಳುಹಿಸಬೇಕು!" ಎನ್ನುತ್ತಿದ್ದರು

ಪಡುಕೋಣೆ ಕುಟುಂಬವು ನಿದ್ದೆಯಲ್ಲಿ ಕುಂಭಕರ್ಣರು ಎಂಬ ಪ್ರತೀತಿ ಇತ್ತು. ಅಪ್ಪನಿಗೋ ಯೌವನದಲ್ಲಿ ನಿದ್ದೆ ಹೆಚ್ಚು- ಕೋಪವೂ ಹೆಚ್ಚಾಗಿತ್ತು. ಮುಖ್ಯವಾಗಿ ಅವರಿಗೆ ನಿದ್ದೆಗೆ ಅಡ್ಡಿ ಬಂದರೆ ಮುಂಗೋಪಿಗಳಾಗುತ್ತಿದ್ದರು. ಒಮ್ಮೆ ಅವರು ಮಧ್ಯಾಹ್ನ ಮಲಗಿದಾಗ ನಾನೂ ಚಿಕ್ಕಮ್ಮನೂ ಹರಟೆ ಹೊಡೆಯುತ್ತಾ, ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದೆವು. ನಿದ್ದೆಗೆ ಭಂಗ ಬಂದ ಅಪ್ಪ ಎದ್ದು ಗದರಿಸಿದಾಗ ನಾವು ಓಡಿ ಹೋದೆವು. ಆದರೂ ನಮ್ಮನ್ನು ಅವರು ಬಿಡಲಿಲ್ಲ- ಅಟ್ಟಿಸಿಕೊಂಡು ಬಂದು ಕಲ್ಲನ್ನು ಎಸೆದು ಮತ್ತೆ ಹೋಗಿ ಗಾಢ ನಿದ್ರೆ ಮಾಡಿದರು! ಆದರೆ ಜಾಗ್ರತಾವಸ್ಥೆಯಲ್ಲಿ ಇದನ್ನು ಅವರಿಗೆ ಹೇಳುತ್ತಿದ್ದರೆ ನಗುವಿನಲ್ಲಿ ತೇಲಿಸಿಬಿಡುತ್ತಿದರು.

ಒಮ್ಮೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಒಂದು ನೊಣದ ಮೇಲೆ ರೇಗಿದ್ದರು- ಒಂದು ನೋಣ ಎಷ್ಟು ಓಡಿಸಿದರೂ ಮತ್ತೆ ಮತ್ತೆ ಬಂದು ಕಾಡುತ್ತಿತ್ತು. ಕೊನೆಗೆ ಅಪ್ಪ ಕುಪಿತರಾಗಿ "Humbug!" ಎಂದು ಆ ನೊಣವನ್ನು ಮನಸಾರೆ ಬೈದರು! ಅವರಿಗೆ Humbug ಎಂಬ ಪದ ಬಹಳ ಪ್ರಿಯವಾದುದಾಗಿತ್ತು.

ಕೈಲಾಸಂ ನಮ್ಮಲ್ಲಿ 18 ದಿವಸ ಅತಿಥಿಗಳಾಗಿದ್ದರು. Genius ಆಗಿದ್ದ ಅವರ ದಿನ ಚರಿಯಲ್ಲಿ ಶಿಸ್ತು ಇರಲಿಲ್ಲ. ಅವರ Roomನ್ನು ಗುಡಿಸಲು ಬಿಡುತ್ತಿರಲಿಲ್ಲ. ಹೊತ್ತಿಗೆ ಸರಿಯಾಗಿ ಕಾಫಿ-ಊಟ-ನಿದ್ದೆ ಇರಲಿಲ್ಲ. ಅವರನ್ನು ಅಷ್ಟು ದಿನ ಅಮ್ಮನೂ ಅಪ್ಪನೂ ಬಹಳ ನಾಜೂಕಾಗಿ ವೇಳೆಗೆ ಸರಿಯಾಗಿ ಊಟ ತಿಂಡಿ, ಸ್ನಾನ ಇತ್ಯಾದಿ ಬಹಳ ಕಷ್ಟಪಟ್ಟು ಒದಗಿಸುತ್ತಿದ್ದರು. ಅವರಿಂದ ಅತ್ಯಂತ ಪವಿತ್ರ ಸ್ನೇಹ ಸೌಹಾರ್ದಗಳನ್ನು ಪಡೆದು ಆನಂದದಿಂದ ಕಾಲಕಳೆದರು. ಆದರೂ ಅಮ್ಮ ಅವರ ಆ 18 ದಿವಸಗಳ ಆತಿಥ್ಯ ಮಾಡಿ "ಒಂದು ಕುರುಕ್ಷೇತ್ರ ಗೆದ್ದ ಅನುಭವ!" ಎನ್ನುತ್ತಿದ್ದರು.

ಜಿ. ಪಿ. ರಾಜರತ್ನಂ ನಮ್ಮಲ್ಲಿ 4 ತಿಂಗಳು ಬಂದು ಇದ್ದಾಗ ಅವರಿಗೆ ಹೊಸದಾಗಿ ಮದುವೆಯಾಗಿ ಮನೆಗೆ ಬಂದ ಪತ್ನಿ ಸೀತಮ್ಮ ಮತ್ತು ಪುಟ್ಟ ಕೈಕೂಸು ಶ್ರೀಧರ ಬೆಂಗಳೂರಿನಲ್ಲಿದ್ದರು. ಬುದ್ಧನ ವಿಷಯ ಯೋಚಿಸಿ-ಬರೆದು ಬೌದ್ಧ ಧರ್ಮದಲ್ಲಿ ಬೆರೆತುಹೋದಾಗ ಅಮ್ಮ ಅವರಿಗೆ ಎಚ್ಚರಿಕೆ ಕೊಟ್ಟು "ಸಿದ್ಧಾರ್ಥ ಹೆಂಡತಿ ಮಗುವನ್ನು ಬಿಟ್ಟು ಬಂದ ಹಾಗೆ ಬರಲಿಲ್ಲವಷ್ಟೆ ? ಆದಷ್ಟು ಬೇಗ ಬರೆಹ ಮುಗಿಸಿ ಪತ್ನಿ ಪುತ್ರರ ಸಾನಿಧ್ಯ ಪಡೆಯಿರಿ" ಎಂದು ಜವಾಬ್ದಾರಿ ತಿಳಿಸುತ್ತಿದ್ದರು.

ನಾನು ಮಗುವಾಗಿದ್ದಾಗ ಅಮ್ಮನ ಎದೆ ಹಾಲು ಯಥೇಷ್ಟ ಕುಡಿಯುತ್ತಿದ್ದು ಅಮ್ಮ ನನ್ನ ತಮ್ಮನನ್ನು ಹಡೆಯುವುದಕ್ಕೆ ಸ್ವಲ್ಪ ಮುಂಚೆ ಕೂಡ ಜಗಳಾಡಿ ಅತ್ತು ಎದೆ ಹಾಲು ಹೀರಿದ್ದೆನಂತೆ–ತಮ್ಮ. ಹುಟ್ಟಿದ ತಕ್ಷಣ ಒಂದೇ ಸನು ಎದೆ ಹಾಲು ಬಿಟ್ಟುದು ಎಲ್ಲರಿಗೂ ಆಶ್ಚರ್ಯ–ನನಗೂ ತಮ್ಮನಿಗೂ ಕೇವಲ 20 ತಿಂಗಳ ಅಂತರ–ಆ ನಂತರ ಅಮ್ಮನಿಗೆ ಎದೆ ಹಾಲು ತುಂಬಿ ಹಿಂಸೆ ಆದಾಗ ನನ್ನನ್ನು ಎಷ್ಟು ಕರೆದರೂ ಅವರ ಹತ್ತಿರವೇ ಹೋಗಲಿಲ್ಲವಂತೆ ! ಆಗ ಅವರು ನನ್ನ ಚಿಕ್ಕಮ್ಮ (ನನಗೂ ಅವಳಿಗೂ 6 ವರ್ಷ ಅಂತರ) ನನ್ನು ಕರೆದು ಕುಡಿಸಿದರಂತೆ–ಆ ಹಾಲು ಕುಡಿದು ಪಾಪದ ಚಿಕ್ಕಮ್ಮನಿಗೆ ಇಡೀ ದಿನ ಭೇದಿಯಾಗಿ ಕಷ್ಟಪಟ್ಟಳಂತೆ.

ಪ. ನರಸಿಂಗರಾಯರು ಉದ್ದೇಶಪೂರ್ವಕವಾಗಿಯೇ "ಸಿರಿಗನ್ನಡಂ ಗೆಲ್ಗೆ" ಎಂಬುದನ್ನು ಹಾಸ್ಯವಾಗಿ ಬಹು ಸ್ವಾರಸ್ಯವಾಗಿ ಹೀಗೆ ಹೇಳುತ್ತಿದ್ದರು. ಕೊಂಕಣಿ ಭಾಷೆಯಲ್ಲಿ "ಗೆಲ್ಗಿ" ಎಂದರೆ ಎಲ್ಲಾ ಹೋಯಿತು ಎಂಬ ಅರ್ಥಬರುತ್ತದೆ. ಹೆಂಗಸರೊಡನೆ ಮಾತನಾಡುವಾಗ "ಸಿರಿಗನ್ನಡಂ ಗೆಲ್ಗಿ" ಎಂದು ತಮಾಷೆ ಮಾಡುತ್ತಿದ್ದರು. ಅಂದರೆ ಸಿರಿಗನ್ನಡ ಎಲ್ಲಾ ಹೋಯಿತು ಎಂಬುದು ಎಷ್ಟು ಸೊಗಸಾದ ವ್ಯಂಗ್ಯ.

ಅಪ್ಪನಿಗೆ Cosmetics ಗಳಲ್ಲಿ ಯಾವಾಗಲೂ ವೈವಿಧ್ಯವಿರಬೇಕಿತ್ತು. ಮುಖ್ಯವಾಗಿ ಮೈಗೆ ಹಾಕಿಕೊಳ್ಳುವ ಸಾಬೂನು-ಅದನ್ನು ಯಾವಾಗಲೂ ಬದಲಾಯಿಸುತ್ತಲೇ ಇದ್ದರು. ಮಾರುಕಟ್ಟೆಯಲ್ಲಿ ಹಲವಾರು ಸಾಬೂನುಗಳು ಬಳಕೆಯಲ್ಲಿವೆ. ಆದರೆ ಅವರು ಎಲ್ಲವನ್ನೂ ತಂದು ತಮ್ಮ Curiosity ಪೂರೈಸುತ್ತಿದ್ದರು. ಒಮ್ಮೆ ಅಪರೂಪದ ಗುಂಡು ಆಕೃತಿ ಸಾಬೂನು ಮಾರುಕಟ್ಟೆಗೆ ಬಂದಿತ್ತು-ಅದನ್ನು ಕೊಂಡುಕೊಂಡು-ಮಗುವಿನಂತೆ ಎಲ್ಲರಿಗೂ ತೋರಿಸಿ ಸಂತೋಷಪಡುತ್ತಿದ್ದರು.

ಪಡುಕೋಣೆ ಕುಟುಂಬದವರಿಗೆ ತಲೆ ಬೋಳು ಆಗುವುದು(Bald)ವಂಶಾವಳಿಯಿಂದ ಬಂದ ಪಿತ್ರಾರ್ಜಿತ ಆಸ್ತಿ! ಬೋಳು ತಲೆ ಕಂಡ ತಕ್ಷಣ ಪಡುಕೋಣೆಯವರಿರಬಹುದು ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿತ್ತು ನನ್ನ ತಮ್ಮ ಎನ್ನುವಂತೆ ಪಡುಕೋಣೆ ವಂಶದವರು ರಂಗಮಂದಿರದ ಮುಂದಿನ ಆಸನಗಳಲ್ಲಿ ಕೂತರೆ Reflectors ತರುವ ಅವಶ್ಯಕತೆ ಇಲ್ಲ!" ಹಾಗೆಯೇ ತಲೆಗೆ ಕೂದಲು ಇಲ್ಲದೆ ಇದ್ದರೂ ಕೈ-ಮೈ ತುಂಬಾ ಕೂದಲಿಗೆ ಕೊರತೆ ಇರಲಿಲ್ಲ. ಅವನು ಹಾಸ್ಯಮಯಿಯಾಗಿ "It is like India's Economy Unequal Distribution" ಎನ್ನುತ್ತಿದ್ದ.

ಒಮ್ಮೆ ಅಪ್ಪ ಬೊಂಬಾಯಿಯಲ್ಲಿ Suburban ರೈಲಿನಲ್ಲಿ ಪ್ರಯಾಣ ಮಾಡುವಾಗ ಒಬ್ಬ Safety pins, Ribbon, stapes, Elastic ಬಾಚಣಿಗೆ ಮುಂತಾದ ಸಾಮಾನನ್ನು ಮಾರಲು ಬಂದಿದ್ದ-ನಮ್ಮ ಅಪ್ಪ ಅವನನ್ನು ಕರೆದು ಒಂದು ಬಾಚಣಿಗೆ ವ್ಯಾಪಾರ ಮಾಡುತ್ತಿರುವಾಗ ಗಾಡಿಯಲ್ಲಿನ ಸಹಪ್ರಯಾಣಿಕರಿಗೆ ನಗೆ ತಡೆಯಲಾಗಲಿಲ್ಲವಂತೆ. ಅಪ್ಪನಿಗೆ ತಲೆ ಬೋಳಾಗಿದ್ದರೂ ಹಿಂದೆ ಕತ್ತಿನ ಮೇಲೆ ಇರುವ ಸ್ವಲ್ಪ ಕೂದಲನ್ನು ಯಾವಾಗಲೂ ಬಾಚುತ್ತಾ Neat ಆಗಿ ಇಡುವುದು ಪ್ರಿಯವಾಗಿತ್ತು. ಅವರ ಕಿಸೆಯಲ್ಲಿ ಬಾಚಣಿಗೆ ಯಾವಾಗಲೂ ಸಿದ್ಧ.

ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರಾಡಲು ಬಯಸಿದ-ಪ್ರಯತ್ನಿಸಿದ-ಯಶಸ್ವಿಯಾದ. ನೀರಿನಲ್ಲಿ ಮೀನಿನಂತೆ ಈಜಬೇಕು ಎಂಬ ಆಸೆಯು ಫಲಿಸಿತು. ಚಂದ್ರಲೋಕದಲ್ಲಿ ಕಾಲಿಡಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪೂರೈಸಿದ. ದೇವರಂತೆ ವರ್ತಿಸಬೇಕೆಂದುಕೊಂಡ. ಅದೂ ಸಾಧ್ಯವಾಯಿತು. ಆದರೆ ಮನುಷ್ಯ ಮನುಷ್ಯನಂತೆ ಬದುಕುವುದನ್ನು ಮಾತ್ರ ಕಲಿಯಲೇ ಇಲ್ಲ.

P. R. Showed human feelings towards his pet students in the college....one student recalls an incident.

Once he did not write his laboratory records up-to-date P. R angrily reprimanded him for his lapse and before leaving the laboratory asked the student to see him in his room The student went to his room trembling thinking he has to face more of P. R's anger! But, P. R. called him in said 'ಗೋಪಾಲಾ-ಮನೆ ಕಡೆ ಬಾ-ಅಬ್ದುಲ್ ಕರೀಂ ಖಾನ್‌ರ ಹೊಸ ರೆಕಾರ್ಡ್ ತರಿಸಿದ್ದೇನೆ ಕೇಳಲಿಕ್ಕೆ ಬಾ!'' The student's face (Gopal's) was wreathed in smiles because P. R. Had forgotten his earlier lapse in the laboratory work anb indirectly complimented him forhis love of music....

★


Father's passion for classical Hindustani music was so great that he used to take us-his children just kids of 6and 4years then- to late night concerts at friend's houses In Mangalore We used to promptly snuggle up and go into deep slumber even as the ''Tambura'' was being tuned up!.... so also to silent films which we did not care much being so young.... so we would sleep through the first half, wake-up during interval for hot, 'Eye-Tearising' ''ಚಂಬುರಿ-ಉಪ್ಕರಿ (ಪುರಿ ಖಾರದ್ದು) and putting out that ''FIRE'' by generous Quantities of fizzy lemondade (pronounced 'Lemlate') which made big noise while opening the bottle having a marble inside....and back to catch up with our sleep. I would ride home on ANU'S shoulders in the Mid-Night....These memories underscore the fact that we were exposed to performing Arts and films at so young an age.

★

During the Non-co-opration days of Gandhiji's freedom struggle though 'ANU' as a Govt.servant couldnot actively associate himself with the movement yet had secretly sympathised with the movement. An UNDERGROUND cyclostyled publication used to come to our house regularly to kindle patriotism, .Amma wore KHADDER and he himself stitched suits made of 'KHADI, And we children were given KHADI clothes to wear much to our discomfort and disappointment as this coarse cloth with no variety was a contrast to all the fine clothing our friends wore in the school or for functions or weddings.

ಪ. ರಮಾನಂದರಾಯರನ್ನು ಕುರಿತು ಸಂಸ್ಮರಣ ಗ್ರಂಥ ಪ್ರಕಟವಾಗುವ ಸಮಾಚಾರ ತಿಳಿದೊಡನೆಯೇ ಅವರ ಬಂಧು-ಬಳಗದವರು ಮತ್ತು ಅತ್ಯಂತ ಆಪ್ತರು ಗ್ರಂಥ ಪ್ರಕಟನೆಗೆ ಅನುಕೂಲವಾಗುವಂತೆ ಆರ್ಥಿಕ ನೆರವು ನೀಡಿ ನಮ್ಮನ್ನು ಪ್ರೋತ್ಸಾಹಿಸಿದರು. ಆ ಹಿರಿಯ ವ್ಯಕ್ತಿಗಳಿಗೆ ನಾವು ಚಿರಋಣಿಗಳಾಗಿದ್ದೇವೆ. ಅವರೆಲ್ಲರಿಗೂ ನಾವು ಕೃತಜ್ಞರು.

ಪ್ರಕಾಶಕರು



పరమానంద